ಮಾರ್ಚ್ 2017

ಸಂಚಿಕೆ – 8 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................... 2

ಕೇಂದ್ರ ಬಜೆಟ್ 2017–18; ವಿಸ್ತೃತ ವಿಶ್ಲೇಷಣೆ .................... 3
*** ಎನ್. ಆರ್. ಭಾನುಮೂರ್ತಿ ಮತ್ತು ಎ. ಶ್ರೀಹರಿ ನಾಯುಡು**

ಕಾರ್ಯದೃಷ್ಟಿಯುಳ್ಳ ಕೇಂದ್ರ ಮುಂಗಡ ಪತ್ರ .................... 7
*** ಚರಣ್ ಸಿಂಗ್**

ಆರ್ಥಿಕ ಸಮೀಕ್ಷೆ 2016–17 : ಹಣಕಾಸು ಪರಾಮರ್ಶೆ .................... 14
*** ರವೀಂದ್ರ ಹೆಚ್. ಧೊಲಾಕಿಯಾ**

ಉತ್ಪಾದಕತೆ ಸುಧಾರಣೆ ಮತ್ತು ಉದ್ಯೋಗ ಬೆಳವಣಿಗೆ .................... 19
*** ಅರೂಪ್ ಮಿತ್ರ**

ಹೊಸ ಅವತಾರದಲ್ಲಿ ಭಾರತೀಯ ರೈಲ್ವೆ ಬಜೆಟ್ .................... 23
*** ಅರುಣೇಂದ್ರ ಕುಮಾರ್**

ಬಜೆಟ್ 2017–18 : ಮೂಲ ಸೌಕರ್ಯಕ್ಕೆ ಒತ್ತು .................... 29
*** ಕೃಷ್ಣ ದೇವ್**

ದುರ್ಬಲ ವರ್ಗಗಳ ಕಲ್ಯಾಣ .................... 35
*** ಶ್ರೀಕರ್ ನಾಯಕ್ ಮತ್ತು ಅಂಜಲಿ ಬನ್ಸಾಲಿ**

ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಾಯಕಲ್ಪ .................... 40
*** ಡಾ. ರಂಜಿತ್ ಮೆಹ್ತಾ**

ಅಭಿವೃದ್ಧಿಯ ಹಾದಿಯಲ್ಲಿ ಗ್ರಾಮೀಣ ಭಾರತ .................... 45
*** ನಿರೇಂದ್ರ ದೇವ್**

ಆಯವ್ಯಯದಲ್ಲಿ 'ಆರೋಗ್ಯ'ಕರ ಬೆಳವಣಿಗೆ .................... 47
*** ರಾಜೀವ್ ಅಹುಜಾ**

ಯುವಜನತೆಯ ಬಜೆಟ್ .................... 51
*** ಎಸ್. ಎಸ್. ಮಂಥ**

2017–18 ನೇ ಸಾಲಿನ ಆಯವ್ಯಯದ ಮುಖ್ಯಾಂಶಗಳು .................... 54
*** ಡಿ.ಎಸ್. ಮಲ್ಲಿಕ್**

ಉಪಗ್ರಹ ಉಡಾವಣೆ; ಇಸ್ರೋ ವಿಕ್ರಮ ಸಾಧನೆ .................... 59
*** ಬಿ. ಆರ್. ಗುರುಪ್ರಸಾದ್**

ಅನ್ನದಂಗಳದಲ್ಲಿ ಅರುಣೋದಯ .................... 62
*** ಪ್ರೊ. ಶಿವಾನಂದ ಬಿ. ಹೊಸಮನಿ**

ಕೇಂದ್ರ ಮುಂಗಡ ಪತ್ರದಲ್ಲಿ ಮಹಿಳೆ .................... 64
*** ಡಾ. ಹೆಚ್. ಆರ್ ಉಮಾ**

ಮನ್ ಕೀ ಬಾತ್ .................... 66
*** ಮೂಲ : ಆಕಾಶವಾಣಿ, ಬೆಂಗಳೂರು.**

ನಿಮಗಿದು ತಿಳಿದಿದೆಯೇ? .................... 71

ವಾರ್ತಾ ವಿಶೇಷ .................... 72

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

Log on to
http://publicationsdivision.nic.in/,
in collaboration with bharatkosh.gov.in


**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

# ಉತ್ತಮ ಭಾರತಕ್ಕಾಗಿ ಬಜೆಟ್




ಕೇಂದ್ರ ಮುಂಗಡ ಪತ್ರವನ್ನು ಈ ವರ್ಷ ಅನೇಕ ವಿದ್ಯಮಾನಗಳ ನಡುವೆ ಮಂಡಿಸಲಾಯಿತು. ನೋಟುಗಳ ಅಮಾನ್ಯೀಕರಣ, ಜಿಎಸ್‌ಟಿ ಮತ್ತು ಅಮೆರಿಕದಲ್ಲಿ ಹೊಸ ಸರ್ಕಾರ – ಮೊದಲಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಜೆಟ್ ನಿರೂಪಣೆ ಸಂಪೂರ್ಣವಾಗಿ ಸವಾಲೆನಿಸಿತ್ತು . ಈ ವರ್ಷದ ಬಜೆಟ್ ಅನೇಕ ಐತಿಹಾಸಿಕ ನಡೆಗಳಿಗೆ ಸಾಕ್ಷಿಯಾಯಿತು; ಫೆಬ್ರವರಿ ತಿಂಗಳ ಕೊನೆ ದಿನ ಮಂಡಿಸುವ ಹಳೆಯ ಸಂಪ್ರದಾಯ ಕೈಬಿಟ್ಟಿರುವುದು, ರೈಲ್ವೆ ಬಜೆಟ್‌ನ್ನು ಕೇಂದ್ರ ಬಜೆಟ್‌ನಲ್ಲಿ ಸೇರಿಸಿರುವುದು ಮತ್ತು ಯೋಜನಾ ಹಾಗೂ ಯೋಜನೇತರ ವೆಚ್ಚಗಳ ವರ್ಗೀಕರಣದಿಂದ ವಿಮುಖಗೊಂಡಿರುವ ಅಂಶಗಳು ಇವುಗಳಲ್ಲಿ ಸೇರಿವೆ.

ಕೆಲ ನೋಟುಗಳ ಅಮಾನ್ಯೀಕರಣದ ನಂತರ ಕಷ್ಟಗಳನ್ನು ಅನುಭವಿಸಿದ ಬಡವ – ಬಲ್ಲಿದರೆಲ್ಲರಿಗೂ ಬಜೆಟ್ ಬಹು ನಿರೀಕ್ಷಿತ ವಿಷಯವಾಗಿತ್ತು. ಬಜೆಟ್, ದೀರ್ಘಾವಧಿಯಲ್ಲಿ ಆರ್ಥಿಕ ಬೆಳವಣಿಗೆಗೆ ಗಮನ ನೀಡುವ ಬಡವರ ಪರ, ಗ್ರಾಮೀಣರ ಪರ, ರೈತ ಪರವಾದ ಸರ್ಕಾರದ ಆದ್ಯತೆಗಳನ್ನು ಪ್ರತಿಫಲಿಸಿದೆ. ಬಜೆಟ್‌ನ ಒಟ್ಟಾರೆ ಆಶಯ, ಭಾರತವನ್ನು ಪರಿವರ್ತಿಸಿ, ಶಕ್ತಿವರ್ಧಿಸಿ ಮತ್ತು ಸ್ವಚ್ಛಗೊಳಿಸಿ ಎಂಬುದಾಗಿದೆ.

ಬಜೆಟ್‌ನಲ್ಲಿ ಬಹುವಿಧ ಕ್ರಮಗಳ ಮೂಲಕ ಎಲ್ಲ ಕ್ಷೇತ್ರಗಳಿಗೆ ಗಮನ ನೀಡಲಾಗಿದ್ದು, ಗ್ರಾಮೀಣ ಅಭಿವೃದ್ಧಿ, ಕೃಷಿ, ಮೂಲ ಸೌಕರ್ಯ, ಕೌಶಲ್ಯ ಅಭಿವೃದ್ಧಿ, ತಯಾರಿಕೆ ಮತ್ತು ಉದ್ಯೋಗ ಸೃಷ್ಟಿ ರಂಗಗಳಿಗೆ ಒತ್ತು ನೀಡಲಾಗಿದೆ.

ರೈತರನ್ನು ಹಾಗೂ ಗ್ರಾಮೀಣ ಜನಸಂಖ್ಯೆಯನ್ನು ಆದ್ಯತೆಯ ಪಟ್ಟಿಯಲ್ಲಿ ಮುಂದಿಟ್ಟುಕೊಂಡು, ಐದು ವರ್ಷಗಳಲ್ಲಿ ರೈತರ ವರಮಾನಗಳನ್ನು ದುಪ್ಪಟ್ಟುಗೊಳಿಸುವ ಕ್ರಮಗಳನ್ನು ಪ್ರಕಟಿಸಲಾಗಿದೆ. ಕೃಷಿ ಸಾಲ ಮೊತ್ತವನ್ನು 10 ಲಕ್ಷ ಕೋಟಿ ರೂಪಾಯಿಗಳಿಗೇರಿಸಲಾಗಿದೆ. ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಸಂಕಷ್ಟ ಪರಿಹಾರಕ್ಕೆ ನೆರವಾಗಲು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಗುರಿಯನ್ನು ಬೆಳೆ ಕ್ಷೇತ್ರದ ಶೇ. 40 ಕ್ಕೆ ಅನ್ವಯವಾಗುವಂತೆ ಹೆಚ್ಚಿಸಲಾಗಿದೆ. ದೀರ್ಘಾವಧಿ ನೀರಾವರಿ ನಿಧಿಯ ಮೊತ್ತವನ್ನು 40,000 ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ.

ಗ್ರಾಮೀಣ ಉದ್ಯೋಗಕ್ಕೆ ಮತ್ತು ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯ ಹೆಚ್ಚಿಸಲು ಒತ್ತು ನೀಡಲಾಗಿದ್ದು ಬೃಹತ್ ಗಾತ್ರದಲ್ಲಿ ಯುವ ಜನತೆಗೆ ಕೌಶಲ್ಯ ಮೈಗೂಡಿಸುವ ವಿವಿಧ ಉಪಕ್ರಮಗಳನ್ನು ಘೋಷಿಸಲಾಗಿದೆ. ಉದ್ಯೋಗ ಸೃಷ್ಟಿಯ ಮುಂಚೂಣಿ ಕಾರ್ಯಕ್ರಮ, ಮನರೇಗಾಕ್ಕೆ ಅತಿ ಗರಿಷ್ಠ 48,000 ಕೋಟಿ ರೂಪಾಯಿ ಒದಗಿಸಲಾಗಿದೆ. 300 ಆನ್‌ಲೈನ್ ಕೋರ್ಸ್‌ಗಳ ಸ್ವಯಂ ಕಾರ್ಯಕ್ರಮ ಪ್ರಾರಂಭ, ಸಂಕಲ್ಪ ಯೋಜನೆಯಡಿ, ಮಾರುಕಟ್ಟೆ, ಬೇಡಿಕೆ ಆಧರಿಸಿ ಯುವ ಜನರ ಕೌಶಲ್ಯ ರೂಪಿಸಲು ತರಬೇತಿಗಾಗಿ 4000 ಕೋಟಿ ರೂ. ನಿಗದಿ, ಮೊದಲಾದ ಕ್ರಮಗಳು ಭಾರತವನ್ನು ವಿಶ್ವದ ಕೌಶಲ್ಯ ರಾಜಧಾನಿಯನ್ನಾಗಿಸುವ ಗುರಿ ಹೊಂದಿವೆ. ಮಿಷನ್ ಅಂತ್ಯೋದಯದಡಿ ಒಂದು ಕೋಟಿ ಜನರನ್ನು ಮತ್ತು 50,000 ಗ್ರಾಮ ಪಂಚಾಯತ್‌ಗಳನ್ನು ಬಡತನದಿಂದ ಮೇಲೆತ್ತಲು ಉದ್ದೇಶಿಸಲಾಗಿದೆ. 1 ಮೇ, 2018 ರೊಳಗೆ ಎಲ್ಲ ಹಳ್ಳಿಗಳಿಗೆ ವಿದ್ಯುತ್, ಬಯಲು ಬಹಿರ್ದೆಶೆ ಮುಕ್ತ ಗ್ರಾಮಗಳಿಗೆ ಆದ್ಯತೆ ಮೇಲೆ ಕೊಳಾಯಿ ನೀರು ಪೂರೈಕೆ, ಹಳ್ಳಿಗಳ ಸಂಪರ್ಕ ಜೀವಾಳವಾಗಿರುವ ಗ್ರಾಮೀಣ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾದಡಿ ಪ್ರತಿ ದಿನದ ಕಾಮಗಾರಿ ಸಾಧನೆ ಹೆಚ್ಚಿಸಲು ಗುರಿ ಹಮ್ಮಿಕೊಂಡಿರುವುದು ಸರ್ಕಾರ ಗ್ರಾಮೀಣಾಭಿವೃದ್ಧಿಗೆ ಗಮನ ಹೆಚ್ಚಿಸಿರುವುದರ ದ್ಯೋತಕವಾಗಿದೆ.

ಬಲಿಷ್ಠ ಮೂಲಸೌಕರ್ಯ ಯಾವುದೇ ಆರ್ಥಿಕಾಭಿವೃದ್ಧಿಯ ಆಧಾರವಾಗಿದೆ. ಇದನ್ನು ಅನುಸರಿಸಿ, ಬಜೆಟ್‌ನಲ್ಲಿ ಇದಕ್ಕಾಗಿ ಅತ್ಯಧಿಕ 3.96 ಲಕ್ಷ ಕೋಟಿ ರೂ. ಒದಗಿಸಲಾಗಿದೆ. ಇದರಲ್ಲಿ ರೈಲ್ವೆಗೆ 1.3 ಲಕ್ಷ ಕೋಟಿ ರೂ. ನೀಡಲಾಗಿದ್ದು ಪ್ರಯಾಣಿಕರ ಸುರಕ್ಷತೆ, ಸ್ವಚ್ಛತೆ ಮತ್ತು ಅಭಿವೃದ್ಧಿ ಕಾಮಗಾರಿಗಳು ಆದ್ಯತೆ ಪಡೆದಿವೆ. ರಿಯಲ್ ಎಸ್ಟೇಟ್ ಕ್ಷೇತ್ರವನ್ನು ಬಲಗೊಳಿಸಲು ವಸತಿ ಕ್ಷೇತ್ರಕ್ಕೆ "ಮೂಲಸೌಕರ್ಯ" ಸ್ಥಾನಮಾನ ನೀಡಲಾಗಿದೆ.


ಬಂಡವಾಳ ಹೂಡಿಕೆ ಬಲಪಡಿಸಲು ಮತ್ತು ವ್ಯಾಪಾರ ವಹಿವಾಟು ಸುಲಭಗೊಳಿಸಲು, ಅನೇಕ ಕ್ರಮಗಳನ್ನು ಪ್ರಕಟಿಸಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆಯ ಶೇ. 90 ರಷ್ಟು ವಹಿವಾಟು ನೇರವಾಗಿ ಆಗುತ್ತಿರುವ ಕಾರಣ ವಿದೇಶಿ ಬಂಡವಾಳ ಬಲವರ್ಧನೆ ಮಂಡಳಿಯನ್ನು ವಿಸರ್ಜಿಸಲು ತೀರ್ಮಾನಿಸಲಾಗಿದೆ. ಸಣ್ಣ ಉದ್ಯಮಶೀಲರನ್ನು ಪ್ರೋತ್ಸಾಹಿಸಲು 50 ಕೋಟಿ ರೂ. ಗಳಿಗಿಂತ ಕಡಿಮೆ ವಹಿವಾಟಿನ ಕಂಪನಿಗಳಿಗೆ ಕಾರ್ಪೊರೇಟ್ ತೆರಿಗೆ ದರವನ್ನು ಶೇ. 25ಕ್ಕೆ ಇಳಿಸಲು ಪ್ರಸ್ತಾಪಿಸಲಾಗಿದೆ. ಭಾರತ್ ನೆಟ್‌ಗೆ 10,000 ಕೋಟಿ ರೂ. ಆಧಾರ್ ವೇತನ, ಸೈಬರ್ ರಕ್ಷಣೆಯ ಅಗತ್ಯ ಪೂರೈಸಲು ವಿಶೇಷ ಕಾರ್ಯ ಪಡೆ ಮೊದಲಾದವು ಅಂಕೀಕೃತ ಆರ್ಥಿಕತೆ ಬಗ್ಗೆ ಸರ್ಕಾರಕ್ಕೆ ಇರುವ ಬದ್ಧತೆ ವ್ಯಕ್ತಪಡಿಸುತ್ತವೆ. ಕಪ್ಪು ಹಣ ತಡೆಗಟ್ಟಲು ಮತ್ತು ರಾಜಕೀಯ ವ್ಯವಸ್ಥೆಯ ಸ್ವಚ್ಛತೆ ಉದ್ದೇಶದಿಂದ, ವ್ಯಕ್ತಿಯೊಬ್ಬನಿಂದ ರಾಜಕೀಯ ಪಕ್ಷಗಳು ಗರಿಷ್ಠ 2000 ರೂಪಾಯಿ ನಗದು ದೇಣಿಗೆ ಪಡೆಯಬಹುದೆಂಬ ಮಿತಿ ವಿಧಿಸಲಾಗಿದೆ. ಈ ಮಿತಿಗೆ ಮೇಲ್ಪಟ್ಟ ದೇಣಿಗೆಯನ್ನು ಚೆಕ್, ಡಿಜಿಟಲ್ ಪೇಮೆಂಟ್ಸ್ ಅಥವಾ ಬಾಂಡುಗಳ ಮೂಲಕ ಮಾಡಬಹುದಾಗಿದೆ.

ಒಟ್ಟಾರೆಯಾಗಿ 2017–18ರ ಕೇಂದ್ರ ಬಜೆಟ್ ಹೆಚ್ಚಿನ ಪಾರದರ್ಶಕತೆ, ಭ್ರಷ್ಟಾಚಾರ ನಿಗ್ರಹ ಮತ್ತು ತ್ವರಿತ ಆರ್ಥಿಕ ಬೆಳವಣಿಗೆ ಸಾಧನೆ ಉದ್ದೇಶಗಳನ್ನು ಪುನರುಚ್ಚರಿಸಿದೆ. ಪ್ರತಿಯೊಬ್ಬರ ಮೊಗದಲ್ಲಿ ನಗು ತರುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದೆ. ❑

# ಕೇಂದ್ರ ಬಜೆಟ್ 2017–18; ವಿಸ್ತೃತ ವಿಶ್ಲೇಷಣೆ

* ಎನ್. ಆರ್. ಭಾನುಮೂರ್ತಿ

** ಎ. ಶ್ರೀಹರಿ ನಾಯುಡು



**ಬಾಹ್ಯ ಮತ್ತು ಆಂತರಿಕ ಆರ್ಥಿಕ ಪರಿಸರದಲ್ಲಿನ ಅಸ್ಥಿರತೆಗಳ ನಡುವೆಯೂ ಬಜೆಟ್ ಹಲವು ಸಂಗತಿಗಳತ್ತ ಗಮನ ನೀಡಿ ದೇಶದ ಅಭಿವೃದ್ಧಿಗೆ ಗಮನ ಕೇಂದ್ರೀಕರಿಸಿದೆ. ಅದರಲ್ಲೂ ಬೆಳವಣಿಗೆಯ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಲಾಗಿದೆ.**

ಸಂವಿಧಾನದ 112, 113, 114 (3) ಮತ್ತು 110 (ಎ) ಕಲಮಿನ ಅನುಸಾರ ಬಜೆಟ್, ಭಾರತ ಸರ್ಕಾರದ ಬಾಧ್ಯತೆಗಳಲ್ಲೊಂದು. ಐತಿಹಾಸಿಕವಾಗಿ ಇದು ಮುಂಗಡ ಪತ್ರವನ್ನು ಮಂಡಿಸುವ ಉದ್ದೇಶವನ್ನು ಹೊಂದಿರುವುದಾದರೂ ಸರ್ಕಾರಗಳು ಇದನ್ನು ಈ ಸಂದರ್ಭವನ್ನು ಮುಖ್ಯವಾದ ಯೋಜನೆಗಳನ್ನು ಹಾಗೂ ಉದ್ದೇಶಿತ ತೆರಿಗೆಯನ್ನು ಪ್ರಕಟಿಸಲು ಬಳಸಿಕೊಳ್ಳುತ್ತವೆ. ವರ್ಷಗಳು ಕಳೆದಂತೆ ಬಜೆಟ್‌ನಲ್ಲಿ ಹಲವು ಬದಲಾವಣೆಗಳಾಗಿವೆ. ಈ ಬಾರಿ ಕೂಡ ಮೂರು ಮುಖ್ಯ ಬದಲಾವಣೆಗಳಾಗಿವೆ : ರೈಲ್ವೆ ಬಜೆಟ್‌ನ್ನು ಕೇಂದ್ರ ಬಜೆಟ್‌ನೊಳಗೆ ಸೇರಿಸಲಾಯಿತು; ಒಂದು ತಿಂಗಳು ಮುಂಚಿತವಾಗಿಯೇ ಬಜೆಟ್ ಮಂಡನೆಯಾಯಿತು; ಯೋಜಿತ/ಇನ್ನೂ ಯೋಜಿತವಾಗದ ವೆಚ್ಚಗಳ ನಡುವಿನ ವ್ಯತ್ಯಾಸವನ್ನು ದೂರ ಮಾಡಿದ್ದಾರೆ. ಈ ಕಾರಣಗಳಿಂದಾಗಿ ಹಿಂದಿನ ಬಜೆಟ್‌ಗಳೊಂದಿಗೆ ಇದರ ಹೋಲಿಕೆ ಅವಕಾಶ ಅತ್ಯಲ್ಪ. ಈ ಬಜೆಟ್‌ನ್ನು ಮಂಡಿಸಿದ ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕಾದದ್ದು ಅವಶ್ಯಕ. ಎರಡು ಮುಖ್ಯ ನೀತಿಗಳ ಬದಲಾವಣೆ ಈ ಬಜೆಟ್‌ಗೆ ಮುನ್ನ ನಡೆಯಿತು: ನೋಟುರದ್ದತಿ ಮತ್ತು ಜಿಎಸ್‌ಟಿ ಮಸೂದೆ. ಜಾಗತಿಕ ಮಟ್ಟದಲ್ಲಿ ಅಮೆರಿಕ, ಯುರೋಪಗಳಲ್ಲಾಗುತ್ತಿರುವ ಜಾಗತೀಕರಣ ವಿರೋಧಿ ಪ್ರವೃತ್ತಿಗಳು, ಹೆಚ್ಚುತ್ತಿರುವ ತೈಲ ಬೆಲೆಗಳು, ನಿಧಾನವಾಗುತ್ತಿರುವ ಜಾಗತಿಕ ಚೇತರಿಕೆಗಳು ಭಾರತದ ಆರ್ಥಿಕತೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತಿವೆ. ಇಂತಹ ಅಸ್ಥಿರತೆಗಳ ನಡುವೆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವಂತಹ ನಿರೀಕ್ಷೆ ಬಜೆಟ್ ಮೇಲಿತ್ತು. ಇಲ್ಲಿ ಬಜೆಟ್‌ನಿಂದಾಗಿ ಆರ್ಥಿಕತೆಯ ಮೇಲಾಗಿರುವ ಪರಿಣಾಮಗಳನ್ನು ಅರ್ಥೈಸುವ ಹಾಗೂ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ವಿತ್ತ ಸಚಿವರು ಹೇಳಿರುವಂತೆ ಈ ಬಾರಿಯ ಬಜೆಟ್‌ನ ಕಾರ್ಯಸೂಚಿ 'ಟಿಇಸಿ ಇಂಡಿಯಾ' (ಭಾರತವನ್ನು ಪರಿವರ್ತಿಸಿ, ಸಶಕ್ತಗೊಳಿಸಿ, ಸ್ವಚ್ಛಗೊಳಿಸಿ).

### ಪ್ರಸ್ತುತ ಸ್ಥೂಲ ಪ್ರವೃತ್ತಿಗಳು

ಕೇಂದ್ರ ಸಂಖ್ಯಾಶಾಸ್ತ್ರ ಕಚೇರಿ (ಸಿಎಸ್‌ಓ) 2016–17ರಲ್ಲಿ ಭಾರತದ ಜಿಡಿಪಿ ದರ 7.1% ಎಂದು ಹೇಳುತ್ತಿದೆ. ಇದು ನೋಟುರದ್ದತಿಯ ಪರಿಣಾಮವನ್ನು ಒಳಗೊಂಡಿಲ್ಲ ಎಂದು ಹೇಳುತ್ತಿದೆ. ಆದರೆ ಹಲವು ವಿಶ್ಲೇಷಕರ ಪ್ರಕಾರ ನೋಟುರದ್ದತಿಯ ಪರಿಣಾಮವಾಗಿ ಜಿಡಿಪಿಯು 1 ರಿಂದ 2% ಕುಸಿಯುವ ಸಾಧ್ಯತೆಯಿದೆ. ಜಿಡಿಪಿಯಲ್ಲಿ ಕೃಷಿವಲಯದ ಅಭಿವೃದ್ಧಿಯು ಮಳೆಯನ್ನು ಅವಲಂಬಿಸಿದೆ. ಸೇವಾ ವಲಯದ ಬೆಳವಣಿಗೆ ಶೇ.9%ರಷ್ಟಾಗಲಿದೆ, ಕೈಗಾರಿಕಾ ವಲಯ ಶೇ.5.2% ಪ್ರಗತಿ ಸಾಧಿಸಲಿದೆ (ಕೋಷ್ಟಕ –1ನ್ನು ನೋಡಿ). ಸಿಪಿಐನ ಪ್ರಕಾರ ಡಿಸೆಂಬರ್‌ನಲ್ಲಿನ ಹಣದುಬ್ಬರ ಪ್ರಮಾಣ 3.4%ರಷ್ಟಿದ್ದು ಇದು ಆರ್‌ಬಿಐನ ಕಡ್ಡಾಯ ಗುರಿಗಿಂತ ಕಡಿಮೆ. ವ್ಯಾಪಾರ ವಲಯದಲ್ಲಿ ಆಮದು, ರಫ್ತು ಕುಂಠಿತಗೊಂಡಿದೆ. ಇದು ಚಿಂತಿಸಬೇಕಾದ ವಿಷಯವಾಗಿದೆ. ಇದರಿಂದಾಗಿ 2016–17ರ ಮೊದಲರ್ಧದಲ್ಲಿ ಚಾಲ್ತಿ ಖಾತೆಯ ಕೊರತೆ 0.3% ಕ್ಕೆ ಕುಸಿತಗೊಂಡಿದೆ. ಹಣಕಾಸಿನ ಹರಿವನ್ನು ಗಮನಿಸಿದರೆ ಆದಾಯ ಏರಿಕೆ ಕಂಡು ಬಂದರೂ ಹಣದ ಕೊರತೆ ಏಪ್ರಿಲ್ – ನವೆಂಬರ್ ವೇಳೆಗೆ ಗುರಿಯ 86%

* ಆರ್ಥಿಕ ಸಲಹಾಗಾರರು, ಪ್ರಾಧ್ಯಾಪಕರು. ** ಆರ್ಥಿಕ ತಜ್ಞರು, ಎನ್‌ಐಪಿಎಫ್‌ಪಿ. E-mail : * nrbmurthy@gmail.com ** sriharinaidua@gmail.com

ಮುಟ್ಟಿದೆಯೆಂದು ಅಂದಾಜು ಮಾಡಲಾಗಿದೆ. ಇದರ ಆಧಾರದ ಮೇಲೆ ಸರ್ಕಾರವು 2016–17ನೇ ಸಾಲಿನಲ್ಲಿ 3.5% ಹಣಕಾಸಿನ ಕೊರತೆ ನೀಗಿಸುವ ಗುರಿ ಹೊಂದಬೇಕಾದ ಅವಶ್ಯಕತೆಯನ್ನು ಮನಗಾಣುತ್ತದೆನ್ನುವ ನಿರೀಕ್ಷೆ ಇತ್ತು. ಬ್ಯಾಂಕಿಂಗ್ ವಲಯದಲ್ಲಿ ನೋಟುರದ್ದತಿಯ ಪರಿಣಾಮವಾಗಿ ಠೇವಣಿ ಹೆಚ್ಚಳಗೊಂಡು ಬ್ಯಾಂಕುಗಳು ಸಾಲ/ಠೇವಣಿಗಳ ಮೇಲಿನ ಬಡ್ಡಿಯನ್ನು ಕಡಿಮೆಗೊಳಿಸಿವೆ. ಇದು ಹೆಚ್ಚಿನ ಸಾಲ ಬೇಡಿಕೆ ಉಂಟುಮಾಡುವುದರಿಂದ ಹೆಚ್ಚಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. ಪ್ರಸ್ತುತ ಹೂಡಿಕೆಗಳ ಬೆಳವಣಿಗೆ ಇಳಿಮುಖವಾಗಿದ್ದು –0.2ರಷ್ಟಿದ್ದು ಪರಿಸ್ಥಿತಿ ಚಿಂತೆಗೆ ಕಾರಣವಾಗಿದೆ. ಸಿಎಂಐಇ ಅಂಕಿಅಂಶಗಳು ಕೂಡ ಹೊಸ ಯೋಜನೆಗಳ ಘೋಷಣೆ 227ರಿಂದ 177ಕ್ಕೆ ಕುಸಿದಿರುವುದನ್ನು ಸೂಚಿಸುತ್ತಿದೆ. ಇದು ಕೂಡ ನೋಟುರದ್ದತಿಗೆ ಮುಂಚಿನ ಹಾಗೂ ನಂತರದ 50 ದಿನಗಳಲ್ಲಿ ಕಂಡುಬಂದಿರುವುದು.

### ಬಜೆಟ್‌ನ ಮುಖ್ಯಾಂಶಗಳು

ಕಳೆದ ವರ್ಷ ದಿವಾಳಿ ಸಂಹಿತೆ, ಹಣದುಬ್ಬರದ ಏರುಪೇರು ಮತ್ತು ಹಣಕಾಸು



ನೀತಿ ಸಮಿತಿ, ಆಧಾರ್ ಕಾಯ್ದೆ, ಜಿಎಸ್‌ಟಿ ಇತ್ಯಾದಿ ಬದಲಾವಣೆಗಳನ್ನು ಕೈಗೊಂಡಂತೆ ಬಜೆಟ್ ಈ ಬಾರಿಯೂ ಹಲವು ವಲಯಗಳಲ್ಲಿ ನೀತಿ ಬದಲಾವಣೆಗಳನ್ನು ಮಾಡಿದೆ.

### ಸಾಂಪ್ರದಾಯಿಕ ವಲಯಗಳು

ಕೃಷಿಕರ ತೊಂದರೆಗಳನ್ನು ಮೂರು ಹಂತಗಳಾಗಿ ವಿಭಾಗಿಸಬಹುದು. ಬಿತ್ತನೆಗೆ ಮುನ್ನ, ಕೊಯ್ಲು ಮತ್ತು ಕೊಯ್ಲಿನ ನಂತರ. ಬಿತ್ತನೆಗೆ ಮುನ್ನ ಸಂದರ್ಭದಲ್ಲಿ ಸಾಲ, ರಾಸಾಯನಿಕಗಳು, ನೀರಾವರಿಗೆ ಸಂಬಂಧಿಸಿದ ಸಮಸ್ಯೆಗಳಿರುತ್ತವೆ. ಕೊಯ್ಲಿನ ಸಮಯದಲ್ಲಿ ಬರಗಾಲ ಅಥವಾ ಪ್ರವಾಹ ಸಂದರ್ಭಗಳು ಎದುರಾಗಬಹುದು. ಅಂತಹ ಸಮಯದಲ್ಲಿ ಬೆಳೆಯ ವಿಮೆಗೆ ಸಂಬಂಧಿಸಿದ ಸಮಸ್ಯೆಗಳು ತಲೆದೋರುತ್ತವೆ. ಬೆಳೆ ಕೊಯ್ಲಿನ ನಂತರ ಅವುಗಳ ಮಾರಾಟ, ದರ, ಸಾರಿಗೆ ಸಂಬಂಧಿಸಿದ ಆಪತ್ತುಗಳನ್ನು ಎದುರಿಸಬೇಕಾಗುತ್ತದೆ. ಕಳೆದ ವರ್ಷದ ಕಾರ್ಯಕ್ರಮಗಳಾದ 'ಪಟ್ಟಾ ಡಿಜಿಟಲೀಕರಣ', ಗ್ರಾಮೀಣ ವಿದ್ಯುತ್, ಗ್ರಾಮೀಣ ಭಾಗಕ್ಕೆ ಅಂತರ್ಜಾಲ ಸೇವೆ ಒದಗಿಸುವ ಸಲುವಾಗಿ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಕೆ ಹಾಗೂ ಈ ವರ್ಷದ ಮಣ್ಣಿನ ಆರೋಗ್ಯ ಕಾರ್ಡ್, ಫಸಲ್‌ಭೀಮಾ ಯೋಜನೆ, ದೀರ್ಘಕಾಲಿಕ ಮತ್ತು ಸೂಕ್ಷ್ಮ ನೀರಾವರಿ ಬಂಡವಾಳ ಮತ್ತು ಇ–ನಾಮ್ ಇವುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಿದಲ್ಲಿ ಭಾರತೀಯ ಕೃಷಿ ಸಂಬಂಧಿತ ವಿಪತ್ತುಗಳನ್ನು ಕಡಿಮೆ ಮಾಡಬಹುದು ಎಂಬ ನಿರೀಕ್ಷೆಯಿದೆ. ಕೃಷಿವಲಯಕ್ಕೆ ಸಂಬಂಧಿಸಿದ ಸಾಲ ಸೌಲಭ್ಯ 2016–17 ರಲ್ಲಿ ರೂ. 9 ಲಕ್ಷ ಕೋಟಿಯಷ್ಟಿತ್ತು 2017–18 ರಲ್ಲಿ ಅದನ್ನು 10 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಇದರೊಂದಿಗೆ ಹೆಚ್ಚುವರಿ ರೂ.20,000 ಕೋಟಿಯನ್ನು ದೀರ್ಘಕಾಲಿಕ ಹಾಗೂ ಸೂಕ್ಷ್ಮನೀರಾವರಿ ಬಂಡವಾಳಕ್ಕೆ ಒದಗಿಸಲಾಗಿದೆ. ಮಾರುಕಟ್ಟೆಗಳಲ್ಲಿನ ಒಕ್ಕೂಟಗಳನ್ನು ತೆಗೆದುಹಾಕಿ ಭಾರತದಾದ್ಯಂತ ಮಾರುಕಟ್ಟೆಯನ್ನು ಏಕತ್ರಗೊಳಿಸಲು

**ಕೋಷ್ಟಕ – 1 : ಇತ್ತೀಚಿನ ಕೆಲ ಬೃಹದಾರ್ಥಿಕ ಸೂಚಕಗಳಲ್ಲಿನ ಪ್ರವೃತ್ತಿಗಳು**

| ಸೂಚಕ / ವರ್ಷ | 2012–13 | 2013–14 | 2014–15 | 2015–16 ಪಿಇ | 2016–17 ಎಇ |
|---|---|---|---|---|---|
| ಜಿ ವಿ ಎ ಮೂಲ ದರ (ಬೆಳವಣಿಗೆ ದರ) | 5.4 | 6.3 | 7.1 | 7.2 | 7.1 |
| ಜಿಎಫ್‌ಸಿಎಫ್ (ಬೆಳವಣಿಗೆ ದರ) | 4.9 | 3.4 | 4.9 | 3.9 | –0.2 |
| ಒಟ್ಟು ದೇಶಿಯ ಉಳಿತಾಯ (% ಜಿಡಿಪಿ ಅನ್ವಯ) | 33.8 | 33 | 33 | – | – |
| ಕೃಷಿ (ಬೆಳವಣಿಗೆ ದರ) | 1.5 | 4.2 | –0.2 | 1.2 | 4.1 |
| ಕೈಗಾರಿಕೆ (ಬೆಳವಣಿಗೆ ದರ) | 3.6 | 5 | 5.9 | 7.4 | 5.2 |
| ಸೇವೆಗಳು (ಬೆಳವಣಿಗೆ ದರ) | 8.1 | 7.8 | 10.3 | 8.9 | 8.8 |
| ಹಣದುಬ್ಬರ – ಸಿಪಿಐ (ವಾರ್ಷಿಕ ಸರಾಸರಿ) | 10 | 9.4 | 5.8 | 4.9 | 3.41# |
| ಚಾಲ್ತಿ ಖಾತೆಯ ಕೊರತೆ (% ಜಿಡಿಪಿ ಅನ್ವಯ) | 4.8 | 1.7 | 1.3 | 1.1 | 0.3* |
| ರಫ್ತು (ಬೆಳವಣಿಗೆ ದರ) | 6.7 | 7.8 | 1.7 | –5.2 | 2.2 |
| ಆಮದು (ಬೆಳವಣಿಗೆ ದರ) | 6 | –8.2 | 0.8 | –2.8 | –3.8 |
| ಆದಾಯ ಕೊರತೆ (% ಜಿಡಿಪಿ ಅನ್ವಯ) | 3.7 | 3.2 | 2.9 | 2.5 | 2.3 |
| ಹಣಕಾಸಿನ ಕೊರತೆ (% ಜಿಡಿಪಿ ಅನ್ವಯ) | 4.9 | 4.5 | 4.1 | 3.9 | 3.5 |

ಮೂಲ : ಆರ್ಥಿಕ ಸಮೀಕ್ಷೆ

ಇ–ನಾಮ್ (ವಿದ್ಯುನ್ಮಾನ ರಾಷ್ಟ್ರೀಯ ಕೃಷಿ ಮಾರುಕಟ್ಟೆ) ಅನ್ನು ಹಾಲಿಯಿದ್ದ 250 ಮಾರುಕಟ್ಟೆಗಳಿಂದ 585 ಎಪಿಎಂಸಿಗಳಿಗೆ ವಿಸ್ತರಿಸಲಾಗುವುದು. ಸರ್ಕಾರವು ಗುತ್ತಿಗೆ ಕೃಷಿ ಅದರಲ್ಲೂ ಹೈನುಗಾರಿಕೆ, ಹಣ್ಣು ಮತ್ತು ತರಕಾರಿ ಸಂಬಂಧಿಸಿದ ಹಾಗೆ ಮಾದರಿ ಕಾನೂನನ್ನು ರಚಿಸುವ ಪ್ರಸ್ತಾವನೆಯನ್ನು ಹೊಂದಿದೆ.

**ಮೂಲಸೌಕರ್ಯ**

ಖಾಸಗಿ ಹಾಗೂ ವಿದೇಶಿ ಹೂಡಿಕೆಗಳ ಹಿಂಜರಿತಕ್ಕೆ ಮೂಲಸೌಕರ್ಯಗಳ ಕೊರತೆಯೇ ಮೂಲಕಾರಣ. ಈ ಸಮಸ್ಯೆಯನ್ನು ನಿವಾರಿಸಲು ಬಜೆಟ್‌ನಲ್ಲಿ ರಸ್ತೆ, ವಿದ್ಯುತ್ ಮತ್ತು ಡಿಜಿಟಲ್ ಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ. ಸರ್ಕಾರವು 2018 ಮೇ 1 ರ ವೇಳೆಗೆ ಎಲ್ಲ ಹಳ್ಳಿಗಳಲ್ಲೂ ಶೇ.100ರಷ್ಟು ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿ ಹೊಂದಿದೆ. ಇದಕ್ಕಾಗಿ ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿಯಲ್ಲಿ



ರೂ. 4,814 ಕೋಟಿಯಷ್ಟನ್ನು ತೆಗೆದಿರಿಸಲಾಗಿದೆ. ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿಯಲ್ಲಿ 2011–14ರಲ್ಲಿ ಪ್ರತಿದಿನಕ್ಕೆ 73ಕಿ.ಮೀಯಷ್ಟು ನಡೆಸಲಾಗುತ್ತಿದ್ದ ರಸ್ತೆ ಕಾಮಗಾರಿ 2016–17ಕ್ಕೆ 133 ಕಿಮೀಯಷ್ಟಾಗಿದೆ. ಈ ಯೋಜನೆಯಡಿಯಲ್ಲಿನ ಹಣವನ್ನು ರೂ.19,000 ಕೋಟಿಗೆ ಏರಿಸಲಾಗಿದೆ. ರೈಲ್ವೆ ವಿಸ್ತರಣೆ ಕಾಮಗಾರಿಗಾಗಿ ರೂ.55,000ಗಳನ್ನು ಬಜೆಟ್‌ನಲ್ಲಿ ತೆಗೆದಿರಿಸಲಾಗಿದೆ. ಒಟ್ಟು ಸಾರಿಗೆ ವಲಯಕ್ಕಾಗಿ ಬಜೆಟ್ ನಿಗದಿ ಮಾಡಿರುವ ಹಣ ರೂ.2.41 ಲಕ್ಷ ಕೋಟಿಗಳಷ್ಟು. ಸಾರಿಗೆ ವಲಯದ ಅಭಿವೃದ್ಧಿಯ ಮೇಲೆ ಒತ್ತು ನೀಡಿರುವುದನ್ನು ಇದು ಸೂಚಿಸುತ್ತದೆ. ಈ ವಲಯವು ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಕಾರಣ ಮತ್ತು ಇತರ ರಂಗಗಳೊಂದಿಗೆ ಸಂಪರ್ಕ ಹೊಂದಿರುವ ಕಾರಣ ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ ಸಹಕಾರಿಯಾಗಲಿದೆ.

**ಬಜೆಟ್ ಮತ್ತು ಬೃಹದರ್ಥಶಾಸ್ತ್ರ**

ಬಜೆಟ್‌ನ ಮುಖ್ಯ ನೀತಿ ರೂಪಣಾ ನಿರ್ಧಾರಗಳ ಉದ್ದೇಶ ಹಣಕಾಸಿನ ಆದಾಯದ ಕೊರತೆಯನ್ನು ನೀಗಿಸುವುದು. ಅಂತಾರಾಷ್ಟ್ರೀಯ ಸಂಸ್ಥೆಗಳ ಒತ್ತಡದ ಹಿನ್ನೆಲೆಯಲ್ಲಿ ಸರ್ಕಾರವು ಎಫ್‌ಆರ್‌ಬಿಎಂನ ನಿಯಮದ ಅನ್ವಯ 3% ಹಣಕಾಸು ಕೊರತೆಗೆ ಬದ್ಧವಾಗುವುದೆಂದು ನಿರೀಕ್ಷಿಸಲಾಗಿತ್ತು. ಹೊಸ ಎಫ್‌ಆರ್‌ಬಿಎಂ ಸಮಿತಿಯು ಈ ವಿಚಾರವಾಗಿ ಏನು ಹೇಳಿದೆ ಎಂದು ಸ್ಪಷ್ಟವಾಗಿಲ್ಲ ಆದರೆ ಬಜೆಟ್‌ನಲ್ಲಿ ಹಣಕಾಸು ಕೊರತೆಯನ್ನು 3.2%ಗೆ ಏರಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಆದಾಯದ ಕೊರತೆಯನ್ನು 1.9%ಗೆ ಇಳಿಸಲಾಗಿದ್ದು (2.3% ರಿಂದ) ಬಂಡವಾಳ ವೆಚ್ಚವನ್ನು 1.3%ಗೆ ಹೆಚ್ಚಿಸಲಾಗಿದೆ (1.1% ರಿಂದ). ನಮ್ಮ ಅನಿಸಿಕೆ ಪ್ರಕಾರ ಇದರಿಂದ ಆರ್ಥಿಕ ಬಲವರ್ಧನೆಯು ಸ್ಥಿರವಾಗಿ ವಿಸ್ತರಣೆಯಾಗಲಿದೆ. ಎಫ್‌ಆರ್‌ಬಿಎಂ ಸಮಿತಿಯು ಸಾಲದ ವಿಷಯವಾಗಿ ಮಧ್ಯಮ ಮಾರ್ಗ – ಶೇ.60% ಮಾದರಿ ಸೂಚಿಸಿದೆ (ಕೇಂದ್ರ 40% ಮತ್ತು ರಾಜ್ಯ 20%). ಇದು ಆರ್ಥಿಕ ಬಲವರ್ಧನೆ ಸಾಧಿಸಲು ಅವಕಾಶವನ್ನು ಒದಗಿಸಲಿದೆ.

**ಆದಾಯ ಕ್ರೋಢೀಕರಣ ನೀತಿಗಳು :** ಜಿಎಸ್‌ಟಿ ಮತ್ತು ನೋಟುರದ್ದತಿಯಿಂದಾಗಿ ತೆರಿಗೆ ಪಾವತಿ ಹೆಚ್ಚಾಗುವುದೆಂದು ನಿರೀಕ್ಷಿಸಲಾಗಿತ್ತು. ಇದು ಬಜೆಟ್‌ನಲ್ಲಿನ ತೆರಿಗೆ ಆದಾಯದ ಮೇಲೆ ಪ್ರಭಾವ ಬೀರಿರುವಂತಿದೆ. ತೆರಿಗೆಯಿಂದ ಬರುವ ಆದಾಯವು 1.4ರಷ್ಟು ಎಂದು ಅಂದಾಜಿಸಲಾಗಿದೆ. ಇದನ್ನೇ 2003–07ರಲ್ಲಿ ಟಿಐಎನ್ ಜಾರಿಗೆ ಬಂದಾಗ ನಿರೀಕ್ಷಿಸಲಾಗಿತ್ತು. ಇತರೆ ರಸೀದಿಗಳಿಂದ ರೂ.72,500 ಕೋಟಿಯಷ್ಟು ಬರಬಹುದೆಂದು ಅಂದಾಜಿಸಲಾಗಿದೆ. ಆದರಿದು ಸುಲಭವಲ್ಲ. ಅದೇ ರೀತಿ ಮಾರುಕಟ್ಟೆಯಿಂದ ಪಡೆದ ನಂತರದಲ್ಲಿ ಉಳಿವ ನಗದಿನಿಂದ 2 ಲಕ್ಷ ಕೋಟಿ ರೂ. ಬರಬಹುದು ಎಂಬ ನಿರೀಕ್ಷೆಯಿದೆ. ಈ ಅಂದಾಜು ನಿರೀಕ್ಷೆಗಳು ನಿಂತಿರುವುದು 2017–18ರಲ್ಲಾಗುವ 11.75% ಜಿಡಿಪಿ

**ಕೋಷ್ಟಕ – 2 : ಮೂಲಸೌಕರ್ಯಗಳ ಹಂಚಿಕೆಯಲ್ಲಿನ ಪ್ರವೃತ್ತಿಗಳು**

| ವಸ್ತು | 2015–2016 | 2016–2017 ಆರ್‌ಇ | 2017–2018 ಬಿಇ |
|---|---|---|---|
| ಎಂಜಿಎನ್‌ಆರ್‌ಇಜಿಎಸ್ ಕಾರ್ಯಕ್ರಮ | 38500 | 47499 | 48000 |
| ಪ್ರಧಾನ ಮಂತ್ರಿ ಆವಾಸ್ ಯೋಜನ | 20075 | 20936 | 29043 |
| ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನ | 19000 | 19000 | 19000 |
| ಎಎಂಆರ್‌ಯುಟಿ | 7296 | 9559 | 9000 |
| ಆಪ್ಟಿಕಲ್ ಫೈಬರ್ ಕೇಬಲ್ ನೆಟ್‌ವರ್ಕ್ ಫಾರ್ ಡಿಫೆನ್ಸ್ ಸರ್ವೀಸಸ್ | 2710 | 3210 | 3000 |
| ಭಾರತ್‌ನೆಟ್ | 0 | 6000 | 10000 |
| ಮೆಟ್ರೊ ಯೋಜನೆಗಳು | 10000 | 15700 | 18000 |
| ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನ | 8500 | 7874 | 10635 |
| ಸಗರ್‌ಮಾಲ | 450 | 406 | 600 |
| ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ | 2000 | 2500 | 2500 |
| ರೈಲ್ವೆ ಇಲಾಖೆಗೆ ಬಜೆಟ್ ಹಂಚಿಕೆ | 30121.2 | 35007.9 | 55000 |
| **ಒಟ್ಟು** | **138652.2** | **167691.9** | **187678** |

ಮೂಲ : ಬಜೆಟ್ ದಾಖಲೆ

ಬೆಳವಣಿಗೆಯ ಮೇಲೆ. ಇದು 2016–17ರಲ್ಲಿನ 11%ಗಿಂತ ಹೆಚ್ಚಿನದು. ಇದರೊಂದಿಗೆ ಜುಲೈ 1ರಿಂದ ಅನ್ವಯವಾಗಲಿರುವ ಜಿಎಸ್‌ಟಿಯ ಮೇಲೂ ನಿರ್ಭರವಾಗಿದೆ. ನೇರವಾಗಿ ತೆರಿಗೆ ಪಾವತಿಸುವವರ ಸಂಖ್ಯೆ 100ರಲ್ಲಿ 7 ಎಂದು ಆರ್ಥಿಕ ಸಮೀಕ್ಷೆ ತೋರಿಸಿದೆ. ಹಾಗಾಗಿ ಬಜೆಟ್ ಕೆಳಹಂತದಲ್ಲಿರುವವರಿಗೆ ತೆರಿಗೆಯನ್ನು 5% ಕಡಿಮೆಮಾಡಿದೆ. ನಮ್ಮ ಪ್ರಕಾರ ಇದು ಹೆಚ್ಚು ಜನರನ್ನು ತೆರಿಗೆ ವ್ಯಾಪ್ತಿಯೊಳಗೆ ತರಬಹುದು ಆದರೆ ಪರಿಣಾಮಕಾರಿ ತೆರಿಗೆ ದರವನ್ನು ನಿಗದಿಗೊಳಿಸುವಲ್ಲಿ ಅಸ್ಥಿರತೆಯನ್ನು ತಂದೊಡ್ಡಿದೆ. ಇನ್ನುಳಿದ ಬದಲಾವಣೆ ಸಂಬಂಧಿತ ಕ್ರಮಗಳು ಇ–ಫಾರಂಗಳ ತುಂಬುವಿಕೆ ಹಾಗೂ ನೀಡುವಿಕೆಯ ಸರಳೀಕರಣವನ್ನು ಒಳಗೊಂಡಿದೆ.

**ಬ್ಯಾಂಕಿಂಗ್ ಬಿಕ್ಕಟ್ಟು–ಎನ್‌ಪಿಎ ಸಮಸ್ಯೆಗಳು**

ಭಾರತದಲ್ಲಿ ಪಾಲಿಸಿ ಬಡ್ಡಿದರಗಳು ಕಡಿಮೆಯಿದ್ದರೂ ಖಾಸಗಿ ಹೂಡಿಕೆಗಳು ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣ ಅವಳಿ ಆಯವ್ಯಯ ಪಟ್ಟಿಯನ್ನು ನೀಡಬೇಕಾಗಿರುವುದು. ಅದರಲ್ಲೂ ಬ್ಯಾಂಕಿಂಗ್ ವಲಯದಲ್ಲಿ ಈ ಸಮಸ್ಯೆಯಿದೆ.

ನೋಟುರದ್ದತಿಯಿಂದಾಗಿ ಠೇವಣಿ ಹೆಚ್ಚಾಗಿ ಬ್ಯಾಂಕುಗಳಲ್ಲಿ ಆಯವ್ಯಯ ಪಟ್ಟಿಗಳು ಸಾಮಾನ್ಯರೂಪಕ್ಕೆ ಬರಬಹುದು ಅದಕ್ಕೆ ಬಜೆಟ್ ಕೂಡ ನೆರವು ನೀಡಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಬಜೆಟ್ ಹಿಂದಿನ ವರ್ಷ ರೂ.25,000 ಕೋಟಿ ನಿಗದಿಪಡಿಸಿದ್ದು ಈ ಬಾರಿ ರೂ.10,000 ಕೋಟಿಗೆ ಇಳಿಸಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಅನುತ್ಪಾದಕ ಸ್ವತ್ತು ಹೆಚ್ಚಾಗಿದ್ದರೂ ಅದರಿಂದ ಹೆಚ್ಚಿನ ಲಾಭವೇನೂ ಇಲ್ಲ. ಇದರೊಂದಿಗೆ ಕಳೆದ ವರ್ಷದಿಂದ ಬ್ಯಾಂಕ್ ದಿವಾಳಿ ಸಂಹಿತೆ, ಸಾಲ ವಸೂಲಿ ನ್ಯಾಯಮಂಡಳಿಗಳೊಂದಿಗೆ ಎಸ್‌ಎಆರ್‌ಎಫ್‌ಇಎಸ್‌ಐ ಆಕ್ಟ್, ಬ್ಯಾಂಕ್ ಬೋರ್ಡ್ ಬ್ಯೂರೊ ಮತ್ತು ಇಂದ್ರಧನುಷ್ ಯೋಜನೆಗಳಿಗೆ ತಿದ್ದುಪಡಿ ತರಲಾಗಿದೆ. ಇವು ದೀರ್ಘಕಾಲಿಕ ಅವಧಿಯಲ್ಲಿ ಬ್ಯಾಂಕುಗಳಿಗೆ ನೆರವು ನೀಡಲಿವೆ.

**ನೋಟುರದ್ದತಿ ಮತ್ತು ಬಜೆಟ್**

ನೋಟುರದ್ದತಿಯ ನಂತರದಲ್ಲಿ ಆರ್ಥಿಕತೆಯ ಕೆಲವಿಭಾಗಗಳಲ್ಲಿ ಸಂಕುಚನ ಹಾಗೂ ಅಡಚಣೆಗಳು ಉಂಟಾಗಿವೆ. ಕ್ಷೇತ್ರಿಯ ಮಟ್ಟದಲ್ಲಿ ಎಸ್‌ಐಎಎಂನ ಅಂಕಿಅಂಶಗಳ ಪ್ರಕಾರ ಆಟೋಮೊಬೈಲ್ ಕ್ಷೇತ್ರದಲ್ಲಿ ಮಾರಾಟವು ಡಿಸೆಂಬರ್ 2016ರಲ್ಲಿ 18.66% ಇಳಿಮುಖವಾಗಿದೆ. ಅದರಲ್ಲೂ ನಗದನ್ನು ನೀಡಿ ಕೊಳ್ಳಲಾಗುತ್ತಿದ್ದ ದ್ವಿಚಕ್ರ, ತ್ರಿಚಕ್ರ ವಾಹನಗಳ ಖರೀದಿಯು ಅನುಕ್ರಮವಾಗಿ ಶೇ.22.04 ಹಾಗೂ ಶೇ.36.23ರಷ್ಟು ಇಳಿಮುಖವಾಗಿದೆ. ನೈಟ್ ಫ್ರಾಂಕ್ ಅಂಕಿಅಂಶಗಳ ಪ್ರಕಾರ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಖರೀದಿಯು ಶೇ.50% ಕಡಿಮೆ – ಆಗಬಹುದೆಂದು ಆರ್ಥಿಕ ಸಮೀಕ್ಷೆ ಅಂದಾಜು ಮಾಡಿದೆ.

ಜಿಡಿಪಿಯ ಮೇಲೆ ನೋಟುರದ್ದತಿಯು ಪರಿಣಾಮವು ಶೇ.0.25% – ಶೇ.1%ನಷ್ಟು ಆಗಬಹುದೆಂದೂ ಆರ್ಥಿಕ ಸಮೀಕ್ಷೆ ಅಂದಾಜು ಮಾಡಿದೆ. ಮತ್ತೊಂದೆಡೆ ಜಿಡಿಪಿಯಲ್ಲಿ ಇಳಿಮುಖವಾಗಿದ್ದರೂ ತೆರಿಗೆ ಆದಾಯವು ನೋಟುರದ್ದತಿಯ ನಂತರ ಹೆಚ್ಚಿದಂತೆ ಕಂಡುಬರುತ್ತಿದೆ : ಕಾರ್ಪೊರೇಷನ್ ತೆರಿಗೆ (4.4%), ಆದಾಯ ತೆರಿಗೆ (24.6%), ಕೇಂದ್ರಿಯ ಅಬಕಾರಿ ಸುಂಕ (43%), ಸೇವಾ ತೆರಿಗೆ (23.9%), ಕಸ್ಟಮ್ಸ್ ಸುಂಕ (4.1%). ನೋಟುರದ್ದತಿಯಿಂದಾಗಿ ತೆರಿಗೆಯು ಹೆಚ್ಚು ವಿಸ್ತಾರಗೊಂಡಂತಿದೆ. ಪಾರದರ್ಶಕ ವಹಿವಾಟಿನಿಂದಾಗಿ ತೆರಿಗೆ ತಪ್ಪಿಸುವವರ ಸಂಖ್ಯೆ ಕಡಿಮೆಯಾಗಬಹುದು. ಆರ್ಥಿಕ ಸಮೀಕ್ಷೆ ಮತ್ತು ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾದ ಪ್ರಕಾರ ರೂಪೆ ಆಧರಿತ ಪಿಓಎಸ್ ಎಲೆಕ್ಟ್ರಾನಿಕ್ ವಹಿವಾಟು ರೂ.13,000 ಕೋಟಿಯಷ್ಟಾಗಿದೆ.

ಇ–ಕಾಮರ್ಸ್‌ನಲ್ಲಿ ರೂ.2,000 ಕೋಟಿಯಷ್ಟು ಹಾಗೂ ಶೇ.300–400ರಷ್ಟು ಪ್ರಗತಿ ಕಳೆದ ಕೆಲವು ತಿಂಗಳುಗಳಲ್ಲಾಗಿದೆ. ಇವುಗಳ ಹೊರತಾಗಿಯೂ ನಗದು ವಹಿವಾಟು ಇರುವವರೆಗೂ ಕಪ್ಪುಹಣ ಸಾಧ್ಯತೆ ಇದ್ದೇ ಇರುತ್ತದೆ ಎನ್ನುವುದು ಸಾಮಾನ್ಯ ದೃಷ್ಟಿಕೋನ. ಹಾಗಾಗಿ ಬಜೆಟ್‌ನಲ್ಲಿ ನಗದು ವ್ಯವಹಾರವು ಮೂರು ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ತೆರಿಗೆ ವಿಧಿಸುವ ಪ್ರಸ್ತಾವನೆಯನ್ನು ಮುಂದಿಟ್ಟಿದೆ. ಇದರಿಂದಾಗಿ ಮುಂಬರುವ ವರ್ಷಗಳಲ್ಲಿ ನಗದುರಹಿತ ವ್ಯವಹಾರದತ್ತ ಆರ್ಥಿಕತೆಯು ಮುಂದುವರೆಯಬಹುದು. ಇದರಿಂದ ತೆರಿಗೆ ಪಾವತಿ ಸರಿಯಾಗಿ ನಡೆದು ಕಪ್ಪುಹಣ ನಿರ್ಬಂಧಿತವಾಗಬಹುದು.

**ಬಜೆಟ್ ಮತ್ತು ಡಿಜಿಟಲ್ ಆರ್ಥಿಕತೆ :** ಆರ್ಥಿಕತೆಯನ್ನು ನಗದು ರಹಿತಗೊಳಿಸುವ ಮುನ್ನ ಅದಕ್ಕೆ ತಕ್ಕಂತಹ ಪಾವತಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ಪ್ರಸ್ತುತ ಭಾರತವು ಮೂರು ಸವಾಲುಗಳನ್ನು ಎದುರಿಸುತ್ತಿದೆ : ಸೈಬರ್ ಸೆಕ್ಯುರಿಟಿ, ಡಿಜಿಟಲ್ ಮೂಲಸೌಕರ್ಯ ಮತ್ತು ಡಿಜಿಟಲ್ ವಹಿವಾಟಿನ ವೆಚ್ಚ. ಬಜೆಟ್ ಸ್ವಲ್ಪ ಮಟ್ಟಿಗೆ ಮೊದಲೆರಡು ವಿಷಯಗಳನ್ನು ನಿರ್ವಹಿಸಲು ಪ್ರಯತ್ನಿಸಿದೆ. ಹೆಚ್ಚುತ್ತಿರುವ ಸೈಬರ್ ಅಕ್ರಮಗಳ ಹಿನ್ನೆಲೆಯಲ್ಲಿ ಆರ್ಥಿಕ ವಲಯದ ಒಗ್ಗಟ್ಟು ಹಾಗೂ ಸ್ಥಿರತೆಯನ್ನು ಕಾಪಾಡಲು ಬಜೆಟ್ ಆರ್ಥಿಕ ರಂಗಕ್ಕಾಗಿ ಗಣಕ ತುರ್ತು ಪ್ರತಿಕ್ರಿಯೆ ತಂಡ ಪ್ರಸ್ತಾವನೆಯನ್ನು ಮುಂದಿಟ್ಟಿದೆ.

**ಡಿಜಿಟಲ್ ಮೂಲಸೌಕರ್ಯ :** ಈ ಸೌಕರ್ಯವನ್ನು ಅಭಿವೃದ್ಧಿಗೊಳಿಸಲು ಬಜೆಟ್ ಭಾರತ್‌ನೆಟ್, ಡಿಜಿಗಾಂವ್, ಎಂ–ಎಸ್‌ಐಪಿಎಸ್ ಕಾರ್ಯಕ್ರಮಗಳಿಗಾಗಿ ಹೆಚ್ಚು ಹಣ ನೀಡಿದೆ. ಇವುಗಳಿಂದ ದೇಶದಲ್ಲಿ ಸಮರ್ಥ ಡಿಜಿಟಲೀಕರಣ ಬೆಳೆಯುವ ನಿರೀಕ್ಷೆಯಿದೆ.

**ಒಟ್ಟಾರೆ ಪ್ರಗತಿ ಈ ಬಜೆಟ್‌ನಿಂದ ಸಾಧ್ಯವೇ?:** ಭಾರತದ ಸಾರ್ವಜನಿಕ ಪಾಲಿಸಿಗಳು ಎದುರಿಸುತ್ತಿರುವ ದೊಡ್ಡ ಸವಾಲು ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಹೇಗೆ ಎಂದು. ಹಾಗಾಗಿ ಬಜೆಟ್ ಕಾರ್ಮಿಕರನ್ನೊಳಗೊಂಡ ಕ್ಷೇತ್ರಗಳಾದ ಕಟ್ಟಡ ಕಾಮಗಾರಿ, ಪ್ರವಾಸೋದ್ಯಮ, ರಸ್ತೆ ಮತ್ತಿತರ ಮೂಲಸೌಕರ್ಯಗಳ ಕ್ಷೇತ್ರಗಳಿಗೆ ಹೆಚ್ಚು ಒತ್ತು ನೀಡಿದೆ. ಆದರೆ ಇದನ್ನು ಸಾಧಿಸಲು ನೀತಿ ಬದಲಾವಣೆಗಳ ಅಗತ್ಯ ಕೂಡ ಇದೆ. ಆದರೆ ಈ ಕುರಿತು ಬಜೆಟ್‌ನಲ್ಲಿ ಹೆಚ್ಚಾಗಿ ಹೇಳಲಾಗಿಲ್ಲ.

**ಉಪಸಂಹಾರ :** ಒಟ್ಟಾರೆಯಾಗಿ ಬಾಹ್ಯ ಮತ್ತು ಆಂತರಿಕ ಆರ್ಥಿಕ ಪರಿಸರದಲ್ಲಿನ ಅಸ್ಥಿರತೆಗಳ ನಡುವೆಯೂ ಬಜೆಟ್ ಹಲವು ಸಂಗತಿಗಳತ್ತ ಗಮನನೀಡಿ ದೇಶದ ಅಭಿವೃದ್ಧಿಗೆ ಗಮನ ಕೇಂದ್ರೀಕರಿಸಿದೆ. ಅದರಲ್ಲೂ ಬೆಳವಣಿಗೆಯ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಲಾಗಿದೆ. ಈ ಕ್ರಮಗಳು ಯಶಸ್ವಿಯಾಗಲು ಇನ್ನಷ್ಟು ಅಭಿವೃದ್ಧಿ ಸಂಬಂಧಿತ ನೀತಿಗಳನ್ನು ರಾಷ್ಟ್ರ ಮಟ್ಟದಲ್ಲಿ ರೂಪಿಸುವ ಅವಶ್ಯಕತೆ ಇದೆ. ❑

# ಕಾರ್ಯದೃಷ್ಟಿಯುಳ್ಳ ಕೇಂದ್ರ ಮುಂಗಡ ಪತ್ರ

* ಚರಣ್ ಸಿಂಗ್




ಜಾಗತಿಕ ಅರ್ಥ ವ್ಯವಸ್ಥೆಯ ಬೆಳವಣಿಗೆಯ ಸನ್ನಿವೇಶದಲ್ಲಿ ದೇಶದ ಅರ್ಥ ವ್ಯವಸ್ಥೆಯಲ್ಲಿ ಆತ್ಮವಿಶ್ವಾಸ ತುಂಬುವುದು ಅತಿಮುಖ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಭಾರತವನ್ನು ಪರಿವರ್ತಿಸುವ, ಶಕ್ತಿ ತುಂಬುವ ಮತ್ತು ಸ್ವಚ್ಛಗೊಳಿಸುವ ಕೆಲಸವನ್ನು ಗಂಭೀರವಾಗಿ ನಡೆಸುತ್ತಿದೆ.

ಸರ್ಕಾರದ ವಿತ್ತೀಯ ನೀತಿಯಲ್ಲಿ ಬಜೆಟ್ ಪ್ರಮುಖ ಮತ್ತು ಮಹತ್ವದ ಅಂಗ. ಯಾವುದೇ ದೇಶದ ಬೃಹತ್ ಆರ್ಥಿಕ ನೀತಿಯ ಮುಖ್ಯ ಉದ್ದೇಶವು ಸ್ಥಿರ ಪ್ರಗತಿಯೇ ಆಗಿದೆ. ವಿತ್ತೀಯ ಮತ್ತು ಹಣಕಾಸು ನೀತಿಗಳ ಅನುಷ್ಠಾನದ ಮೂಲಕ ಈ ಪ್ರಗತಿಯನ್ನು ಸಾಧಿಸಬಹುದಾಗಿದೆ. ಉದ್ಯೋಗಾವಕಾಶಗಳ ಹೆಚ್ಚಳ ಮತ್ತು ಸುಸ್ಥಿರ ಪ್ರಗತಿಯನ್ನು ದೃಢಪಡಿಸುವುದು ವಿತ್ತೀಯ ನೀತಿಯ ಗುರಿಯಾದರೆ, ಹಣದುಬ್ಬರವನ್ನು ನಿಯಂತ್ರಿಸುವ ಮೂಲಕ ದೇಶದ ಅರ್ಥ ವ್ಯವಸ್ಥೆಯನ್ನು ಪ್ರಗತಿಯ ರಾಜಮಾರ್ಗಕ್ಕೆ ಕೊಂಡೊಯ್ಯಲು ಅಗತ್ಯವಾದ ಪೂರಕ ಪರಿಸರವನ್ನು ನಿರ್ಮಿಸುವುದು ಹಣಕಾಸು ನೀತಿಯ ಗುರಿಯಾಗಿದೆ. ಅರ್ಥ ವ್ಯವಸ್ಥೆಯ ಪ್ರಗತಿ ಮತ್ತು ಉದ್ಯೋಗಾವಕಾಶಗಳ ಹೆಚ್ಚಳದ ಉದ್ದೇಶ ಅಥವಾ ಗುರಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ವಿತ್ತೀಯ ನೀತಿಯು ನಾನಾ ಮೂಲಗಳನ್ನು ಬಳಸಿಕೊಳ್ಳುತ್ತದೆ. ಒಳ್ಳೆಯ ಶಿಕ್ಷಣ ಮತ್ತು ಕೌಶಲ್ಯ ನಿರ್ಮಾಣ, ಸದೃಢ ಕಾರ್ಮಿಕ ಪಡೆಯ ಸೃಷ್ಟಿ, ವಾಣಿಜ್ಯ ವಹಿವಾಟು ಹೆಚ್ಚಿಸಲು ಉತ್ಕೃಷ್ಟ ಮೂಲಸೌಕರ್ಯ ಮತ್ತು ಸ್ವತ್ತಿನ ಭದ್ರತೆ ದೃಢಪಡಿಸುವುದು ಇದರ ಉದ್ದೇಶ. ಈ ರೀತಿಯ ನಾನಾ ಮೂಲಗಳನ್ನು ಬಳಸಿಕೊಂಡು, ಅರ್ಥ ವ್ಯವಸ್ಥೆಯನ್ನು ಪ್ರಗತಿಯ ಹಾದಿಗೆ ಕೊಂಡೊಯ್ಯಬೇಕಾದರೆ ಸರ್ಕಾರ, ಅತ್ಯಗತ್ಯವಾಗಿ ಹಣಕಾಸಿನ ವೆಚ್ಚ ಮಾಡಲೇಬೇಕು. ಹಣಕಾಸಿನ ವೆಚ್ಚ ಭರಿಸಲು ಸರ್ಕಾರ ನೇರ ಮತ್ತು ಪರೋಕ್ಷ ತೆರಿಗೆ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಬೇಕು. ಜತೆಗೆ, ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಆದಾಯ ಮತ್ತು ಲಾಭಾಂಶ ಸಂಗ್ರಹಿಸಬೇಕು. ಕಟ್ಟಕಡೆಯ ಪ್ರಯತ್ನವಾಗಿ, ಆಂತರಿಕ ಮತ್ತು ಬಾಹ್ಯ ಮೂಲಗಳಿಂದ ಅಲ್ಪಾವಧಿ ಮತ್ತು ದೀರ್ಘಾವಧಿಯ ಸಾಲ ಪಡೆಯಬೇಕು. ವಿತ್ತೀಯ ನೀತಿಯ ಕಾರ್ಯಕ್ಷೇತ್ರವಾಗಿರುವ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಮತ್ತು ವೆಚ್ಚವು ಸರ್ಕಾರದ ಕೆಲಸ ಕಾರ್ಯಗಳು, ಬಳಕೆ, ಉಳಿತಾಯ ಮತ್ತು ಹೂಡಿಕೆ ಸೇರಿದಂತೆ ನಾನಾ ವಲಯಗಳ ಮೇಲೆ ಪರಿಣಾಮಗಳನ್ನು ಉಂಟು ಮಾಡುತ್ತದೆ.

ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿರುವ ಕಠಿಣ ಆರ್ಥಿಕ ಪರಿಸರದ ನಡುವೆ, ಇತ್ತೀಚೆಗೆ ಕೇಂದ್ರ ಸರ್ಕಾರದ ಬಜೆಟ್ ಮಂಡನೆಯಾಗಿದೆ. ಕೇಂದ್ರ ಸರ್ಕಾರ ನವೆಂಬರ್ 8ರಂದು ಅಧಿಕ ಮುಖಬೆಲೆಯ ಹಳೆಯ ನೋಟುಗಳ ಚಲಾವಣೆ ನಿಲ್ಲಿಸಿದ ಕ್ರಮದಿಂದ ದೇಶದ ಅರ್ಥ ವ್ಯವಸ್ಥೆಯ ಮೇಲಾಗಿರುವ ಪರಿಣಾಮಗಳನ್ನು ಇನ್ನೂ ವಿಶ್ಲೇಷಿಸಬೇಕಾಗಿದೆ. ವಾಸ್ತವವಾಗಿ, ಹಳೆಯ ನೋಟುಗಳ ಅಮಾನ್ಯ ಕ್ರಮದ ನಂತರ ಸಂಗ್ರಹವಾಗಿರುವ ನಗದಿನ ಪ್ರಮಾಣ ಎಷ್ಟು ಎಂಬುದನ್ನು ಭಾರತೀಯ ರಿಸರ್ವ್ ಬ್ಯಾಂಕ್ 'ಆರ್‌ಬಿಐ' ಇನ್ನೂ ದೃಢಪಡಿಸಬೇಕಿದೆ ಮತ್ತು ಭಾರತದ ಕೈಗಾರಿಕೆಗಳು ಮತ್ತು ವಾಣಿಜ್ಯ ರಂಗದ ಮೇಲಾದ ಪರಿಣಾಮಗಳು ಏನು ಎಂಬುದು ಇನ್ನು ಸ್ಪಷ್ಟವಾಗಿಲ್ಲ. ಎಲ್ಲಕ್ಕಿಂತ ವಿಶೇಷವಾಗಿ, ಭಾರತವೀಗ ಸ್ವಾತಂತ್ರ್ಯ ನಂತರದ ಅತಿ ಮಹತ್ವದ ತೆರಿಗೆ ಸುಧಾರಣೆಯನ್ನು ಜಿಎಸ್‌ಟಿ ರೂಪದಲ್ಲಿ ಜಾರಿಗೆ ತರಲು ತುದಿಗಾಲ ಮೇಲೆ ನಿಂತಿದೆ. ಬಾಹ್ಯ ವಲಯದಲ್ಲಿ ಜಾಗತಿಕ ಅರ್ಥ ವ್ಯವಸ್ಥೆ ಮಂದಗತಿ ಹಿಡಿದಿದೆ ಮತ್ತು ಕುಂಠಿತವಾಗಿದೆ, ತೈಲ ದರ ಏರಿಕೆ ಕಾಣುತ್ತಿದೆ. ಜಾಗತಿಕ ಮಟ್ಟದಲ್ಲಿ ಸಂರಕ್ಷಣಾ ವಾದದ ನೀತಿಗಳು ಬಲ ಪಡೆಯುತ್ತಿವೆ. ಅಮೆರಿಕದ ಜಾಗತೀಕರಣದ

* ಆರ್‌ಬಿಐ ಚೇರ್ ಪ್ರೊಫೆಸರ್ ಆಫ್ ಎಕನಾಮಿಕ್ಸ್, ಐಐಎಂ, ಬೆಂಗಳೂರು. E-mail : charansingh60@gmail.com


ಸಿದ್ಧಾಂತದ ಬದಲಾವಣೆ ಹಾಗೂ ಬ್ರಿಟನ್ ಐರೋಪ್ಯ ಒಕ್ಕೂಟದಿಂದ ಹೊರಗೆ ಹೋಗುತ್ತಿರುವುದರಿಂದ ಉದ್ಭವಿಸಿರುವ ಅನಿಶ್ಚಯ ಮತ್ತಿತರ ಬೆಳವಣಿಗೆ, ಜಾಗತಿಕ ಅರ್ಥವ್ಯವಸ್ಥೆಯ ಸ್ಥಿರ ಪ್ರಗತಿಗೆ ಕಷ್ಟ ತಂದೊಡ್ಡಿವೆ. ಜತೆಗೆ, ಐರೋಪ್ಯ ಒಕ್ಕೂಟದ ರಾಜಕೀಯ ಬೆಳವಣಿಗೆಗಳಿಂದಾಗಿ ಸ್ಥಿರ ಆರ್ಥಿಕ ಪ್ರಗತಿಯ ಯೋಜನೆ ರೂಪಿಸಲು ಸಾಧ್ಯವಾಗದಂತಾಗಿದೆ. ಇತ್ತೀಚಿನ ಕೇಂದ್ರ ಬಜೆಟ್‌ನ ಕಾರ್ಯಸೂಚಿಯು ದೇಶವನ್ನು ಪರಿವರ್ತಿಸುವ, ಶಕ್ತಿ ತುಂಬುವ ಮತ್ತು ಸ್ವಚ್ಛಗೊಳಿಸುವ ಉದ್ದೇಶ ಹೊಂದಿದೆ. 10 ವೈವಿಧ್ಯಮಯ ವಿಷಯಗಳನ್ನು ಆಧರಿಸಿ ಬಜೆಟ್ ಪ್ರಸ್ತಾವನೆಗಳನ್ನು ಮಂಡಿಸಲಾಗಿದೆ. ಕೃಷಿಕರು, ಗ್ರಾಮೀಣ ಜನಸಂಖ್ಯೆ, ಯುವ ಸಮುದಾಯ, ಬಡವರು ಮತ್ತು ಸೌಲಭ್ಯ ವಂಚಿತರು, ಮೂಲಸೌಕರ್ಯ, ಹಣಕಾಸು ವಲಯ, ಡಿಜಿಟಲ್ ಆರ್ಥಿಕತೆ, ಸಾರ್ವಜನಿಕ ಸೇವೆ, ವಿವೇಕಯುತ ಹಣಕಾಸಿನ ನಿರ್ವಹಣೆ ಮತ್ತು ತೆರಿಗೆ ಆಡಳಿತಕ್ಕೆ ಆದ್ಯತೆಯ ಗಮನ ನೀಡಲಾಗಿದೆ.

### ವಿತ್ತೀಯ ಸದೃಢತೆ

ಹಲವು ನಿರ್ಬಂಧಗಳ ನಡುವೆ ಬಜೆಟ್‌ನಲ್ಲಿ ವಿತ್ತೀಯ ಸದೃಢತೆ ಮತ್ತು ಎಲ್ಲ ರೀತಿಯ ಕೊರತೆಗಳ ನಿವಾರಣೆಗೆ ಗಮನ ನೀಡಲಾಗಿದೆ.

ಕೇಂದ್ರ ಸರ್ಕಾರ ಆದಾಯ ಕೊರತೆ ಮತ್ತು ಒಟ್ಟು ವಿತ್ತೀಯ ಕೊರತೆಯನ್ನು ಯಶಸ್ವಿಯಾಗಿ ಮೊಟಕುಗೊಳಿಸಲು ಸಕಲ ಪ್ರಯತ್ನ ನಡೆಸಿದೆ. ಆದಾಗ್ಯೂ, ಶೇಕಡಾವಾರು

**ರೇಖಾನಕ್ಷೆ – 1 : ಪ್ರಮುಖ ಕೊರತೆಗಳು**




ಮೂಲ : ಸ್ವೀಕೃತಿಗಳ ಪ್ರವೃತ್ತಿ, ಕೇಂದ್ರ ಬಜೆಟ್ 2017–18, ಭಾರತ ಸರ್ಕಾರ.

ಜಿಡಿಪಿಯಲ್ಲಿ ಬಂಡವಾಳ ವೆಚ್ಚ ಕಡಿಮೆಯಿದ್ದು, ಆದಾಯ ವೆಚ್ಚ ಆದಾಯ ಸ್ವೀಕೃತಿ ರಸೀದಿಗಿಂತ ಗಣನೀಯವಾಗಿ ಏರಿಕೆ ಕಂಡಿದೆ. (ಪಟ್ಟಿ – 1)

ಬಂಡವಾಳ ವೆಚ್ಚವು ಸರ್ಕಾರದ ಇತರೆ ಕಾರ್ಯಕ್ರಮಗಳ ಆಘಾತಗಳನ್ನು ಹೀರಿಕೊಳ್ಳುವ ಸಾಧನವಾಗಿ ಪರಿಣಮಿಸಿದೆ ಎಂಬುದು ಪ್ರವೃತ್ತಿಯ ವಿಶ್ಲೇಷಣೆಯಿಂದ ತಿಳಿದು ಬಂದಿದೆ. ಇದು ಭಾರತದಲ್ಲಿ ಕೇಂದ್ರ ಸರ್ಕಾರದ ಯೋಜನೆ ಆರಂಭವಾದ ದಿನದಿಂದಲೂ ಕಂಡುಬಂದಿದೆ ಮತ್ತು 1960 ರಿಂದ ಕುಗ್ಗುತ್ತಾ ಬಂದಿದೆ. ಆದಾಯ ಖಾತೆಯಲ್ಲಿ ಬಡ್ಡಿ ಪಾವತಿ, ಸಬ್ಸಿಡಿಗಳು ಮತ್ತು ಪಿಂಚಣಿಗಳ ಪೂರ್ವಭಾವಿ ಬಾಬ್ತು ಆದಾಯ ಸ್ವೀಕೃತಿಯ ಅರ್ಧ ಭಾಗಕ್ಕಿಂತ ಹೆಚ್ಚಿರುತ್ತದೆ. (ಪಟ್ಟಿ – 3) 1970–71 ರಿಂದ ಸರ್ಕಾರದ ಆದಾಯದ ಪ್ರವೃತ್ತಿ ವಿಶ್ಲೇಷಣೆಯ ಪ್ರಕಾರ ಡಿವಿಡೆಂಡ್‌ಗಳನ್ನು ಸೇರಿಸಿದಂತೆ ತೆರಿಗೆಯೇತರ ಆದಾಯ ತಟಸ್ಥವಾಗಿದೆ. ಆದರೆ, ತೆರಿಗೆ ಮೂಲದ ಆದಾಯವು ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡಿದೆ. (ಪಟ್ಟಿ – 4).

### ಅನ್ಯ ರಾಷ್ಟ್ರಗಳ ಜತೆ ಹೋಲಿಕೆ

ಭಾರತದ ಆರ್ಥಿಕತೆ ತನ್ನ ಒಡಲಲ್ಲಿ ಹಲವು ಸಮಸ್ಯೆಗಳನ್ನು ಹೊಂದಿದ್ದರೂ ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಉತ್ತಮವಾಗಿ

**ಪಟ್ಟಿ – 1 : ಕೇಂದ್ರ ಬಜೆಟ್‌ನ ಸಾರಾಂಶ (ಅಂಕಿಸಂಖ್ಯೆ ಜಿಡಿಪಿ ಶೇ. ದಲ್ಲಿ)**

| ಸ್ವೀಕೃತಿ | 2016–17 (ಆರ್‌ಇ) | 2017–18 (ಬಿಇ) | ವೆಚ್ಚ | 2016–17 (ಆರ್‌ಇ) | 2017–18 (ಬಿಇ) |
|---|---|---|---|---|---|
| ಆದಾಯ ಸ್ವೀಕೃತಿ | 9.4 | 9.0 | ಆದಾಯ ವೆಚ್ಚ | 11.5 | 10.9 |
| **ಆದಾಯ ವೆಚ್ಚ – ಆದಾಯ ಸ್ವೀಕೃತಿ = ಆದಾಯ ಕೊರತೆ** | | | 2.1 | 1.9 | |
| ಬಂಡವಾಳ ಸ್ವೀಕೃತಿ | 3.9 | 3.8 | ಬಂಡವಾಳ ವೆಚ್ಚ | 1.9 | 1.8 |
| **ಒಟ್ಟು ವೆಚ್ಚ – ಆದಾಯ ಸ್ವೀಕೃತಿ = ಒಟ್ಟು ವಿತ್ತೀಯ ಕೊರತೆ* ಸಾಲೇತರ ಸ್ವೀಕೃತಿ ಹೊಂದಾಣಿಕೆ** | | | | | **3.2 3.2** |
| ಬಿಇ – ಆಯವ್ಯಯ (ಬಜೆಟ್) ವೆಚ್ಚ, ಆರ್‌ಇ – ಆದಾಯ (ಕಂದಾಯ) ವೆಚ್ಚ | | | | | |
| ಮೂಲ : ಕೇಂದ್ರ ಬಜೆಟ್ 2017–18, ಭಾರತ ಸರ್ಕಾರ | | | | | |



ಕಾರ್ಯ ನಿರ್ವಹಿಸುತ್ತಿದೆ. ಏಕೆಂದರೆ ಆರ್ಥಿಕತೆಯ ಪ್ರಗತಿಗೆ ಇಲ್ಲಿ ಸಾಕಷ್ಟು ಜಾಗ ಮತ್ತು ಅವಕಾಶಗಳು ಇರುವುದೇ ಇದಕ್ಕೆ ಕಾರಣ. (ಪಟ್ಟಿ – 5). ಕೇಂದ್ರ ಬಜೆಟ್ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಗೆ ಪೂರಕವಾಗಿದೆ. ಇದನ್ನು ಪಟ್ಟಿ – 6 ರಲ್ಲಿ ವಿಶ್ಲೇಷಿಸಲಾಗಿದೆ. ಜಾಗತಿಕ ಅರ್ಥ ವ್ಯವಸ್ಥೆಯ ಬೆಳವಣಿಗೆಯ ಸನ್ನಿವೇಶದಲ್ಲಿ ದೇಶದ ಅರ್ಥ ವ್ಯವಸ್ಥೆಯಲ್ಲಿ ಆತ್ಮವಿಶ್ವಾಸ ತುಂಬುವುದು ಅತಿಮುಖ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಭಾರತವನ್ನು ಪರಿವರ್ತಿಸುವ, ಶಕ್ತಿ ತುಂಬುವ ಮತ್ತು ಸ್ವಚ್ಛಗೊಳಿಸುವ ಕೆಲಸವನ್ನು ಗಂಭೀರವಾಗಿ ನಡೆಸುತ್ತಿದೆ. ಮಾರುಕಟ್ಟೆಯಲ್ಲಿ ಆತ್ಮವಿಶ್ವಾಸ ತುಂಬಲು ಸರ್ಕಾರ ಸರಣಿ ಕ್ರಮಗಳನ್ನೇ ಪ್ರಕಟಿಸಿದೆ.(ಪಟ್ಟಿ – 7)

### ಮಹತ್ವದ ಸಮಸ್ಯೆಗಳ ಆಯ್ಕೆ

ಕೇಂದ್ರ ಬಜೆಟ್ ಕೇವಲ ಲೆಕ್ಕಪತ್ರಗಳ ಹೇಳಿಕೆಯಾಗಿರದೆ, ಅದು ವಿತ್ತೀಯ ನೀತಿಯಲ್ಲಿ ಪ್ರಮುಖ ನೀತಿ ದಾಖಲೆಯಾಗಿದೆ. ಇತ್ತೀಚಿನ ಬಜೆಟ್‌ನಲ್ಲಿ ಹಲವರು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

### ತೆರಿಗೆ ಅನುಸರಣೆರಹಿತ ಭಾರತ

ಭಾರತ ದೇಶವು ತೆರಿಗೆ ಅನುಸರಣೆಗೆ ಒಳಪಡದ ರಾಷ್ಟ್ರವಾಗಿದೆ ಎಂದು ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಬಜೆಟ್ ಸಂದರ್ಭದಲ್ಲೇ ಪ್ರಸ್ತಾಪಿಸಿದ್ದಾರೆ (ಕೋಷ್ಟಕ 8 ಮತ್ತು 9). ಕೇಂದ್ರ ಮತ್ತು ರಾಜ್ಯಗಳು ಸೇರಿದಂತೆ ಸರ್ಕಾರ ಸಂಗ್ರಹಿಸುವ ಒಟ್ಟು ತೆರಿಗೆ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಜಿಡಿಪಿಯ ಶೇಕಡ 18ಕ್ಕಿಂತ ಕಡಿಮೆ ಇದೆ (ನಾನಾ ರಾಜ್ಯಗಳ ಸ್ಥಳೀಯ ಸಂಸ್ಥೆಗಳ ತೆರಿಗೆ ಸಂಗ್ರಹದಲ್ಲಿ ಏಕರೂಪ ದತ್ತಾಂಶದ ಕೊರತೆಯ ನಡುವೆ). ಅದೇ ಅತ್ಯಂತ ಮುಂದುವರಿದ ದೇಶಗಳಲ್ಲಿ

**ಪಟ್ಟಿ – 2 : ಜಿಡಿಪಿಯ ಶೇಕಡಾವಾರು ಭಾಗಗಳಾಗಿ ಆದಾಯ ಮತ್ತು ಬಂಡವಾಳ ಖಾತೆ**

| ವರ್ಷ | ಕಂದಾಯ ಸ್ವೀಕೃತಿ | ಬಂಡವಾಳ ಸ್ವೀಕೃತಿ | ಆದಾಯ ವೆಚ್ಚ | ಬಂಡವಾಳ ವೆಚ್ಚ |
|---|---|---|---|---|
| 1950–51 | 3.90 | 1.16 | 3.34 | 1.76 |
| 1960–61 | 4.89 | 6.44 | 4.60 | 5.74 |
| 1970–71 | 6.91 | 4.29 | 6.57 | 5.24 |
| 1980–81 | 8.27 | 5.29 | 9.63 | 5.59 |
| 1990–91 | 9.37 | 6.65 | 12.54 | 5.42 |
| 2000–01 | 8.85 | 6.16 | 12.76 | 2.19 |
| 2010–11 | 10.13 | 5.17 | 13.37 | 2.01 |
| 2011–12 | 8.60 | 6.51 | 13.12 | 1.82 |
| 2012–13 | 8.84 | 5.85 | 12.50 | 1.68 |
| 2013–14 | 9.00 | 5.00 | 12.17 | 1.66 |
| 2014–15 | 8.82 | 3.88 | 11.75 | 1.57 |
| 2015–16 | 8.75 | 3.97 | 11.26 | 1.85 |
| 2016–17 (ಆರ್‌ಇ) | 9.44 | 3.53 | 11.51 | 1.86 |
| 2017–18 (ಬಿಇ) | 9.00 | 3.66 | 10.90 | 1.84 |

**ಮೂಲ :**
1) ಭಾರತೀಯ ಆರ್ಥಿಕತೆಯ ಸಂಖ್ಯಾಶಾಸ್ತ್ರ ಕೈಪಿಡಿ, ಆರ್‌ಬಿಐ
2) ಕೇಂದ್ರ ಬಜೆಟ್ 2017–18, ಭಾರತ ಸರ್ಕಾರ

**ಪಟ್ಟಿ–3 : ಆದಾಯ ಬಜೆಟ್ ಆಯ್ದ ವಿಷಯ (ಜಿಡಿಪಿಯ ಶೇಕಡಾವಾರಿನಂತೆ)**

| ಆದಾಯ ಸ್ವೀಕೃತಿ | | | ಆದಾಯ ವೆಚ್ಚ | | |
|---|---|---|---|---|---|
| ಭಾಗಗಳು | 2016–17 (ಆರ್‌ಇ) | 2017–18 (ಬಿಇ) | ಭಾಗಗಳು | 2016–17 (ಆರ್‌ಇ) | 2017–18 (ಬಿಇ) |
| ಕಾರ್ಪೊರೇಟ್ ತೆರಿಗೆ | 3.3 | 3.2 | ಬಡ್ಡಿ ಪಾವತಿ | 3.2 | 3.1 |
| ಆದಾಯ ತೆರಿಗೆ | 2.3 | 2.6 | ಸಬ್ಸಿಡಿಗಳು | 1.7 | 1.6 |
| ಸೀಮಾ ಸುಂಕ | 1.4 | 1.5 | ಪಿಂಚಣಿಗಳು | 0.9 | 0.8 |
| ಕೇಂದ್ರ ಅಬಕಾರಿ ಸುಂಕ | 2.6 | 2.4 | | | |
| ಸೇವಾ ತೆರಿಗೆ | 1.6 | 1.6 | | | |
| ಡಿವಿಡೆಂಡ್ ಮತ್ತು ಲಾಭಗಳು | 1.0 | 0.8 | | | |
| **ಒಟ್ಟು** | **9.4** | **9.0** | **ಒಟ್ಟು** | **11.5** | **10.9** |

ಮೂಲ : ಸ್ವೀಕೃತಿಗಳ ಪ್ರವೃತ್ತಿ, ಕೇಂದ್ರ ಬಜೆಟ್ 2017–18, ಭಾರತ ಸರ್ಕಾರ.

**ಪಟ್ಟಿ – 4**
**ವಿತ್ತೀಯ ಸೂಚಕಗಳ ಆಯ್ಕೆ**
**(ಶೇಕಡವಾರು ಜಿಡಿಪಿಯಂತೆ)**

| ವರ್ಷ | ನಿವ್ವಳ ತೆರಿಗೆ | ಆದಾಯ ತೆರಿಗೆಯೇತರ ಆದಾಯ | ಆದಾಯ ಸ್ವೀಕೃತಿ |
|---|---|---|---|
| 1970–71 | 5.2 | 1.8 | 6.9 |
| 1980–81 | 6.3 | 2.0 | 8.3 |
| 1990–91 | 7.3 | 2.0 | 9.4 |
| 2000–01 | 6.3 | 2.6 | 8.9 |
| 2014–15 | 7.2 | 1.6 | 8.8 |
| 2015–16 | 6.9 | 1.8 | 8.8 |
| 2016–17 (ಆರ್‌ಇ) | 7.2 | 2.2 | 9.4 |
| 2017–18 (ಬಿಇ) | 7.3 | 1.7 | 9.0 |

ಮೂಲ : ಸ್ವೀಕೃತಿಗಳ ಪ್ರವೃತ್ತಿ, ಕೇಂದ್ರ ಬಜೆಟ್ 2017–18, ಭಾರತ ಸರ್ಕಾರ.

ತೆರಿಗೆ ಸಂಗ್ರಹ ಪ್ರಮಾಣ ಶೇಕಡ 30ಕ್ಕಿಂತ ಜಾಸ್ತಿ ಇದೆ. ಆದಾಗ್ಯೂ, ಭಾರತದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸುವುದಾದರೆ, ಶೇಕಡ 30ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಮತ್ತು ಶೇಕಡ 60ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದು, ಅವರು ಕೃಷಿ ಆದಾಯವನ್ನೇ (ತೆರಿಗೆಯಿಂದ ಮುಕ್ತವಾದ ವರಮಾನ) ಅವಲಂಬಿಸಿದ್ದಾರೆ. ಹಾಗಾಗಿ ಹಣಕಾಸಿನ ಸಂಪನ್ಮೂಲವನ್ನು ಹೆಚ್ಚಿಸುವ ನಿರ್ಬಂಧ ಇದರಿಂದ ಸ್ಪಷ್ಟವಾಗುತ್ತದೆ. ಇದರ ಜೊತೆಗೆ, ಕೆಲವು ಪದಾರ್ಥಗಳಿಗೆ ಆಬಕಾರಿ ಸುಂಕ ವಿನಾಯಿತಿ ನೀಡಲಾಗಿದೆ.

ಶ್ರೀಲಂಕಾ, ಮೆಕ್ಸಿಕೊ, ಇಂಡೋನೇಷ್ಯಾ ಮತ್ತು ಫಿಲಿಪ್ಪೀನ್ಸ್‌ನಂತಹ ಬಡ ಮತ್ತು ಉದಯೋನ್ಮುಖ ರಾಷ್ಟ್ರಗಳಲ್ಲಿ ತೆರಿಗೆಯು ಆದಾಯದ ಪ್ರಮುಖ ಮೂಲ. ಆದರೆ, ಈ ದೇಶಗಳ ತೆರಿಗೆ ಸಂಗ್ರಹವು ಮುಂದುವರಿದ ದೇಶಗಳಿಗೆ ಹೋಲಿಸಿದರೆ, ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ.

ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಸ್ವಚ್ಛ ಭಾರತದ ಉದ್ದೇಶವನ್ನು ಸ್ಪಷ್ಟವಾಗಿ ಪ್ರದರ್ಶಿಸಿದೆ. ತೆರಿಗೆ ಆಡಳಿತವನ್ನು ದಕ್ಷವಾಗಿಸುವ ಅಗತ್ಯವಿದೆ ಎಂಬುದಕ್ಕೆ ಅದು ಒತ್ತು ನೀಡಿದೆ. ಜಪಾನ್‌ನಂತಹ ರಾಷ್ಟ್ರಗಳಲ್ಲಿ ತೆರಿಗೆ ಅನುಸರಣೆಗೆ ಪ್ರೋತ್ಸಾಹಕ ಯೋಜನೆಗಳನ್ನು ಪ್ರಕಟಿಸಲಾಗಿದೆ. ಅಮೆರಿಕದಲ್ಲಿ ತೆರಿಗೆ ವಂಚನೆಗೆ ತೀವ್ರತರದ ಶಿಕ್ಷೆ ವಿಧಿಸಲಾಗುತ್ತದೆ. ಹಲವಾರು ಮುಂದುವರಿದ ರಾಷ್ಟ್ರಗಳಲ್ಲಿ ತೆರಿಗೆ ಜಿಡಿಪಿ ದರ ಹೆಚ್ಚಿನ ಪ್ರಮಾಣದಲ್ಲಿ ಇದೆ. ಈ ರಾಷ್ಟ್ರಗಳಲ್ಲಿ ಸಾರ್ವಜನಿಕ



ಆರೋಗ್ಯ, ಶಿಕ್ಷಣ, ಸಾರಿಗೆ ಮತ್ತು ನಾಗರಿಕ ಸೇವೆಗಳು ಅತ್ಯಂತ ಉತ್ತಮ ಗುಣಮಟ್ಟದಲ್ಲಿ ಇರುತ್ತವೆ. ಇದರ ಜೊತೆಗೆ, ಜನತೆಯ ಜೀವನ ಭದ್ರತೆ, ಮಹಿಳಾ ಕಾರ್ಮಿಕ ವರ್ಗಕ್ಕೆ ಸುರಕ್ಷಿತ ಪರಿಸರ, ಸಕಾಲದಲ್ಲಿ ವ್ಯಾಜ್ಯ ಮತ್ತು ವಿವಾದಗಳನ್ನು ಪರಿಹರಿಸುವ ನ್ಯಾಯಾಂಗ ವ್ಯವಸ್ಥೆಯಂತಹ ಅಗತ್ಯ ಮೂಲಸೌಲಭ್ಯಗಳನ್ನು ನೀಡುವ ಮೂಲಕ ಅವು ಹೆಚ್ಚಿನ ತೆರಿಗೆ ಅನುಸರಣೆಯನ್ನು ಉತ್ತೇಜಿಸುತ್ತಿವೆ.

ಭಾರತದಲ್ಲಿರುವ ಅಪಾರ ಜನಸಂಖ್ಯೆಯೇ ಇಲ್ಲಿನ ಶಕ್ತಿ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 66ರಷ್ಟು ಮಂದಿ 34 ವರ್ಷಕ್ಕಿಂತ ಕಡಿಮೆ ವಯೋಮಾನದವರು. ಹಾಗಾಗಿ, ಭ್ರಷ್ಟಾಚಾರಮುಕ್ತ ದೇಶವನ್ನಾಗಿ ರೂಪಿಸುವುದೇ ನಮ್ಮ ಮುಂದಿನ ಪೀಳಿಗೆಗೆ ನೀಡಬಹುದಾದ ಬಹುದೊಡ್ಡ ಕೊಡುಗೆ. ನವ್ಯೋದ್ಯಮ ಮತ್ತು ಸ್ಟ್ಯಾಂಡಪ್ ಇಂಡಿಯಾದಂತಹ ಯೋಜನೆಗಳನ್ನು ಉತ್ತೇಜಿಸಬೇಕಿದೆ. ತೆರಿಗೆ ಆಡಳಿತವನ್ನು ಸಮರ್ಥಗೊಳಿಸಲು, ನಾನಾ ತೆರಿಗೆ ಉತ್ತೇಜನಾ ಕ್ರಮಗಳನ್ನು ಪ್ರಕಟಿಸುತ್ತಿರುವ ನಡುವೆಯೂ ಭಾರತ, ಭ್ರಷ್ಟಾಚಾರದ ಸೂಚ್ಯಂಕದಲ್ಲಿ ಸುಧಾರಿಸಿಲ್ಲ. ಹಾಗಾಗಿ, ಕಾಳಧನ ಹೊರತೆಗೆಯುವ ಸರ್ಕಾರದ ಹೋರಾಟ ನಿರಂತರ ಮುಂದುವರಿಯಬೇಕು. ಈ ದಿಟ್ಟ ಪ್ರಯತ್ನಕ್ಕೆ ಲೆಕ್ಕ ಪರಿಶೋಧಕರು, ಕಾನೂನು ತಜ್ಞರು, ಸಮಾಜಶಾಸ್ತ್ರಜ್ಞರು, ಧಾರ್ಮಿಕ ನಾಯಕರು, ಸಾಮಾಜಿಕ ಮುಖಂಡರು, ಮಾಧ್ಯಮಗಳು ಮತ್ತು ರಾಜಕೀಯ ವಲಯದಿಂದ ಸಮಗ್ರತಾ ದೃಷ್ಟಿಯ ಸಹಕಾರ ಮತ್ತು ಪ್ರೋತ್ಸಾಹ ಸಿಗುವಂತಾಗಬೇಕು.

**ಹಣಕಾಸು ವಲಯ**

ಈ ಹಿಂದಿನ ವರ್ಷಗಳಲ್ಲಿನ ಪ್ರವೃತ್ತಿ ಮುಂದುವರಿದಿದ್ದು, ಬ್ಯಾಂಕ್‌ಗಳ ಮರುಬಂಡವಾಳ ಒದಗಿಸಲು (ರಿಕ್ಯಾಪಿಟಲೈಸೇಷನ್ ಅಂದರೆ

**ಪಟ್ಟಿ – 5 : ಒಟ್ಟು ಸಾಲ (ಶೇಕಡವಾರು ಜಿಡಿಪಿಯಂತೆ)**

| ದೇಶ | 2013 | 2014 | 2015 | 2016 | 2017 | 2018 | 2019 | 2020 | 2021 |
|---|---|---|---|---|---|---|---|---|---|
| ಬ್ರೆಜಿಲ್ | 60.4 | 63.3 | 73.7 | 78.3 | 82.4 | 85.2 | 87.9 | 90.8 | 93.6 |
| ಚೀನಾ | 36.9 | 39.8 | 42.9 | 46.3 | 49.9 | 52.6 | 54.6 | 56.1 | 57.2 |
| ಫ್ರಾನ್ಸ್ | 92.4 | 95.3 | 96.1 | 97.2 | 97.8 | 97.9 | 97.4 | 95.9 | 93.8 |
| ಜರ್ಮನಿ | 77.1 | 74.5 | 71.0 | 68.2 | 65.9 | 63.6 | 61.1 | 58.9 | 56.7 |
| ಭಾರತ | 68.0 | 68.3 | 69.1 | 68.5 | 67.2 | 65.6 | 63.5 | 61.4 | 59.2 |
| ಇಂಡೋನೇಷ್ಯಾ | 24.8 | 24.7 | 27.3 | 27.5 | 28.2 | 29.2 | 29.9 | 30.4 | 30.9 |
| ಜಪಾನ್ | 244.5 | 249.1 | 248.0 | 250.4 | 253.0 | 254.9 | 254.7 | 254.5 | 253.9 |
| ರಷ್ಯಾ | 13.1 | 15.9 | 16.4 | 17.1 | 17.9 | 18.6 | 19.1 | 18.9 | 18.5 |
| ದಕ್ಷಿಣ ಆಫ್ರಿಕಾ | 44.0 | 46.9 | 49.8 | 51.7 | 53.3 | 54.6 | 55.4 | 55.9 | 56.2 |
| ಬ್ರಿಟನ್ | 86.0 | 87.9 | 89.0 | 89.0 | 88.8 | 88.6 | 86.6 | 84.3 | 82.1 |
| ಅಮೆರಿಕ | 104.6 | 104.6 | 105.2 | 108.2 | 108.4 | 107.9 | 107.8 | 107.9 | 108.3 |

ಮೂಲ : ವಿಶ್ವ ಆರ್ಥಿಕ ಮುನ್ನೋಟ ವರದಿ – ಅಕ್ಟೋಬರ್ 2016, ಐಎಂಎಫ್

| ಪಟ್ಟಿ – 6 : ಬಜೆಟ್‌ನ ಪರಿಣಾಮಗಳು | | | | |
|---|---|---|---|---|
| ವಿವರಗಳು | ಪ್ರಗತಿ | ಉದ್ಯೋಗ | ಬಳಕೆ | ಹೂಡಿಕೆ |
| ಕೃಷಿ ಸಾಲ 10 ಲಕ್ಷ ಕೋಟಿ | ✓ | | | ✓ |
| ದೀರ್ಘಾವಧಿ ನೀರಾವದಿ ನಿಧಿ ರೂ. 40,000 ಸಾವಿರ ಕೋಟಿ. | ✓ | | | ✓ |
| ಮನರೇಗ ರೂ. 48 ಸಾವಿರ ಕೋಟಿ | ✓ | ✓ | ✓ | |
| ಗ್ರಾಮ ಸಡಕ್ ಯೋಜನೆ ರೂ. 27,000 ಕೋಟಿ | ✓ | ✓ | | ✓ |
| ಆವಾಸ್ ಯೋಜನೆ ರೂ.23,000 ಕೋಟಿ | ✓ | ✓ | | ✓ |
| ರೈಲ್ವೆ ರೂ.1.3 ಲಕ್ಷ ಕೋಟಿ | ✓ | ✓ | | ✓ |
| ರಸ್ತೆ ವಲಯ–ಹೆದ್ದಾರಿ ರೂ. 64,900 ಕೋಟಿ | ✓ | ✓ | | ✓ |
| ಸಾರಿಗೆ ವಲಯ ರೂ. 2.4 ಲಕ್ಷ ಕೋಟಿ | ✓ | ✓ | | ✓ |
| ಮುದ್ರಾ ಯೋಜನಾ ಗುರಿ 2.4 ಲಕ್ಷ ಕೋಟಿ | ✓ | ✓ | | ✓ |
| ಮೂಲ : ಕೇಂದ್ರ ಬಜೆಟ್ ಭಾಷಣ 2017–18, ಭಾರತ ಸರ್ಕಾರ. | | | | |

| ಪಟ್ಟಿ – 7 : ಬಜೆಟ್‌ನಲ್ಲಿ ಆತ್ಮವಿಶ್ವಾಸ ತುಂಬುವ ಕ್ರಮಗಳು | | | |
|---|---|---|---|
| ವಿವರಗಳು | ಪ್ರಗತಿ | ಲೆಕ್ಕವಿಡದ ಹಣ | ವಿಶ್ವಾಸಾರ್ಹ ಕ್ರಮಗಳು |
| ಷೇರು ಮಾರುಕಟ್ಟೆಗಳಲ್ಲಿರುವ ಸಾರ್ವಜನಿಕ ವಲಯದ ರೈಲ್ವೆ ಉದ್ದಿಮೆಗಳ ಪಾಲು. | ✓ | | ✓ |
| ಬ್ಯಾಂಕುಗಳ ಮರು ಬಂಡವಾಳ ರೂ. 10,000 ಕೋಟಿ | ✓ | | ✓ |
| ಜಿಡಿಪಿಯ 60%. ಸಾಲ | ✓ | | ✓ |
| ಮುಂದಿನ 3 ವರ್ಷಗಳ ವರೆಗೆ 3% ವಿತ್ತೀಯ ಕೊರತೆ ಕಾಪಾಡುವ ಗುರಿ. | ✓ | | ✓ |
| ವಾರ್ಷಿಕ ರೂ. 50 ಕೋಟಿ ವರೆಗಿನ ವಹಿವಾಟಿಗೆ ಆದಾಯ ತೆರಿಗೆ ವಿನಾಯಿತಿ. | ✓ | | ✓ |
| 2017 ಮಾರ್ಚ್ ಒಳಗೆ ದೇಶಾದ್ಯಂತ 10 ಲಕ್ಷ ಹೊಸ ಪಾಯಿಂಟ್ ಆಫ್ ಸೇಲ್‌ಗಳ ಸ್ಥಾಪನೆ. | ✓ | ✓ | ✓ |
| ವಹಿವಾಟುಗಳಿಗೆ 3 ಲಕ್ಷ ರೂ. ನಗದು ಮಿತಿ | ✓ | ✓ | ✓ |
| ರಾಜಕೀಯ ನಿಧಿಗೆ ನಿರ್ಬಂಧ | ✓ | ✓ | ✓ |
| ಮೂಲ : ಕೇಂದ್ರ ಬಜೆಟ್ ಭಾಷಣ 2017–18, ಭಾರತ ಸರ್ಕಾರ. | | | |

ಬ್ಯಾಂಕ್‌ಗಳಿಗೆ ಹಣದ ಹರಿವನ್ನು ಹೆಚ್ಚಿಸಲು, ಅದರ ನಿಧಿ ಸಂಗ್ರಹ ಮೂಲಗಳನ್ನು ಹಾಗೂ ಸಾಲ ನೀಡುವ ವಿಧಾನಗಳನ್ನು ಬದಲಾಯಿಸುವುದು) ಸರ್ಕಾರ ನಿರ್ಧರಿಸಿದೆ. ಬ್ಯಾಂಕ್‌ಗಳಲ್ಲಿ ಹಣದ ಹರಿವಿನ ಸಮತೋಲನ ಕಾಯ್ದುಕೊಳ್ಳಲು ಇಂತಹ ಪರಿಹಾರ ಕ್ರಮಗಳನ್ನು ಸ್ವಯಂಚಾಲಿತವಾಗಿ ಮತ್ತು ನಿಯಮಿತವಾಗಿ ಕೈಗೊಳ್ಳಬೇಕೆ ಅಥವಾ ನಿರ್ದಿಷ್ಟ ಸುಧಾರಿತ ಕಾರ್ಯ ನಿರ್ವಹಣೆ ಸೂಚಕದ ಅನ್ವಯ ಕೈಗೊಳ್ಳಬೇಕೆ ಎಂಬುದನ್ನು ವಿಚಾರ ಮಾಡಬೇಕಾದುದು ಅತಿಮುಖ್ಯ. ವಾಣಿಜ್ಯ ಬ್ಯಾಂಕ್‌ಗಳು ವಾಣಿಜ್ಯಿಕವಾಗಿ ಕಾರ್ಯಸಾಧುವಾಗುವಂತೆ ಇರಬೇಕು ಮತ್ತು ತಮ್ಮ ವೆಚ್ಚ ಭರಿಸಲು ಅಥವಾ ನಷ್ಟ ಸರಿದೂಗಿಸಲು ತಮ್ಮ ಶಾಖೆಗಳ ವ್ಯವಹಾರಗಳನ್ನು ಸ್ಥಗಿತಗೊಳಿಸುವುದು ಸೇರಿದಂತೆ ತಮ್ಮ ಸ್ವತ್ತನ್ನು ವಿಲೇವಾರಿ ಮಾಡುವಂತೆ ಸೂಚಿಸಬಹುದಾಗಿದೆ.

ಲಾಭ ಅಥವಾ ನಷ್ಟ ಏನೇ ಇರಲಿ, ಎಲ್ಲ ಸಾರ್ವಜನಿಕ ವಲಯ ಬ್ಯಾಂಕ್‌ಗಳು ತಮ್ಮ ಸಿಬ್ಬಂದಿಗೆ ಪ್ರತಿವರ್ಷ ವೇತನ ಹೆಚ್ಚಳ ಮಾಡುತ್ತವೆ. ಪ್ರಾಮಾಣಿಕ ತೆರಿಗೆ ಪಾವತಿದಾರರಿಂದ ಕರಡು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೂ ಮುನ್ನ ಸ್ವತಃ ವಾಣಿಜ್ಯ ಬ್ಯಾಂಕ್‌ಗಳೇ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕಿದೆ. ವಾಣಿಜ್ಯ ಬ್ಯಾಂಕ್‌ಗಳಲ್ಲಿ ಬಂಡವಾಳದ ನಿರಂತರ ಒಳಹರಿವು ನೈತಿಕ ಅಪಾಯ ತಂದೊಡ್ಡುವ ಸಾಧ್ಯತೆ ಇದೆ.

### ಕೇಂದ್ರ ಬಜೆಟ್‌ನ ಮುಂಚಿತ ಮಂಡನೆ

ಮಾರ್ಚ್ ಅಂತ್ಯದ ವೇಳೆಗೆ ಸಂಸತ್ತಿನ ಅನುಮೋದನೆ ಪಡೆದು, ಏಪ್ರಿಲ್ 1 ರಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಚಿವಾಲಯಗಳಿಗೆ ಸಂಪನ್ಮೂಲಗಳು ಲಭ್ಯವಾಗುವಂತಾಗಲು ಈ ಬಾರಿ ಕೇಂದ್ರ ಬಜೆಟ್ ಅನ್ನು ಮುಂಚಿತವಾಗಿ ಮಂಡಿಸಲಾಗಿದೆ.

ಭಾರತದಲ್ಲಿ ಜೂನ್ ತಿಂಗಳಲ್ಲಿ ಮುಂಗಾರು ಆರಂಭವಾಗಲಿದೆ. ಯೋಜನೆಗಳ ಅನುಷ್ಠಾನಕ್ಕೆ ಮತ್ತು ವೆಚ್ಚಗಳ ಲೆಕ್ಕಾಚಾರಕ್ಕೆ ಮುಂಗಾರು ಆರಂಭಕ್ಕೆ ಮುನ್ನ ಸಚಿವಾಲಯಗಳಿಗೆ ಸಾಕಷ್ಟು ಸಮಯ ಸಿಕ್ಕಂತಾಗಿದೆ.

ಹಣಕಾಸು ವರ್ಷದ ಆರಂಭದಿಂದಲೇ ಆದಾಯ ಕ್ರೋಢೀಕರಣ ಮತ್ತು ಬಂಡವಾಳ ವೆಚ್ಚ ನಿರ್ವಹಣೆಗೆ ಈ ಬಾರಿಯ ಮುಂಚಿತ ಬಜೆಟ್ ಮಂಡನೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

### ಆರ್ಥಿಕ ನೀತಿ – ವಾರ್ಷಿಕವಾಗಿರಬೇಕೇ?

ಮುಂದುವರಿದ ರಾಷ್ಟ್ರಗಳಲ್ಲಿ ಈ ಬಜೆಟ್ ಕ್ರಮ ಅಮುಖ್ಯ. ಆದರೆ ಭಾರತದಲ್ಲಿ ಈ ಬಜೆಟ್ ಕುರಿತು ಒಂದು ತಿಂಗಳು ಗಮನ ಕೇಂದ್ರೀಕೃತವಾಗಿರುತ್ತದೆ. ಕೈಗಾರಿಕೆ, ಷೇರುಪೇಟೆ ಅಷ್ಟೇ ಏಕೆ ಸಾಮಾನ್ಯ ಜನರೂ ಕೂಡ ಬಹಳ ಕಾತರದಿಂದ ವಾರ್ಷಿಕ ಬಜೆಟ್ ಮಂಡನೆ ನಿರೀಕ್ಷಿಸುತ್ತಾರೆ.


| ಪಟ್ಟಿ – 8 : ಭಾರತದಲ್ಲಿ ತೆರಿಗೆ ಅನುಸರಣೆ ಪಟ್ಟಿ – ಸಾಮಾನ್ಯ | |
|---|---|
| **ಕೆಟಗರಿ** | **ಸಂಖ್ಯೆ** |
| ಸಂಘಟಿತ ವಲಯದಲ್ಲಿ ತೊಡಗಿಸಿಕೊಂಡಿರುವವರು | 4.2 ಕೋಟಿ |
| ವೇತನ ಆದಾಯಕ್ಕೆ ಆದಾಯ ತೆರಿಗೆ ವಿವರ ಸಲ್ಲಿಸುವ ವೈಯಕ್ತಿಕ ತೆರಿಗೆದಾರರು | 1.7 ಕೋಟಿ |
| ಸಂಘಟಿತ ವಲಯದ ವೈಯಕ್ತಿಕ ಉದ್ದಿಮೆಗಳು | 5.6 ಕೋಟಿ |
| ಆದಾಯ ವಿವರಗಳ ಸಲ್ಲಿಕೆಯಾಗುವ ಒಟ್ಟು ಸಂಖ್ಯೆ | 1.8 ಕೋಟಿ |
| ನೊಂದಾಯಿತ ಕಂಪನಿಗಳು | 13.9 ಲಕ್ಷ |
| ಕಂಪನಿಗಳು ಸಲ್ಲಿಸುವ ಆದಾಯ ವಿವರದ ಪ್ರಮಾಣ | 5.9 ಲಕ್ಷ |
| ಶೂನ್ಯ ಆದಾಯ ಅಥವಾ ನಷ್ಟ ಘೋಷಿಸುವ ಕಂಪನಿಗಳ ಸಂಖ್ಯೆ | 2.8 ಲಕ್ಷ |
| 1 ಕೋಟಿ ರೂ.ಗಿಂತ ಕಡಿಮೆ ಆದಾಯ ಘೋಷಿಸುವ ಕಂಪನಿಗಳ ಸಂಖ್ಯೆ | 2.8 ಲಕ್ಷ |
| 1–10 ಕೋಟಿ ರೂ. ಒಳಗೆ ಆದಾಯ ಘೋಷಿಸುವ ಕಂಪನಿಗಳ ಸಂಖ್ಯೆ | 28,667 |
| 10 ಕೋಡಿ ರೂ.ಗಿಂತ ಹೆಚ್ಚಿನ ಆದಾಯ ಘೋಷಿಸುವ ಕಂಪನಿಗಳ ಸಂಖ್ಯೆ | 7,781 |
| ಮೂಲ : ಕೇಂದ್ರ ಬಜೆಟ್ ಭಾಷಣ 2017–18, ಭಾರತ ಸರ್ಕಾರ | |

| ಪಟ್ಟಿ – 9: ಭಾರತದಲ್ಲಿ ತೆರಿಗೆ ಅನುಸರಣೆಯ ಪಟ್ಟಿ – ವೈಯಕ್ತಿಕ ವ್ಯಕ್ತಿಗಳು | |
|---|---|
| **ಗುಂಪು** | **ಸಂಖ್ಯೆ** |
| ವೈಯಕ್ತಿಕ ಆದಾಯ ತೆರಿಗೆ ವಿವರ ಸಲ್ಲಿಸುವವರ ಸಂಖ್ಯೆ | 3.7 ಕೋಟಿ ರೂ. |
| ವಿನಾಯಿತಿ ಮಿತಿಗಿಂತ ಕೆಳಗಿನವರು | 99 ಲಕ್ಷ |
| 2.5–5 ಲಕ್ಷ ರೂ.ವರೆಗೆ ಆದಾಯ ಮಿತಿ | 1.9 ಕೋಟಿ |
| 5–10 ಲಕ್ಷ ರೂ. ವರೆಗಿನ ಆದಾಯ ಗುಂಪು | 52 ಲಕ್ಷ. |
| 10 ಲಕ್ಷ ರೂ.ಗಿಂತ ಹೆಚ್ಚಿನ ಆದಾಯ ವರ್ಗ | 24 ಲಕ್ಷ |
| 5 ಲಕ್ಷ ರೂ.ಗಿಂತ ಹೆಚ್ಚಿನ ಆದಾಯವಿರುವ ವೇತನ ವರ್ಗ | 76 ಲಕ್ಷ<br>56 ಲಕ್ಷ |
| 50 ಲಕ್ಷ ರೂ.ಗಿಂತ ಹೆಚ್ಚಿನ ಆದಾಯ ಗುಂಪು | 1.7 ಲಕ್ಷ |
| ಮೂಲ : ಕೇಂದ್ರ ಬಜೆಟ್ ಭಾಷಣ 2017–18, ಭಾರತ ಸರ್ಕಾರ | |

ಸಾಮಾನ್ಯವಾಗಿ ಹೂಡಿಕೆ ಬೆಳವಣಿಗೆ ಅನೇಕ ವರ್ಷಗಳ ಅವಧಿಯದ್ದಾಗಿರುತ್ತದೆ (ಹೂಡಿಕೆಯ ದಿನ ಮತ್ತು ಅದರ ಫಲ ಸಿಗುವವರೆಗಿನ ಅವಧಿ ಸಾಮಾನ್ಯವಾಗಿ ಒಂದು ವರ್ಷದ ಒಳಗಿನದ್ದಾಗಿರುವುದಿಲ್ಲ). ಹಾಗಾಗಿ ಆರ್ಥಿಕ ನೀತಿ ನಿರೂಪಣೆ ಮತ್ತು ಸ್ಥಿರ ಬೆಳವಣಿಗೆಯ ಮೇಲೆ ಈ ವಾರ್ಷಿಕ ನೀತಿ ಅಡ್ಡ ಪರಿಣಾಮ ಬೀರಬಹುದಾಗಿದೆ. ಹಣಕಾಸು ಲೆಕ್ಕಾಚಾರವನ್ನು ವಾರ್ಷಿಕವಾಗಿ ಮಂಡಿಸಿ, ಆರ್ಥಿಕ ನೀತಿ ಮಂಡನೆಯನ್ನು ಮಧ್ಯಮ ಅವಧಿಯಿಂದ ದೀರ್ಘಾವಧಿವರೆಗೆ ಅಂದರೆ ಸುಮಾರು ಐದು ವರ್ಷಗಳಿಗೊಮ್ಮೆ ಮಂಡಿಸುವ ಸಾಧ್ಯತೆಯ ಬಗ್ಗೆ ಗಮನ ಹರಿಸಬಹುದಾಗಿದೆ.

**ಬಜೆಟ್ ನಿಯಮಗಳ ತರ್ಕಬದ್ಧವಾಗಿಸುವಿಕೆ**

ಯೋಜಿತ ಮತ್ತು ಯೋಜಿತವಲ್ಲದರ ನಡುವಿನ ವ್ಯತ್ಯಾಸ ರದ್ದು ಮಾಡಿರುವುದು ಈ ಬಾರಿಯ ಬಜೆಟ್‌ನ ಪ್ರಮುಖ ಸುಧಾರಣೆ. ಸಾಮಾಜಿಕ – ಆರ್ಥಿಕ ಕಲ್ಯಾಣ



ಕಾರ್ಯಕ್ರಮಗಳು ಹಾಗೂ ಯೋಜಿತ ನೀತಿ ನಿರ್ಧಾರದ ನಡುವಿನ ಭೇದ ತಿಳಿಸಲು ಈ ಯೋಜಿತ ಮತ್ತು ಯೋಜಿತವಲ್ಲದರ ನಡುವಿನ ವ್ಯತ್ಯಾಸ ರದ್ದು ಮಾಡುವ ಸುಧಾರಣೆ ತರಲಾಗಿದೆ.

ಯೋಜಿತ ವೆಚ್ಚ ಉತ್ತಮ, ಯೋಜಿತವಲ್ಲದ ವೆಚ್ಚ ವ್ಯರ್ಥ ಎಂಬುದು ಭಾರತದಲ್ಲಿನ ಸಾಮಾನ್ಯ ನಂಬಿಕೆ. ಹಾಗಾಗಿ ಆಸ್ತಿ/ಸ್ವತ್ತಿನ ನಿರ್ವಹಣೆಗೂ ಪೂರ್ವ ಯೋಜಿತವಲ್ಲದೇ ಖರ್ಚು ಮಾಡುವುದನ್ನು ನಿರ್ಲಕ್ಷಿಸಲಾಗಿದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯಗಳೆರಡೂ, ಹೆಚ್ಚಿನ ವೆಚ್ಚದ ಯೋಜನೆ ತೋರಿಸಲು ಪ್ರೇರಣೆ ದೊರೆತಂತಾಗಿದೆ. ಯೋಜಿತ ಮತ್ತು ಯೋಜಿತವಲ್ಲದ ವೆಚ್ಚದ ನಡುವಿನ ವ್ಯತ್ಯಾಸ ತೆಗೆದುಹಾಕಿರುವುದರಿಂದ ಖರ್ಚು ಮತ್ತು ಫಲಿತಾಂಶ ನಡುವೆ ನೇರ ಸಂಪರ್ಕ ಕಲ್ಪಿಸಿದಂತಾಗಿ ಸಾರ್ವಜನಿಕ ವೆಚ್ಚಗಳ ಕಾರ್ಯಕಾರಿ ಸಾಮರ್ಥ್ಯದ ನಿರ್ಣಯಕ್ಕೂ ನೆರವಾಗಲಿದೆ. ಹೀಗಾಗಿ ಮೂಲ ಸಂವಿಧಾನದಲ್ಲಿ ಉಲ್ಲೇಖಿಸಿರುವಂತೆ ಆದಾಯ ಮತ್ತು ಬಂಡವಾಳ ವೆಚ್ಚಗಳತ್ತ ಬಜೆಟ್ ಪ್ರಕ್ರಿಯೆ ಕೇಂದ್ರೀಕರಣ ಬದಲಾಗುತ್ತದೆ. ತರ್ಕಬದ್ಧ, ಪಾರದರ್ಶಕ ಮತ್ತು ಸಮರ್ಥ ನಿರ್ಧಾರ ಕೈಗೊಳ್ಳಲು ಆದಾಯ ಹಾಗೂ ಬಂಡವಾಳ ವೆಚ್ಚಗಳ ನಡುವಿನ ಸ್ಪಷ್ಟ ವ್ಯತ್ಯಾಸ ಅತ್ಯಗತ್ಯ. ಸರ್ಕಾರ ಭರಿಸಬೇಕಾದ ನಿರ್ವಹಣಾ ವೆಚ್ಚ ಮತ್ತು ಹೂಡಬೇಕಾದ ಬಂಡವಾಳ ನಿರ್ಣಯಿಸಲು ಈ ವ್ಯತ್ಯಾಸದ ತಿಳಿವಳಿಕೆ ನೆರವಾಗುತ್ತದೆ. ಆದಾಯದ ವೆಚ್ಚವನ್ನು ಇತರ ವೆಚ್ಚದಿಂದ ಪ್ರತ್ಯೇಕವಾಗಿ ನಮೂದಿಸಬೇಕು ಎಂದು ಸಂವಿಧಾನದ 112ನೇ ಪರಿಚ್ಛೇದ ತಿಳಿಸಿದೆ. ಬಂಡವಾಳ ಖಾತೆ ವೆಚ್ಚ, ಸರ್ಕಾರದ ಸಾಲ, ಸಾಲ ಮರುಪಾವತಿ ಮತ್ತು ಅಲ್ಪಾವಧಿ ಸಾಲದಿಂದ ಪ್ರತ್ಯೇಕಿತ ಆದಾಯ ಖಾತೆ ವೆಚ್ಚ ಹಾಗೂ ಇತರೆ ವೆಚ್ಚಗಳ ಅಂದಾಜು ಪಟ್ಟಿಗೆ ಕೂಡ ಲೆಕ್ಕಪತ್ರದಲ್ಲಿ ವಿಶಿಷ್ಟ

ಮೀಸಲಿರಿಸಬೇಕಾಗಿದೆ ಎಂದು ಸರ್ಕಾರದ ಸಾಮಾನ್ಯ ಹಣಕಾಸು ನಿಯಮಾವಳಿ, 2005 ರಲ್ಲಿ ಉಲ್ಲೇಖಿಸಲಾಗಿದೆ.

ವೆಚ್ಚಗಳನ್ನು ಪ್ರತ್ಯೇಕವಾಗಿ ಗುರುತಿಸುವುದು ಅತ್ಯಗತ್ಯ ಎಂದು ಅಂತಾರಾಷ್ಟ್ರೀಯ ಅನುಭವಗಳೇನೂ ಸೂಚಿಸುವುದಿಲ್ಲ.

ಅಭಿವೃದ್ಧಿ ಹೊಂದಿದ ಬಹುತೇಕ ರಾಷ್ಟ್ರಗಳು ಈ ಹಿಂದೆ ಉದಯೋನ್ಮುಖ ಅಭಿವೃದ್ಧಿ ಹಂತದಲ್ಲಿದ್ದಾಗ ಸಂಪನ್ಮೂಲಗಳ ಸಮರ್ಪಕ ಹಂಚಿಕೆಗೆ ಆದಾಯ ಮತ್ತು ಬಂಡವಾಳ ವೆಚ್ಚಗಳ ನಡುವೆ ವ್ಯತ್ಯಾಸ ಗುರುತಿಸುತ್ತಿದ್ದವು. ಈ ಪ್ರತ್ಯೇಕ ಭೇದವನ್ನು ಹಲವಾರು ದೇಶಗಳು ವೆಚ್ಚಗಳ ಲೆಕ್ಕಾಚಾರದ ಪ್ರತ್ಯೇಕ ವರ್ಗೀಕರಣದಲ್ಲಿ ಮುಂದುವರಿಸಿವೆ.

### ನಿರ್ಣಯ


ಒಟ್ಟಿನಲ್ಲಿ ಜಾಗತಿಕ ಅನಿಶ್ಚಿತತೆ ಹಾಗೂ ನೋಟು ಅಮಾನ್ಯದ ಚೇತರಿಕೆಯ ಸಂದರ್ಭದಲ್ಲಿ ಘೋಷಿಸಲಾದ ವ್ಯಾವಹಾರಿಕ ಬಜೆಟ್ ಇದಾಗಿದೆ. ಮೂರು ಲಕ್ಷಕ್ಕಿಂತ ಹೆಚ್ಚಿನ ನಗದು ವಹಿವಾಟಿಗೆ ಕಡಿವಾಣ ಮತ್ತು ರಾಜಕೀಯ ಪಕ್ಷಗಳಿಗೆ ಲೆಕ್ಕಕ್ಕಿಲ್ಲದ ದೇಣಿಗೆಗೆ ನಿಯಂತ್ರಣದಂತಹ ಸೌಮ್ಯ ಉಪಕ್ರಮಗಳ ಬದಲಾಗಿ ನೋಟು ನಿಷೇಧ ನಿರ್ಧಾರಕ್ಕೆ ಸರ್ಕಾರಕ್ಕೆ ದೊರೆತ ಸಹಕಾರವನ್ನು ಸಮರ್ಥವಾಗಿ ಬಳಸಿಕೊಳ್ಳಲು, ಭಾರತವನ್ನು ಭ್ರಷ್ಟಾಚಾರ ಮುಕ್ತವನ್ನಾಗಿಸಲು ಇನ್ನೂ ಹೆಚ್ಚಿನ ದಿಟ್ಟ ಕ್ರಮಗಳನ್ನು ಘೋಷಿಸಬಹುದಾಗಿತ್ತು. ಈ ಬಜೆಟ್‌ನಲ್ಲಿ ಘೋಷಿಸಿರುವ ಕ್ರಮಗಳು ತೆರಿಗೆ ಪಾವತಿದಾರರ ಸಂಖ್ಯೆಯನ್ನು ಹೆಚ್ಚಿಸುತ್ತವೆ ಮತ್ತು ಅಭಿವೃದ್ಧಿ ಹಾಗೂ ಉದ್ಯೋಗ ಕೇಂದ್ರೀಕೃತವಾಗಿವೆ. ಆದರೆ, ಈ ಬಜೆಟ್ ಸ್ಪಷ್ಟ ಮಧ್ಯಮ ಮತ್ತು ದೀರ್ಘಾವಧಿ ದೃಷ್ಟಿಕೋನ ಅಳವಡಿಸಿಕೊಳ್ಳಬಹುದಾಗಿತ್ತು. ಭಾರತದ ಡಿಜಿಟಲೀಕರಣ ಮತ್ತು ಜನ ಸಂಖ್ಯಾ ಬಲದ ಲಾಭಾಂಶ ಪಡೆಯಲು ಹಾಗೂ ದೀರ್ಘಾವಧಿ ಹಣಕಾಸು ವಲಯ ಸುಧಾರಣೆಗೆ ಕ್ರಮಕೈಗೊಳ್ಳಲು ಅದು ಮಾರ್ಗಸೂಚಿ ನೀಡಬಹುದಾಗಿತ್ತು. ❑

# FORM IV

**Statement about ownership and other particulars about Yojana (Kannada)**

| | | | |
|---|---|---|---|
| 1. | Place of Publication | : | Bengaluru |
| 2. | Periodicity of Publication | : | Monthly |
| 3. | Printer's Name<br>Nationality<br>Address | :<br>:<br>: | Dr. Sadhana Rout<br>Indian<br>Publications Division,<br>Soochna Bhavan,<br>New Delhi - 110 003. |
| 4. | Publisher's Name<br>Nationality<br>Address | :<br>:<br>: | Dr. Sadhana Rout<br>Indian<br>Publications Division,<br>Soochna Bhavan,<br>New Delhi - 110 003. |
| 5. | Editor's Name<br>Nationality<br>Address | :<br>:<br>: | Punitha S<br>Indian<br>Publications Division,<br>1st Floor, 'F' Wing,<br>Kendriya Sadan, Koramangala,<br>Bengaluru - 560 034. |
| 6. | Name & Address of Individual who own the newspaper and Partner or shareholder holding more than one Percent of the total capital. | : | Wholly owned by Ministry of Information & Broadcasting,<br>Government of India,<br>New Delhi - 110 003. |

I, Sadhana Rout, hereby declare that the particular given above are true to the best of my knowledge and belief.



**(Dr. Sadhana Rout)**
Signature of Publisher

# ಆರ್ಥಿಕ ಸಮೀಕ್ಷೆ 2016–17 : ಹಣಕಾಸು ಪರಾಮರ್ಶೆ



* ರವೀಂದ್ರ ಹೆಚ್. ಧೋಲಾಕಿಯಾ

ಸಮೀಕ್ಷೆಯಲ್ಲಿ ಉಲ್ಲೇಖಿಸಿದ ಪ್ರಮುಖ ಸಾಮರ್ಥ್ಯವೊಂದರ ಬಗ್ಗೆ ಹೇಳುವುದಾದರೆ, ಭಾರತದಲ್ಲಿ ಎಲ್ಲಾ ಹಂತದಲ್ಲೂ ಪ್ರಜಾಪ್ರಭುತ್ವವನ್ನು ಗುರುತಿಸಲಾಗಿದ್ದು, ಸಾಕಷ್ಟು ಸಮಂಜಸ ರೀತಿಯಲ್ಲಿ ಅಭಿವೃದ್ಧಿಗೊಂಡಿರುವ ಸಂಸ್ಥೆಗಳು ಹಾಗೂ ಬೃಹತ್ ಪ್ರಮಾಣದ ಜನರು ಆಡಳಿತ ಹಾಗೂ ನಿರ್ಧಾರ ಕೈಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಪಾಲುದಾರರಾಗಿದ್ದಾರೆ. ಇದು ಸಾಕಷ್ಟು ಅಂತಾರಾಷ್ಟ್ರೀಯ ಹೂಡಿಕೆದಾರರ ಪಾಲಿಗೆ ಪ್ರಮುಖ ಅಂಶವಾಗಿದೆ.

ಜನವರಿ 31, 2017 ರಂದು ಸಂಸತ್ತಿನಲ್ಲಿ ಮಂಡಿಸಲಾದ 2016–17ನೇ ಸಾಲಿನ ಆರ್ಥಿಕ ಸಮೀಕ್ಷೆಯು, ಇತ್ತೀಚಿನ ಬೆಳವಣಿಗೆಗಳ ದೃಷ್ಟಿಕೋನದಿಂದ ಕಾಲಾನುಗತದಲ್ಲಿ ಭಾರತದ ಆರ್ಥಿಕತೆಯ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಒದಗಿಸುತ್ತದೆ. ಇದು ಆಳ ಸಂಶೋಧನೆಯ ವಾದಗಳು ಮತ್ತು ಪ್ರಾಯೋಗಿಕ ದಾಖಲೆ–ಸಾಕ್ಷ್ಯಾಧಾರಗಳೊಂದಿಗೆ ಸಮಸ್ಯೆಗಳು, ಸವಾಲುಗಳು, ಸಂಭವನೀಯ ಪರಿಹಾರಗಳು ಮತ್ತು ನಿರೀಕ್ಷೆಗಳನ್ನು ವಿಶ್ಲೇಷಣೆ ಮಾಡುತ್ತದೆ. ಇದು ಭಾರಿ ಸಂಖ್ಯೆಯ ಸರ್ಕಾರಿ ಅಧಿಕಾರಿಗಳು, ಸಂಶೋಧಕರು ಮತ್ತು ವಿದ್ವಾಂಸರ ಕೊಡುಗೆಗಳನ್ನು ಒಳಗೊಂಡ ಬೃಹತ್ ಕಾರ್ಯಚಟುವಟಿಕೆಯಾಗಿದೆ. ಕಳೆದ ಹಲವು ವರ್ಷಗಳಂತಲ್ಲದೆ, ಈ ವರ್ಷ ಸಮೀಕ್ಷೆಯನ್ನು, ಕೇವಲ ಒಂದೇ ಸಂಪುಟದಲ್ಲಿ ಮಂಡಿಸಲಾಗಿದೆ. ಏಕೆಂದರೆ, 2016–17ನೇ ಸಾಲಿನಲ್ಲಿ ಆರ್ಥಿಕತೆಯ ಕಾರ್ಯಕ್ಷಮತೆಯ ಸಮಗ್ರ ಮೌಲ್ಯಮಾಪನವನ್ನು ಒಳಗೊಂಡ ಮತ್ತೊಂದು ಸ್ವತಂತ್ರ ಸಂಪುಟವನ್ನು ನಂತರದ ದಿನಗಳಲ್ಲಿ ಬಿಡುಗಡೆ ಮಾಡಲು ಯೋಜಿಸಲಾಗಿದೆ. ಆದ್ದರಿಂದ, ಈ ಸಮೀಕ್ಷೆಯು ಭಾರತೀಯ ಆರ್ಥಿಕತೆಯ ಮೂಲಭೂತ ಸಾಮರ್ಥ್ಯ, ದೌರ್ಬಲ್ಯ, ಅವಕಾಶ ಮತ್ತು ಅಪಾಯಗಳನ್ನು ವಿಶ್ಲೇಷಣೆ ಮಾಡುತ್ತದೆ. ಸಾಹಿತ್ಯ, ಮುದ್ರಣ ಮತ್ತು ದೃಶ್ಯ ಮಾಧ್ಯಮದ ಅಭಿಪ್ರಾಯಗಳ ಅಧ್ಯಯನ, ನಿರ್ದಿಷ್ಟ ಉದ್ದೇಶಕ್ಕಾಗಿ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಶೋಧನಾ ಸಂಸ್ಥೆಗಳು ಕೈಗೊಂಡ ಅಧ್ಯಯನದ ಆಧಾರದ ಮೇಲೆ ಈ ವಿಶ್ಲೇಷಣೆ ನಡೆಸಲಾಗುತ್ತದೆ. ಪ್ರಸ್ತುತ ಲೇಖನವು, ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ –ಸಾಮರ್ಥ್ಯ, ದೌರ್ಬಲ್ಯ, ಅವಕಾಶಗಳು ಮತ್ತು ಅಪಾಯಗಳು – ಎಂಬ ಪ್ರತ್ಯೇಕ ಶೀರ್ಷಿಕೆಗಳ ಅಡಿಯಲ್ಲಿ ಪ್ರಮುಖ ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

### ಸಾಮರ್ಥ್ಯ

ವಿಸ್ತೃತವಾಗಿ ಆವರಿಸಿರುವ ಜಾಗತಿಕ ಆರ್ಥಿಕ ಹಿಂಜರಿತದ ಕಾರ್ಮೋಡ ಹಾಗೂ ನಿರಾಶಾದಾಯಕ ಆರ್ಥಿಕ ವಾತಾವರಣದ ನಡುವೆಯೂ ಭಾರತದ ಆರ್ಥಿಕತೆ ಈಗಲೂ ತನ್ನ ಅದ್ಭುತ ಕಾರ್ಯದಕ್ಷತೆಯ ಮೂಲಕ ಹೊಸ ಆಶಾಕಿರಣವಾಗಿ ಪ್ರಕಾಶಿಸುತ್ತಿದೆ. 2016–17ನೇ ಸಾಲಿನಲ್ಲಿ ಬೆಳವಣಿಗೆ ದರವು ಶೇ. 6.5ರಿಂದ ಶೇ. 6.75 ಇರಬಹುದೆಂದು ಸಮೀಕ್ಷೆಯಲ್ಲಿ ಅಂದಾಜಿಸಲಾಗಿದ್ದರೂ, ವಿತ್ತೀಯ ನೀತಿ ಸಮಿತಿ (ಎಂಪಿಸಿ) ಅಂದಾಜಿನ ಪ್ರಕಾರ, ಈ ದರವು ಶೇ. 7ರ ಆಜುಬಾಜಿನಲ್ಲಿರಲಿದೆ. ಆ ಮೂಲಕ ಭಾರತ ಇಡೀ ವಿಶ್ವದಲ್ಲೇ ಕ್ಷಿಪ್ರ ಪ್ರಗತಿಯ ದೇಶವಾಗಿ ಹೊರಹೊಮ್ಮಲಿದೆ. ಹಣದುಬ್ಬರ ದರವು ಶೇ. 4ರಿಂದ 5ರಷ್ಟಿದ್ದು, ಅದು ಇಳಿಮುಖವಾಗಿದೆ. ದೇಶದ ಒಟ್ಟಾರೆ ಪಾವತಿ ಬಾಕಿಯಲ್ಲಿ, ಚಾಲ್ತಿ ಖಾತೆ ಖೋತಾ ಪ್ರಮಾಣವು ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇ. 1ಕ್ಕಿಂತಲೂ ಕಡಿಮೆಯಿದ್ದು, ಡಾಲರ್ – ರೂಪಾಯಿ ವಿನಿಮಯ ದರವು ಬಹುತೇಕ ಸ್ಥಿರವಾಗಿರುವುದು ಇದಕ್ಕೆ ಕಾರಣವಾಗಿದೆ. ಭಾರತದ ವಿದೇಶಿ ಸಾಲವು ಸುರಕ್ಷಿತ ಮಿತಿಯಲ್ಲಿದ್ದು, ಸದ್ಯದಲ್ಲಿ ಈ ಪ್ರಮಾಣ ಏರುಪೇರಾಗುವ ಸಾಧ್ಯತೆ ಕಡಿಮೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿತ್ತೀಯ ಶಿಸ್ತು ಮತ್ತು ಅವುಗಳು ಅನುಸರಿಸಿದ ಏಕೀಕೃತ ಹಾದಿ ಜತೆಗೆ ಉಜ್ವಲ್ 'ಡಿಸ್ಕಾಮ್'

* ಅರ್ಥಶಾಸ್ತ್ರ ಪ್ರಾಧ್ಯಾಪಕರು, ಐಐಎಂ ಅಹ್ಮದಾಬಾದ್ E-mail : rdholkia@iima.ac.in


ಅಶ್ಯೂರೆನ್ಸ್ ಯೋಜನಾ (ಉದಯ್) ವಿದೇಶಿ ಸಾಲದ ಮೇಲೆ ನಿಯಂತ್ರಣ ಸಾಧ್ಯವಾಗಿಸಿವೆ.

ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ವಿಚಾರದಲ್ಲಿ ಕೈಗೊಂಡ ಕ್ರಮಗಳು ಭಾರತಕ್ಕೆ ಗರಿಷ್ಠ ವಿದೇಶಿ ನೇರ ಹೂಡಿಕೆ ಹರಿವನ್ನು ಕಾಯ್ದುಕೊಂಡಿವೆ. ಜಿಡಿಪಿಯ ಅನುಪಾತಕ್ಕೆ ಹೋಲಿಸಿದರೆ, 2015–16ರಲ್ಲಿ ಶೇ. 1.7ರಷ್ಟಿದ್ದ ಈ ಪ್ರಮಾಣ, 2016–17ರ ಸಾಲಿನ ಎರಡನೇ ತ್ರೈಮಾಸಿಕ ಅವಧಿಯಲ್ಲಿ ಶೇ. 3.2ಕ್ಕೆ ಏರಿಕೆಯಾಗಿದೆ.

ಸಗಟು ದರ ಸೂಚ್ಯಂಕ (ಡಬ್ಲ್ಯೂಪಿಐ) ಮತ್ತು ಗ್ರಾಹಕ ದರ ಸೂಚ್ಯಂಕ (ಸಿಪಿಐ) ಮೂಲಕ ಮಾಪನದ ವೇಳೆ ಕಂಡು ಬರುತ್ತಿದ್ದ ಹಣದುಬ್ಬರ ದರಗಳ ಅಂತರವನ್ನು ಈಗ ಕಡಿಮೆ ಮಾಡಲಾಗಿದ್ದು, ಆರ್ಥಿಕತೆಯಲ್ಲಿ ದರಗಳು ಗಣನೀಯವಾಗಿ ಸ್ಥಿರೀಕರಣಗೊಂಡಿವೆ. ಇದರಿಂದ ಸಾಮಾನ್ಯ ಜಿಡಿಪಿ ಪ್ರಗತಿಯ ಪುನಃಸ್ಥಾಪನೆಯಾಗಿದ್ದು, ಸರ್ಕಾರದ ಆದಾಯ ಪ್ರಗತಿಯಲ್ಲಿ ಮಹತ್ವದ ಕೊಡುಗೆ ನೀಡಲಿದೆ.

ಅಧಿಕ ಮೌಲ್ಯದ ನೋಟುಗಳ ಯಶಸ್ವಿ ಅಮಾನ್ಯೀಕರಣವು, ಭ್ರಷ್ಟಾಚಾರ ನಿಗ್ರಹ, ಕುಟುಂಬಗಳ ಉಳಿತಾಯದಲ್ಲಿ ಏರಿಕೆ ಮತ್ತು ತೆರಿಗೆ ಜಾಲದ ವಿಸ್ತರಣೆಯಂತಹ ದೀರ್ಘಾವಧಿ ಫಲಗಳನ್ನು ನೀಡುವ ಸಾಧ್ಯತೆ ಇದೆ. ಸರಕು ಮತ್ತು ಸೇವಾ ತೆರಿಗೆಯನ್ನು ಸಂಸತ್ತಿನಲ್ಲಿ ಅನುಮೋದಿಸಲಾಗಿದ್ದು, ಇದರ ಅನುಷ್ಠಾನದಿಂದಾಗಿ ದೇಶಾದ್ಯಂತ ಏಕರೂಪದ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ಬರಲಿದೆ; ತೆರಿಗೆ ಪಾವತಿ ಉತ್ತಮಗೊಳ್ಳಲಿದೆ; ಹೆಚ್ಚಿನ ಹೂಡಿಕೆ ಮತ್ತು ಪ್ರಗತಿಗೆ ಇದು ಕಾರಣವಾಗಲಿದೆ. ಜೊತೆಗೆ, ಉತ್ತಮ ಆಡಳಿತ ನಿರ್ವಹಣೆಗೂ ಸಹಕಾರಿಯಾಗಲಿದೆ.

ಜಾಗತಿಕ ಮಟ್ಟದಲ್ಲಿ ಉತ್ಪಾದಿತ ಸರಕುಗಳ ರಫ್ತಿನಲ್ಲಿ ಭಾರತದ ಪಾಲು ಹೆಚ್ಚುತ್ತಿದ್ದು, ಅಧಿಕ ಬಂಡವಾಳ ಒಳಹರಿವು ಮತ್ತು ಹಣದುಬ್ಬರದ ಹೊರತಾಗಿಯೂ ಭಾರತದ ಸ್ಪರ್ಧಾತ್ಮಕತೆ ಮುಂದುವರೆದಿದೆ. ದೇಶದಲ್ಲಿ ಅಂತಾರಾಜ್ಯ ಸರಕುಗಳ ಸಾಗಣೆಯು ಜಿಡಿಪಿಯ ಶೇ. 54ರಷ್ಟು ಅಥವಾ ಅಂತಾರಾಷ್ಟ್ರೀಯ ವ್ಯಾಪಾರದ 1.7 ಪಟ್ಟಿದೆ. ಇದೇ ರೀತಿ, ಕೆಲಸಕ್ಕೆ ಸಂಬಂಧಿಸಿದ ವಲಸೆ ಪ್ರಮಾಣವೂ ಗಣನೀಯವಾಗಿದೆ. ಹವಾಮಾನ ಬದಲಾವಣೆ ವಿಚಾರದಲ್ಲಿ ಬದ್ಧತೆಗೆ ಸಂಬಂಧಿಸಿದಂತೆ, ಪೆಟ್ರೋಲಿಯಂ




ಮತ್ತು ಡೀಸೆಲ್ ಮೇಲೆ ತೆರಿಗೆ ವಿಧಿಸುವ ಮೂಲಕ ಭಾರತ ಇತರ ದೇಶಗಳಿಗಿಂತ ಮೇಲ್ಪಂಕ್ತಿಯಲ್ಲಿದೆ.

ಜನಸಂಖ್ಯೆಗೆ ಸಂಬಂಧಿಸಿದಂತೆ, ತುಲನಾತ್ಮಕವಾಗಿ ಇತರ ದೇಶಗಳಿಗಿಂತ ಭಾರತ ವಿಶಿಷ್ಟ ಅನುಕೂಲಗಳನ್ನು ಹೊಂದಿದೆ. ದೇಶದ ಹಲವು ಬೃಹತ್ ರಾಜ್ಯಗಳ ಜನಸಂಖ್ಯಾ ಗುಣಲಕ್ಷಣಗಳನ್ನು ಗಮನಿಸಿದ್ದಾದರೆ, ಇತರ ಹಲವು ದೇಶಗಳಿಗಿಂತಲೂ ಭಾರತ ಅತಿ ಹೆಚ್ಚುಕಾಲ ಯುವ ಮಾನವ ಸಂಪನ್ಮೂಲವನ್ನು ಕಾಯ್ದುಕೊಳ್ಳಲಿದೆ.

ಜನಧನ್ ಯೋಜನೆ, ಆಧಾರ್ ಕಾರ್ಡ್ ಮತ್ತು ಮೊಬೈಲ್ ದೂರವಾಣಿ – 'ಜೆಎಎಂ'ನಿಂದಾಗಿ ದೇಶದಲ್ಲಿ ವಿಸ್ತೃತ ಸಂಪರ್ಕ ಮತ್ತು ಮೂಲಸೌಕರ್ಯ ಸೃಷ್ಟಿಯಾಗಿದ್ದು, ಅದರಲ್ಲೂ ಉದ್ದೇಶಿತ ಫಲಾನುಭವಿಗಳೂ ಮತ್ತು ಗ್ರಾಮೀಣ ಭಾಗದಲ್ಲಿರುವವರನ್ನು ನೇರವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪಲು ಇದು ನೆರವಾಗಿದೆ.

ದೇಶದ ಬಹುತೇಕ ರಾಜ್ಯಗಳಲ್ಲಿ ಹೆಚ್ಚಿದ ಜೀವನ ನಿರೀಕ್ಷೆ, ಸಂತಾನ ದರ ಮುಂತಾದ ಆರೋಗ್ಯ ಸಂಬಂಧಿ ಫಲಿತಾಂಶಗಳು ಲಭಿಸಿವೆ.

ದೇಶದ ಆರ್ಥಿಕತೆ ಸಾಮರ್ಥ್ಯವನ್ನು ಗುರುತಿಸುವುದಾದರೆ, ಅದು ಮಧ್ಯಮ ಅಥವಾ ಸುದೀರ್ಘ ಅವಧಿಯಲ್ಲಿ ಶೇ. 8ರಿಂದ 10ರಷ್ಟು ನೈಜ ಪ್ರಗತಿ ಸಾಧಿಸುವ ಸಂಭವನೀಯತೆ ಹೊಂದಿದೆ. ಇದು ತುಲನಾತ್ಮಕವಾಗಿ ಇತರ ಎಲ್ಲಾ ದೇಶಗಳು ಹಾಗೂ ಈಗಿನ ಸ್ಪರ್ಧಿ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಹೂಡಿದ ಬಂಡವಾಳಕ್ಕೆ ಹೆಚ್ಚಿನ ಲಾಭ ತಂದುಕೊಡುತ್ತದೆ.

ಸಮೀಕ್ಷೆಯಲ್ಲಿ ಉಲ್ಲೇಖಿಸದ ಭಾರತದ ಆರ್ಥಿಕ ಪ್ರಮುಖ ಸಾಮರ್ಥ್ಯವೊಂದರ ಬಗ್ಗೆ ಹೇಳುವುದಾದರೆ, ಭಾರತದಲ್ಲಿ ಎಲ್ಲಾ ಹಂತದಲ್ಲೂ ಪ್ರಜಾಪ್ರಭುತ್ವವನ್ನು ಗುರುತಿಸಲಾಗಿದ್ದು, ಸಾಕಷ್ಟು ಸಮಂಜಸ ರೀತಿಯಲ್ಲಿ ಅಭಿವೃದ್ಧಿಗೊಂಡಿರುವ ಸಂಸ್ಥೆಗಳು ಹಾಗೂ ಬೃಹತ್ ಪ್ರಮಾಣದ ಜನರು ಆಡಳಿತ ಹಾಗೂ ನಿರ್ಧಾರ ಕೈಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಪಾಲುದಾರರಾಗಿದ್ದಾರೆ. ಇದು ಸಾಕಷ್ಟು ಅಂತಾರಾಷ್ಟ್ರೀಯ ಹೂಡಿಕೆದಾರರ ಪಾಲಿಗೆ ಪ್ರಮುಖ ಅಂಶವಾಗಿದೆ.

### ದೌರ್ಬಲ್ಯಗಳು

ಭಾರತದ ಆರ್ಥಿಕತೆಯ ಪ್ರಗತಿ ಸಂಭವನೀಯತೆ ವಿಚಾರವಾಗಿ ಪ್ರಮುಖ ದೌರ್ಬಲ್ಯಗಳೆಂದರೆ, ವಿಶಾಲ ಸಾಮಾಜಿಕ ಸಿದ್ಧಾಂತ, ಆದಾಯ ಮತ್ತು ಸಂಪತ್ತಿನ ಮರುಹಂಚಿಕೆ ಮಾಡಬೇಕೆಂಬ ಬಗ್ಗೆ ಆಸಕ್ತಿ ಮತ್ತು ಅಭಿಪ್ರಾಯಗಳು, ಸೇವಾ ಉದ್ದೇಶಕ್ಕಾಗಿ ಸಾಮರ್ಥ್ಯ ವೃದ್ಧಿ, ಮಾರುಕಟ್ಟೆ ನಿಯಂತ್ರಣಗಳು ಮತ್ತು ಖಾಸಗಿ ವಲಯ ಮತ್ತು ಆಸ್ತಿಗಳ ಒಡೆತನದ ಕುರಿತಾದ ಗೊಂದಲ. ಇವೆಲ್ಲವುಗಳ ಜೊತೆಗೆ ಐತಿಹಾಸಿಕವಾಗಿ ನಡೆದುಕೊಂಡು ಬಂದಿರುವ ಸ್ವಜನ ಹಿತಾಸಕ್ತಿಯಿಂದಾಗಿ, ಭಾರತದಲ್ಲಿ ಸಂಪೂರ್ಣ ಆರ್ಥಿಕ ಸಾಮರ್ಥ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಅನುಕೂಲಕರವಾದ ಸಾಮಾಜಿಕ–ರಾಜಕೀಯ ವಾತಾವರಣ ನಿರ್ಮಾಣಗೊಂಡಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮರುಹಂಚಿಕೆ ನೀತಿಗಳು ಸಾಕಷ್ಟಿದ್ದರೂ, ಅವುಗಳು ಪರಿಣಾಮಕಾರಿ ಗುರಿಗಳನ್ನು ಹೊಂದಿಲ್ಲ. ಉದ್ದೇಶಿತ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನ ಆರಂಭದಲ್ಲಿ ಪರಿಣಾಮಕಾರಿ ಫಲ ನೀಡಿಕೆಗೆ ಅತ್ಯಂತ ಸಂಕೀರ್ಣವಾಗಿರುವ ಸಾಧ್ಯತೆ ಇದೆ.

ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ಪಾತ್ರದ ಬಗ್ಗೆ ಸೈದ್ಧಾಂತಿಕ ಮತ್ತು ತತ್ವಶಾಸ್ತ್ರೀಯ ಗೊಂದಲಗಳು ಅನುತ್ಪಾದಕ ವಿಳಂಬಕ್ಕೆ ಕಾರಣವಾಗಿವೆ. ಒಡೆತನದಿಂದ ನಿರ್ಗಮನ, ಸರ್ಕಾರದ ಬಂಡವಾಳ ಹಿಂತೆಗೆತ, ನೀತಿಗಳ ಮೂಲಕ ಮಧ್ಯಪ್ರವೇಶ, ಆಸ್ತಿ ಹಕ್ಕುಗಳ ರಕ್ಷಣೆ ಮುಂತಾದವುಗಳ ಬಗ್ಗೆ ವಿವಾದಕ್ಕೂ ಈ ಗೊಂದಲಗಳು ಕಾರಣವಾಗಿವೆ. ಹಲವು ಅತ್ಯಗತ್ಯ ಸಾರ್ವಜನಿಕ ಸೇವೆಗಳ ಪೈಕಿ, ಆರೋಗ್ಯ ಮತ್ತು ಶಿಕ್ಷಣ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಾವ ರಾಜ್ಯವೂ

ಅನುಸರಣೀಯ ಯೋಗ್ಯತೆಯನ್ನು ಪ್ರದರ್ಶಿಸಿಲ್ಲ. ಈ ಸೇವೆಗಳನ್ನು ದಕ್ಷ ರೀತಿಯಲ್ಲಿ ಜನರಿಗೆ ತಲುಪಿಸುವುದು ಇನ್ನೂ ದೊಡ್ಡ ಸವಾಲಾಗಿಯೇ ಉಳಿದಿದೆ.

ಖಾಸಗಿ ಹೂಡಿಕೆ ಕಡಿಮೆಯಿದ್ದು, ರಫ್ತು ಪ್ರಮಾಣದ ಪ್ರಗತಿಯೂ ಇಳಿಮುಖವಾಗಿದೆ. ಇವೆರಡೂ ಪ್ರಗತಿಗೆ ಅತಿಮುಖ್ಯ ಮೂಲ. ಈ ಇಳಿಮುಖ ಪ್ರವೃತ್ತಿಯು ಭಾರತದಲ್ಲಿ ಕ್ರಮೇಣ ಪ್ರಗತಿ ನಿಧಾನಗೊಳ್ಳಲು ಕಾರಣವಾಗಿವೆ.

ಕಾರ್ಪೊರೇಟ್‌ವಲಯ ಮತ್ತು ವಾಣಿಜ್ಯ ಬ್ಯಾಂಕ್‌ಗಳು ಒಟ್ಟೊಟ್ಟಿಗೆ, ತಮ್ಮ ತಮ್ಮ ಜಮಾಖರ್ಚು ಪಟ್ಟಿ ವಿಚಾರದಲ್ಲಿ ಒತ್ತಡಕ್ಕೆ ಸಿಲುಕಿವೆ. ಬ್ಯಾಂಕ್‌ಗಳಿಂದ ಈಗಾಗಲೇ ಪಡೆದಿರುವ ಸಾಲವನ್ನು ಸುಸ್ತಿ ಮಾಡಿರುವ ಹಿನ್ನೆಲೆಯಲ್ಲಿ ಸಂಸ್ಥೆಗಳಿಗೆ ಹೊಸ ಹೂಡಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಇದೇ ವೇಳೆ, ಅನುತ್ಪಾದಕ ಆಸ್ತಿಗಳ (ಎನ್‌ಪಿಎ) ಪ್ರಮಾಣ ಏರಿಕೆಯಾದ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಿಗೆ ಸಾಲ ನೀಡಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯ ಸಂಗ್ರಹ ಗುರಿ ತಲುಪಲು ಸಾಧ್ಯವಾಗಿಲ್ಲ. ತರಂಗಗುಚ್ಛ (ಸ್ಪೆಕ್ಟ್ರಮ್), ಬಂಡವಾಳ ಹಿಂತೆಗೆತ ಮತ್ತು ಡಿವಿಡೆಂಡ್‌ಗಳಲ್ಲಿ ಸರ್ಕಾರಕ್ಕೆ ನಿರೀಕ್ಷಿತ ಆದಾಯ ಸಂದಾಯವಾಗಿಲ್ಲ.

ರಾಜ್ಯ ಸರ್ಕಾರಗಳ ಆಯವ್ಯಯದಲ್ಲಿ ವಿತ್ತೀಯ ಕೊರತೆ ನಿಧಾನವಾಗಿ ಹೆಚ್ಚಾಗುತ್ತಿದೆ. 'ಉದಯ್' ಯೋಜನೆಯ ಅನುಷ್ಠಾನವೂ ಇದಕ್ಕೆ ಪ್ರಮುಖ ಕಾರಣ. ಈ ವರ್ಷ ಈ ವಿಚಾರದಲ್ಲಿ ಕೊಂಚ ಸುಧಾರಣೆಯಾಗಬಹುದೆಂಬ ವಿಶ್ವಾಸವಿದೆಯಾದರೂ, ರಾಜ್ಯಗಳ ಬಾಂಡ್‌ಗಳ ಮೇಲಿನ ಬಡ್ಡಿ ವೆಚ್ಚ 2016ರ ಅಕ್ಟೋಬರ್ ಅವಧಿಗಿಂತಲೂ 2017ರ ಜನವರಿ ಹರಾಜಿನಲ್ಲಿ ಹೆಚ್ಚಾಗಿದೆ.

ಸಾಲ–ಜಿಡಿಪಿ ಅನುಪಾತವನ್ನು ಕಡಿಮೆಗೊಳಿಸುವ ಸಲುವಾಗಿ, ಮೂಲ ಖೋತಾ ಪ್ರಮಾಣವನ್ನು ಕಡಿಮೆ ಮಾಡುವ ಬದಲು, ಕೇಂದ್ರ ಮತ್ತು ರಾಜ್ಯಗಳೆರಡೂ ಆದಾಯ ಹೆಚ್ಚಳ ದರದ ಮೇಲೆ ಅಧಿಕವಾಗಿ ಅವಲಂಬಿಸಿದ್ದರಿಂದ ನಿರೀಕ್ಷಿತ ಫಲಿತಾಂಶ ಗಳಿಸಲು ಸಾಧ್ಯವಾಗಿಲ್ಲ.

ಎಲ್ಲಾ ಜಿಲ್ಲೆಗಳಿಗೂ ವಿವಿಧ ಯೋಜನೆಗಳಿಗಾಗಿ ಸಾರ್ವಜನಿಕ




ಅನುದಾನದ ಹಂಚಿಕೆಯು ದೋಷಪೂರಿತವಾಗಿದ್ದು, ಬಡವರ ಸಂಖ್ಯೆ ಹೆಚ್ಚಾಗಿರುವ ಹಲವೆಡೆಗಳಲ್ಲಿ ಈ ನಿಧಿಯ ಹಂಚಿಕೆಯಲ್ಲಿ ಭಾರಿ ಪ್ರಮಾಣದ ಕೊರತೆ ಕಂಡುಬಂದಿದೆ.

ಭಾರತದಲ್ಲಿ ಕೆಲಸದ ಮಾಡುವ ವಯೋಮಾನದ ಜನಸಂಖ್ಯೆ ಮತ್ತು ಕೆಲಸ ಮಾಡಲು ಅರ್ಹತೆ ಪಡೆಯದ ವಯೋಮಾನದ ಜನಸಂಖ್ಯೆಯ ನಡುವೆ ಅನುಪಾತವು 2020ರ ವೇಳೆಗೆ ಗರಿಷ್ಠ ಮಟ್ಟಕ್ಕೆ ತಲುಪಲಿದ್ದು, ಅದು ಸುಮಾರು 1.7ರಷ್ಟಿರಬಹುದೆಂದು ಅಂದಾಜಿಸಲಾಗಿದೆ. ಇತರ "ಬ್ರಿಕ್ಸ್" ದೇಶಗಳಲ್ಲಿ ಇರುವ ಗರಿಷ್ಠ ಮಟ್ಟಕ್ಕಿಂತಲೂ ಇದು ಗಣನೀಯವಾಗಿ ಕಡಿಮೆ ಎನಿಸಿದ್ದು, ಜನಸಂಖ್ಯೆ ಸಂಬಂಧಿತ ಲಾಭವು ಭಾರತಕ್ಕೆ ಪಾಲಿಗೆ ಕಡಿಮೆಯಾಗುವುದನ್ನು ಇದು ಸೂಚಿಸುತ್ತದೆ. ಮತ್ತಷ್ಟು ಸುದೀರ್ಘ ಅವಧಿಯಲ್ಲಿ ಭಾರತವು ಈ ಅನುಪಾತದಲ್ಲಿ ಅತ್ಯುನ್ನತ ಮಟ್ಟಕ್ಕೆ ತಲುಪುವ ಸಾಧ್ಯತೆಯಿದೆ. ಕಳೆದ ಹಲವು ವರ್ಷಗಳಿಂದ ದೇಶದಲ್ಲಿ ಹೂಡಿಕೆ ಮತ್ತು ಉಳಿತಾಯ ದರಗಳು ಇಳಿಮುಖವಾಗಿವೆ. ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಆದಾಯ ಮತ್ತು ಅನುಭೋಗದ ಅಸಮಾನತೆ ಹೆಚ್ಚುತ್ತಿದೆ.

**ಅವಕಾಶಗಳು**

ಸಂಸ್ಥೆಗಳ ನಿರ್ಗಮನಕ್ಕಾಗಿ ದಿವಾಳಿ ಕಾನೂನುಗಳನ್ನು ಸುಧಾರಣೆ ಮಾಡುವುದು; ಇದರಿಂದ ಬಂಧನಕ್ಕೆ ಒಳಪಟ್ಟಿರುವ ಸಂಪನ್ಮೂಲಗಳ ಬಿಡುಗಡೆಗೆ ನೆರವಾಗಲಿದೆ.

ಆಧಾರ್ ಕಾರ್ಡ್‌ಗಳ ಕಾನೂನಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಡಿಜಿಟಲ್ ಪಾವತಿಯನ್ನು ಪ್ರೋತ್ಸಾಹಿಸಲು ಅಂತರ–ಕಾರ್ಯನಿರ್ವಹಣಾ ಸಾಧ್ಯತೆಗೆ ಅವಕಾಶ ನೀಡುವುದು. ಇದರಿಂದ ಸರ್ಕಾರಿ ಯೋಜನೆಗಳ ದಕ್ಷ ಕಾರ್ಯನಿರ್ವಹಣೆ ಸಾಧ್ಯವಾಗಲಿದ್ದು, ಸರ್ವರ ಒಳಗೊಳ್ಳುವಿಕೆ ಮತ್ತು ಸಮಾನತೆಯನ್ನು ಕಾಯ್ದುಕೊಳ್ಳಲು ನೆರವಾಗಲಿದೆ.

ಸ್ಪರ್ಧಾತ್ಮಕ ಮತ್ತು ಸಹಕಾರಿ ಸಂಯುಕ್ತ ವ್ಯವಸ್ಥೆಯ ಕೌಶಲ್ಯಗಳು, ಹೂಡಿಕೆ ಮತ್ತು ತಂತ್ರಜ್ಞಾನವನ್ನು ಆಕರ್ಷಿಸಲು ಅತ್ಯುತ್ತಮ ಅವಕಾಶ ಒದಗಿಸುತ್ತದೆ.

ರಚನಾತ್ಮಕ ಸುಧಾರಣೆಗಳ ಕುರಿತಾದ ಅಪೂರ್ಣ ಕಾರ್ಯಯೋಜನೆಯನ್ನು ದೃಢ ರಾಜಕೀಯ ಬದ್ಧತೆ ಮೂಲಕ ಪೂರ್ಣಗೊಳಿಸಬಹುದು. ಅದರಲ್ಲೂ, ಅಧಿಕ ಮೌಲ್ಯದ ನೋಟುಗಳ ಅಮಾನ್ಯೀಕರಣದ ಬಳಿಕ ಈ ಸಾಧ್ಯತೆ ಹೆಚ್ಚಾಗಿದೆ.

ಅಮೆರಿಕದ ಆರ್ಥಿಕತೆಯಲ್ಲಿನ ಬದಲಾವಣೆಯಿಂದಾಗಿ ಏರುತ್ತಿರುವ ಡಾಲರ್ ಮೌಲ್ಯವು, ಚೀನಾದ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದ್ದು, ಚೀನಾ ತನ್ನ ದೇಶೀಯ ಅನುಭೋಗದಲ್ಲಿ ಮರುಸಮತೋಲನ ಕಾಯ್ದುಕೊಳ್ಳಲು ರಫ್ತಿನ ಪ್ರಮಾಣವನ್ನು ಇಳಿಕೆ ಮಾಡುವ ಅನಿವಾರ್ಯತೆಗೆ ಸಿಲುಕಬಹುದು. ಇದು ಭಾರತ ಮತ್ತು ವಿಶ್ವದ ಇತರ ದೇಶಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ.

ಅಮೆರಿಕ ಮತ್ತು ಜರ್ಮನಿಯಂತಹ ಅಭಿವೃದ್ಧಿ ಹೊಂದಿದ ದೇಶಗಳ ಉತ್ತಮ ಪ್ರಗತಿ ಸಂಭವನೀಯತೆಯು ಭಾರತ ಸೇರಿದಂತೆ ಅಭಿವೃದ್ಧಿಶೀಲ ದೇಶಗಳ ರಫ್ತಿನ ವಹಿವಾಟಿಗೆ ಮರುಜೀವ ನೀಡಬಹುದು. ಶ್ರಮಾಧಾರಿತ ಉತ್ಪನ್ನಗಳ ರಫ್ತನ್ನು ಉತ್ತೇಜಿಸುವ ವಿಚಾರಕ್ಕೆ ಸಂಬಂಧಿಸಿದಂತೆ, ಬ್ರೆಕ್ಸಿಟ್ ಬಳಿಕ, ಬ್ರಿಟನ್ ಮತ್ತು ಯೂರೋಪ್ ದೇಶಗಳೊಂದಿಗೆ ಮುಕ್ತ ವ್ಯಾಪಾರದ ಬಗ್ಗೆ ಮರು ಸಂಧಾನಗಳನ್ನು ಮಾಡಿಕೊಳ್ಳಲು ಮತ್ತು ಆ ಮೂಲಕ ರಫ್ತು ಮತ್ತು ಉದ್ಯೋಗಾವಕಾಶ ವೃದ್ಧಿಯಲ್ಲಿ ಗಣನೀಯ ಲಾಭ ಪಡೆಯಲು ಭಾರತಕ್ಕೆ ಅವಕಾಶವಿದೆ.

ಪ್ರಾದೇಶಿಕ ವ್ಯಾಪಾರ ಒಪ್ಪಂದಗಳಿಗೆ ಸಂಬಂಧಿಸಿದಂತೆ ಅಮೆರಿಕದ ಬೆಂಬಲರಹಿತ ನಿಲುವಿನಿಂದಾಗಿ, ವಿಶ್ವ ವ್ಯಾಪಾರ ಒಪ್ಪಂದ (ಡಬ್ಲ್ಯೂಟಿಒ) ಮತ್ತು ದ್ವಿಪಕ್ಷೀಯತೆಯ ಪ್ರಸ್ತುತತೆ ಮತ್ತು ಪರಿಣಾಮಕಾರಿತ್ವ ಹೆಚ್ಚಾಗುವ ಸಾಧ್ಯತೆಯಿದ್ದು, ಇದರಿಂದ ಅಂತಿಮವಾಗಿ ಭಾರತಕ್ಕೆ ಅನುಕೂಲವಾಗಲಿದೆ.

ಭಾರತದ ದೊಡ್ಡ ರಾಜ್ಯಗಳ ನಡುವೆ ಜನಸಂಖ್ಯೆಯಲ್ಲಿ ತೀವ್ರ ತೆರನಾದ ವ್ಯತ್ಯಾಸಗಳಿವೆ. ರಾಜ್ಯಗಳನ್ನು ವಿಶಾಲ ತಳಹದಿಯಲ್ಲಿ ಎರಡು ಗುಂಪುಗಳಾಗಿ ವಿಂಗಡಿಸಬಹುದು: ಪಶ್ಚಿಮ ಬಂಗಾಲ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಕರ್ನಾಟಕ ಮುಂತಾದ ಪರ್ಯಾಯ ದ್ವೀಪ ರಾಜ್ಯಗಳು; ಮತ್ತು ಮಧ್ಯ ಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರದಂತಹ ಒಳನಾಡು ರಾಜ್ಯಗಳು. ಹೆಚ್ಚಿನ ಯುವಕರನ್ನು ಹೊಂದಿರುವ ಒಳನಾಡು ರಾಜ್ಯಗಳಿಗೆ ಹೋಲಿಸಿದರೆ, ಪರ್ಯಾಯ ದ್ವೀಪ ರಾಜ್ಯಗಳು ಹಿರಿಯ ವಯೋಮಾನದ ಜನಸಂಖ್ಯೆಯನ್ನು ಹೆಚ್ಚಾಗಿ ಹೊಂದಿವೆ. ಜನಸಂಖ್ಯಾ ಸಂಬಂಧಿತ ವ್ಯತ್ಯಾಸವು, ಕಾರ್ಮಿಕರ ಚಲನಶೀಲತೆಗೆ ಮತ್ತು ಆ ಮೂಲಕ ಅಧಿಕ ಬೆಳವಣಿಗೆ ದರ ಹಾಗೂ ಕಲ್ಯಾಣ ಸಾಧನೆಗೆ ಅವಕಾಶಗಳನ್ನು ಸೂಚಿಸುತ್ತದೆ. ಪರ್ಯಾಯ ದ್ವೀಪ ರಾಜ್ಯಗಳಲ್ಲಿ ಜನಸಂಖ್ಯಾ ಸಂಬಂಧಿತ ಅನುಕೂಲವು 2020ರ ವೇಳೆಗೆ ಅತ್ಯಧಿಕವಾಗಲಿದೆ. ಆದರೆ, ಒಳನಾಡು ರಾಜ್ಯಗಳಲ್ಲಿ ಇದು 2040ರ ವೇಳೆಗೆ ಇದು ಶೃಂಗಕ್ಕೆ ತಲುಪಲಿದೆ. ಆ ಮೂಲಕ ಭಾರತದಲ್ಲಿ ಜನಸಂಖ್ಯಾ ಸಂಬಂಧಿತ ಲಾಭವನ್ನು ಇತರ ಎಲ್ಲಾ ದೇಶಗಳಿಗೆ ಹೋಲಿಸಿದರೆ ಅತಿಹೆಚ್ಚು ಕಾಲ ಅನುಭವಿಸಲು ಅವಕಾಶವಿದೆ. ಇದು ರಾಜ್ಯಗಳ ನಡುವೆ ಪ್ರಸ್ತುತ ಇರುವ ಆರ್ಥಿಕ ಅಸಮಾನತೆಯನ್ನೂ ಕಾಲಕ್ರಮೇಣ ತೊಡೆದುಹಾಕಲು ಸ್ವಾಭಾವಿಕವಾಗಿಯೇ ಅವಕಾಶ ಒದಗಿಸುತ್ತದೆ. ಈ ಎಲ್ಲಾ ಲಾಭಗಳನ್ನು ಗರಿಷ್ಠ ಮಟ್ಟದಲ್ಲಿ ಪಡೆಯಬೇಕೆಂದರೆ, ಸಂಬಂಧಪಟ್ಟ ಆರ್ಥಿಕ ಸುಧಾರಣೆಗಳನ್ನು ತುರ್ತಾಗಿ ಜಾರಿಗೊಳಿಸಬೇಕಾದ ಅಗತ್ಯವಿದೆ.

ದ್ವಂದ್ವ ಜಮಾ–ಖರ್ಚು ಪಟ್ಟಿ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸಾರ್ವಜನಿಕ ವಲಯದ ಆಸ್ತಿ ಪುನರ್ವಸತಿ ಏಜೆನ್ಸಿಯನ್ನು ರಚಿಸುವ ಅವಕಾಶವಿದ್ದು, ದೊಡ್ಡ ಮತ್ತು ಕ್ಲಿಷ್ಟಕರ ಪ್ರಕರಣಗಳನ್ನು ಬಗೆಹರಿಸಲು ಹಾಗೂ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಇದರಿಂದ ಸಾಧ್ಯವಾಗಲಿದೆ.

**ಅಪಾಯಗಳು**

ಕಾಲಕ್ರಮೇಣ ವಿವಿಧ ದೇಶಗಳ ಸಮಗ್ರ ಆರ್ಥಿಕ ಪ್ರಗತಿಯನ್ನು ತುಲನೆ ಮಾಡಿದಲ್ಲಿ,



ಅಂತಾರಾಷ್ಟ್ರೀಯ ರೇಟಿಂಗ್‌ಏಜೆನ್ಸಿಗಳು ಆ ದೇಶಗಳ ಕುರಿತಾದ ರೇಟಿಂಗ್‌ಅನ್ನು ಪರಿಷ್ಕರಿಸುವಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡಿಲ್ಲ. ಇದು ದೇಶದಲ್ಲಿ ಹೂಡಿಕೆಗೆ ನಿರುತ್ಸಾಹ ಮೂಡಿಸುತ್ತದೆ.

ಸಂಯುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಜನಪ್ರಿಯ ರಾಜಕೀಯದ ಸ್ಪರ್ಧಾತ್ಮಕತೆಯು ವಿತ್ತೀಯ ಶಿಸ್ತು ಮತ್ತು ಆಡಳಿತದ ಮಟ್ಟವನ್ನು ಹಾನಿಗೊಳಪಡಿಸುತ್ತದೆ.

ವೇತನ ಪರಿಷ್ಕರಣೆ ಮತ್ತು "ಉದಯ್" ಬಾಂಡ್‌ಗಳಿಂದ ಎದುರಾಗುವ ಸವಾಲುಗಳು, ವಿತ್ತೀಯ ಶಿಸ್ತು ಗುರಿಗಳನ್ನು ಸಾಧಿಸಲು ರಾಜ್ಯಗಳ ಪಾಲಿಗೆ ಪ್ರಮುಖ ಕಳವಳಕಾರಿ ಅಂಶಗಳೆನಿಸಿವೆ.

ಅಂತಾರಾಷ್ಟ್ರೀಯ ರಾಜಕೀಯ ನಡೆ ಮತ್ತು ವಾತಾವರಣವು ಕ್ಷಿಪ್ರವಾಗಿ ಪ್ರತ್ಯೇಕತೆ ಮತ್ತು ರಕ್ಷಣಾತ್ಮಕವಾಗಿ ಮಾರ್ಪಡುತ್ತಿದೆ. ಸರಕು, ಸೇವೆಗಳು ಮತ್ತು ಕಾರ್ಮಿಕರ ಜಾಗತೀಕರಣ ವಿರೋಧಿ ಭಾವನೆಯು ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿ ನೆಲೆಸಿದೆ. ಇದು ಶೇ. 15–20ರಷ್ಟು ರಫ್ತು ಪ್ರಗತಿ ಸಾಧಿಸುವ ಭಾರತದ ಸಂಭಾವ್ಯ ಅವಕಾಶವನ್ನು ದೂರಮಾಡಲಿದ್ದು, ಕಾಲಕ್ರಮೇಣ ಶೆ. 8–10ರಷ್ಟು ಪ್ರಗತಿ ದರ ಸಾಧಿಸುವ ಗುರಿಯನ್ನೂ ಕಷ್ಟಸಾಧ್ಯವಾಗಿಸಲಿದೆ.

ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ಮತ್ತು ಸರಕುಗಳ ಬೆಲೆಗಳು ಏರುಗತಿಯಲ್ಲಿವೆ. ಆದರೆ, ತೈಲ ಉತ್ಪಾದನೆಯಲ್ಲಿ ನಿಧಾನಗತಿ ಸಮಸ್ಯೆಗಳನ್ನು ಗುರುತಿಸುವಲ್ಲಿ ಸಮೀಕ್ಷೆ ವಿಫಲವಾಗಿದೆ.

ಅಮೆರಿಕ ಆರ್ಥಿಕತೆಯಲ್ಲಿ ಇತ್ತೀಚಿಗಿನ ಬೆಳವಣಿಗೆಗಳ ಪರಿಣಾಮವಾಗಿ, ಅಭಿವೃದ್ಧಿಹೊಂದಿದ ದೇಶಗಳು ಬಡ್ಡಿದರ ಮತ್ತು ಹಣದುಬ್ಬರ ದರದ ಮೇಲೆ ನಿಯಂತ್ರಣ ಸಾಧಿಸುವತ್ತ ಹೊರಟಿವೆ. ಇದು ಭಾರತಕ್ಕೆ ಬಂಡವಾಳ ಒಳಹರಿವು ಮತ್ತು ಹೊರ ಹರಿವಿನ ಮೇಲೆ ಅಡ್ಡ ಪರಿಣಾಮ ಬೀರುತ್ತದೆ. ಆ ಮೂಲಕ ಭಾರತದ ಹೂಡಿಕೆ ವಾತಾವರಣದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ.

ಅಮೆರಿಕ ಆರ್ಥಿಕತೆಯಲ್ಲಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ಡಾಲರ್ ಬೆಲೆಯು 'ಯೆನ್' ಅಪಮೌಲ್ಯಕ್ಕೆ ಕಾರಣವಾದರೆ, ಅದು ಭಾರಿ ಮಟ್ಟದ ರಚನಾತ್ಮಕ ಪರಿವರ್ತನೆಗೆ ದಾರಿ ಮಾಡುತ್ತದೆ ಮತ್ತು ಇದರಿಂದ ಚೀನಾ ಮೇಲೆ ಆಗಬಹುದಾದ ಪ್ರತಿಕೂಲ ಪರಿಣಾಮಗಳು ಭಾರತದ ವ್ಯಾಪಾರ ಮತ್ತು ಹೂಡಿಕೆ ಮೇಲೆಯೂ ಬೀರಲಿವೆ. ಅಮೆರಿಕ–ಚೀನಾ ನಡುವಿನ ಸಂಭವನೀಯ ವ್ಯಾಪಾರ ಯುದ್ಧವು ಇಡೀ ಜಾಗತಿಕ ಅರ್ಥವ್ಯವಸ್ಥೆಯನ್ನೇ ಅಸ್ಥಿರಗೊಳಿಸುವ ಸಾಧ್ಯತೆಯಿದೆ.

ಕಳೆದ 6 ವರ್ಷಗಳಿಂದ ಜಾಗತಿಕ ರಫ್ತು–ಜಿಡಿಪಿ ಅನುಪಾತ ಇಳಿಮುಖವಾಗಿದೆ. ಇಂತಹ ನಿರಾಶಾದಾಯಕ ವಾತಾವರಣದಲ್ಲಿ, ಜಾಗತಿಕ ರಫ್ತು ವಲಯದಲ್ಲಿ ಭಾರತದ ಪಾಲನ್ನು ಹೆಚ್ಚಿಸುವುದು ಅತ್ಯಂತ ಸವಾಲಿನ ಕೆಲಸವಾಗಿದೆ.

ವಿಯೆಟ್ನಾಂ, ಬಾಂಗ್ಲಾದೇಶ ಮತ್ತು ಫಿಲಿಪ್ಪೀನ್ಸ್‌ನಂತಹ ಅಭಿವೃದ್ಧಿಶೀಲ ದೇಶಗಳಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸ್ಪರ್ಧಾತ್ಮಕತೆಯು ಗಂಭೀರ ಅಪಾಯಕ್ಕೆ ಸಿಲುಕಿದೆ. ನಮ್ಮ ವಿಸ್ತೃತ ಶ್ರೇಣಿಯ ಸರಕು ಮತ್ತು ಸೇವೆಗಳ ರಫ್ತಿನಲ್ಲಿ ಈ ಅಭಿವೃದ್ಧಿಶೀಲ ದೇಶಗಳು ಸ್ಪರ್ಧೆ ಒಡ್ಡಲಿವೆ. ನೈಜ ಪರಿಣಾಮಕಾರಿ ವಿನಿಮಯ ದರದ (ಆರ್‌ಇಇಆರ್) ಪ್ರಕಾರ ಹೇಳುವುದಾದರೆ, ಇತರ ಕರೆನ್ಸಿಗಳಿಗೆ ಹೋಲಿಸಿದರೆ ಭಾರತದ ರೂಪಾಯಿ ಮೌಲ್ಯ ಹೆಚ್ಚಾಗುತ್ತಿದೆ. ಆದ್ದರಿಂದ ಭಾರತದ ಒಟ್ಟಾರೆ ಸರಕು ಮತ್ತು ಸೇವೆಗಳು ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಸ್ಪರ್ಧಾತ್ಮಕತೆ ಅವಕಾಶ ಕಳೆದುಕೊಳ್ಳುತ್ತಿವೆ. ಈ ಮೌಲ್ಯವೃದ್ಧಿಯ ಅಂದಾಜು ಪ್ರಮಾಣ ವಿಭಿನ್ನವಾಗಿದ್ದು, ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಇದನ್ನು ಶೇ. 19.4ರಷ್ಟು ಎಂದು ಹೇಳಿದರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಪ್ರಕಾರ ಈ ಪ್ರಮಾಣ ಶೇ. 12. ಜನವರಿ 2014ರಿಂದ ಅಕ್ಟೋಬರ್ 2016ರವರೆಗೆ

ಈ ದರವು ಶೇ. 8.3 ಎಂದು ಈ ಸಮೀಕ್ಷೆ ಹೇಳಿದೆ. ಭಾರತದ ಜನಸಂಖ್ಯಾ ಸಂಬಂಧಿತ ಲಾಭಾಂಶವು ಸದ್ಯದಲ್ಲೇ ಕಡಿಮೆಯಾಗುವ ಸಾಧ್ಯತೆಯಿದೆ. ಏಕೆಂದರೆ, ಇದು 2020ರ ವೇಳೆಗೆ ಗರಿಷ್ಠ ಮಟ್ಟಕ್ಕೆ ತಲುಪುತ್ತದೆ. ಈ ಮಟ್ಟವು ಚೀನಾ ಮತ್ತು ಬ್ರೆಜಿಲ್‌ಈ ಹಿಂದೆ ತಲುಪಿದ್ದ ಗರಿಷ್ಠ ಮಟ್ಟಕ್ಕಿಂತ ಕಡಿಮೆಯೇ ಆಗಿರಲಿದೆ.

'ಆರ್ಥಿಕ ಸಮೀಕ್ಷೆ 2016–17' ಭಾರತದ ಆರ್ಥಿಕತೆಯ ಸಾಮರ್ಥ್ಯ, ದೌರ್ಬಲ್ಯ, ಅವಕಾಶಗಳು ಮತ್ತು ಅಪಾಯಗಳ ಕುರಿತಾಗಿ ಸಮಗ್ರ ವಿಮರ್ಶೆ ನಡೆಸಿದ್ದು, ಸವಾಲುಗಳನ್ನು ಮತ್ತು ದೌರ್ಬಲ್ಯಗಳನ್ನು ಎದುರಿಸಲು ಕೈಗೊಳ್ಳಬೇಕಾದ ಕೆಲವೊಂದು ನಿರ್ದಿಷ್ಟ ಸುಧಾರಣೆಗಳು ಮತ್ತು ಕ್ರಮಗಳನ್ನು ಸೂಚಿಸಿದೆ. ಸಮೀಕ್ಷೆಗೆ ಬಳಸಲಾಗಿರುವ ಪ್ರಾಯೋಗಿಕ ದಾಖಲೆ–ಸಾಕ್ಷ್ಯಾಧಾರಗಳ ಆಧಾರದ ಮೇಲೆ ಇವುಗಳ ವ್ಯಾಖ್ಯಾನ ಮತ್ತು ಅಭಿಪ್ರಾಯಗಳಲ್ಲಿ ಅಥವಾ ಸಾಮರ್ಥ್ಯ ಮತ್ತು



ಅವಕಾಶಗಳ ಕುರಿತಾದ ಗ್ರಹಿಕೆಯಲ್ಲಿ ವ್ಯತ್ಯಾಸ ಕಂಡುಬರಬಹುದು. ಉದಾಹರಣೆಗೆ, "ಭಾರತದಲ್ಲಿ ಅತಿ ಹೆಚ್ಚು ಕೆಲಸ ಸಂಬಂಧಿತ ಕೂಲಿಕಾರ್ಮಿಕರ ವಲಸೆ" ಇದೆ ಎಂದು ಸಮೀಕ್ಷೆಯಲ್ಲಿ ಪ್ರತಿಪಾದಿಸಿದರೆ, ಕೇವಲ ನಾಲ್ಕು (ದೆಹಲಿ, ಮಹಾರಾಷ್ಟ್ರ, ತಮಿಳುನಾಡು ಮತ್ತು ಗೋವಾ) ರಾಜ್ಯಗಳಿಗೆ ಮಾತ್ರ 75% ಜನರು ಕೆಲಸಕ್ಕಾಗಿ ವಲಸೆ ಬಂದಿದ್ದಾರೆ ಎಂದು ದಾಖಲೆಗಳು ತೋರಿಸುತ್ತವೆ. ಅಲ್ಲದೆ, ಕೇವಲ ನಾಲ್ಕು ರಾಜ್ಯಗಳು (ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಮಧ್ಯ ಪ್ರದೇಶ) ಒಟ್ಟಾರೆ ವಲಸೆಯ ಶೇ. 66ರಷ್ಟನ್ನು ಪ್ರತಿನಿಧಿಸುತ್ತವೆ ಎಂದು ದಾಖಲೆಗಳಿಂದ ತಿಳಿದುಬಂದಿದೆ. ಉಳಿದ ರಾಜ್ಯಗಳು ಗಣನೀಯ ಪ್ರಮಾಣದ ಕಾರ್ಮಿಕರ ಆಗಮನ, ನಿರ್ಗಮನಕ್ಕೆ ಸಾಕ್ಷಿಯಾಗಿಲ್ಲ. ಈ ರಾಜ್ಯಗಳಲ್ಲಿ ಕಾರ್ಮಿಕರ ಚಲನಶೀಲತೆ ಅಧಿಕವಾಗಿಲ್ಲ. ಸರಕು ಮತ್ತು ಬಂಡವಾಳದ ಚಲನಶೀಲತೆ ಕುರಿತ ವಿಶ್ಲೇಷಣೆಗೂ ಇದೇ ಮಿತಿ ಅನ್ವಯವಾಗುತ್ತದೆ. ಆದ್ದರಿಂದ, ಸರಕು ಕಾರ್ಮಿಕರು ಮತ್ತು ಬಂಡವಾಳದ ಕ್ಷಿಪ್ರ ಅಂತರಿಕ ಏಕೀಕರಣದ ಸಂದರ್ಭದಲ್ಲಿ ರಾಜ್ಯಗಳಲ್ಲಿನ ಅನುಭೋಗ ಮತ್ತು ಆದಾಯ ಸಂಗ್ರಹ ಕುರಿತಾಗಿ ಸಮೀಕ್ಷೆಯಲ್ಲಿ ಹೊರಹೊಮ್ಮಿರುವ ಅಂಶಗಳು ಕಗ್ಗಂಟಾಗಿ ಕಂಡರೂ, ನಿಜಕ್ಕೂ ಅವು ಕಗ್ಗಂಟಲ್ಲ. ಸಾಕ್ಷ್ಯಾಧಾರಗಳ ಅತೀವ ವಿಶ್ಲೇಷಣೆಯಿಂದ ಈ ವ್ಯತ್ಯಾಸಗಳು ಹೊರಹೊಮ್ಮಿರುತ್ತವೆ. ಇಂತಹ ಸಣ್ಣ–ಪುಟ್ಟ ಮಿತಿಗಳ ಹೊರತಾಗಿ, ಸಮೀಕ್ಷೆಯು ಅತ್ಯುತ್ತಮವಾಗಿ ತನ್ನ ಕಾರ್ಯ ನಿರ್ವಹಿಸಿದೆ. ❑

## ಬಜೆಟ್ ಬಗ್ಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು

ಬಜೆಟ್, ಸರ್ಕಾರ ಕಳೆದ ಎರಡೂವರೆ ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲನವಾಗಿದೆ. ದೂರದೃಷ್ಟಿಯನ್ನು ಮುಂದಕ್ಕೆ ಕರೆದೊಯ್ಯುವ ಚಲನಶೀಲನೆಯನ್ನು ಇದು ತೋರಿಸುತ್ತದೆ. ದೇಶದ ಸರ್ವತೋಮುಖ ಅಭಿವೃದ್ಧಿಯತ್ತ ಇಟ್ಟ ಬಹುಮುಖ್ಯ ಹೆಜ್ಜೆ, ಈ ಬಜೆಟ್ ಆಗಿದೆ. ಇದು ಹೊಸ ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಒಟ್ಟಾರೆ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತದೆ ಮತ್ತು ರೈತರ ಆದಾಯ ಹೆಚ್ಚಿಸಲು ಸಹಾಯಕವಾಗಿದೆ. ಈ ಬಜೆಟ್‌ನ ಒತ್ತು, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಮೂಲ ಸೌಕರ್ಯ ಕ್ಷೇತ್ರಗಳ ಮೇಲಿದೆ; ಈ ಕ್ಷೇತ್ರಗಳಿಗೆ ಬಂಡವಾಳ ಹೂಡಿಕೆ ಹೆಚ್ಚಿಸಿ, ಉದ್ಯೋಗಾವಕಾಶ ಸೃಷ್ಟಿಸಬೇಕೆಂಬುದಾಗಿದೆ. ೨೦೨೨ರ ವೇಳೆಗೆ ರೈತರ ಆದಾಯ ದ್ವಿಗುಣಗೊಳಿಸಬೇಕೆಂಬುದು ಸರ್ಕಾರದ ಗುರಿ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ನೀತಿ, ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಉದ್ಯೋಗ ಸೃಷ್ಟಿಯ ಬೃಹತ್ ಮೂಲಗಳಾಗಿವೆ. ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವಲ್ಲಿ ತೊಂದರೆ ಎದುರಿಸುತ್ತಿದ್ದು, ತೆರಿಗೆ ಕಡಿಮೆ ಮಾಡಿದರೆ ಶೇ. ೯೦ ರಷ್ಟು ಸಣ್ಣ ಉದ್ದಿಮೆಗಳಿಗೆ ಪ್ರಯೋಜನವಾಗುತ್ತದೆ ಎಂದು ಈ ಉದ್ದಿಮೆಗಳು ಬೇಡಿಕೆ ಸಲ್ಲಿಸಿದ್ದವು. ಹೀಗಾಗಿ ಸರ್ಕಾರ ಸಣ್ಣ ಪ್ರಮಾಣದ ಉದ್ದಿಮೆಗಳ ವ್ಯಾಖ್ಯೆಯನ್ನು ತಿದ್ದುಪಡಿಗೊಳಿಸಿದ್ದು ಅವುಗಳ ಅವಕಾಶ ವ್ಯಾಪಕಗೊಳಿಸಲಾಗಿದೆ. ತೆರಿಗೆಯನ್ನು ೩೦ ರಿಂದ ೨೫ ಕ್ಕೆ ಇಳಿಸಲಾಗಿದೆ.

ಈ ಬಜೆಟ್ ನಮ್ಮ ಆಶೋತ್ತರ, ಕನಸುಗಳಿಂದ ಒಡಗೂಡಿದೆ. ಒಂದರ್ಥದಲ್ಲಿ ನಮ್ಮ ಭವಿಷ್ಯವನ್ನು ದರ್ಶಿಸುತ್ತದೆ. ಇದು ನಮ್ಮ ಹೊಸ ತಲೆಮಾರಿನವರ ಭವಿಷ್ಯ, ರೈತರ ಭವಿಷ್ಯ. ಇನ್ನು FUTURE – ಶಬ್ದದಲ್ಲಿ F – ರೈತರನ್ನು U – ದಲಿತರು / ಶೋಷಿತರು / ಮಹಿಳೆಯರು ಒಳಗೊಂಡಂತೆ ಅವಕಾಶ ವಂಚಿತರನ್ನು, T – ಆಧುನಿಕ ಭಾರತದ ಕನಸಾದ ಪಾರದರ್ಶಕತೆ, ಮೇಲ್ದರ್ಜೆಯ ತಾಂತ್ರಿಕತೆ, U – ನಗರ ಪುನರುತ್ಥಾನ, R – ಗ್ರಾಮೀಣಾಭಿವೃದ್ಧಿ ಮತ್ತು E – ಯುವಜನತೆಗೆ ಉದ್ಯೋಗ, ಉದ್ಯಮಶೀಲತೆ, ಹೊಸ ಉದ್ಯೋಗ ಹೆಚ್ಚಳಕ್ಕೆ ಒತ್ತು, ಯುವ ಉದ್ದಿಮೆದಾರರ ಬಲವರ್ಧನೆ ಪ್ರತಿನಿಧಿಸುತ್ತದೆ.

# ಉತ್ಪಾದಕತೆ ಸುಧಾರಣೆ ಮತ್ತು ಉದ್ಯೋಗ ಬೆಳವಣಿಗೆ

* ಅರೂಪ್ ಮಿತ್ರ



**ಇಡೀ ದೇಶದಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಜಾರಿಗೊಳಿಸುವ ಕಾರ್ಯಕ್ರಮಕ್ಕೆ ಅನುರೂಪವಾಗಿ ಈ ಬಾರಿಯ ಆಯವ್ಯಯ ಪತ್ರದಲ್ಲಿ ಸಣ್ಣ ಮತ್ತು ಕಿರು ಉದ್ಯಮಗಳಿಗೆ ಅಧಿಕೃತ ಸಾಲ ಸೌಲಭ್ಯಗಳನ್ನು ಪಡೆಯುವ ಹೆಚ್ಚಿನ ಅವಕಾಶ ಲಭಿಸುವಂತೆ ಮಾಡಲಾಗಿದೆ. ಹೀಗೆ ಈ ಉದ್ಯಮಗಳ ಉತ್ಪಾದಕತೆಯ ಹೆಚ್ಚಳ ಮತ್ತು ತನ್ಮೂಲಕ ರಾಷ್ಟ್ರೀಯ ಜಿ.ಡಿ.ಪಿ.ಯಲ್ಲಿ ಅವುಗಳ ಅರ್ಥಪೂರ್ಣ ಕೊಡುಗೆಯನ್ನು ನಿರೀಕ್ಷಿಸಲಾಗಿದೆ.**

ಔದ್ಯೋಗಿಕ ಪ್ರಗತಿ ಮತ್ತು ಉದ್ಯೋಗಗಳ ಸೃಷ್ಟಿ – ಇವೆರಡು ಸರ್ಕಾರದ ಪರಿಧಿಯಲ್ಲಿ ಬರುವ ಪ್ರಮುಖ ಸಂಗತಿಗಳು. ಸೇವಾ ಕ್ಷೇತ್ರ ಒಂದರಿಂದಲೇ ಕೌಶಲ್ಯ ರಹಿತ ಅಥವಾ ಅರೆಕೌಶಲ್ಯವುಳ್ಳ ಕಾರ್ಮಿಕ ಶಕ್ತಿಯನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ಇದೇ ವೇಳೆ ಕೃಷಿ ಕ್ಷೇತ್ರವು ಪೂರ್ಣ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸಲಾರದು. ಹೀಗಾಗಿ ಭಾರತ ಅಥವಾ ಬೇರೆ ಯಾವುದೇ ಅಭಿವೃದ್ಧಿಶೀಲ ದೇಶವು ಅದರ ಔದ್ಯೋಗಿಕ ಕ್ಷೇತ್ರವನ್ನು ಪುನಶ್ಚೇತನಗೊಳಿಸುವುದು ಅತ್ಯಾವಶ್ಯಕ. ತಾಂತ್ರಿಕ ಅಭಿವೃದ್ಧಿಯ ಮೂಲಕ ಆರ್ಥಿಕ ಒಳಸುರಿವಿಲ್ಲದೇ ಔದ್ಯೋಗಿಕ ರಂಗದ ಒಟ್ಟು ಉತ್ಪಾದಕತೆಯನ್ನು ಗಣನೀಯವಾಗಿ ಹೆಚ್ಚಿಸಬಹುದಾಗಿದೆ. ಔದ್ಯೋಗಿಕ ರಂಗದಲ್ಲಿನ ಹೊಸ ಆವಿಷ್ಕಾರಗಳಿಗಾಗಿ ಹೆಚ್ಚಿನ ಧನವಿನಿಯೋಗದ ಅವಶ್ಯಕತೆ ಇರುವುದೆಂದು ಭಾವಿಸಿದರೂ, ಇತ್ತೀಚಿನ ಸಂಶೋಧನೆಗಳಿಂದ (ವಿವಾರೆಲ್ಲಿ 2013) ಉದ್ಯೋಗಗಳ ಸೃಷ್ಟಿಯ ಅನೇಕ ಮಾರ್ಗಗಳು ಇದೇ ಸಂದರ್ಭದಲ್ಲಿ ಹೊರಹೊಮ್ಮಿವೆ. ಉತ್ಪಾದನೆಯ ವಸ್ತುಗಳಲ್ಲಿ ವೈವಿಧ್ಯತೆಯನ್ನು ತರುವುದು, ಹೊಸ ವಸ್ತುಗಳ ಉತ್ಪಾದನೆ ಮತ್ತು ಅದರ ಉಪ ಉತ್ಪನ್ನಗಳ ಮೂಲಕ ಹೆಚ್ಚಿನ ಧನವಿನಿಯೋಗ ಮತ್ತು ಸಾಧನಗಳ ಉಪಯೋಗ ಮಾಡದೆಯೂ, ವಿಶೇಷವಾಗಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಹೊಸ ಉದ್ಯೋಗಗಳ ಸೃಷ್ಟಿ ಸಾಧ್ಯವಿದೆ. ಹೀಗೆ ಉತ್ಪಾದನೆಯಲ್ಲಿ ಹೆಚ್ಚಳ ಮತ್ತು ಹೊಸ ಉದ್ಯೋಗಗಳ ಸೃಷ್ಟಿ – ಇವೆರಡು ಪರಸ್ಪರ ಪೂರಕವಾಗಿ ಜೊತೆಜೊತೆಯಾಗಿಯೇ ಸಾಗಬಲ್ಲವು. ಈ ನಿಟ್ಟಿನಲ್ಲಿ ಕೇಂದ್ರದ 2017–18ರ ಆಯವ್ಯಯ ಪತ್ರದ ಅಲ್ಪಕಾಲೀನ ಪರಿಣಾಮಗಳು ಮತ್ತು ದೀರ್ಘಾವಧಿ ಗುರಿಗಳೊಂದಿಗೆ ಅವುಗಳ ಸುಸಂಗತತೆಯ ವೀಕ್ಷಣೆ ಆಸಕ್ತಿ ಹುಟ್ಟಿಸುವಂತಹದು.

ಈಗ ತಾನೇ ಚರಿತಾರ್ಹ, ನೋಟುಗಳ ಅಮಾನ್ಯೀಕರಣದ ಪ್ರಕ್ರಿಯೆ ನಡೆಯಿತು. ಇದು ತಕ್ಷಣದಲ್ಲಿ ಆರ್ಥಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿ ನಿರುದ್ಯೋಗ ಹೆಚ್ಚಿಸಬಹುದು. ನಗರ ಪ್ರದೇಶಗಳ ಕೃಷಿಯೇತರ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿಗಳ ಕೊರತೆಯು ನಗರ ಪ್ರದೇಶಗಳ ನಿರುದ್ಯೋಗ ಮತ್ತು ಆಂಶಿಕ ಉದ್ಯೋಗಗಳನ್ನು ಹೆಚ್ಚಾಗಿ ಬಾಧಿಸಲಿದೆ; ಉತ್ಪಾದನೆ ಮತ್ತು ಸೇವಾ ಕ್ಷೇತ್ರದ ಸಣ್ಣ ಮತ್ತು ಮಧ್ಯಮ ಉದ್ಯಮಗಳು ಇದೇ ರೀತಿ ಬಾಧಿತಗೊಳ್ಳಲಿವೆ ಎಂದು ನಂಬಲಾಗಿತ್ತು. ಇಷ್ಟೇ ಅಲ್ಲದೇ, ದೊಡ್ಡ ಉದ್ಯಮಗಳು ಕೂಡ ಇದರ ಅಪಾಯಕ್ಕೆ ಹೊರತಾಗಿಲ್ಲ ಎಂದೂ ಭಾವಿಸಲಾಗಿತ್ತು. ವಾಸ್ತವಿಕವಾಗಿ ಅನೇಕ ಉದ್ಯಮಗಳು ನಿಯಮಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಲಂಚ ಮತ್ತು ಇತರ ತಪ್ಪು ಮಾರ್ಗಗಳನ್ನು ಅನುಸರಿಸಿ ತಮ್ಮ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತವೆ. ಧನ ವಿನಿಯೋಗದಲ್ಲಿನ ಹಿಂಜರಿತದ ತಕ್ಷಣದ ಪರಿಣಾಮವೆಂದರೆ ಕಾರ್ಮಿಕರ ಬೇಡಿಕೆಯಲ್ಲಿ ಕುಸಿತ ಉಂಟಾಗುತ್ತದೆ. ಏಕೆಂದರೆ ಗುತ್ತಿಗೆ ಆಧಾರದ ವ್ಯವಸ್ಥೆಯಲ್ಲಿ ಕಾರ್ಮಿಕರ ಬೇಡಿಕೆಯೆ ಅತಿ ಹೆಚ್ಚು ಸಂವೇದನಶೀಲವಾಗಿರುವಂತಹದು. ಹೀಗಾಗಿ ಉದ್ಯಮಿಗಳ ಮಟ್ಟಿಗೆ ಇತರ ಒಳಸುರಿವುಗಳ ಹೋಲಿಕೆಯಲ್ಲಿ ವೇತನದ ವೆಚ್ಚವನ್ನು ಕಡಿಮೆ ಮಾಡುವುದೆ ಅತ್ಯಂತ ಸುಲಭ ಮತ್ತು ವ್ಯವಹಾರಿಕವಾದ ಆಯ್ಕೆಯಾಗಿದೆ. ಇದರ ಪರಿಣಾಮವಾಗಿ ಗ್ರಾಮೀಣ

* ಪ್ರಾಧ್ಯಾಪಕರು, ಆರ್ಥಿಕ ಬೆಳವಣಿಗೆ ಸಂಸ್ಥೆ, ನವದೆಹಲಿ. E-mail : arup@iegindia.org

ನಿರುದ್ಯೋಗ ಹೆಚ್ಚುತ್ತದೆ ಏಕೆಂದರೆ ಈ ಕಾರ್ಮಿಕ ಶಕ್ತಿಯನ್ನು ಕೃಷಿ ಕ್ಷೇತ್ರದಲ್ಲಿ ಬಳಸಿಕೊಳ್ಳುವ ಅವಕಾಶವಿಲ್ಲದಿರುವುದರಿಂದ ಹೆಚ್ಚಿನವರು ಕೃಷಿಯೇತರ ಉದ್ಯೋಗಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ ಆ ಕ್ಷೇತ್ರವು ನಗದು ವ್ಯವಹಾರದ ಮೇಲೆಯೇ ಅವಲಂಬಿತವಾಗಿದೆ. ಹೀಗಾಗಿ ಅಮಾನ್ಯೀಕರಣವು ಗ್ರಾಮೀಣ ಕೃಷಿಯೇತರ ಕ್ಷೇತ್ರದ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳನ್ನು ಬಾಧಿಸದೇ ಇರುವುದಿಲ್ಲ ಎಂದು ಭಾವಿಸಲಾಗಿತ್ತು.

ಆದರೆ ಇದರಲ್ಲಿ ಬಹಳಷ್ಟು ಉತ್ಪ್ರೇಕ್ಷೆ ಇದೆ. ಏಕೆಂದರೆ ವ್ಯಾಪಾರದಲ್ಲಿ ಅನೇಕ ಸಂಗತಿಗಳು ಪರಸ್ಪರ ವಿಶ್ವಾಸದ ಆಧಾರದಲ್ಲಿ ನಡೆಯುವಂತಹವು ಮತ್ತು ಅವುಗಳಿಗೆ ತಕ್ಷಣಕ್ಕೆ ಹಣದ ಅವಶ್ಯಕತೆ ಇರುವುದಿಲ್ಲ. ಆದ ಕಾರಣ ಅಮಾನ್ಯೀಕರಣದಿಂದ ಬೆಳವಣಿಗೆಯಲ್ಲಿ ಉಂಟಾಗಬಹುದಾದ ಕುಸಿತವನ್ನು ಇದು ತಡೆಗಟ್ಟುತ್ತದೆ. ಒಟ್ಟಿನಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣದ ಕ್ರಮದಂತೆಯೇ ಅಮಾನ್ಯೀಕರಣವು ಎಂದೋ ಆಗಬೇಕಾಗಿದ್ದ ಅಗತ್ಯ ಕ್ರಮವಾಗಿತ್ತು. ಅದನ್ನು ಏಕಾಏಕಿಯಾಗಿ ಮಾಡುವ ಅವಶ್ಯಕತೆ ಇತ್ತು. ಹಾಗಲ್ಲದೇ ಹೋದರೆ ಅದರ ಉದ್ದೇಶವೇ ವ್ಯರ್ಥವಾಗಿ ಬಿಡುತ್ತಿತ್ತು.

ಅಮಾನ್ಯೀಕರಣದ ಸಂಭಾವ್ಯ ತುರ್ತು ಪರಿಣಾಮಗಳ ಗಮನದಲ್ಲಿರಿಸಿಕೊಂಡು ಕೇಂದ್ರ ಆಯವ್ಯಯ ಪತ್ರವು ಉದ್ಯೋಗ ಸೃಷ್ಟಿಗಾಗಿ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಅತೀ ಹೆಚ್ಚಿನ ಮೊತ್ತವನ್ನು ತೆಗೆದಿರಿಸಿದೆ. ಈ ಯೋಜನೆಯ ಕುರಿತ ಪ್ರಮುಖ ಟೀಕೆ ಎಂದರೆ ಅದು ಭಾವಿ ಅಭಿವೃದ್ಧಿಗಾಗಿ ಅಗತ್ಯವಿರುವ ಸ್ವತ್ತುಗಳನ್ನು ಸೃಷ್ಟಿಸುತ್ತಿಲ್ಲ ಎಂಬುವುದಾಗಿದೆ. ಇದಕ್ಕಾಗಿ ಕೇಂದ್ರ ಆಯವ್ಯಯ ಪತ್ರವು ಯೋಗ್ಯ ಪರಿಹಾರವನ್ನು ಕಂಡುಕೊಂಡಿದೆ. ಈವರೆಗೆ ಈ ಯೋಜನೆಯಡಿಯಲ್ಲಿ ವಿನಿಯೋಗವಾಗದ ಮೊತ್ತವು ಹಿಂದಿರುಗಿಸಬೇಕಾಗುತ್ತದೆ ಎಂಬ



ಕಾರಣಕ್ಕಾಗಿ ಅರ್ಥಿಕ ವರ್ಷದ ಅಂತಿಮ ದಿನಗಳಲ್ಲಿ ತರಾತುರಿಯಿಂದ ಹಣವನ್ನು ಖರ್ಚು ಮಾಡಲಾಗುತ್ತಿತ್ತು. 2017–18ರಲ್ಲಿ ಬರ ನಿರ್ವಹಣೆಗಾಗಿ ಐದು ಲಕ್ಷ ಹೊಂಡ–ಕೆರೆಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈ ನೀರಾವರಿ ಯೋಜನೆಯನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಜೋಡಿಸುವುದರಿಂದ ಕೃಷಿ ಬೆಳವಣಿಗೆಯ ಜೊತೆಗೆ ಯೋಜನೆ ಕುರಿತಾಗಿದ್ದ ಟೀಕೆಗೆ ಅತ್ಯಂತ ಯೋಗ್ಯ ಪರಿಹಾರವನ್ನು ನೀಡುತ್ತದೆ. 2017–18ನೇ ವರ್ಷಕ್ಕಾಗಿ ಗ್ರಾಮೀಣ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಿಗೆ ಕಳೆದ ವರ್ಷಕ್ಕಿಂತ ಶೇ 24 ರಷ್ಟು ಹೆಚ್ಚು ಹಣವನ್ನು ನಿಗದಿಗೊಳಿಸಿರುವುದು ಗ್ರಾಮೀಣ ನಿರುದ್ಯೋಗ, ಆಂಶಿಕ ಉದ್ಯೋಗ ಹಾಗೂ ಬಡತನಗಳ ಸಮಸ್ಯೆಯನ್ನು ಪರಿಹಾರದ ನಿಟ್ಟಿನಲ್ಲಿ ಸರ್ಕಾರವು ತೀವ್ರ ಗಮನವಹಿಸಿರುವುದನ್ನು ತೋರಿಸುತ್ತದೆ.

ಪ್ರಧಾನ ಮಂತ್ರಿ ಉದ್ಯೋಗ ಯೋಜನೆ ಮತ್ತಿತರ ಆರ್ಥಿಕ ಸಹಾಯದ ಯೋಜನೆಗಳಿಗಾಗಿ ಹಿಂದಿನ ವರ್ಷಗಳಿಗಿಂತ ಮೂರುಪಟ್ಟು ಹೆಚ್ಚು ಹಣ ನಿಗದಿಪಡಿಸಲಾಗಿದೆ. ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆ ಮತ್ತು ಪ್ರಧಾನಮಂತ್ರಿ ರೋಜಗಾರ್ ಯೋಜನೆಯನ್ನು ಜೋಡಿಸಿ ಸಾಲ ಮತ್ತು ಸಹಾಯಧನಗಳನ್ನು ಒಳಗೊಂಡು ಪಿ.ಎಂ.ಇ.ಜಿ.ಪಿ. ಯೋಜನೆ ರೂಪಿತವಾಗಿದೆ. ಈ ಯೋಜನೆಯನ್ನು ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮ ಸಚಿವಾಲಯವು ಮೇಲುಸ್ತುವಾರಿ ವಹಿಸುತ್ತದೆ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ತನ್ನ ರಾಜ್ಯ ಮಂಡಳಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ. ಇದರ ಉದ್ದೇಶವೂ ಕೂಡ ಸ್ವಯಂ ಉದ್ಯೋಗ ಪ್ರಯತ್ನಗಳು, ಕಿರು ಉದ್ಯೋಗ ಮತ್ತಿತರ ಯೋಜನೆಗಳ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಉದ್ಯೋಗಗಳನ್ನು ಹೆಚ್ಚಿಸುವುದೆ ಆಗಿದೆ. ಇದರಿಂದ ಗ್ರಾಮೀಣ ಪಾರಂಪರಿಕ ಕುಶಲಕರ್ಮಿಗಳಿಗೆ ಪ್ರೋತ್ಸಾಹ ದೊರೆಯುವುದರೊಂದಿಗೆ ನಗರ ಪ್ರದೇಶದ ನಿರುದ್ಯೋಗಿಗಳಿಗೂ ಅನುಕೂಲವಾಗುತ್ತದೆ.

ಈ ಯೋಜನೆಯಡಿಯಲ್ಲಿ ನಿರಂತರತೆ ಮತ್ತು ಸುಸ್ಥಿರವಾದ ಉದ್ಯೋಗಾವಕಾಶಗಳು ಲಭಿಸುವುದರಿಂದ ಫಲಾನುಭವಿಗಳ ಗಳಿಕೆಸಾಮರ್ಥ್ಯ ಹೆಚ್ಚಾಗುತ್ತದೆ.



ಇಡೀ ದೇಶದಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಜಾರಿಗೊಳಿಸುವ ಕಾರ್ಯಕ್ರಮಕ್ಕೆ ಅನುರೂಪವಾಗಿ ಈ ಬಾರಿಯ ಆಯವ್ಯಯ ಪತ್ರದಲ್ಲಿ ಸಣ್ಣ ಮತ್ತು ಕಿರು ಉದ್ಯಮಗಳಿಗೆ ಅಧಿಕೃತ ಸಾಲ ಸೌಲಭ್ಯಗಳನ್ನು ಪಡೆಯುವ ಹೆಚ್ಚಿನ ಅವಕಾಶ ಲಭಿಸುವಂತೆ ಮಾಡಲಾಗಿದೆ. ಹೀಗೆ ಈ ಉದ್ಯಮಗಳ ಉತ್ಪಾದಕತೆಯ ಹೆಚ್ಚಳ ಮತ್ತು ತನ್ಮೂಲಕ ರಾಷ್ಟ್ರೀಯ ಜಿ.ಡಿ.ಪಿ.ಯಲ್ಲಿ ಅವುಗಳ ಅರ್ಥಪೂರ್ಣ ಕೊಡುಗೆಯನ್ನು ನಿರೀಕ್ಷಿಸಲಾಗಿದೆ. ಇದರಿಂದ ಅಮಾನ್ಯಿಕರಣದಿಂದ ಈ ಕ್ಷೇತ್ರದ ಮೇಲೆ ಉಂಟಾಗಬಹುದಾಗಿದ್ದ ವಿಪರೀತ ಪರಿಣಾಮಗಳು ಅವುಗಳನ್ನು ಬಾಧಿಸಲಾರವು.


ದೇಶದಲ್ಲಿ ಅನೇಕ ಕಿರು ಮತ್ತು ಸಣ್ಣ ಮಧ್ಯಮ ಉದ್ಯಮಗಳಿವೆ ಆದರೆ ಒಟ್ಟು ಮೌಲ್ಯವರ್ಧನೆಯಲ್ಲಿ ಅವುಗಳ ಕೊಡುಗೆ ನಗಣ್ಯವೆನಿಸಿದೆ. ಉದಾಹರಣೆಗೆ ನೊಂದಣಿಯಾಗದ ಉತ್ಪಾದನಾ ಕ್ಷೇತ್ರದಲ್ಲಿ ಅವುಗಳ ಕೊಡುಗೆಯು ಒಟ್ಟು ಉತ್ಪಾದನಾ ಮೌಲ್ಯದ ಸುಮಾರು ಮೂರನೇ ಒಂದರಷ್ಟು ಮಾತ್ರ. ವಿಶೇಷವಾಗಿ ಕೇವಲ ಸಂಘಟಿತ ಉತ್ಪಾದನಾ ಕ್ಷೇತ್ರವು ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಸಮತೋಲನವನ್ನು ಗಣನೀಯವಾಗಿ ಸುಧಾರಿಸಲು ಅಸಮರ್ಥವಾಗಿರುವುದರಿಂದ ಆಯವ್ಯಯ ಪತ್ರದಲ್ಲಿ ಆರ್ಥಿಕ ಕ್ಷೇತ್ರದ ಡಿಜಿಟಲೀಕರಣದ ಒಟ್ಟಾರೆ ಆಶಯದ ಅಂಗವಾಗಿ ಮಾಡಿರುವ ಕಿರು ಮತ್ತು ಸಣ್ಣ ಉದ್ಯೋಗಗಳನ್ನು ಪುನಶ್ಚೇತನಗೊಳಿಸುವ ಪ್ರಯತ್ನವು ಗಮನಾರ್ಹವಾಗಿದೆ. ಕರಭಾರವನ್ನು ತಪ್ಪಿಸುವ ಪ್ರಯತ್ನವಾಗಿ ಉದ್ಯಮಗಳು ತಮ್ಮ ಚಟುವಟಿಕೆಗಳನ್ನು ವಿಭಜಿಸಿ ನೊಂದಣಿಯಾಗದೇ ಅಥವಾ ಅನಧಿಕೃತ ಕ್ಷೇತ್ರದಲ್ಲೇ ಉಳಿಯಲು ಯತ್ನಿಸುತ್ತವೆ. ನಷ್ಟದ ಅಂಚಿನಲ್ಲಿರುವ ಇಂತಹ ಉದ್ಯಮಗಳು ತಮ್ಮ ಆರ್ಥಿಕ ಸ್ಥಿತಿ ಹಾಗೂ ನಿರ್ವಹಣೆಯನ್ನು ಸುಧಾರಿಸಿ ದೃಢಗೊಳ್ಳಲು ಡಿಜಿಟಲೀಕರಣದ ಈ ಪ್ರಯೋಗಗಳು ಸಹಕರಿಸಿ ಕರ ಸಂಗ್ರಹದ

ಪ್ರಮಾಣವನ್ನು ಹೆಚ್ಚಿಸುತ್ತದೆ. ಡೆಬಿಟ್ ಕಾರ್ಡ್, ಮೊಬೈಲ್ ಫೋನ್ ಇಲ್ಲದವರಿಗೂ ಮರ್ಚಂಟ್ ಎನೇಬಲ್ಡ ಆಧಾರ ಪೇಮೆಂಟ್ ಸಿಸ್ಟಂ ಅನ್ನು ಜಾರಿಗೊಳಿಸುವ ಯೋಜನೆ ಇದೆ.

50 ಕೋಟಿ ಅಥವಾ ಅದಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಇರುವ ಸಣ್ಣ ಸಂಸ್ಥೆಗಳು ಅಲ್ಪ ಪ್ರಮಾಣದ ಕರವನ್ನು ಭರಿಸಬೇಕಾಗುವುದು. (ಶೇ 25). ಹೀಗಾಗಿ ಆಧುನಿಕ ಸಣ್ಣ ಕೈಗಾರಿಕೆಗಳು ಹೂಡಿಕೆಯನ್ನು ಹೆಚ್ಚಿಸುವ ಸಾಧ್ಯತೆ ಇದ್ದು, ಈ ಕಾರಣ ಔದ್ಯಮಿಕ ಪ್ರಗತಿ ಹಾಗೂ ಉದ್ಯೋಗ ಹೆಚ್ಚುವ ಸಾಧ್ಯತೆ ಇದೆ. ಇನ್ನೊಂದೆಡೆ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಹರಿದು ಬರಲಿರುವ ವಿದೇಶಿ ಹೂಡಿಕೆಗೆ ಕೂಡ ಆಯವ್ಯಯ ಪತ್ರದಲ್ಲಿ ಗಮನ ನೀಡಲಾಗಿದೆ. ಶೇ 90ಕ್ಕಿಂತ ಹೆಚ್ಚು ವಿದೇಶಿ ನೇರ ಹೂಡಿಕೆಗಳು ಸ್ವಯಂಚಾಲಿತ ವಿಧಾನಕ್ಕೆ ಒಳಪಡುವುದರಿಂದ ಮತ್ತು ಮೊದಲಿದ್ದ ವಿದೇಶಿ ಬಂಡವಾಳ ಪ್ರೋತ್ಸಾಹ ಮಂಡಳಿ (ಎಫ್.ಐ.ಪಿ.ಬಿ.) ರದ್ದುಗೊಳಿಸಲ್ಪಟ್ಟಿರುವುದರಿಂದ ಆರ್ಥಿಕ ಚಟುವಟಿಕೆಗಳು ಆಡಳಿತಶಾಹಿಯ ವಿಳಂಬ ಪ್ರಕ್ರಿಯೆಗಳಿಗೆ ಒಳಗಾಗುವ ಅನಿವಾರ್ಯತೆ ಇಲ್ಲದೇ ವೇಗವನ್ನು ಪಡೆಯವವು ಎಂದು ನಿರೀಕ್ಷಿಸಲಾಗಿದೆ. ವಿದೇಶಿ ನೇರ ಹೂಡಿಕೆಯಲ್ಲಿ ಶೇ 36 ರಷ್ಟು ಹೆಚ್ಚಳವಾಗುವ ನಿರೀಕ್ಷೆ ಇದ್ದು, ನಿವೇಶ ಹಾಗೂ ಉದ್ಯೋಗ ಸಷ್ಠಿ ಗಣನೀಯವಾಗಿ ಹೆಚ್ಚಲಿವೆ.

ಔದ್ಯೋಗಿಕ ಕ್ಷೇತ್ರದ ಉತ್ಪಾದಕತೆಯಲ್ಲಿನ ಹೆಚ್ಚಳದ ಕುರಿತು ನಡೆದಿರುವ ಸಂಶೋಧನೆಗಳು ಗುರುತಿಸಿರುವ ಅನೇಕ ಪ್ರಮುಖ ಅಂಶಗಳಲ್ಲಿ ಮುಕ್ತ ವಹಿವಾಟು, ನಗರ ಆರ್ಥಿಕತೆ, ಮೂಲಭೂತ ಸೌಲಭ್ಯ ಮತ್ತು ಐಸಿಟಿ ಹಾಗೂ ಆವಿಷ್ಕಾರಗಳು ಸೇರಿವೆ. ಹೊಸ ಹೊಸ ತಾಂತ್ರಿಕ ಆವಿಷ್ಕಾರಗಳಿಂದ ತಂತ್ರಜ್ಞಾನದ ಸ್ತರವು ಹೆಚ್ಚಿ ಆರ್ಥಿಕ ಹೂಡಿಕೆ ಹೆಚ್ಚಳ ಮಾಡದೆಯೂ ಬೆಳವಣಿಗೆಯ ಪ್ರಮಾಣ ಹೆಚ್ಚುತ್ತದೆ. ಮೂಲಭೂತ ಸೌಕರ್ಯಗಳ ಮಹತ್ವವನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಉದಾಹರಣೆಗೆ: ಸಾರ್ವಜನಿಕ ಮೂಲಭೂತ ಸೌಕರ್ಯವು ಇತರ ಉತ್ಪಾದನೆಯ ಘಟಕಗಳು ಮತ್ತು ದೊಡ್ಡ ಪ್ರಮಾಣದ ಉತ್ಪಾದನೆಯಿಂದಾಗುವ ಲಾಭಗಳೊಂದಿಗೆ ಪೂರಕ ಸಂಬಂಧ ಹೊಂದಿರುವುದರಿಂದ ಅದು ಉತ್ಪಾದಕತೆ ಮತ್ತು ತಾಂತ್ರಿಕ ದಕ್ಷತೆಗಳನ್ನು ಹೆಚ್ಚಿಸುವ ನಿರ್ಣಾಯಕ ಅಂಶವೆಂದು ಪರಿಗಣಿಸಲಾಗಿದೆ.




ಕಾರ್ಮಿಕ ವರ್ಗದ ಅಪರಿಯಾಪ್ತ ಉದ್ಯೋಗಾರ್ಹತೆಯು ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಹೆಚ್ಚಳಕ್ಕೆ ಇರುವ ಪ್ರಮುಖವಾದ ಅಡ್ಡಿಯಾಗಿದೆ.ವಿಶೇಷವಾಗಿ ಉತ್ಪಾದನಾ ವಲಯದಲ್ಲಿ ಕೌಶಲ್ಯದ ಕೊರತೆ ಹೆಚ್ಚುತ್ತಲೇ ಇದೆ ಈ ಅಡ್ಡಿಗಳನ್ನು ಪರಿಹರಿಸಲು ಕೇಂದ್ರ ಆಯವ್ಯಯ ಪತ್ರವು ಕ್ರಮಬದ್ಧವಾಗಿ ಯತ್ನಿಸಿದೆ.

2017–18 ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ನಾಲ್ಕು ಸಾವಿರ ಕೋಟಿ ರೂ. ವೆಚ್ಚದ ಸಂಕಲ್ಪ ಎಂಬ ಕೌಶಲ್ಯಾಭಿವೃದ್ಧಿ ಮತ್ತು ಆದಾಯಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಿದೆ. ಈ ಯೋಜನೆ ಅಡಿಯಲ್ಲಿ 3.5 ಕೋಟಿ ಯುವಕರಿಗೆ ಮಾರುಕಟ್ಟೆಯನ್ನು ಗಮನದಲ್ಲಿರಿಸಿಕೊಂಡು ತರಬೇತಿ ನೀಡಲಾಗುವುದು. ಪ್ರಧಾನಮಂತ್ರಿ ಕೌಶಲ ಕೇಂದ್ರಗಳನ್ನು ದೇಶದ 600 ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಹಾಗೂ 100 ಅಂತಾರಾಷ್ಟ್ರೀಯ ಕೌಶಲ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ಕೌಶಲ ಕೇಂದ್ರಗಳು ಸಮುದಾಯ ಕೌಶಲ ಕೇಂದ್ರಗಳಾಗಿ ಗ್ರಾಮೀಣ ಪ್ರದೇಶದ ಜನರಿಗಾಗಿ ಭಾಷಾ ಪ್ರಯೋಗಾಲಯ, ಡಿಜಿಟಲ್ ಗ್ರಂಥಾಲಯ, ಮೌಲ್ಯಮಾಪನ ಹಾಗೂ ವೃತ್ತಿ ಮಾರ್ಗದರ್ಶನ ಹಾಗೂ ಕೌಶಲ ಕೋಠಡಿಗಳನ್ನು ಹೊಂದಿರುತ್ತದೆ. ಇವೆಲ್ಲವೂ ಅವರ ಉದ್ಯೋಗಾರ್ಹತೆಯನ್ನು ಹೆಚ್ಚಿಸುತ್ತವೆಂದು ನಿರೀಕ್ಷಿಸಲಾಗಿದೆ.

ದೇಶಾದ್ಯಂತ ಸ್ಥಾಪನೆಗೊಳ್ಳಲಿರುವ ಇಂಡಿಯಾ ಇಂಟರ್ ನ್ಯಾಷನಲ್ ಸ್ಕಿಲ್ ಸೆಂಟರ್‌ಗಳು ಆಧುನಿಕ ತರಬೇತಿಯ ಜೊತೆಯಲ್ಲೇ ವಿದೇಶಿ ಭಾಷೆಗಳ ಶಿಕ್ಷಣ ಸೌಲಭ್ಯ ಹೊಂದಿರುವುದು ವಿಶೇಷ. ಇದು ವಿದೇಶಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗಲಿವೆ. ಐ.ಟಿ.ಐ.ಗಳಲ್ಲಿ ಲಭಿಸುವ ಶಿಕ್ಷಣವು ತೀವ್ರ ಟೀಕೆಗೆ ಒಳಗಾಗಿದೆ. ಉದಾ: ಐ.ಟಿ.ಐ. ನಲ್ಲಿ ತರಬೇತಿ ಪಡೆದ ಪ್ಲಂಬರನನ್ನು ಮಧ್ಯಪ್ರಾಚ್ಯ ದೇಶಕ್ಕೆ ಉದ್ಯೋಗಕ್ಕಾಗಿ ಕಳಿಸುವ ಮೊದಲು ಉದ್ಯೋಗ ನೀಡುವ ಸಂಸ್ಥೆಯು ಆತನಿಗೆ ಮತ್ತೊಮ್ಮೆ ತರಬೇತಿ ನೀಡಬೇಕಾಯಿತು. ಈ ನಿಟ್ಟಿನಲ್ಲಿ ಸರ್ಕಾರದ ಈ ಪ್ರಯತ್ನ ಭರವಸೆ ಮೂಡಿಸುವಂತಾಗಿದೆ. ಇದು ಒಂದೆಡೆ ದೇಶದಲ್ಲಿನ ಅಧಿಕ ಕಾರ್ಮಿಕ ಶಕ್ತಿಯನ್ನು ವಿದೇಶಗಳಲ್ಲಿ ಕಾರ್ಯನಿರ್ವಹಿಸಲು ಒದಗುವಂತೆ ಮಾಡಲಿದೆ. ಇನ್ನೊಂದೆಡೆ ವಿದೇಶದಿಂದ ಬರುವ ಹಣವು ಗಣನೀಯವಾಗಿ ಹೆಚ್ಚುವುದರ ಮೂಲಕ ವಿದೇಶಿ ವಿನಿಮಯದಲ್ಲಿ ಹೆಚ್ಚಳ ಉಂಟು ಮಾಡಲಿದೆ. ಇಂತಹ ಕಾರ್ಮಿಕರು ವಿದೇಶದಿಂದ ಕಳಿಸುವ ಹಣದಿಂದ, ಅವರ ಕುಟುಂಬದ ಜೀವನಸ್ತರ ಹೆಚ್ಚಲಿದೆ. ಈ ಹಣವು ಯೋಗ್ಯ ಪ್ರೋತ್ಸಾಹಕರ ಯೋಜನೆಗಳ ಮೂಲಕ ಉತ್ಪಾದಕ ಸ್ವತ್ತುಗಳ ನಿರ್ಮಿತಿಗೆ ಉಪಯೋಗಿಸಲ್ಪಡುವಂತೆ ಮಾಡುವ ನೀತಿಯನ್ನು ಮುಂಬರುವ ದಿನಗಳಲ್ಲಿ ರೂಪಿಸಬೇಕಾಗಿದೆ.

ಕಾರ್ಮಿಕ ಶಕ್ತಿಯ ಕೌಶಲವನ್ನು ಅಂತಾರಾಷ್ಟ್ರೀಯ ಸ್ತರಕ್ಕೆ ಏರಿಸಿ ಅದನ್ನು ಉದ್ಯೋಗಾರ್ಹಗೊಳಿಸಿ ಸರ್ವತ್ರ ಚಲಾವಣೆಗೆ ಸನ್ನದ್ಧಗೊಳಿಸುವ ಸರ್ಕಾರದ ಪ್ರಯತ್ನದ ಮೊದಲ ಹೆಜ್ಜೆಯು ಗಮನಾರ್ಹವಾಗಿದೆ. ಇದು ಸರಕಾರ ಹೊಂದಿರುವ ಪುರೋಗಾಮಿ ದೂರದರ್ಶಿತ್ವವನ್ನು ಎತ್ತಿ ತೋರಿಸುತ್ತದೆ.

ಈ ಬಾರಿಯ ಕೇಂದ್ರ ಸರ್ಕಾರದ ಆಯವ್ಯಯ ಪತ್ರದಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಸಾಕಷ್ಟು ದೊಡ್ಡ ಮೊತ್ತವನ್ನು ಒದಗಿಸಲಾಗಿದೆ. ಬೃಹತ್ ಪ್ರಮಾಣದಲ್ಲಿ ಮೂಲಭೂತ ಸೌಕರ್ಯದ

ನಿರ್ಮಾಣಕ್ಕಾಗಿ ಮಾನವ ಶಕ್ತಿಯ ಅವಶ್ಯಕತೆಯೂ ಇರುವುದರಿಂದ ಅದು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಆದರೂ ಈ ಮೂಲಭೂತ ಸೌಕರ್ಯ ನಿರ್ಮಾಣದ ನೀತಿಯು ಪ್ರಾದೇಶಿಕ ಆಯಾಮವನ್ನು ಒಳಗೊಂಡಿದ್ದರೆ ಇನ್ನು ಹೆಚ್ಚಿನ ಸತ್ಪರಿಣಾಮಗಳನ್ನು ನಿರೀಕ್ಷಿಸಬಹುದಾಗಿತ್ತು.

ಕಳೆದ ಹಲವು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆಯ ವಿಷಯದಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಒಮ್ಮುಖ ನೀತಿಯ ಅಭಾವದಿಂದಾಗಿ ಪ್ರಾದೇಶಿಕ ಅಸಮತೋಲನ ಹೆಚ್ಚಿದೆ. ಇದನ್ನು ನಿವಾರಿಸುವ ಒಂದು ಪರಿಣಾಮಕಾರಿ ವಿಧಾನವೆಂದರೆ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದಾಗಿದೆ.

ನಿಜ, ಮೂಲಭೂತ ಸೌಕರ್ಯಗಳು ಒಂದೆಡೆ ಕೇಂದ್ರೀಕೃತವಾಗುವುದರಿಂದ ನಗರೀಯ ಆರ್ಥಿಕತೆ ಬೆಳೆಯುತ್ತದೆ ಹಾಗೂ ಅದರ ಸರಿಯಾದ ಉಪಯೋಗವನ್ನು ಪಡೆಯುವುದಕ್ಕಾಗಿ ಈಗಾಗಲೇ ಗಣನೀಯವಾದ ಮೂಲ ಸೌಕರ್ಯ ಹೊಂದಿರುವ ಪ್ರದೇಶಗಳಲ್ಲಿ ಇನ್ನಷ್ಟು ಹೂಡಿಕೆಯನ್ನು ಹೆಚ್ಚಿಸಬೇಕಿದೆ. ಈ ಪ್ರಕ್ರಿಯೆಯಲ್ಲಿ ಕೆಲವು ಪ್ರದೇಶಗಳು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿ ಔದ್ಯೋಗಿಕರಣವು ಕೆಲವೇ ಪ್ರದೇಶಗಳಿಗೆ ಸೀಮಿತವಾಗಿ ಬಿಡುತ್ತದೆ. ಇದು ಪ್ರಾದೇಶಿಕ ಅಸಮಾಧಾನ ಉಂಟುಮಾಡುತ್ತದೆ, ಈ ಸಮಸ್ಯೆಗಳ ನಿವಾರಣೆಗಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಪ್ರಾದೇಶಿಕ ಸಮತೋಲನದ ಚಿಂತನೆ ಹೊಂದಿರುವುದು ಅಗತ್ಯ.



ಉದಾ: ಈಶಾನ್ಯ ರಾಜ್ಯಗಳಲ್ಲಿ ಔದ್ಯೋಗೀಕರಣದ ವೇಗವು ಅತ್ಯಂತ ನಗಣ್ಯವಾಗಿದೆ.

ಇದಲ್ಲದೇ ನಿರೀಕ್ಷಿತ ಹೊಸ ಮೆಟ್ರೊ ರೈಲು ನೀತಿ ಯುವಕರಿಗೆ, ಅದರಲ್ಲೂ ವಿಶೇಷವಾಗಿ ನಗರಗಳ ಯುವಕರಿಗೆ ಹೊಸ ಉದ್ಯೋಗವಕಾಶವನ್ನು ತೆರೆಯಲಿದೆ. ಈ ಮೆಟ್ರೊ ರೈಲು ಯೋಜನೆಯು ಮೂಲಭೂತ ಸೌಕರ್ಯ ಜಾಲ, ಸಂಚಾರದಲ್ಲಿ ದಕ್ಷತೆ ಹಾಗೂ ಕಾರ್ಯಕ್ಷಮತೆಗಳನ್ನು ಹೆಚ್ಚಿಸಲಿದೆ. ಆದರೂ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಹೆಚ್ಚುತ್ತಿರುವ ಸನ್ನಿವೇಶದಲ್ಲಿ ನಗರಗಳಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚಿಸುವ ಇನ್ನಷ್ಟು ಯೋಜನೆಗಳು ರೂಪಿಸಬೇಕಾಗಿತ್ತು.

ಔದ್ಯೋಗಿಕ ಆಧರಿತ ಅಭಿವೃದ್ಧಿಯೇ ಗುರಿಯಾಗಿದ್ದರೆ ಇದಕ್ಕಾಗಿ ಆಯವ್ಯಯ ಪತ್ರದಲ್ಲಿ ಇನ್ನಷ್ಟು ಕಾರ್ಯಯೋಜನೆಗಳು ರೂಪಿತವಾಗಬೇಕಿತ್ತು. ಉತ್ಪಾದನೆ, ಉದ್ಯೋಗಗಳ ಸೃಷ್ಟಿ ಮತ್ತು ರಫ್ತು ಹೆಚ್ಚಿಸುವುದಕ್ಕಾಗಿ ಮೇಕ್ ಇನ್ ಇಂಡಿಯಾ ಪ್ರಯತ್ನದ ಅಂಗವಾಗಿ ಸರ್ಕಾರವು ಚರ್ಮೋದ್ಯಮ, ರತ್ನಾಭರಣ ಉದ್ಯಮ ಸೇರಿದಂತೆ ಕಾರ್ಮಿಕ ಕೇಂದ್ರಿತ ಉದ್ಯಮಗಳಿಗೆ ಹೆಚ್ಚಿನ ಕರ ವಿನಾಯಿತಿಯನ್ನು ಘೋಷಿಸಬೇಕಾಗಿತ್ತು.

ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಚೀನಾ ಮಾದರಿಯಲ್ಲಿ ದೇಶಾದ್ಯಂತ ಉತ್ಪಾದನಾ ಘಟಕಗಳು, ಸಾರ್ವಜನಿಕ ಸೌಲಭ್ಯಗಳು, ವಸತಿ ಪ್ರದೇಶಗಳು, ಶಾಲೆ ಮತ್ತು ಆಸ್ಪತ್ರೆಗಳನ್ನೊಳಗೊಂಡ ಮೆಗಾ ಇಂಡಸ್ಟ್ರಿಯಲ್ ಸಿಟಿಗಳು ನಿರ್ಮಾಣಗೊಳ್ಳಲಿವೆ. ಆದರೆ ಈ ಉದ್ದೇಶಕ್ಕಾಗಿ ಯಾವುದೇ ಗಮನಾರ್ಹವಾದ ವಿಶೇಷ ವಿತ್ತೀಯ ಅನುದಾನ ನೀಡಿರುವುದು ಕಂಡುಬಂದಿಲ್ಲ.

ಕಾರ್ಮಿಕ ಕೇಂದ್ರಿತ ಉತ್ಪಾದನೆ ಆಧರಿಸಿರುವ ಔದ್ಯೋಗೀಕರಣದೆಡೆಗೆ ಹೆಚ್ಚಿನ ಗಮನಹರಿಸಿರುವುದು ಕಂಡುಬರುತ್ತಿಲ್ಲ. ಬದಲಾಗಿ ಆಯವ್ಯಯ ಪತ್ರವು ಕೃಷಿ ಮತ್ತು ಗ್ರಾಮೀಣ ಕೇಂದ್ರಿತವಾಗಿದೆ. ದೇಶದ ಜನಸಂಖ್ಯೆಯ ಬಹುಪಾಲು ಇಂದಿಗೂ ಗ್ರಾಮೀಣ ಪ್ರದೇಶದಲ್ಲೇ ವಾಸವಾಗಿದ್ದು, ದೇಶದ ಕಾರ್ಮಿಕ ಶಕ್ತಿಯ ಅರ್ಧದಷ್ಟು ಭಾಗವು ಕೃಷಿ ಕ್ಷೇತ್ರದಲ್ಲೇ ತೊಡಗಿರುವುದರಿಂದ ಇದು ಅನಿವಾರ್ಯವೂ ಆಗಿತ್ತು.

ಆದರೆ ಕಾರ್ಮಿಕ ಕೇಂದ್ರಿತ ಉತ್ಪಾದನಾ ರಂಗದ ಆಧುನಿಕೀಕರಣ, ಅವುಗಳು ಗುಣಮಟ್ಟದ ವಸ್ತುಗಳನ್ನು ಉತ್ಪಾದನೆ ಮಾಡಿ, ಅವುಗಳ ರಫ್ತು ಬೇಡಿಕೆಯನ್ನು ಹೆಚ್ಚಿಸುವುದು ಹಾಗೂ ಅವುಗಳು ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೆ ಅವುಗಳ ಕೊಡುಗೆಯನ್ನು ಹೆಚ್ಚಿಸಲು ಸಹಕರಿಸುವ ಕೆಲಸ ಇನ್ನಷ್ಟೇ ಆಗಬೇಕಾಗಿದೆ.

ಕೇವಲ ತಂತ್ರಜ್ಞಾನವನ್ನು ಅಮದು ಮಾಡಿಕೊಳ್ಳುವ ಬದಲು, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಆವಿಷ್ಕಾರಗಳಿಗೆ ಒತ್ತು ನೀಡುವ ವಿಷಯವು ಬರಲಿರುವ ದಿನಗಳಲ್ಲಿ ಚರ್ಚೆಯ ಪ್ರಮುಖ ಅಂಶವಾಗಬೇಕಿದೆ. ❑

# ಯೋಜನಾ

## ಏಪ್ರಿಲ್ 2017 ಸಂಚಿಕೆಯ ವಿಷಯ

# ಕಾರ್ಮಿಕ ಸುಧಾರಣೆ

# ಹೊಸ ಅವತಾರದಲ್ಲಿ ಭಾರತೀಯ ರೈಲ್ವೆ ಬಜೆಟ್

* ಅರುಣೇಂದ್ರ ಕುಮಾರ್



**ಕೇಂದ್ರದ ಪ್ರಸ್ತುತ ಬಜೆಟ್‌ನಲ್ಲಿ ರೈಲ್ವೆ ಇಲಾಖೆಯ ನಾಲ್ಕು ಪ್ರಮುಖ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಲಾಗಿದೆ. ಪ್ರಯಾಣಿಕರ ಸುರಕ್ಷತೆ. ಬಂಡವಾಳ ಹಾಗೂ ಅಭಿವೃದ್ಧಿ ಕೆಲಸಗಳು, ಸ್ವಚ್ಛತೆ, ಹಣಕಾಸು ಮತ್ತು ಲೆಕ್ಕಪತ್ರಗಳ ಸುಧಾರಣೆ.**

ದೇಶದಲ್ಲಿ ಕಳೆದ 93 ವರ್ಷಗಳಿಂದ ಸತತವಾಗಿ ಅನುಸರಿಸಿಕೊಂಡು ಬಂದಿದ್ದ ಪ್ರತ್ಯೇಕ ಬಜೆಟ್ ಮಂಡನೆಯ ಸಂಪ್ರದಾಯವನ್ನು ಇದೇ ಮೊದಲ ಬಾರಿ ಈ ವರ್ಷ ಕೈಬಿಟ್ಟು ಕೇಂದ್ರ ಸರ್ಕಾರ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದೆ. ಸಾಮಾನ್ಯ ಬಜೆಟ್‌ನಲ್ಲಿಯೇ ರೈಲ್ವೆ ಬಜೆಟ್ ಅನ್ನೂ ಸೇರಿಸಿ ಮಂಡನೆ ಮಾಡಲಾಗಿದೆ. ಇದೊಂದು ಐತಿಹಾಸಿಕ ನಿರ್ಧಾರ. ರೈಲ್ವೆ ಬಜೆಟ್‌ನ್ನು ಸಾಮಾನ್ಯ ಬಜೆಟ್‌ನಲ್ಲಿಯೇ ವಿಲೀನಗೊಳಿಸಿರುವುದರ ಹಿಂದಿರುವ ತತ್ವಗಳನ್ನು ಅರಿತುಕೊಳ್ಳುವುದು ಅಗತ್ಯ ಎನಿಸುತ್ತದೆ.

1920ರಲ್ಲಿ ಸರ್ ವಿಲಿಯಮ್ ಅಕ್ವರ್ತ್ ಅಧ್ಯಕ್ಷತೆಯಲ್ಲಿ ಈಸ್ಟ್ ಇಂಡಿಯನ್ ರೈಲ್ವೆ ಸಮಿತಿ ಸ್ಥಾಪನೆಯಾಯಿತು. ಅಕ್ವರ್ತ್ ಸಮಿತಿ ಸಲಹೆಯಂತೆ 1924ರಲ್ಲಿ ಪ್ರತ್ಯೇಕಿಸುವ ರೂಢಿಯಾಗಿ ರೈಲ್ವೆ ಇಲಾಖೆಯ ಹಣಕಾಸು ವ್ಯವಹಾರಗಳಿಂದ ಪ್ರತ್ಯೇಕವಾಯಿತು. ಇದರ ಶಬ್ದಶಃ ಅರ್ಥವನ್ನು ವಿವರಿಸುವುದಾದರೆ, "ಅತ್ಯಂತ ಮಹತ್ವದ ವಾಣಿಜ್ಯಿಕ ವ್ಯವಹಾರದ ವ್ಯವಸ್ಥೆಯೊಂದಿಗೆ ಮಾರ್ಚ್ 31ವರೆಗೆ ಕಾರ್ಯ ನಿರ್ವಹಿಸುವುದು ಮತ್ತೆ ಹೊಸ ಆರ್ಥಿಕ ವಹಿವಾಟಿನೊಂದಿಗೆ ಏಪ್ರಿಲ್ 1ರಿಂದ ಮತ್ತೆ ವಹಿವಾಟು ಆರಂಭಿಸುವುದೇ ಆಗಿದೆ." ರೈಲ್ವೆ ಇಲಾಖೆಯಿಂದ ನಿರ್ದಿಷ್ಟ ಆದಾಯದ ನೆರವನ್ನು ಸಾಮಾನ್ಯ ಬಜೆಟ್‌ನಲ್ಲಿ ನಿರೀಕ್ಷಿಸಲಾಗಿತ್ತು. ಅದು ರೈಲ್ವೆಯ ಹೊಸ ಆದಾಯವಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ರೈಲ್ವೆ ಇಲಾಖೆ ಶೇ 75ರಷ್ಟು ಸಾರ್ವಜನಿಕ ಸಾರಿಗೆ ಮತ್ತು ಶೇ 90ರಷ್ಟು ಸರಕು ಸಾಗಣೆ ಮಾಡುತ್ತಿತ್ತು. ಈ ಅಗತ್ಯ ಮತ್ತು ಅನಿವಾರ್ಯತೆಯ ಕಾರಣಕ್ಕಾಗಿ ಪ್ರತ್ಯೇಕ ರೈಲ್ವೆ ಬಜೆಟ್ ಪದ್ಧತಿ ಮುಂದುವರಿಯುವುದು ಸಮರ್ಥನೀಯವಾಗಿತ್ತು. ಆದರೆ ಈಗ ಈ ಪ್ರಮಾಣ ಕ್ರಮವಾಗಿ ಶೇ. 15 ಮತ್ತು ಶೇ. 30ಕ್ಕೆ ಇಳಿದಿದೆ. ಪ್ರಸ್ತುತ ಸರ್ಕಾರವು ಈ ಬದಲಾವಣೆಯನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಿ ಒಟ್ಟಾರೆಯಾಗಿ ನಿರ್ಧಾರ ಮಾಡಿತು. ಈ ಹಿನ್ನೆಲೆಯಲ್ಲಿ ಸಾಮಾನ್ಯ ಬಜೆಟ್‌ನ ಮೂಲಸೌಲಭ್ಯ ವಿಭಾಗದಲ್ಲಿ ರೈಲ್ವೆ ಬಜೆಟ್ ಮಂಡನೆಯಾಗಿದೆ. ಆದರೆ ಭಾರತೀಯ ರೈಲ್ವೆ ಇಲಾಖೆಯ ಹಣಕಾಸು ಸ್ವಾಯತ್ತತೆಯನ್ನು ತಡೆಯುವ ಅಥವಾ ಸ್ವಾತಂತ್ರ್ಯವನ್ನು ಹಿಂದಿನಂತೆಯೇ ಉಳಿಸಲಾಗಿದೆ ಎಂಬ ಭರವಸೆ ಬಜೆಟ್ ಮೂಲಕ ನೀಡಲಾಗಿದೆ.

### ಹೊಸ ಅವತಾರದಲ್ಲಿ ಭಾರತೀಯ ರೈಲ್ವೆ ಬಜೆಟ್

ಕೇಂದ್ರದ ಪ್ರಸ್ತುತ ಬಜೆಟ್‌ನಲ್ಲಿ ರೈಲ್ವೆ ಇಲಾಖೆಯ ನಾಲ್ಕು ಪ್ರಮುಖ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಲಾಗಿದೆ.

1. ಪ್ರಯಾಣಿಕರ ಸುರಕ್ಷತೆ.
2. ಬಂಡವಾಳ ಮತ್ತು ಅಭಿವೃದ್ಧಿ ಕೆಲಸಗಳು.
3. ಸ್ವಚ್ಛತೆ ಮತ್ತು
4. ಹಣಕಾಸು ಮತ್ತು ಲೆಕ್ಕಪತ್ರಗಳ ಸುಧಾರಣೆ

### ಪ್ರಯಾಣಿಕರ ಸುರಕ್ಷತೆ

ಸುರಕ್ಷತೆಯ ಸುಧಾರಣೆಗಾಗಿ ಪ್ರತ್ಯೇಕ ಬಂಡವಾಳ ಹೂಡಿಕೆಯ ವ್ಯವಸ್ಥೆಯ ಅಗತ್ಯವನ್ನು ಕಳೆದ ಹಲವು ವರ್ಷಗಳ ಹಿಂದೆಯೇ ಮನಗಾಣಲಾಗಿತ್ತು. ಆದರೆ

* ಭಾರತೀಯ ರೈಲ್ವೇಸ್‌ನ ನಿವೃತ್ತ ಅಧ್ಯಕ್ಷರು. E-mail : noidarail54@gmail.com



ಇಲಾಖೆಯ ಒಳಗಿನ ಹಣಕಾಸು ಆದಾಯ ಮೂಲಗಳಿಂದ ಉದ್ದೇಶಿತ ಸುರಕ್ಷತಾ ಅನುದಾನದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಿರಲಿಲ್ಲ. ಈ ನಿಟ್ಟಿನಲ್ಲಿ 2001ರ ಏಪ್ರಿಲ್ 1ರಂದು ಅಂದಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ವಿಶೇಷ ರೈಲ್ವೆ ಸುರಕ್ಷಾ ನಿಧಿಯನ್ನು ಸ್ಥಾಪಿಸುವ ಪ್ರಯತ್ನ ನಡೆದಿತ್ತು. ಅದರಲ್ಲಿ ಮುಖ್ಯವಾಗಿ ಸುರಕ್ಷತೆಗೆ ಸಂಬಂಧಿಸಿದ ರೈಲು ಹಳಿ, ಸೇತುವೆಗಳು, ಸಿಗ್ನಲಿಂಗ್, ಗೇರ್ ಮತ್ತು ರೋಲಿಂಗ್ ಸಂಗ್ರಹ ಸೇರಿದಂತೆ ಇನ್ನಿತರ ಗತಕಾಲದ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸುವ ಗುರಿ ಹೊಂದಲಾಗಿತ್ತು. ಅದಕ್ಕಾಗಿ ಬಡ್ಡಿರಹಿತ ಮತ್ತು ವಾಪಸ್ ನೀಡಲಾಗದ ಸುಮಾರು 17 ಸಾವಿರ ಕೋಟಿ ರೂಪಾಯಿ ನೆರವು ಬೇಕಾಗಿತ್ತು. ಈ ಎಲ್ಲ ಕೆಲಸಗಳನ್ನು 'ಹಸಿರು ಪುಸ್ತಕ'ದಲ್ಲಿ ದಾಖಲಿಸಲಾಗಿತ್ತು. ಇದನ್ನು ಗಮನಿಸಿದ ಸರ್ಕಾರ ಪ್ರಸ್ತುತ ಬಜೆಟ್‌ನಲ್ಲಿ ಪ್ರಯಾಣಿಕರ ಸುರಕ್ಷತೆಗಾಗಿ ಹೊಸದಾದ ಮತ್ತು ಸಂಪೂರ್ಣ ವ್ಯವಸ್ಥೆಯನ್ನು ಒಳಗೊಂಡ ರಾಷ್ಟ್ರೀಯ ರೈಲ್ವೆ ಸಂರಕ್ಷಣಾ ಕೋಶ (ಆರ್‌ಆರ್‌ಎಸ್‌ಕೆ) ಸ್ಥಾಪಿಸಿ, ಮುಂದಿನ ಐದು ವರ್ಷಗಳ ಯೋಜನೆಯ ಅನುಷ್ಠಾನಕ್ಕಾಗಿ ಒಂದು ಲಕ್ಷ ಕೋಟಿ ರೂಪಾಯಿಯನ್ನು ಮೀಸಲಿಟ್ಟಿದೆ. ಆರಂಭಿಕ ಬಂಡವಾಳವನ್ನು ಸರ್ಕಾರ ನೀಡಿದರೆ, ಉಳಿದ ಹಣವನ್ನು ರೈಲ್ವೆ ಇಲಾಖೆ ತನ್ನ ಆದಾಯ ಮತ್ತು ವಿವಿಧ ಮೂಲಗಳಿಂದ ಸಂಗ್ರಹಿಸಲಿದೆ. ಪ್ರಸ್ತುತ ಕೋಶದಿಂದ ಕಾಲಮಿತಿಯ ಯೋಜನೆಗಳನ್ನು ಮತ್ತು ಸ್ಪಷ್ಟ ನೀತಿ ನಿರೂಪಣೆಯನ್ನು ರೂಪಿಸಿ ವಿವಿಧ ಸುರಕ್ಷತಾ ಕಾರ್ಯಗಳನ್ನು ಕೈಗೊಳ್ಳಲು ಅನುದಾನವನ್ನು ಮೀಸಲಿಟ್ಟಿದೆ. ಈ ಸುರಕ್ಷತಾ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮತ್ತು ನಿರ್ವಹಣೆ ಮಾಡಲು ಅಂತಾರಾಷ್ಟ್ರೀಯ ತಜ್ಞರ ಸಲಹೆ, ಸಹಕಾರವನ್ನೂ ಪಡೆಯಲಾಗುತ್ತಿದೆ. ಉದ್ದೇಶಿತ ಯೋಜನೆ ಕೈಗೂಡಲು ತೆಗೆದುಕೊಂಡ ಅತ್ಯಂತ ಗಟ್ಟಿ ಮತ್ತು ಸಮಯೋಚಿತ ನಿರ್ಧಾರ ಎಂದೇ ಹೇಳಬಹುದು. ಸುರಕ್ಷತಾ ಕ್ರಮಗಳಿಂದಾಗಿ ಇತ್ತೀಚಿನ ಕೆಲವು ವರ್ಷಗಳಲ್ಲಿ ಮಾನವರಹಿತ ರೈಲ್ವೆ ಕ್ರಾಸಿಂಗ್‌ಗಳಲ್ಲಿ ಅಪಘಾತಗಳ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿರುವನ್ನೂ ಗಮನಿಸಬಹುದು. 2020ರ ಒಳಗಾಗಿ ದೇಶದಲ್ಲಿರುವ ಎಲ್ಲ ಮಾನವಸಹಿತ ಕ್ರಾಸಿಂಗ್ ಪದ್ಧತಿಯನ್ನು ಸಂಪೂರ್ಣ ಪರಿವರ್ತಿಸಲು ಈ ಬಾರಿಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಇದಲ್ಲದೆ ಮಾನವಸಹಿತ ಕ್ರಾಸಿಂಗ್‌ಗಳಲ್ಲಿ ರಸ್ತೆ ಮೇಲು ಅಥವಾ ಕೆಳ ಸೇತುವೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬೆಂಕಿ ಅನಾಹುತ ತಪ್ಪಿಸಲು ರೈಲ್ವೆ ಡಬ್ಬಿಗಳ ಒಳಭಾಗದಲ್ಲಿ ಬೆಂಕಿ ನಿರೋಧಕ ಸಾಮಗ್ರಿಗಳನ್ನು ಬಳಸಲು ಸರ್ಕಾರ ಆಸಕ್ತಿ ತೋರಿದೆ.

ಆದಾಯ ಮತ್ತು ಬಂಡವಾಳ ವೆಚ್ಚದ ನಿರ್ವಹಣೆ ಮೂಲಕ ರಾಷ್ಟ್ರೀಯ ರೈಲು ಸಂರಕ್ಷಾ ಕೋಶ (ಆರ್‌ಆರ್‌ಎಸ್‌ಕೆ) ನಿಧಿಗೆ ಹಣ ಒದಗಿಸಲಾಗುವುದು. ಆದಾಯದಿಂದ 1000 ಕೋಟಿ ರೂಪಾಯಿಯನ್ನು ಮೀಸಲಿಟ್ಟಿದ್ದರೆ, 19 ಸಾವಿರ ಕೋಟಿ ರೂಪಾಯಿಯನ್ನು ಬಂಡವಾಳ ರೂಪದಲ್ಲಿ ನೀಡಲಾಗುತ್ತಿದೆ. ಕೋಶದ ಎಲ್ಲ ಯೋಜನೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಲಾಗಿದೆ.

### ಬಂಡವಾಳ ಮತ್ತು ಅಭಿವೃದ್ಧಿ ಕೆಲಸಗಳು

ಪ್ರಸ್ತುತ ಬಜೆಟ್‌ನಲ್ಲಿ ಈ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಅನುದಾನವನ್ನು 1,21,000 ಕೋಟಿ ರೂಪಾಯಿಯಿಂದ 1,31,000 ಕೋಟಿ ರೂಪಾಯಿಗೆ ಹೆಚ್ಚಿಸಲಾಗಿದೆ. ಇದಲ್ಲದೆ ಬಜೆಟ್‌ನಲ್ಲಿ ರೈಲ್ವೆ ಇಲಾಖೆ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಮುಂಗಡ ಪತ್ರ ಬೆಂಬಲ ಧನವನ್ನು 46,355 ಕೋಟಿಯಿಂದ 55,000 ಕೋಟಿ ರೂಪಾಯಿಗೆ ಏರಿಸಲಾಗಿದೆ. ಅಗತ್ಯವಿದ್ದರೆ ಹೆಚ್ಚಿನ ಬಂಡವಾಳ ಹೂಡಿಕೆಗೂ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದಾಗ್ಯೂ ಇಲಾಖೆಯ ಆಂತರಿಕ ಸಂಪನ್ಮೂಲ ಕ್ರೋಢೀಕರಣವು ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕಡಿಮೆ ಆಗಲಿದೆ. ಹೋದ ವರ್ಷ ಆಂತರಿಕ ಸಂಪನ್ಮೂಲ ಸಂಗ್ರಹ 14,715 ಕೋಟಿ ರೂಪಾಯಿ ಇದ್ದರೆ, ಈ ವರ್ಷ 14,000 ಕೋಟಿ ರೂಪಾಯಿ ಸಂಗ್ರಹದ ನಿರೀಕ್ಷೆ ಇದೆ. ಯೋಜನೆಯ ಆಂತರಿಕ ಸಂಪನ್ಮೂಲ, ಜಿಬಿಎಸ್, ಇಬಿಆರ್ ಮತ್ತಿತರ ಸಂಗ್ರಹದ ವಿವರಗಳನ್ನು ಪಟ್ಟಿ – 1ರಲ್ಲಿ ನೀಡಲಾಗಿದೆ.

**ಪಟ್ಟಿ 1 – ಯೋಜನಾ ಗಾತ್ರ**

ರೂಪಾಯಿ (ಕೋಟಿಗಳಲ್ಲಿ)

| ವರ್ಷ | ಯೋಜನಾ ಗಾತ್ರ | ಜಿಬಿಎಸ್ | ಹೆಚ್ಚುವರಿ ಬಜೆಟ್ ಸಂಪನ್ಮೂಲಗಳು | ಆಂತರಿಕ ಸಂಪನ್ಮೂಲ ಉತ್ಪಾದನೆ |
|---|---|---|---|---|
| 2011–12 | 45,061 | 21,073 | 14,790 | 9,198 |
| 2012–13 | 50,383 | 25,234 | 15,142 | 10,007 |
| 2013–14 | 53,984 | 28,174 | 15,225 | 10,590 |
| 2014–15 | 65,798 | 31,596 | 17,788 | 16,414 |
| 2015–16 | 93,520 | 35,007 | 39,006* | 19,446 |
| 2016–17 | 121,000 | 46,355 | 59,930 | 14,715 |
| 2017–18 | 1,31,000 | 55,000 | 62,000 | 14,000 |

* ಇದರಲ್ಲಿ ಸಾಂಸ್ಥಿಕ ಹಣಕಾಸು ರೂ. 17,136 ಕೋಟಿ ಸೇರಿದೆ. ಈ ರೀತಿಯ ನಿಧಿ ಸಂಗ್ರಹದ ನವೀನ ರೀತಿಯ ಪದ್ಧತಿಯನ್ನು ಇದೇ ಮೊದಲ ಬಾರಿಗೆ ಪ್ರಯತ್ನಿಸಲಾಗಿದೆ. ಮುಂದಿನ ಒಂದೆರಡು ವರ್ಷಗಳಲ್ಲಿ ಇದು ಇದು ಸಾಮಾನ್ಯ ಲಕ್ಷಣವಾಗಲಿದೆ.

ಈ ಅಂಕಿ ಅಂಶಗಳನ್ನು ಗಮನಿಸಿದರೆ 2014–15ರ ಸಾಲಿನ ರೂ. 65,798 ಕೋಟಿ ವೆಚ್ಚದ ಯೋಜನಾ ಗಾತ್ರ 2017–18ರ ಬಜೆಟ್ ಅವಧಿಯಲ್ಲಿ ದುಪ್ಪಟ್ಟಾಗಿದೆ. ಅಂದರೆ ರೂ. 1,31,000 ಕೋಟಿ ರೂ. ಗೆ ಹೆಚ್ಚಿದೆ. ಇದನ್ನು ಗಮನಿಸಿದರೆ ದೇಶದ ಜೀವಾಳವಾದ ಭಾರತೀಯ ರೈಲ್ವೆ ಇಲಾಖೆ ಮೇಲೆ ಹೆಚ್ಚು ಬಂಡವಾಳ ಹೂಡುವಲ್ಲಿ ಸದ್ಯದ ಸರ್ಕಾರ ಹೆಚ್ಚು ದೃಢವಾದ ಬದ್ಧತೆಯನ್ನು ಪ್ರದರ್ಶಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ರೈಲ್ವೆ ಬಜೆಟ್ ವಿಲೀನದಿಂದಾಗಿ ಭಾರತೀಯ ರೈಲ್ವೆ ಇಲಾಖೆಗೆ ಹೆಚ್ಚುವರಿ ರೂ. 10,000 ಕೋಟಿ ರೂಪಾಯಿ ಅನುದಾನ ಸಿಕ್ಕಿದೆ. ಇದರಿಂದ ಬರಲಿರುವ ಆದಾಯದ ಪರಿಣಾಮವನ್ನು ಮುಂದಿನ ವರ್ಷಗಳಲ್ಲಿ ಕಾಣಬಹುದಾಗಿದೆ. ರೈಲ್ವೆ ಅಭಿವೃದ್ಧಿಗಾಗಿ ಸಿದ್ಧಪಡಿಸಿರುವ ಕೆಲಸಗಳ ಪಟ್ಟಿಯನ್ನು ಗಮನಿಸಿದರೆ ಇವೆಲ್ಲವೂ ಆಕರ್ಷಕವಾಗಿಯೂ ಮತ್ತು ಎಲ್ಲ ಕ್ಷೇತ್ರಗಳನ್ನು ಒಳಗೊಂಡಿರುವುದು ಕಾಣುತ್ತದೆ. ಈ ಬಾರಿಯ ಬಜೆಟ್‌ನಲ್ಲಿ ರೈಲ್ವೆ ಮಾರ್ಗಗಳ ನಿರ್ಮಾಣ ಯೋಜನೆಗೂ ಹೆಚ್ಚು ಒತ್ತು ನೀಡಲಾಗಿದೆ. 2016–17ರಲ್ಲಿ 2800 ಕಿ.ಮೀ. ಮಾರ್ಗ ನಿರ್ಮಾಣಕ್ಕೆ ಆದ್ಯತೆ ನೀಡಿದ್ದರೆ, ಈ ಸಲದ ಆಯವ್ಯಯದಲ್ಲಿ 3500 ಕಿ.ಮೀ. ಮಾರ್ಗ ನಿರ್ಮಿಸುವ ಗುರಿ ಹೊಂದಲಾಗಿದೆ. ಮಾರ್ಗ ವಿದ್ಯುದೀಕರಣಕ್ಕೆ ಗಮನಾರ್ಹ ಒತ್ತು ನೀಡಲಾಗಿದೆ. 2017 ರಲ್ಲಿ 2000 ಕಿ.ಮೀ ಮಾರ್ಗ ವಿದ್ಯುದೀಕರಣ ಮಾಡಲು ಅನುದಾನ ನೀಡುತ್ತಿದ್ದರೆ, ಬಜೆಟ್‌ನಲ್ಲಿ ದುಪ್ಪಟ್ಟು ಮಾಡಿ 4000 ಕಿ.ಮೀ. ಗುರಿ ನಿಗದಿಪಡಿಸಲಾಗಿದೆ. ಈ ತಂತ್ರದಿಂದಾಗಿ ಮುಂದಿನ ಮೂರು ವರ್ಷಗಳಲ್ಲಿ ಶೇ 10ರಷ್ಟು ಥ್ರೋಪುಟ್ (ಥ್ರೋಪುಟ್ ಅದರ ಅರ್ಥ, ಟನ್ ಕಿಲೋಮೀಟರ್ ಮತ್ತು ಪ್ಯಾಸೆಂಜರ್ ಕಿಲೋಮೀಟರ್ಸ್ ಇವೆರಡನ್ನೂ ಒಳಗೊಂಡಿದ್ದು ಎಂದು) ಹೆಚ್ಚಳವಾಗಲಿದೆ.

### ರೈಲ್ವೆ ನಿಲ್ದಾಣಗಳ ಮರು ಅಭಿವೃದ್ಧಿ

ಇದು ಇನ್ನೊಂದು ಸುಧಾರಣೆಯ ಕಾರ್ಯತಂತ್ರದ ಇನ್ನೊಂದು ಕ್ಷೇತ್ರ ಎಂಬುದನ್ನು ಸಾಬೀತುಪಡಿಸುತ್ತದೆ. ಈಗಾಗಲೇ ಭೋಪಾಳ ಸಮೀಪದ ಹಬೀಬಗಂಜ್ ಮತ್ತು ಗಾಂಧಿನಗರದಲ್ಲಿ ಇದು ಆರಂಭವಾಗಿದೆ. 2017–18ರ ಅವಧಿಯಲ್ಲಿ ಕನಿಷ್ಠ 25 ನಿಲ್ದಾಣಗಳು ಸಂಪೂರ್ಣ ಮರು ಅಭಿವೃದ್ಧಿ ಹೊಂದುವ ನಿರೀಕ್ಷೆ ಇದೆ.



ಸುಮಾರು 500 ನಿಲ್ದಾಣಗಳಲ್ಲಿ ಎಕ್ಸಲೇಟರ್ ಮತ್ತು ಲಿಫ್ಟ್‌ಗಳನ್ನು ಅಳವಡಿಸಿ ಅಂಗವಿಕಲರ ಸ್ನೇಹಿ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲು ಯೋಜನೆ ಸಿದ್ಧವಾಗಿದೆ. ಸುಮಾರು 7000 ನಿಲ್ದಾಣಗಳಲ್ಲಿ ಸೌರಶಕ್ತಿ ವಿದ್ಯುತ್ ಸೌಲಭ್ಯ ಒದಗಿಸುವ ಪ್ರಸ್ತಾವ ಇದೆ. ಆರಂಭಿಕವಾಗಿ ಸುಮಾರು 300 ನಿಲ್ದಾಣಗಳಲ್ಲಿ ಕಾರ್ಯಾರಂಭ ಮಾಡಲಾಗಿದೆ. 2000 ನಿಲ್ದಾಣಗಳಿಂದ ಸುಮಾರು 1000 ಮೆ.ವಾ. ಸೌರ ವಿದ್ಯುತ್ ಉತ್ಪಾದನೆಯ ಯೋಜಿತ ಕೆಲಸವೂ ನಡೆಯುತ್ತಿದೆ. ಪ್ರವಾಸೋದ್ಯಮ ಮತ್ತು ಯಾತ್ರಾಸ್ಥಳಗಳಿಗಾಗಿ ಪ್ರತ್ಯೇಕ ರೈಲು ಸಂಚಾರದ ಯೋಜನೆಗೂ ಚಾಲನೆ ಸಿಗಲಿದೆ. ಈ ಎಲ್ಲ ಯೋಜನೆಗಳ ಅನುಷ್ಠಾನಕ್ಕೆ ಪ್ರಾಥಮಿಕ ಹಂತದ ಕೆಲಸಗಳು ನಿರಾತಂಕವಾಗಿ ಸದ್ದಿಲ್ಲದೆ ಶುರುವಾಗಿವೆ. ರಾಜ್ಯ ಸರ್ಕಾರಗಳ ಜಂಟಿ ಸಹಭಾಗಿತ್ವದಲ್ಲಿ ಹೊಸ ಯೋಜನೆಗಳ ಅನುಷ್ಠಾನ ಕಾರ್ಯಕ್ಕೂ ಒಪ್ಪಂದ ನಡೆಯುತ್ತಿದೆ. ಬಂಡವಾಳ ಹೂಡಿಕೆಯ ಜೊತೆಗೆ ರಾಜ್ಯ ಸರ್ಕಾರಗಳ ಸಹಕಾರ ಮತ್ತು ಯೋಜನೆ ಶೀಘ್ರಗತಿಯ ಅನುಷ್ಠಾನಕ್ಕೆ ಪೂರಕವಾಗಿ ಕೆಲಸವಾಗಲಿದೆ. ರೈಲ್ವೆ ಇಲಾಖೆಯು 9 ರಾಜ್ಯ ಸರ್ಕಾರಗಳ ಜೊತೆ ಜಂಟಿ ಕಾರ್ಯಾಚರಣೆಗೆ ಯೋಜನೆ ಸಿದ್ಧಪಡಿಸಿದೆ. ನಿರ್ಮಾಣ ಮತ್ತು ಅಭಿವೃದ್ಧಿಗಾಗಿ 70 ಯೋಜನೆಗಳನ್ನು ಗುರುತಿಸಲಾಗಿದೆ.

### ಸ್ವಚ್ಛತೆ

ಸ್ವಚ್ಛ ಭಾರತ ಅಭಿಯಾನದ ಅಡಿ ಭಾರತೀಯ ರೈಲ್ವೆ ಇಲಾಖೆಯು ಸ್ವಚ್ಛತೆಗೆ ಅತಿ ಹೆಚ್ಚು ಮಹತ್ವ ನೀಡುತ್ತಿದೆ. ಸ್ವಚ್ಛ ರೈಲು ಎಂಬುದು ಭಾರತೀಯ ರೈಲ್ವೆಯ ಅನ್ವರ್ಥ ಪದವಾಗಿ ಪರಿವರ್ತನೆ ಮಾಡಲು ಮುಂದಾಗಿದೆ. ಸ್ವಚ್ಛತೆಯನ್ನು ರೈಲು ನಿಲ್ದಾಣ ಮತ್ತು ಪ್ರಯಾಣ ಮಾಡುವಾಗ ರೈಲಿನಲ್ಲಿ ಕಾಣುತ್ತಿದ್ದೇವೆ. 'ನನ್ನ ಬೋಗಿ ಸ್ವಚ್ಛಗೊಳಿಸಿ' ಎಂಬ ಎಸ್‌ಎಂಎಸ್ ಸೇವೆಯು ಹೆಚ್ಚು ಜನಮನ್ನಣೆ ಪಡೆದಿದೆ. ಎಲ್ಲ ಬೋಗಿಗಳ ಅಗತ್ಯಗಳನ್ನು ಒಂದೇ ಕಿಂಡಿಯಲ್ಲಿ ಪಡೆಯಬಹುದಾದ ಕೋಚ್ ಮಿತ್ರ ಸೌಲಭ್ಯವನ್ನು ಜಾರಿಗೊಳಿಸಲು ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾವ ಮಾಡಲಾಗಿದೆ. ತೆರೆದ ಶೌಚಗಳು ರೈಲುಗಳಲ್ಲಿ ಸಾಮಾನ್ಯವಾಗಿವೆ. ಬಹುತೇಕ ರೈಲ್ವೆ ನಿಲ್ದಾಣಗಳಲ್ಲಿ ಶೌಚ ತುಂಬಿದ ಮಾರ್ಗಗಳನ್ನು ನೋಡುವುದು ಅತ್ಯಂತ ಹೇಸಿಗೆ ಹುಟ್ಟಿಸುತ್ತಿದೆ. ಅಲ್ಲದೆ ಅದು ಅನಾರೋಗ್ಯಕರವೂ ಆಗಿದೆ. ಇದರ ಜೊತೆಗೆ ಅದರಿಂದಾಗಿ ರೈಲುಗಳ ನಿರ್ವಹಣೆಗೂ ತೊಂದರೆ ಆಗುತ್ತಿದೆ. ಹೀಗಾಗಿ 2019ರ ಒಳಗಾಗಿ ದೇಶದ ಎಲ್ಲ ರೈಲುಗಳ ಬೋಗಿಗಳಿಗೆ ಜೈವಿಕ ಶೌಚಗಳನ್ನು ನಿರ್ಮಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ಪ್ರಯೋಗಗಳು ಪೂರ್ಣಗೊಂಡರೆ ರೈಲ್ವೆ ಇಲಾಖೆಯ ದಿಕ್ಸೂಚಿಯೇ ಬದಲಾಗುತ್ತದೆ. ಈ ಪ್ರಯತ್ನಗಳ ಮುಂದುವರಿದ ಭಾಗವಾಗಿ ನವದೆಹಲಿ ಮತ್ತು ಜೈಪುರ ರೈಲ್ವೆ ನಿಲ್ದಾಣಗಳಲ್ಲಿ ಶೌಚದ ತ್ಯಾಜ್ಯ ಮತ್ತು ಜೈವಿಕ ತ್ಯಾಜ್ಯದ ಪರಿಸರಸ್ನೇಹಿ ನಿರ್ವಹಣಾ ಘಟಕಗಳು ಪ್ರಾಯೋಗಿಕವಾಗಿ ಕೆಲಸ ಮಾಡಲಿವೆ. ಸ್ವಚ್ಛ ನಿಲ್ದಾಣಗಳು ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುತ್ತದೆ ಅಭಿವೃದ್ಧಿಗೆ ಪೂರಕವಾಗಲಿವೆ.

### ಹಣಕಾಸು ಮತ್ತು ಲೆಕ್ಕಪತ್ರ ಸುಧಾರಣೆ

ರೈಲ್ವೆ ಇಲಾಖೆಯಲ್ಲಿ 2019ರ ವೇಳೆಗೆ ನಗದು ಆಧರಿತ ವಹಿವಾಟು ಸಂಪೂರ್ಣ ಕೊನೆಗೊಳ್ಳಲಿದೆ. ನಗದು ವಹಿವಾಟು ನಡೆದರೆ ಆದಾಯ, ವೆಚ್ಚದ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಆದರೆ ಸಂಚಯ ವಹಿವಾಟಿನಿಂದ ಎಲ್ಲ ಆದಾಯ ಮತ್ತು ಖರ್ಚುಗಳನ್ನು ಏಕಕಾಲಕ್ಕೆ ನೋಡಬಹುದು. ಪ್ರತಿಯೊಂದು ವಹಿವಾಟು ಸಹ ದಾಖಲೆಯಾಗುತ್ತದೆ. ಎಲ್ಲವೂ ಆ ಕ್ಷಣಕ್ಕೆ ಲಭ್ಯವಾಗಲಿವೆ. ಇದು ಸ್ಪಷ್ಟ, ನಿಖರ ಮತ್ತು ಪಾರದರ್ಶಕ ಮಾಹಿತಿಯನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಆದಾಯ, ಖರ್ಚಿನ ಮಾಹಿತಿಯನ್ನೂ ಪಡೆಯಬಹುದಾಗಿದೆ. ಈ ಲೆಕ್ಕಾಚಾರದ ಸುಧಾರಣೆಯು ರೈಲ್ವೆ ಇಲಾಖೆಯ ಲೆಕ್ಕಾಚಾರಗಳನ್ನಷ್ಟೇ ಅಲ್ಲ, ಪ್ರತಿಯೊಂದು ಸೇವೆಯನ್ನೂ ಒದಗಿಸಲಿವೆ. ಈ ಬಾರಿ ಬಜೆಟ್‌ನಲ್ಲಿ ರೈಲ್ವೆ ಪ್ರಯಾಣ ದರವನ್ನು ಹೆಚ್ಚಿಸಿಲ್ಲ. ಬದಲಾಗಿ ಪ್ರಯಾಣಿಕರಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆಯನ್ನು

| ಪಟ್ಟಿ 2 – ಆದಾಯ ಮತ್ತು ವೆಚ್ಚದ ಪಕ್ಷಿನೋಟ | | | | | |
|---|---|---|---|---|---|
| ಕ್ರಮ ಸಂಖ್ಯೆ | ವಿಷಯ | ವಾಸ್ತವ 2015–16 | ಬಜೆಟ್ 2016–17 | ಪರಿಷ್ಕೃತ 2016–17 | ಬಜೆಟ್ 2017–18 |
| | **ಆದಾಯಗಳು** | | | | |
| 1. | ಒಟ್ಟು ಸಂಚಾರ ಆದಾಯ (1ಎ – 1ಇ) | 1,64,334 | 184,820 | 172,155 | 188,998 |
| | ಎ) ಪ್ರಯಾಣಿಕರಿಂದ ಆದಾಯ | 44,283 | 51,012 | 48,000 | 50,125 |
| | ಬಿ) ಸರಕು ಸಾಗಣೆಯ ಆದಾಯ | 109,208 | 117,933 | 108,999 | 118,157 |
| | ಸಿ) ಇತರ ತರಬೇತಿ ಆದಾಯ | 4,371 | 6,185 | 5,000 | 6,494 |
| | ಡಿ) ಇತರ ಮೂಲಗಳ ಆದಾಯ | 5,929 | 9,590 | 10,100 | 14,123 |
| | ಇ) ಸಂಚಾರ ಗೌಪ್ಯತೆ | 543 | 100 | 155 | 100 |
| 2. | ಇತರೆ ಆದಾಯ | 4,046 | 4,451 | 150 | 500 |
| 3. | ಒಟ್ಟು ಆದಾಯ ಸ್ವೀಕಾರ (1+2) | 1,68,380 | 1,89,271 | 1,72,305 | 1,89,498 |
| 4. | ಸಾಮಾನ್ಯ ಆದಾಯದ ಬಂಡವಾಳ ನೆರವು | 37,608 | 45,000 | 46,355 | 55,000 |
| 5. | ರೈಲ್ವೆ ಆದಾಯ+ ಬಜೆಟ್ ನೆರವು | 2,05,988 | 2,34,271 | 2,18,660 | 2,44,498 |
| 6. | ಹೆಚ್ಚುವರಿ ಬಜೆಟ್ ಆದಾಯ (ಇಬಿಆರ್) | 39,066 | 59,325 | 59,930 | 62,000 |
| 7. | ಇಬಿಆರ್ ಸೇರಿ ಒಟ್ಟು ಅದಾಯ | 2,45,054 | 2,93,596 | 2,78,590 | 3,06,498 |
| | **ವೆಚ್ಚಗಳು** | | | | |
| 8. | ಕಾಮಗಾರಿಗಳ ಒಟ್ಟು ವೆಚ್ಚ (8ಎ–8ಸಿ) | 1,47,836 | 1,69,260 | 1,62,960 | 1,78,350 |
| | ಎ) ಸಾಮಾನ್ಯ ಕಾಮಗಾರಿ ವೆಚ್ಚ | 1,07,736 | 1,23,560 | 1,22,760 | 1,29,750 |
| | ಬಿ) ಪಿಂಚಣಿ ನಿಧಿ ವಿತರಣೆ ಅಂದಾಜು | 34,500 | 42,500 | 85,000 | 43,600 |
| | ಸಿ) ಠೇವಣಿ ಹಣದ ಕೊರತೆ ಅಂದಾಜು | 5,600 | 3,200 | 5,200 | 5,000 |
| 9. | ಇತರೆ ವೆಚ್ಚಗಳು | 1,315 | 1,800 | 1,650 | 2,200 |
| 10. | ರೈಲ್ವೆ ಅದಾಯದ ಒಟ್ಟು ವೆಚ್ಚ (8+9) | 1,49,151 | 1,71,060 | 1,64,610 | 1,80,550 |
| 11. | ಇಬಿಆರ್ ಮತ್ತು ಬಜೆಟ್ ನೆರವಿನ ಖಚು (4+6) | 76,671 | 1,04,325 | 1,06,285 | 1,17,000 |
| 12. | ಇಬಿಆರ್ ಸೇರಿ ಒಟ್ಟು ವೆಚ್ಚ (10+11) | 2,25,826 | 2,75,385 | 2,70,895 | 2,97,550 |
| 13. | ಒಟ್ಟು ಆದಾಯ (3ರಿಂದ 10) | 19,228 | 18,211 | 7,695 | 8,948 |
| 14. | ಡಿವಿಡೆಂಡ್ ವಿತರಣೆ | 8,723 | 9,731 | –– | –– |
| 15. | ಹೆಚ್ಚುವರಿ/ ಕೊರತೆ (13–14) | 10,506 | 8,479 | 7,695 | 8,948 |
| 16. | ಅಭಿವೃದ್ಧಿ ನಿಧಿ ವಿತರಣೆ | 1,220 | 2,515 | 2,515 | 2,000 |
| 17. | ಮೂಲ ಬಂಡವಾಳದ ವಿತರಣೆ | 5,798 | 5,750 | 5,180 | 5,948 |
| 18. | ಖರ್ಚಿನ ಸೇವೆಗಳ ನಿಧಿ ವಿತರಣೆ | 3,488 | 214 | –– | –– |
| 19. | ಆರ್‌ಆರ್‌ಎಸ್‌ಕೆ ವಿತರಣೆ | –– | –– | –– | 1,000 |
| 20. | ನಿರ್ವಹಣಾ ಅನುಪಾತ | 90.5% | 92,0% | 94.9% | 94.6% |
| | ಮೇಲಿನ ದತ್ತಾಂಶಗಳನ್ನು ಮುಂದಿನ ಅಂಕಿಗೆ ಹೊಂದಾಣಿಕೆ ಮಾಡಲಾಗಿದೆ | | | | |

ಪ್ರೋತ್ಸಾಹಿಸುವ ಉದ್ದೇಶದಿಂದ ಐಆರ್‌ಸಿಟಿಸಿಯಲ್ಲಿ ಕಾಯ್ದಿರಿಸುವ ಇ–ಟಿಕೆಟ್ ಮೇಲಿನ ಸೇವಾ ಶುಲ್ಕವನ್ನೂ ಹಿಂಪಡೆಯಲಾಗಿದೆ. ಇದು ಸ್ವಾಗತಾರ್ಹ ನಡೆ. ರೈಲ್ವೆ ಇಲಾಖೆಯ ಸಾರ್ವಜನಿಕ ವಲಯದ ಉದ್ಯಮಗಳಾದ ಐಆರ್‌ಎಫ್‌ಸಿ, ಐಆರ್‌ಸಿಓಎನ್ ಮತ್ತು ಮೂರು ಐಆರ್‌ಸಿಟಿಸಿಗಳನ್ನು ಷೇರು ಮಾರುಕಟ್ಟೆಗೆ ಸೇರಿಸುವ ಪ್ರಸ್ತಾವವೂ ಇದೆ.

### ಆದಾಯ ಮತ್ತು ಖರ್ಚು

ಇದುವರೆಗೆ ರೈಲ್ವೆ ಬಜೆಟ್‌ನ ವಿವಿಧ ವಲಯಗಳ ಕುರಿತು ಚರ್ಚಿಸಲಾಗಿದೆ. ಈಗ 2017–18ನೇ ಸಾಲಿನ ಆದಾಯ ಮತ್ತು ವೆಚ್ಚದ ವಿವರಗಳನ್ನು ಗಮನಿಸೋಣ. (ಪಟ್ಟಿ – 2)

ಈ ಬಾರಿಯ 2017–18ರ ಬಜೆಟ್‌ನಲ್ಲಿ ರೈಲು ಸಂಚಾರದಿಂದ ಒಟ್ಟು ರೂ 1,88,988 ಕೋಟಿ ಒಟ್ಟು ಆದಾಯವನ್ನು ನಿರೀಕ್ಷಿಸಲಾಗಿದೆ. ಇದು 2016–17ರ ಪರಿಷ್ಕೃತ ಆದಾಯ ರೂ. 1,72,155 ಕೋಟಿಗಿಂತ ಒಟ್ಟು ರೂ 16,843 ಕೋಟಿ ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ಅಲ್ಲದೆ ಇದು 2016–17ರ ಬಜೆಟ್ ಅನುದಾನಕ್ಕೆ ಹೋಲಿಸಿದರೆ ರೂ. 4,178 ಕೋಟಿ ಹೆಚ್ಚಾಗಿದೆ. ಕಳೆದ ವರ್ಷದ ಪರಿಷ್ಕೃತ ಆದಾಯಕ್ಕೆ ಹೋಲಿಸಿದರೆ ಪ್ರಯಾಣಿಕ ವಿಭಾಗದಿಂದ ಈ ಬಾರಿ ರೂ 2,125 ಕೋಟಿ ಹೆಚ್ಚಾಗಿದೆ.

ಆದರೆ 2016–17ರ ಬಜೆಟ್ ಅನುದಾನಕ್ಕಿಂತ ಸುಮಾರು ರೂ. 887 ಕೋಟಿ ಕಡಿಮೆಯಾಗಿದೆ. ಅದೇ ರೀತಿ ಸರಕು ಸಾಗಣೆಯಿಂದ ಈ 2017–18ರ ಬಜೆಟ್‌ನಲ್ಲಿ ಇದು2016–17ರ ಪರಿಷ್ಕೃತ ಅನುದಾನಕ್ಕಿಂತ ರೂ. 9,256 ಕೋಟಿಗಿಂತ ಹೆಚ್ಚು ಆದಾಯವನ್ನು ನಿರೀಕ್ಷಿಸಲಾಗಿದೆ. ಇದು 2016–17ರ ಬಜೆಟ್‌ಗಿಂತ ರೂ 224 ಕೋಟಿ ಅಧಿಕವಾಗಿದೆ.

ವಿವಿಧ ಮೂಲಗಳಿಂದ ಈ ಬಾರಿ ರೂ 14,122 ಕೋಟಿ ಆದಾಯ ನಿರೀಕ್ಷಿಸಲಾಗಿದ್ದು, ಇದು 2016–17ರ ಪರಿಷ್ಕೃತ ಬಜೆಟ್‌ಗಿಂತ ರೂ 4,032 ಕೋಟಿ ಹೆಚ್ಚಾಗಿದೆ. ಈ ಎಲ್ಲ ಅಂಕಿ ಅಂಶಗಳನ್ನು ವಾಸ್ತವದ ನೆಲೆಯಲ್ಲಿ ಸಿದ್ಧಪಡಿಸಲಾಗಿದೆ. ಒಟ್ಟಾರೆ ಬಂಡವಾಳ ಮತ್ತು ಆದಾಯ ಸೇರಿ ಒಟ್ಟು ಈ ಬಾರಿ ರೂ. 306,498 ಕೋಟಿ ಆದಾಯವನ್ನು ನಿರೀಕ್ಷಿಸಿದ್ದು, ಕಳೆದ ವರ್ಷದ ಪರಿಷ್ಕೃತ ಬಜೆಟ್‌ಗಿಂತ ರೂ 27,908 ಕೋಟಿ ಹೆಚ್ಚಾಗಿದ್ದರೆ, 2016–17ರ ಬಜೆಟ್‌ನಲ್ಲಿ ಉಲ್ಲೇಖಿತ ರೂ. 12,903 ಕೋಟಿ ಹೆಚ್ಚುವರಿ ಆದಾಯವನ್ನು ನಿರೀಕ್ಷೆಯಾಗಿದೆ.

2016–17ರ ಸಾಲಿನ ಬಜೆಟ್‌ಗೆ ಹೋಲಿಸಿದರೆ 2017–18ರ ಸಾಲಿನ ಬಜೆಟ್‌ನ 178,350 ಕೋಟಿ ವೆಚ್ಚ



ಮಾಡಲಾಗುತ್ತಿದ್ದು, ಇದು ಸುಮಾರು ರೂ 15,390 ಕೋಟಿ ಹೆಚ್ಚುವರಿಯಾಗಿದೆ. ಸಾಮಾನ್ಯ ಕಾಮಗಾರಿಗಳ ವೆಚ್ಚ (ಒಡಬ್ಲ್ಯುಇ) ದಲ್ಲಿ ರೈಲ್ವೆ ಇಲಾಖೆ ಗಮನಾರ್ಹವಾದ ನಿಯಂತ್ರಣ ಹೊಂದಿದೆ. 2016–17ಕ್ಕೆ ಬಜೆಟ್‌ಗೆ ಹೋಲಿಸಿದರೆ 2016–17ರ ಪರಿಷ್ಕೃತ ಬಜೆಟ್‌ನ ರೂ. 122,760 ಕೋಟಿ ಅನುದಾನಕ್ಕಿಂತ ಸುಮಾರು ರೂ. 800 ಕೋಟಿ ಕಡಿಮೆಯಾಗಿದೆ. ಈ ಬಾರಿಯ ಬಜೆಟ್‌ನಲ್ಲಿ ಸಾಮಾನ್ಯ ಕಾಮಗಾರಿಗಳ ವೆಚ್ಚಕ್ಕಾಗಿ ರೂ. 129,750 ಕೋಟಿ ನಿಗದಿಪಡಿಸಲಾಗಿದೆ.

2017–18ರ ಸಾಲಿನಲ್ಲಿ ನಿವ್ವಳ ರೂ. 8,948 ಕೋಟಿ ಆದಾಯದ ಗುರಿಯಿದ್ದು, ಇದು ಕಳೆದ ವರ್ಷದ ಪರಿಷ್ಕೃತ ಬಜೆಟ್‌ಗಿಂತ ಸುಮಾರು ರೂ. 1,253 ಕೋಟಿ ಹೆಚ್ಚಾಗಿದೆ. ಅದಾಗ್ಯೂ, 2015–16ನೇ ಸಾಲಿನ ನಿಖರ ವೆಚ್ಚಕ್ಕಿಂತ ಸ್ವಲ್ಪ ಕಡಿಮೆ ಆಗ ಒಟ್ಟು ರೂ 19,228 ಕೋಟಿ ರೂಪಾಯಿ ಆದಾಯ ಬಂದಿತ್ತು. ಈ ವರ್ಷದ ನಿರ್ವಹಣೆ (ಶೇ 94.6)ಯು 2016–17ರ ಪರಿಷ್ಕೃತ ಬಜೆಟ್‌ಗೆ ಹೋಲಿಸಿದರೆ ಸ್ವಲ್ಪ (ಶೇ 94.9) ಎನ್ನಬಹುದು. 2016ರ ಡಿಸೆಂಬರ್‌ನಲ್ಲಿ ನಿರ್ವಹಣೆ ಪ್ರಮಾಣ ಶೇ 109.6ರಷ್ಟಿತ್ತು. ಇಂಥ ನಿರ್ವಹಣೆ ನಿಜವಾಗಿಯೂ ಸವಾಲಿನ ಪ್ರಶ್ನೆಯಾಗಿದೆ. ಈ ಸಲದ ಬಜೆಟ್ ಇಂಥ ಸ್ಥಿತಿಯನ್ನು ಗಮನಿಸಿದೆ. ಅದಕ್ಕಾಗಿ ನಿರ್ವಹಣಾ ವೆಚ್ಚ, ಗುಣಮಟ್ಟದ ಸೇವೆ, ಸಾಮಾಜಿಕ ಜವಾಬ್ದಾರಿ ಮತ್ತು ಇತರ ಸಾರಿಗೆಗಳ ಸ್ಪರ್ಧೆಯನ್ನು ಗಮನದಲ್ಲಿ ಇಟ್ಟುಕೊಂಡು ರೈಲ್ವೆಯ ವೆಚ್ಚದ ಚೌಕಟ್ಟನ್ನು ನಿಗದಿಪಡಿಸಿದೆ.


**ಪಟ್ಟಿ 3 – ಆಯ್ದ ಕೆಲವು ಮಹತ್ವದ ರೈಲ್ವೆ ಅಭಿವೃದ್ಧಿ ಕಾಮಗಾರಿಗಳಿಗೆ ಬಂಡವಾಳ ವೆಚ್ಚದ ವಿವರ**

(ಕೋಟಿ ರೂಪಾಯಿಗಳಲ್ಲಿ)

| ವಿಷಯ | ವಾಸ್ತವ 2015–16 | ಬಜೆಟ್ 2016–17 | ಪರಿಷ್ಕೃತ 2016–17 | ಬಜೆಟ್ 2017–18 |
|---|---|---|---|---|
| ಬಂಡವಾಳ ವೆಚ್ಚ (ಬಜೆಟ್ ಮೂಲ) | | | | |
| ಹೊಸ ಮಾರ್ಗ ನಿರ್ಮಾಣ | 13,248 | 11,963 | 13,660 | 11,533 |
| ಗೇಜ್ ಪರಿವರ್ತನೆ | 3,407 | 3,276 | 3,721 | 3,091 |
| ಹೆಚ್ಚುವರಿ ಮಾರ್ಗಗಳು | 2,950 | 4,782 | 1,423 | 2,543 |
| ಸಂಚಾರ ಸೌಲಭ್ಯ, ನಿಲ್ದಾಣ ಅಭಿವೃದ್ಧಿ | 984 | 1,126 | 1,036 | 1,851 |
| ರೋಲಿಂಗ್ ಸ್ಟಾಕ್ | 4,240 | 5,448 | 6,150 | 2,006 |
| ಗುತ್ತಿಗೆ ಆಸ್ತಿ, ಬಂಡವಾಳ ಪಾವತಿ | 6,325 | 7,000 | 7,000 | 8,000 |
| ಮಾರ್ಗ ಸುರಕ್ಷತಾ ಕಾಮಗಾರಿಗಳು | | | | |
| ಎ) ಲೆವೆಲ್ ಕ್ರಾಸಿಂಗ್ | 470 | 555 | 679 | 705 |
| ಬಿ) ರೈಲ್ವೆ ಮೇಲ್ಸೆತುವೆ/ಕೆಳಸೇತುವೆ | 2,133 | 2,443 | 3,066 | 4,512 |
| ಮಾರ್ಗ ಸುಧಾರಣೆ | 5,586 | 4,000 | 6740 | 9,961 |
| ಸೇತುವೆ ಕಾಮಗಾರಿಗಳು | 520 | 589 | 592 | 746 |
| ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸ | 894 | 958 | 954 | 2,331 |

ಮೇಲಿನ ದತ್ತಾಂಶಗಳನ್ನು ಮುಂದಿನ ಅಂಕಿಗೆ ಹೊಂದಾಣಿಕೆ ಮಾಡಲಾಗಿದೆ

ಈ ಬಾರಿಯ ಬಜೆಟ್‌ನಲ್ಲಿ ಹೊಸ ಮಾರ್ಗಗಳ ನಿರ್ಮಾಣಕ್ಕೆ ನೀಡಿರುವ ರೂ. 11,533 ಕೋಟಿ ಅನುದಾನವು ಸ್ವಲ್ಪ ಕಡಿಮೆ ಎನಿಸುತ್ತದೆ. ಅಲ್ಲದೆ ಗೇಜ್ ಪರಿವರ್ತನೆಯ ಬಹುತೇಕ ಕೆಲಸಗಳು ಪೂರ್ಣಗೊಂಡಿದ್ದರಿಂದ ಈ ಬಾರಿ ಗೇಜ್ ಪರಿವರ್ತನೆಗೆ ರೂ. 3,091 ಕೋಟಿ ನೀಡಲಾಗಿದೆ. ಅನುದಾನವನ್ನು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಡಿಮೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಸಂಚಾರ ಸೌಲಭ್ಯ, ದ್ವಿಮುಖ ಮಾರ್ಗ ನಿರ್ಮಾಣ, ಹೆಚ್ಚುವರಿ ಸಂಚಾರ ಸೌಲಭ್ಯಗಳು ಈ ಬಾರಿ ಹೆಚ್ಚಿನ ಆದ್ಯತೆ ಪಡೆದಿವೆ. ದ್ವಿಮುಖ ಮಾರ್ಗ ನಿರ್ಮಾಣಕ್ಕೆ ಈ ಬಾರಿ ರೂ. 2,543 ಕೋಟಿ ನೀಡಿದ್ದು, ಇದು 2016–17ನೇ ಸಾಲಿನಲ್ಲಿ ನೀಡಿದ ಪರಿಷ್ಕೃತ ಅಂದಾಜಿನ ರೂ. 1,423 ಕೋಟಿಗಿಂತ ಹೆಚ್ಚಾಗಿದೆ. ಅದರಂತೆ, ಸಂಚಾರ ಸೌಲಭ್ಯಗಳಿಗೆ ಹೋದ ವರ್ಷದ ಪರಿಷ್ಕೃತ ಅಂದಾಜಿನಲ್ಲಿ ನೀಡಿದ ರೂ. 1,036 ಕೋಟಿಗಿಂತ ಈ ಬಾರಿಯ ಬಜೆಟ್‌ನಲ್ಲಿ ರೂ. 1,851 ಕೋಟಿ ಅನುದಾನ ನೀಡಲಾಗಿದೆ. ಅದರಲ್ಲೂ ಮುಖ್ಯವಾಗಿ ಮಾರ್ಗ ಸುರಕ್ಷತೆ, ರೈಲ್ವೆ ಮೇಲ್ಸೇತುವೆ ಮತ್ತು ಕೆಳ ಸೇತುವೆ ನಿರ್ಮಾಣಕ್ಕೆ ಆದ್ಯತೆ



ನೀಡಿದೆ. ಈ ಸಲ ಒಟ್ಟು ರೂ. 4,512 ಕೋಟಿ ಅನುದಾನ ನಿಗದಿಪಡಿಸಿದೆ. ಇದು ಹಿಂದಿನ ಬಜೆಟ್ ರೂ. 3,066 ಕೋಟಿಗೆ ಹೋಲಿಸಿದರೆ ಅನುದಾನದಲ್ಲಿ ಗಮನಾರ್ಹವಾದ ಹೆಚ್ಚಳವಾಗಿದೆ. ಈ ಬಾರಿ ಮಾರ್ಗ ಅಭಿವೃದ್ಧಿಗೆ ಹೆಚ್ಚಿನ ಮನ್ನಣೆ ನೀಡಲಾಗಿದೆ. 2016–17ರ ಬಜೆಟ್‌ನಲ್ಲಿ ರೂ. 4,000 ಕೋಟಿ ಅನುದಾನ ನೀಡಿದ್ದರೆ, ಪರಿಷ್ಕೃತ ಅಂದಾಜಿನಲ್ಲಿ ರೂ. 6,740 ಕೋಟಿ ನೀಡಿದ್ದು, 2017–18ರ ಬಜೆಟ್‌ನಲ್ಲಿ ರೂ. 9,961 ಕೋಟಿ ಮೀಸಲಿಡಲಾಗಿದೆ. ಇದು ಹಳೆಯ ಮಾರ್ಗಗಳನ್ನು ಬದಲಾಯಿಸಲು ಪ್ರಾಮಾಣಿಕ ಪ್ರಯತ್ನ ನಡೆಯಲಿದೆ ಎಂಬುದರ ಸಂಕೇತವಾಗಿದೆ. ಅದರಂತೆ ಸೇತುವೆ ನಿರ್ಮಾಣಕ್ಕೆ ಈ ಬಾರಿಯ ಬಜೆಟ್‌ನಲ್ಲಿ ರೂ. 746 ಕೋಟಿ ನೀಡಲಾಗಿದೆ.

ಕಳೆದ ವರ್ಷದ ಪರಿಷ್ಕೃತ ಬಜೆಟ್‌ನಲ್ಲಿ ರೂ. 592 ಕೋಟಿ ಅನುದಾನವನ್ನು ನೀಡಲಾಗಿತ್ತು. ದೂರ ಸಂಪರ್ಕ ಮತ್ತು ಸಿಗ್ನಲ್ ವ್ಯವಸ್ಥೆಯ ಸುಧಾರಣೆಗೂ ಶೇ 145ರಷ್ಟು ಅನುದಾನ ಹೆಚ್ಚಿಸಲಾಗಿದೆ. ಹಿಂದಿನ ವರ್ಷ ರೂ. 954 ಕೋಟಿ ಅನುದಾನ ನೀಡಿದ್ದರೆ, ಈ ಬಾರಿ ರೂ. 2,331 ಕೋಟಿ ಅನುದಾನವನ್ನು ನೀಡಲಾಗಿದೆ.

ರಾಷ್ಟ್ರೀಯ ರೈಲ್ ಸುರಕ್ಷಾ ಕೋಶವಲ್ಲದೆ ಸುರಕ್ಷತೆಗಾಗಿ ಪಾರಂಪರಿಕ ಪದ್ಧತಿಗಳ ಮೂಲಕವೂ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಾರ್ಗ, ಎಂಜಿನ್‌ಗಳು, ಬೋಗಿಗಳು, ಸೇತುವೆಗಳು, ಸಿಗ್ನಲ್ ಸೇರಿದಂತೆ ವಿವಿಧ ವಿಭಾಗಗಳ ಅಭಿವೃದ್ಧಿ ಮೂಲಕ ಸುರಕ್ಷತಾ ವೆಚ್ಚಗಳನ್ನು ಭರಿಸಲು ಕ್ರಮ ಕೈಗೊಳ್ಳಲಾಗಿದೆ. ರಾಷ್ಟ್ರೀಯ ರೇಲ್ ಸುರಕ್ಷಾ ಕೋಶದ ಹೊರತಾಗಿ ಸುರಕ್ಷತೆಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳ ಕಾರ್ಯಾನುಷ್ಠಾನಕ್ಕಾಗಿ ಪ್ರಸ್ತುತ ಬಜೆಟ್‌ನಲ್ಲಿ ರೂ. 42,679 ಕೋಟಿ ಅನುದಾನ ಮೀಸಲಿಡಲಾಗಿದೆ. ಇದು ಕಳೆದ ವರ್ಷದ ಪರಿಷ್ಕೃತ ಬಜೆಟ್‌ಗಿಂತ ಸುಮಾರು ರೂ. 814 ಕೋಟಿ ಹೆಚ್ಚಾಗಿದೆ. (ಪಟ್ಟಿ–4)

### ಸಂಚಾರದ ಪಕ್ಷಿನೋಟ

ರೈಲ್ವೆ ಪದ್ಧತಿಯಲ್ಲಿ ಸಂಚಾರ ಸುಧಾರಣೆಯನ್ನು ಸಮಗ್ರ ಟನ್ ಕಿಲೋಮೀಟರ್ ಮತ್ತು ಪ್ರಯಾಣಿಕರ ಕಿಲೋಮೀಟರ್ (ಥ್ರೋಪುಟ್) ಲಕ್ಷಿಸಿ ಪರಿಗಣಿಸಲಾಗುತ್ತದೆ. (ಪಟ್ಟಿ–5) ಇವೆರಡರಲ್ಲೂ ಸಾಕಷ್ಟು ಏರಿಕೆ ಆಗಿರುವುದು ಕಂಡು ಬರುತ್ತಿದೆ. ಬಜೆಟ್‌ನಲ್ಲಿ ನಾಲ್ಕು ಪ್ರಮುಖ ಕ್ಷೇತ್ರಗಳಿಗೆ ಹಣಕಾಸಿನ ಸಂಪನ್ಮೂಲವು ಸಾಕಷ್ಟು ಬೆನ್ನೆಲುಬಾಗಿ ನಿಂತಿದೆ. ಹೊಸದಾಗಿ ಆರಂಭಿಸಿರುವ ರಾಷ್ಟ್ರೀಯ ರೇಲ್ ಸಂರಕ್ಷಣಾ ಕೋಶದಲ್ಲಿ ಅದಕ್ಕಾಗಿ ಸಾಕಷ್ಟು ಅವಕಾಶಗಳನ್ನು ಒದಗಿಸಲಾಗಿದೆ. ಅದಕ್ಕಿಂತ ಹೆಚ್ಚಾಗಿ, ಆದಾಯ ಮತ್ತು ಖರ್ಚಿನ ಗುರಿ, ವಿವಿಧ ಯೋಜನೆಗಳ ಅನುಷ್ಠಾನದ ಭೌತಿಕ ಪ್ರಗತಿಯನ್ನು ವಾಸ್ತವಿಕ ನೆಲೆಯಲ್ಲಿ ಗುರುತಿಸುವ ವ್ಯವಸ್ಥೆ ಮಾಡಲಾಗಿದೆ. ದೇಶದ ಬೆಳವಣಿಗೆಯ ಎಂಜಿನ್ ಎನಿಸಿರುವ ಭಾರತೀಯ ರೈಲ್ವೇಸ್ ಬಜೆಟ್‌ನ ಹೊಸ ಅವತಾರ ಪಡೆದು ಸೇವೆಗಳ ಅಭಿವೃದ್ಧಿಯಲ್ಲಿ ಬಹುದೊಡ್ಡ ಹೆಜ್ಜೆ ಇಟ್ಟಿದೆ. ❑

**ಪಟ್ಟಿ 4 – ಸುರಕ್ಷತೆಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳ ವೆಚ್ಚಗಳು**

(ಕೋಟಿ ರೂಪಾಯಿಗಳಲ್ಲಿ)

| ವಿಷಯ | ಬಜೆಟ್ 2016–17 | ಪರಿಷ್ಕೃತ 2016–17 | ಬಜೆಟ್ 2017–18 |
|---|---|---|---|
| **ಆದಾಯ ವೆಚ್ಚಗಳು** | | | |
| ಹಳಿ ನಿರ್ವಹಣೆ | 13,712 | 12,539 | 13,759 |
| ಲೋಕೊಮೋಟಿವ್‌ಗಳು | 6,318 | 6,108 | 6,204 |
| ಸರಕು ಮತ್ತು ಡಬ್ಬಿಗಳು | 14,312 | 14,351 | 14,734 |
| ಘಟಕ ಮತ್ತು ಸಾಮಗ್ರಿಗಳು | 8,112 | 7,832 | 7,947 |
| ಸಂಚಾರ | 35 | 35 | 35 |
| **ಒಟ್ಟು ಆದಾಯ (ಸುರಕ್ಷತೆ)** | **42,489** | **41,865** | **42,679** |

**ಪಟ್ಟಿ 5**

| ವಿಷಯ | 2015–16 | 2016–17 | | 2017–18 |
|---|---|---|---|---|
| | ನಿಖರ | ಬಜೆಟ್ | ಪರಿಷ್ಕೃತ | ಬಜೆಟ್ |
| ಪ್ರಯಾಣಿಕರ ಕಿ.ಮೀ. (ದಶಲಕ್ಷ) | 1,43,039 | 1,137,298 | 1,157,637 | 1,159,900 |
| ಸಮಗ್ರ ಟನ್ ಕಿ.ಮೀ (ದಶಲಕ್ಷ) | 654,481 | 694,607 | 621,247 | 675,622 |

# ಬಜೆಟ್ 2017-18 : ಮೂಲ ಸೌಕರ್ಯಕ್ಕೆ ಒತ್ತು

* ಕೃಷ್ಣ ದೇವ್



ಕೇಂದ್ರದ 2017-18ರ ಬಜೆಟ್‌ನ ಮುಖ್ಯ ಉದ್ದೇಶ 'ಬದಲಾಯಿಸು, ಶಕ್ತಿಯುತಗೊಳಿಸು ಮತ್ತು ಸ್ವಚ್ಛ ಭಾರತದ ಗುರಿಯನ್ನು ಸಾಧಿಸು.' ಇದಕ್ಕಾಗಿ ಹತ್ತು ಪ್ರಧಾನ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ರೈತರು, ಗ್ರಾಮೀಣ ಜನತೆ, ಯುವಕರು, ಯೋಜನೆಯಲ್ಲಿ ಸಮಸ್ಯೆಗಳು, ಸಂಪರ್ಕ, ಹಣಕಾಸು ರಂಗ, ಡಿಜಿಟಲ್ ಆರ್ಥಿಕತೆ, ಸಾರ್ವಜನಿಕ ಸೇವೆ, ತೆರಿಗೆ ನಿರ್ವಹಣೆಗಳಲ್ಲಿನ ಕಾರ್ಯ ಸಾಧನೆಗೆ ಮಹತ್ವ ನೀಡಲಾಗಿದೆ. ಈ ಗುರಿಯನ್ನು ಸಾಧಿಸಲು 2017-18ರ ಕೇಂದ್ರ ಬಜೆಟ್‌ನಲ್ಲಿ ನಿಗದಿಪಡಿಸಿರುವ ಮೊತ್ತ ರೂ. 21,46. 735 ಕೋಟಿ ರೂಪಾಯಿಗಳು.2017-18ರ ಬಜೆಟ್ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವ ಉದ್ದೇಶಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದೆ. ಈ ಕ್ಷೇತ್ರದಲ್ಲಿ ದಕ್ಷತೆ, ಗುಣಾತ್ಮಕತೆ, ಧನಾತ್ಮಕತೆ, ಉತ್ತಮ ಜೀವನ ಮಟ್ಟವನ್ನು ಸಾಧಿಸುವ ಗುರಿಯನ್ನು ಹೊಂದಲಾಗಿದೆ. ಉದ್ದೇಶಿತ ಗುರಿಯನ್ನು ಸಾಧಿಸಲು ಒಟ್ಟು ರೂ 3,96,135 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಇದು ಒಟ್ಟು ಬಜೆಟ್‌ನ ಶೇ 18.45 ಪ್ರಮಾಣದ ಪಾಲಾಗಿದ್ದು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇ 14ರಷ್ಟು ಏರಿಕೆಯಾಗಿದೆ. ಈ ಪ್ರಮಾಣ 2016-17ನೇ ಸಾಲಿನಲ್ಲಿ ರೂ 3,48,952 ಕೋಟಿಗಳಾಗಿದ್ದು ಅದನ್ನು ರೂ 3.58,634 ಕೋಟಿಗೆ ಮರು ಹೊಂದಾಣಿಕೆ ಮಾಡಿ ಕೊಳ್ಳಲಾಗಿದೆ. ವಿವರಗಳನ್ನು ಪಟ್ಟಿ-1ರಲ್ಲಿ ನೀಡಲಾಗಿದೆ.

ಆರ್ಥಿಕ ವಿಚಾರ (ಮೂಲಭೂತ ಕ್ಷೇತ್ರ)ದ ಇಲಾಖೆಯ ಗೆಜೆಟ್‌ನಲ್ಲಿ ದಾಖಲಿಸಿರುವಂತೆ ಮತ್ತು 2013ರ ಅಕ್ಟೋಬರ್ 8 ರ ವಿತ್ತ ಸಚಿವಾಲಯ, ನವದೆಹಲಿ ಅವರು ಹೊರಡಿಸಿರುವ ಅಧಿಸೂಚನೆಯಂತೆ ಮೂಲಭೂತ ಸೌಕರ್ಯವೆಂದರೆ ಸಾರಿಗೆ, ಇಂಧನ, ಜಲಸಂಪನ್ಮೂಲ ಮತ್ತು ಒಳಚರಂಡಿ ಮತ್ತು ಸಾಮಾಜಿಕ ಮತ್ತು ವಾಣಿಜ್ಯಕ ಮೂಲಭೂತ ಸೌಕರ್ಯಗಳು ಸೇರಿ ಕೊಳ್ಳುತ್ತವೆ.

**2017-18ನೇ ಸಾಲಿನ ಬಜೆಟ್‌ನ ಸೂಚ್ಯಾಂಕಗಳು ಸರ್ಕಾರವು ಉದ್ದೇಶಿತ ಗುರಿಗಳ ಕಡೆಗೆ ಸಮಯೋಚಿತ ಮತ್ತು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದನ್ನು ಖಚಿತಪಡಿಸಿವೆ. ಮೂಲಭೂತ ಸೌಕರ್ಯಗಳ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಸರಿಸುಮಾರು 1/5ರಷ್ಟು ಪ್ರಮಾಣದ ಅನುದಾನವನ್ನು ನಿಗದಿಪಡಿಸಿರುವುದೇ ಇದಕ್ಕೆ ಸಾಕ್ಷಿ.**

### 1. ಸಾರಿಗೆ

2017-18ನೇ ಸಾಲಿನ ಬಜೆಟ್‌ನಲ್ಲಿ ರೈಲ್ವೆ, ರಸ್ತೆ, ಸಾಗರ ಮತ್ತು ವಿಮಾನ ಯಾನ ಸೇರಿದಂತೆ ರೂ. 2,41,387 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದು ಇದು ಒಟ್ಟು ಮೂಲಭೂತ ಸೌಕರ್ಯದ ಕ್ಷೇತ್ರಕ್ಕೆ ನಿಗದಿಪಡಿಸಿರುವ ಶೇ 61ರಷ್ಟಾಗಿದೆ. ಈ ಮಹತ್ವಾಕಾಂಕ್ಷೆಯ ಯೋಜನೆ ಮತ್ತು ಗಣನೀಯವಾಗಿ ನಡೆಯಲಿರುವ ಬಂಡವಾಳ ಹೂಡಿಕೆ ದೇಶದೆಲ್ಲೆಡೆ ಆರ್ಥಿಕ ಚಟುವಟಿಕೆಯನ್ನು ವಿಸ್ತರಿಸಲಿದ್ದು ಉದ್ಯೋಗಾವಕಾಶವನ್ನು ಹೆಚ್ಚಿಸಲಿದೆ.

ಇದು ಸಾಧ್ಯವಾದರೆ ಒಟ್ಟು ಆರ್ಥಿಕ ಪರಿಸ್ಥಿತಿಯಲ್ಲೇ ಬದಲಾವಣೆ ಉಂಟಾಗಲಿದ್ದು ಆರ್ಥಿಕ ಕ್ಷೇತ್ರವನ್ನು ದಕ್ಷತೆಯಿಂದ ಕೂಡಿದ ಬೆಳವಣಿಗೆಯ ಕಡೆಗೆ ಕರೆದುಕೊಂಡು ಹೋಗಬಲ್ಲದಾಗಿದೆ. ಈ ಮೂಲಕ ಜೀವನ ಮಟ್ಟದಲ್ಲಿ ಕೂಡ ಸುಧಾರಣೆ ಕಂಡು ಬರಲಿದೆ.

ಆದರೆ ಇದಕ್ಕಿರುವ ದೊಡ್ಡ ಸವಾಲೆಂದರೆ ಈ ಯೋಜನೆಯು ನಿಗದಿತ ಕಾಲಘಟ್ಟದಲ್ಲಿ ಮುಕ್ತಾಯವಾದರೆ ಮಾತ್ರ ಪರಿಣಾಮಕಾರಿ ಎನ್ನಿಸಿಕೊಳ್ಳಲಿದೆ.

* ಮೂಲಭೂತ ಸೌಕರ್ಯ ಕ್ಷೇತ್ರದಲ್ಲಿನ ಪರಿಣಿತರು. E-mail : kd.krishnadev@gmail.com

| ಪಟ್ಟಿ–1 : ಮೂಲಭೂತ ಕ್ಷೇತ್ರದಲ್ಲಿನ ವೆಚ್ಚದ ವಿವರ | | | | |
|---|---|---|---|---|
| | | | | (ಕೋಟಿ ರೂಪಾಯಿಗಳಲ್ಲಿ) |
| ಸಂಖ್ಯೆ | ವಿವರಗಳು | 2016–17 (ಬಿಇ) | 2016–17 (ಆರ್‌ಇ) | 2017–18 (ಬಿಇ) |
| 1 | 2012–13ನೇ ಸಾಲಿನಂತೆ ಜಿಡಿಪಿ ಪ್ರಮಾಣ | 1,50,75,429 | 1,50,75,429 | 1,68,47,544 |
| 2 | ಒಟ್ಟು ಬಜೆಟ್‌ನ ಗಾತ್ರ | 19,78,060 | 20,14,407 | 21,46,735 |
| 3 | ಮೂಲಭೂತ ಕ್ಷೇತ್ರಕ್ಕೆ ಹಂಚಿಕೆ | 3,48,952 | 3,58,634 | 3,96,135 |
| 4 | ಸಂಪರ್ಕ ಕ್ಷೇತ್ರಕ್ಕೆ ಹಂಚಿಕೆ | 2,16,268 | 2,16,903 | 2,41,387 |
| ಆಧಾರ ಬಜೆಟ್ ದಾಖಲಾತಿ : 2017–18 | | | | |



**ಅ. ರಸ್ತೆಗಳು**

ರಸ್ತೆಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ನಿಗದಿಪಡಿಸಿದ ಮೊತ್ತವನ್ನು 2017–18ರ ಸಾಲಿಗೆ ರೂ 57, 976 ಕೋಟಿಗಳಿಂದ ರೂ. 64,900 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಇದು ಸಾರಿಗೆ ಕ್ಷೇತ್ರಕ್ಕೆ ನಿಗದಿಪಡಿಸಿದ ಹಣದ ಶೇ 27ರಷ್ಟಾಗಿದೆ. ಇದನ್ನು ಹಲವಾರು ಹೊಸ ಯೋಜನೆಗಳಿಗೆ ವೆಚ್ಚ ಮಾಡಲಾಗುವುದು. 2,000 ಕಿಲೋಮೀಟರ್ ಕರಾವಳಿ ಭಾಗವನ್ನು ರಸ್ತೆಯ ಮೂಲಕ ಜೋಡಿಸುವ ಮಹತ್ವಾಕಾಂಕ್ಷೆಯ ಯೋಜನೆ ಕೂಡ ಇದರಲ್ಲಿ ಸೇರಿದೆ. ಇದು ಬಂದರು ಮತ್ತು ಕುಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ಅಂಶವಾಗಲಿದೆ. ಅಲ್ಲದೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅನ್ವಯ ನಿರ್ಮಿಸಲಾಗಿರುವ ರಸ್ತೆಯ ಉದ್ದ 1,40,000 ಕಿಲೋಮೀಟರ್‌ಗಳಾಗಿದ್ದು ಇದು ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಅತಿ ಹೆಚ್ಚಿನದಾಗಿದೆ. ಇದರ ಜೊತೆಗೆ ಪರಿಣಾಮಕಾರಿಯಾದ ಬಹು ಮಾದರಿಯ ಸರಬರಾಜು ಮತ್ತು ಸಂಪರ್ಕ ಕ್ಷೇತ್ರವು ಅರ್ಥಕ್ಷೇತ್ರವನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸಬಲ್ಲದು. ಲಾಜಿಸ್ಟಿಕ್ ಪಾರ್ಕ್‌ಗಳು ಬಹು ಮಾದರಿ ಸಂಪರ್ಕ ವ್ಯವಸ್ಥೆಗಳು ಬಹು ಕಾಲದಿಂದಲೂ ನಿರೀಕ್ಷಿಸುತ್ತಿದ್ದ ಬದಲಾವಣೆಗಳನ್ನು ತರುವ ಸ್ವಾಗತಾರ್ಹ ಪ್ರಯತ್ನವಾಗಿದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯು ಈಗ ಜಾರಿಗೊಳ್ಳುತ್ತಿರುವಷ್ಟು ತ್ವರಿತ ಗತಿಯಲ್ಲಿ ಹಿಂದೆಂದೂ ಜಾರಿಗೊಂಡಿರಲಿಲ್ಲ. ಈ ಯೋಜನೆಯ ಅನ್ವಯ ರಸ್ತೆಗಳ ನಿರ್ಮಾಣ ದ್ವಿಗುಣದ ವೇಗವನ್ನು ಪಡೆದುಕೊಂಡಿದೆ. 2011–

| ಪಟ್ಟಿ 2: ಮೂಲಭೂತ ಸೌಕರ್ಯಕ್ಕಾಗಿ ವಿವಿಧ ಸಚಿವಾಲಯ/ಇಲಾಖೆಗಳು ಮಾಡಿರುವ ವೆಚ್ಚ | | | | | |
|---|---|---|---|---|---|
| | | | | | (ಕೋಟಿ ರೂಪಾಯಿಗಳಲ್ಲಿ) |
| ಸಂ | ಸಚಿವಾಲಯ/ಇಲಾಖೆ | 2015–16 (ನೈಜ) | 2016–17 (ಬಿಇ) | 2016–17 (ಆರ್‌ಇ) | 2017–18 (ಬಿಇ) |
| 1 | ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ | 46,913 | 57,976 | 52,447 | 64,900 |
| 2 | ರೈಲ್ವೆ ಸಚಿವಾಲಯ | 35,008 | 45,000 | 46,155 | 55,000 |
| 3 | ಹಡಗು ಮತ್ತು ಬಂದರು ಅಭಿವೃದ್ಧಿ | 1,324 | 1,531 | 1,454 | 1,773 |
| 4 | ನಾಗರಿಕಯಾನ ಸಚಿವಾಲಯ | 4,168 | 2,590 | 3,452 | 2,702 |
| 5 | ಇಂಧನ ಸಚಿವಾಲಯ | 7,735 | 12,253 | 10,476 | 13,881 |
| 6 | ಪೆಟ್ರೋಲಿಯಂ ಮತ್ತು ಸಹಜ ಇಂಧನ ಸಚಿವಾಲಯ | 31,287 | 29,160 | 30,241 | 29,158 |
| 7 | ಮಾಹಿತಿ ಮತ್ತು ಸಂಪರ್ಕ ಸಚಿವಾಲಯ | 20,485 | 18,414 | 24,272 | 26,687 |
| 8 | ಕುಡಿಯುವ ನೀರು ಮತ್ತು ಒಳಚರಂಡಿ | 11,081 | 14,009 | 16,512 | 20,010 |
| **ಒಟ್ಟು ಬಜೆಟ್ ವೆಚ್ಚ** | | **17,90,783** | **19,78,060** | **20,14,407** | **21,46,735** |
| **2011–12ನೇಸಾಲಿನಂತೆ ಪ್ರಸ್ತುತ ಮಾರುಕಟ್ಟೆ ದರದ ಜಿ.ಡಿ.ಪಿ** | | **1,36,75,331** | **1,50,75,429** | **1,50,75,429** | **1,68,47,544** |
| ಆಧಾರ ಬಜೆಟ್ ದಾಖಲಾತಿ 2017–18 | | | | | |

2014ರಲ್ಲಿ ಸರಾಸರಿ 73 ಕಿಲೋಮೀಟರ್ ರಸ್ತೆ ನಿರ್ಮಾಣವಾಗಿದ್ದರೆ ಅದೀಗ 133 ಕಿಲೋ ಮೀಟರ್‌ಗೆ ಸುಧಾರಿಸಿದೆ. ಇದರ ಜೊತೆಗೆ ತೀವ್ರಗಾಮಿಗಳಿಂದ ತೊಂದರೆಗೊಳಗಾದ ಮೂಲ ನಿವಾಸಗಳಿಗೆ ಸಂಪರ್ಕ ಕಲ್ಪಿಸಿಕೊಡಲೂ ಈ ಯೋಜನೆಯ ಮೂಲಕ ಪ್ರಯತ್ನಿಸಲಾಗುತ್ತಿದೆ.

ಮಹತ್ವಾಕಾಂಕ್ಷೆಯ ರಸ್ತೆ ಯೋಜನೆ 2019ರಲ್ಲಿ ಪೂರ್ಣಗೊಳ್ಳಲಿದ್ದು ಅದಕ್ಕಾಗಿ 2017–18ನೇ ಸಾಲಿನಲ್ಲಿ ರೂ. 19,000 ಕೋಟಿಗಳನ್ನು ನಿಗದಿಪಡಿಸಲಾಗಿದೆ. ರಾಜ್ಯಗಳ ಪಾಲೂ ಸೇರಿ ಈ ಯೋಜನೆಯ ಒಟ್ಟು ಮೊತ್ತ 2017–18ನೇ ಸಾಲಿಗೆ ರೂ 27,000 ಕೋಟಿಗಳಾಗಲಿದೆ.

ಇಲ್ಲಿ ಗಮನಿಸಲೇಬೇಕಾದ ಸಂಗತಿ ಎಂದರೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಯೋಜನೆಯನ್ನು ಹೊರತು ಪಡಿಸಿದರೆ ಬಹುತೇಕ ಸಾರಿಗೆ ವಿಸ್ತರಣೆ ಯೋಜನೆಗಳ ಉದ್ದೇಶ ಸಂಪರ್ಕವನ್ನು ಹೆಚ್ಚಿಸುವುದಾಗಿರುತ್ತದೆಯೇ ಹೊರತು ಜಾಲ ಸಾಮರ್ಥ್ಯವನ್ನಲ್ಲ. ಇದಕ್ಕಿರುವ ತೊಂದರೆ ಎಂದರೆ ಒಪ್ಪಂದಗಳಲ್ಲಿನ ಜಿಗುಟುತನ, ಭೂಮಿಯನ್ನು ಪಡೆಯುವಲ್ಲಿನ ಸಮಸ್ಯೆಗಳು, ಪರಿಸರ ರಕ್ಷಣೆಯ ಪರವಾನಗಿ,



ಸಂಪರ್ಕ ಕಲ್ಪಿಸುವ ಸಾಮರ್ಥ್ಯದ ಕೊರತೆ ಮೊದಲಾದವುಗಳು. ಹೆಚ್ಚಿನ ದಕ್ಷತೆಯ ಕಾರಿಡಾರ್‌ಗಳೊಡನೆ ಸರ್ವೀಸ್ ರಸ್ತೆಗಳೂ ಕೂಡ ನಿರ್ಮಾಣವಾಗ ಬೇಕು. ಇದರಿಂದ ಸೈಕಲ್ ಸವಾರರಿಗೆ ಪಾದಚಾರಿಗಳಿಗೆ

**ಪಟ್ಟಿ – 3 : ಪ್ರಮುಖ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಹಣ ಬಟವಡೆ**

(ಕೋಟಿ ರೂಪಾಯಿಗಳಲ್ಲಿ )

| ಸಂ | ಯೋಜನೆ | 2015–16 (ನೈಜ) | 2016–17 (ಬಿಇ) | 2016–17 (ಆರ್‌ಇ) | 2017–18 (ಬಿಇ) |
|---|---|---|---|---|---|
| 1 | ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ (ಪಿಎಮ್‌ಜಿಎಸ್‌ವೈ) | 18,290 | 19,000 | 19,000 | 19,000 |
| 2 | ಪ್ರಧಾನ ಮಂತ್ರಿ ಆವಾಸ್ ಯೋಜನಾ (ಪಿಎಮ್‌ಎವೈ) | 11,603 | 20,075 | 20,936 | 29,043 |
| | (ಎ) ಪಿಎಮ್‌ಎವೈ : ಗ್ರಾಮೀಣ | 10,116 | 15,000 | 16,000 | 23,000 |
| | (ಬಿ) ಪಿಎಮ್‌ಎವೈ : ನಗರ | 1,487 | 5,075 | 4,936 | 6,043 |
| 3 | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಮಿಷನ್ | 4,370 | 5,000 | 6,000 | 6,050 |
| 4 | ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನಾ (ಡಿಡಿಯುಜಿಜೆವೈ) | 4,500 | 3,000 | 3,350 | 4,814 |
| 5 | ಸ್ವಚ್ಛ ಭಾರತ ಮಿಷನ್ (ಎಸ್‌ಬಿಎಮ್) | 7,469 | 11,300 | 12,800 | 16,248 |
| | (ಎ) ಎಸ್‌ಬಿಎಮ್ : ಗ್ರಾಮೀಣ | 6,703 | 9,000 | 10,500 | 13,948 |
| | (ಬಿ) ಎಸ್‌ಬಿಎಮ್ : ನಗರ | 766 | 2,300 | 2,300 | 2,300 |
| 6 | ಸಮಗ್ರ ವಿದ್ಯುಚ್ಛಕ್ತಿ ಯೋಜನೆ | 1,002 | 5,500 | 4,524 | 5,821 |
| 7 | ನಗರ ಪುನರುತ್ಥಾನ ಮಿಷನ್ : ಅಮೃತ್ – ನಗರ ನವೀಕರಣ ಮತ್ತು ಪರಿವರ್ತನೆ ಕುರಿತಾದ ಅಟಲ್ ಮಿಷನ್ ಮತ್ತು ಸ್ಮಾರ್ಟ್ ಸಿಟಿ ಮಿಷನ್ | 4,186 | 7,296 | 9,559 | 9,000 |
| 8 | ಭಾರತ್ ನೆಟ್ | – | – | 6,000 | 10,000 |
| 9 | ಎಮ್‌ಆರ್‌ಟಿಎಸ್ ಮತ್ತು ಮೆಟ್ರೊ ಯೋಜನೆಗಳು | 9,300 | 10,000 | 15,700 | 18,000 |
| 10 | ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ | – | 2,000 | 2,500 | 2,500 |
| 11 | ರಸ್ತೆ ಸುರಕ್ಷತೆ ಕಾಮಗಾರಿ | 2,603 | 2,998 | 3,745 | 5,217 |
| 12 | ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಯಂತ್ರಾಂಶ ತಯಾರಿಕೆ ಬಲವರ್ಧನೆ | 52 | 70 | 50 | 745 |
| ಮೂಲ : ಬಜೆಟ್ ದಾಖಲೆ 2017–18 | | | | | |

ಜಾರುವಾರುಗಳ ಸಂಚಾರಕ್ಕೆ ಇನ್ನೊಂದು ನೆಲೆಯಲ್ಲಿ ಅನುಕೂಲವಾಗಬೇಕು. ಇದರಿಂದ ಗ್ರಾಮೀಣ ಭಾಗದ ಜನತೆಗೆ ಸಾಕಷ್ಟು ಪ್ರಯೋಜನವನ್ನು ಪಡೆಯುತ್ತಾರೆ.ವಾಹನದ ದಟ್ಟಣೆಯ ಒತ್ತಡವನ್ನು ಎದುರಿಸುವಲ್ಲಿ ಇದು ಸಾಕಷ್ಟು ನೆರವಾಗಲಿದೆ.ಆದರೆ ಸದ್ಯ ಇರುವ ಗ್ರಾಮೀಣ ರಸ್ತೆಗಳನ್ನು ಹೆದ್ದಾರಿಗೆ ಜೋಡಿಸುವುದು ಅಷ್ಟು ಸುಲಭವಲ್ಲ ಎನ್ನುವುದೇ ದೊಡ್ಡ ಸಮಸ್ಯೆ.

ಇದರ ಜೊತೆಗೆ ಅನುಮತಿ ಪಡೆಯುವಲ್ಲಿನ ವಿಳಂಬ, ವಿವಿಧ ಅಧಿಕಾರವಲಯ, ಕಾರ್ಯ ಕ್ಷೇತ್ರಗಳಿಂದ ಒಪ್ಪಿಗೆ, ಖಾಸಗಿ ರಂಗದ ಕುರಿತು ಪದೇ ಪದೇ ಬದಲಾಗುವ ನಿಯಮಗಳು, ಭೂಮಿ ವಶಪಡಿಸಿಕೊಳ್ಳುವಿಕೆ ಕುರಿತ ಅಸ್ಪಷ್ಟತೆ, ಕೌಶಲ್ಯದ ಕೊರತೆ ಎಲ್ಲವೂ ಸಮಸ್ಯೆಯನ್ನು ಒಡ್ಡಿವೆ.

ಮುಖ್ಯವಾದ ಸಂಗತಿ ಎಂದರೆ ರಸ್ತೆ ಅಭಿವೃದ್ಧಿಯನ್ನು ಪ್ರತ್ಯೇಕವಾಗಿ ವಿಶ್ಲೇಷಿಸುವುದು ಅಸಾಧ್ಯ. ಇದು ಸಾರಿಗೆ ವ್ಯವಸ್ಥೆಯ ಒಂದು ಸಂಕೀರ್ಣ ಭಾಗ. ಇದರಿಂದ ಪ್ರಾದೇಶಿಕ ಸಂಚಾರ ಮತ್ತು ಸಾರಿಗೆ ಸಮೀಕ್ಷೆಯನ್ನು ನಿಯಮಿತವಾಗಿ ಸಾಧ್ಯವಾದ ಮಟ್ಟಿಗೆ ಒಂದು ವರ್ಷಗಳಿಗೆ ಒಮ್ಮೆಯಂತೆ ನಡೆಸುವುದು ಒಳ್ಳೆಯದು.

**ಆ. ವಿಮಾನ ನಿಲ್ದಾಣಗಳು**

ವಿಮಾನ ನಿಲ್ದಾಣಗಳಿಗೆ 2016–17ರ ಅಂದಾಜು ವೆಚ್ಚ ರೂ 2,590 ಕೋಟಿಗಳಿಂದ 2017–18ನೇ ಸಾಲಿಗೆ ರೂ 2,702 ಕೋಟಿಗಳಷ್ಟು ಹೆಚ್ಚಿನ ಅನುದಾನದ ಮೊತ್ತವನ್ನು ಹೆಚ್ಚಿಸಲಾಗಿದೆ.ಆದರೆ ಅದು 2016–17ರ ವಾಸ್ತವಿಕ ಗಣನೆಯ ಅಂದಾಜು ರೂ 3,452 ಕೋಟಿಗಿಂತಲೂ ಕಡಿಮೆಯಾಗಿದೆ.ಅಂದಾಜು ವೆಚ್ಚದ ಪ್ರಕಟಣೆ ನಂತರ ಆ ಕ್ಷೇತ್ರದ ನಿರೀಕ್ಷೆಯಂತೆ ವಾಸ್ತವಿಕ ಗಣನೆಯಲ್ಲಿ ಹೆಚ್ಚಳವನ್ನು ಮಾಡಲಾಗಿತ್ತು. ಕಳೆದ ಎರಡು ದಶಕಗಳಲ್ಲಿ ಗಣನೀಯ ಬೆಳವಣಿಗೆ ಕಂಡಿರುವ ಈ ಕ್ಷೇತ್ರ ಸಾಕಷ್ಟು ಅನುದಾನವನ್ನು ಅಪೇಕ್ಷಿಸುತ್ತಿದೆ.ವಿಮಾನ ಯಾನದ ಹೊಸ ಮಾರ್ಗಗಳು ದೇಶದ ಒಳಗೆ ಮತ್ತು ಹೊರಗೆ ಆರಂಭವಾಗುತ್ತಿವೆ. ವಿಮಾನ ನಿಲ್ದಾಣಗಳು ಆಧುನಿಕಗೊಳ್ಳುತ್ತಿವೆ ಮತ್ತು ವಿಸ್ತರಿಸಲ್ಪಡುತ್ತಿವೆ. ವಿಮಾನ ಮತ್ತು ವಿಮಾನ ನಿಲ್ದಾಣದ ಸುರಕ್ಷಣೆಯ ಮಟ್ಟ ಜಾಗತಿಕ ನೆಲೆಗಳಿಗೆ ಸಮನಾಗಿದೆ.



ವಿಮಾನ ಸೇವೆ ಈ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಇನ್ನಷ್ಟು ಬಂಡವಾಳ ಹೂಡಿಕೆ ಅಗತ್ಯವಾಗಿದೆ.ಮಹಾನಗರಗಳಲ್ಲಿ ವಿಮಾನ ಸೇವೆಯ ಬೇಡಿಕೆ ಹೆಚ್ಚಾಗಿದ್ದು ದಟ್ಟಣೆ ಉಂಟಾಗುತ್ತಿದೆ. ಹೊಸ ತಂತ್ರಜ್ಞಾನದ ಮೂಲಕ ಇದನ್ನು ಸರಿದೂಗಿಸಬೇಕಾಗಿದೆ. ವಿಮಾನಗಳ ಆಗಮನ ಮತ್ತು ನಿರ್ಗಮನದ ನಡುವೆ ನಿಖರ ಹೊಂದಾಣಿಕೆ ರೂಪಿಸಿ ವಿಮಾನ ಸಂಚಾರದಲ್ಲಿ ಉಂಟಾಗುವ ದಟ್ಟಣೆಯನ್ನು ಸಮರ್ಥವಾಗಿ ಎದುರಿಸ ಬೇಕಾಗಿದೆ.

ಬಜೆಟ್ 2017–18ರ ಗುರಿ ಮುಖ್ಯವಾಗಿ ಎರಡನೇ ಹಂತದ ನಗರಗಳನ್ನು ವಿಮಾನ ಯಾನಕ್ಕೆ ಅತಿಶೀಘ್ರದಲ್ಲಿ ಸಜ್ಜುಗೊಳಿಸುವುದು. ವಿಮಾನ ನಿಲ್ದಾಣ ಅಭಿವೃದ್ಧಿ ನಿಗಮ ಭಾರತ ಸರ್ಕಾರದ ಕಾಯಿದೆ ಅನ್ವಯ ಕೂಡ ಅಗತ್ಯ ಭೂಮಿಯನ್ನು ಪಡೆಯಲು ಹಣಕಾಸು ಒದಗಿಸುವ ಮಾರ್ಗಗಳನ್ನು ಸೂಚಿಸಲಾಗಿದೆ. ಹೀಗೆ ನಿಗದಿಯಾದ ಹಣವನ್ನು ವಿಮಾನ ನಿಲ್ದಾಣಗಳನ್ನು ಆಧುನಿಕಗೊಳಿಸಲು ಬಳಸಿಕೊಳ್ಳ ಬಹುದಾಗಿದೆ. ಆಧುನಿಕ ಸೌಲಭ್ಯ ಇಂದಿನ ಅಗತ್ಯವಾಗಿದ್ದು ಬಜೆಟ್‌ನಲ್ಲಿ ಈ ಕುರಿತು ಪ್ರಸ್ತಾಪವಿಲ್ಲದಿರುವುದು ಕೊರತೆಯಾಗಿದೆ.

ಸರ್ಕಾರವು ವಿದೇಶಿ ಒಡತನದಲ್ಲಿ ಸಂಚರಿಸುವ ದೇಶೀಯ ವಿಮಾನಯಾನದ ಕುರಿತು ನಿಖರ ಮತ್ತು ದೃಢ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ.ಈ ವಿದೇಶಿ ಒಡೆತನವು ಸಾಲ ನಿರ್ವಹಣೆ, ತಾಂತ್ರಿಕ ವರ್ಗಾವಣೆ, ಆಡಳಿತದ ಅರಿವು, ಜಾಗತಿಕ ಮಾರುಕಟ್ಟೆಯೊಂದಿಗಿನ ನಂಟು ಮೊದಲಾದ ನೆಲೆಗಳಲ್ಲಿ ನೆರವಾಗಲಿದೆ.

ಖಾಸಗಿ ಬಂಡವಾಳ ಹೂಡಿಕೆ, ವಿದೇಶಿ ವಿಮಾನಯಾನ ಸಂಸ್ಥೆಗಳ ಸಹಯೋಗದ ಅನ್ವೇಷಣೆಯು ವಿಮಾನಯಾನ ರಂಗದ ಆರೋಗ್ಯಕರ ಬೆಳವಣಿಗೆಗೆ ಕಾರಣವಾಗ ಬಲ್ಲದಾಗಿದೆ.

**ಇ. ಸಮುದ್ರಯಾನ**

ಭಾರತೀಯ ಬಂದರುಗಳು ಅಗತ್ಯಕ್ಕಿಂತ ಕಿರಿದಾಗಿರುವುದರಿಂದ ಸಂಚಾರದಲ್ಲಿ ಇಕ್ಕಟ್ಟಿನ ಸ್ಥಿತಿಯಲ್ಲಿದ್ದು ಬರುವ ದಿನಗಳಲ್ಲೂ ಹಾಗೇ ಮುಂದುವರೆಯಲಿದೆ .ಹೀಗಿದ್ದರೂ 2011–12ನೇ ಸಾಲಿನಲ್ಲಿ ಜಾಗತಿಕ ಹಿನ್ನೆಡೆಯ ಫಲವಾಗಿ ಉಂಟಾದ ಹಿಂಜರಿಕೆಯ ನಂತರವೂ ಶೇ 80ರಷ್ಟು ಭಾರತೀಯ ಬಂದರುಗಳು ಬಳಕೆಯಾಗಿದ್ದವು. ಅದರಲ್ಲೂ ಭಾರತದ 12 ಪ್ರಮುಖ ಬಂದರುಗಳ ಪೈಕಿ 4 ಶೇ 100ರಷ್ಟು ಎಂದರೆ ಸಂಪೂರ್ಣ ಬಳಕೆಯಾಗಿದ್ದವು. ಬಂದರುಗಳನ್ನೇ ಅವಲಂಬಿಸಿರುವ ಭಾರತದ ಆಮದು ಮತ್ತು ರಫ್ತು ಕಳೆದ ಒಂದು ದಶಕದಲ್ಲಿ ಗಮನಾರ್ಹವಾಗಿ ಹೆಚ್ಚಿದೆ. ರಫ್ತಿನ ಪ್ರಮಾಣ ಶೇ 21ರಷ್ಟು ಹೆಚ್ಚಿದ್ದರೆ ಆಮದಿನ ಪ್ರಮಾಣ ಶೇ 25ರಷ್ಟು ಬೆಳವಣಿಗೆಯನ್ನು ಕಂಡಿದೆ. ಜಾಗತಿಕವಾಗಿ ತನ್ನ ಪಾಲವನ್ನು ಪಡೆದುಕೊಳ್ಳಲು ಭಾರತವು ಈ ಕ್ಷೇತ್ರದಲ್ಲಿ ಸಾಕಷ್ಟು ಬಂಡವಾಳವನ್ನು ತೊಡಗಿಸ ಬೇಕಾಗಿದೆ.

ಮಿತವ್ಯಯ ಮತ್ತು ಪರಿಸರ ಸ್ನೇಹಿಯಾಗಿರುವ ಹಡಗುಯಾನ ಕ್ಷೇತ್ರಕ್ಕೆ 2017–18ನೇ ಸಾಲಿಗೆ ಬಜೆಟ್‌ನಲ್ಲಿ 1,773 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಇದು 2016–17ರ ಅಂದಾಜು ನಿಗದಿ 1,531 ಮತ್ತು ವಾಸ್ತವಿಕ ನಿಗದಿ 1,454 ಎರಡಕ್ಕಿಂತಲೂ ಹೆಚ್ಚಾಗಿದೆ.

ಬಂದರು ಮತ್ತು ದೀಪಗೃಹಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ನಿಗದಿಯಾಗಿದ್ದು ಅದು 2016–17ನೇ ಸಾಲಿನಲ್ಲಿ ರೂ 732.50 ಕೋಟಿಯಿಂದ 2017–18ನೇ ಸಾಲಿಗೆ ರೂ 801.4 ಕೋಟಿಯಷ್ಟು ಹೆಚ್ಚಾಗಿದೆ. ಸಮುದ್ರಯಾನ ನಿರ್ವಹಣೆ ಮತ್ತು ಈಶಾನ್ಯ ಭಾಗದಲ್ಲಿನ ಅಭಿವೃದ್ಧಿಗೆ ಒತ್ತು ನೀಡಲು ಬಜೆಟ್‌ನಲ್ಲಿ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. 2016–17ನೇ ಬಜೆಟ್ ಅಂದಾಜು ರೂ 172 ಕೋಟಿ ಮತ್ತು ರೂ 100 ಕೋಟಿಯಿಂದ ರೂ 238 ಕೋಟಿ ಮತ್ತು ರೂ 126 ಕೋಟಿಗೆ ಅನುಕ್ರಮವಾಗಿ ಹೆಚ್ಚಳವಾಗಿದೆ.

ಒಳನಾಡು ಜಲಸಾರಿಗೆಯು ಅತ್ಯಂತ ಪರಿಸರ ಸ್ನೇಹಿಯಾದ ಸಂಪರ್ಕ



ಸಾಧನವಾಗಿದ್ದು ಅತ್ಯಂತ ಕಡಿಮೆ ಇಂಧನ ಬಳಕೆ ಮತ್ತು ಕನಿಷ್ಠ ಪ್ರಮಾಣದ ವಾಯು ಮಾಲಿನ್ಯವನ್ನು ಉಂಟು ಮಾಡುತ್ತದೆ. ಪ್ರಾದೇಶಿಕ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ನೆರವಾಗ ಬಲ್ಲ ಆರ್ಥಿಕ ಜೀವಸೆಲೆಯಾಗಿ ಕೂಡ ಇದನ್ನು ನೋಡ ಬಹುದು. ಪ್ರಾದೇಶಿಕ ಸಂಪರ್ಕ ಸಾಧನವಾಗಿಯಂತೂ ಇದನ್ನು ಖಂಡಿತ ಬೆಳೆಸಬಹುದು. ಆದರೆ ಒಳನಾಡು ಜಲಸಾರಿಗೆಗೆ ಬಜೆಟ್ ಹಂಚಿಕೆ ಕುಗ್ಗುತ್ತಲೇ ಬಂದಿದೆ. 2016–17ರಲ್ಲಿ ಅಂದಾಜು ರೂ 326.42 ಕೋಟಿಗಳಿಂದ ವಾಸ್ತವಿಕ ಅಂದಾಜಿನಲ್ಲಿ ರೂ. 278.42 ಕೋಟಿಗೆ ಕುಗ್ಗಿದ್ದರೆ 2017–18 ಬಜೆಟ್ ಅಂದಾಜಿನಲ್ಲಂತೂ ರೂ. 225 ಕೋಟಿಗಳಿಗೆ ಕುಗ್ಗಿದೆ. ಇದಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಒಳನಾಡು ಜಲಸಾರಿಗೆಯ ಮೂಲಕ ಸರಕು ಸಾಗಾಣಿಕೆಯ ಪ್ರಮಾಣ ಗಮನಾರ್ಹವಾಗಿ ಕುಗ್ಗಿರುವುದು. ಇದು ಬಹುಮಟ್ಟಿಗೆ ಗೋವಾದಲ್ಲಿ ಸಾಗಾಣಿಕೆಯಾಗುವ ಕಬ್ಬಿಣದ ಅದಿರು, ಪಶ್ಚಿಮ ಕರಾವಳಿಯಲ್ಲಿ ಸಾಗಾಣಿಕೆಯಾಗುವ ರಸಗೊಬ್ಬರಗಳ ಸಾಗಾಣಿಕೆಗೆ ಸೀಮಿತವಾಗಿದೆ. ಆದರೆ ಒಳನಾಡು ಜಲಸಾರಿಗೆಯಲ್ಲಿ ಉಂಟಾಗಬಲ್ಲ ಏರಿಕೆಯು ರಸ್ತೆ ಮತ್ತು ರೈಲು ಸಂಚಾರದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ವಾಯು ವಾಲಿನ್ಯವನ್ನೂ ತಗ್ಗಿಸುತ್ತದೆ ಎನ್ನುವುದನ್ನು ಗಮನಿಸಿದರೆ ಇದಕ್ಕೆ ಮಹತ್ವ ನೀಡ ಬಲ್ಲ ಅಗತ್ಯ ಅರಿವಿಗೆ ಬರುತ್ತದೆ.

## 2. ಸಂಪರ್ಕ ಕ್ಷೇತ್ರ

ಟೆಲಿಕಾಂ ರಂಗವು ಪರಿಸರ ಸ್ನೇಹಿ ಸಂಪರ್ಕ ವ್ಯವಸ್ಥೆಯ ಬಹಳ ಮುಖ್ಯವಾದ ಅಂಗವಾಗಿದೆ. ಪ್ರಸ್ತುತ ಸುವೇಗಿ ಬೆಳವಣಿಗೆಗಳು ದೇಶದ ಬಹುಜನರ ಅಗತ್ಯಕ್ಕೆ ತಕ್ಕಂತೆ ಬ್ರಾಡ್‌ಬ್ಯಾಂಡ್ ಮತ್ತು ಡಿಜಿಟಲ್ ಇಂಡಿಯಾ ಮಾದರಿಯಲ್ಲಿ ದೇಶದೆಲ್ಲೆಡೆ ಪಸರಿಸುತ್ತಿದೆ. ದೇಶದ ಮೂಲೆ ಮೂಲೆಯು ಕುಗ್ರಾಮಗಳಿಗೂ ತಲುಪುವುದರ ಜೊತೆಗೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನೂ ಸೃಷ್ಟಿಸುತ್ತಿವೆ.

2017–18ರಲ್ಲಿ ಸಂಪರ್ಕ ಕ್ಷೇತ್ರಕ್ಕೆ ನೀಡಿದ ಅನುದಾನ ರೂ 26,687 ಆಗಿದ್ದು ಅದು ಕ್ರಮವಾಗಿ ಶೇ 45 ಮತ್ತು ಶೇ 10ರಷ್ಟು ಬಜೆಟ್‌ನ ನಿಗದಿ ಮತ್ತು ವಾಸ್ತವಿಕ ನಿಗದಿಗಿಂತಲೂ ಹೆಚ್ಚಾಗಿದೆ. ಅಂದರೆ ಆ ಪ್ರಮಾಣವು ರೂ 18,414 ಮತ್ತು ರೂ 24, 272 ಆಗಿತ್ತು. ರಾಷ್ಟ್ರವ್ಯಾಪಿ ಸಂಪರ್ಕ ಜಾಲವನ್ನು ಕಲ್ಪಿಸಬಲ್ಲ ಭಾರತ ನೆಟ್ ಸಂಪರ್ಕ ಪ್ರಯೋಗವು ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು ದೇಶದ ಅಗತ್ಯವನ್ನು ಪೂರೈಸಲಿದೆ. ಮನೆಮನೆಗೂ ಬ್ರಾಡ್‌ಬ್ಯಾಂಡ್ ಸೇವೆಯನ್ನು ಕಲ್ಪಿಸಬಲ್ಲ ಈ ಪ್ರಯೋಗವು ಡಿಜಿಟಲ್ ಇಂಡಿಯಾ ಪರಿಕಲ್ಪನೆಯನ್ನು ಸಾಕಾರಗೊಳಿಸಲಿದೆ.ಇದು ಅಪ್ಟಿಕಲ್ ಫೈಬರ್ ಬಳಸಿದ ದೇಶದ ಅತಿ ದೊಡ್ಡ ಸಂಪರ್ಕ ಜಾಲವಾಗಿದೆ.

2016–17 ಸಾಲಿನಲ್ಲಿ ಭಾರತ ನೆಟ್ ಯೋಜನೆಗೆ ನಿಗದಿಪಡಿಸಿದ ಹಣದ ಪ್ರಮಾಣ ರೂ 6000 ಕೋಟಿಗಳಾಗಿದ್ದರೂ ಅದು 2017–18ನೇ ಸಾಲಿಗೆ ಅದು ರೂ 10,000 ಕೋಟಿಗೆ ಗಮನಾರ್ಹ ಏರಿಕೆಯನ್ನು ಕಂಡಿದೆ. 2017–18ರ ಕೊನೆಗೆ ಈ ಯೋಜನೆಯ ಸಮರ್ಪಕ ಅನುಷ್ಠಾನದಿಂದ 1,50,00 ಗ್ರಾಮ ಪಂಚಾಯತ್‌ಗಳು ವೈಫೈ ಹಾಟ್ ಸ್ಪಾಟ್‌ಗಳನ್ನು ಪಡೆದು ಕಡಿಮೆ ವೆಚ್ಚದಲ್ಲಿ ಡಿಜಿಟಲ್ ಕ್ಷೇತ್ರದ ಪ್ರಯೋಜನವನ್ನು ಪಡೆದುಕೊಳ್ಳಲಿವೆ. ಈ ಯೋಜನೆ ಅನ್ವಯ 1,55,000 ಕಿ.ಮೀ.ಗಳಿಗೆ ಅಪ್ಟಿಕಲ್ ಫೈಬರ್ ಕೇಬಲ್ ಜಾಲವು ಹರಡಲಿದೆ. ಇದರ ಜೊತೆಗೆ ಟೆಲಿ ಮೆಡಿಸಿನ್, ಶಿಕ್ಷಣ ಮತ್ತು ಕೌಶಲವನ್ನು ಒದಗಿಸಲು ಡಿಜಿಗಾನ್ ಯೋಜನೆಯು ರೂಪುಗೊಂಡಿದ್ದು ಡಿಜಿಟಲ್ ತಂತ್ರಜ್ಞಾನದ ಸಮರ್ಪಕ ಬಳಕಗೆ ಅದು ನೆರವಾಗಲಿದೆ.

## 3. ಇಂಧನ

### ಅ. ವಿದ್ಯುತ್

1ನೇ ತಾರೀಖು ಮಾರ್ಚಿ, 2018ಕ್ಕೆ ಶೇ. 100ರಷ್ಟು ಭಾರತದ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಒದಗಿಸುವ ಗುರಿಯನ್ನು ಸರ್ಕಾರವು ಹೊಂದಿದೆ. ದೀನ್‌ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ ಅನ್ವಯ 2017–18ಕ್ಕೆ ಇದಕ್ಕಾಗಿ 4,814 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸೌರ್ ವಿದ್ಯುತ್ ಕ್ಷೇತ್ರದಲ್ಲಿ 20,000 ಮೆಗಾವ್ಯಾಟ್ ಅಧಿಕ ಶಕ್ತಿಯ ಸೋಲಾರ್ ಪಾರ್ಕ್‌ನ ಎರಡನೇ ಹಂತವನ್ನು ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಎಲೆಕ್ಟ್ರಾನಿಕ್ಸ್ ಉತ್ಪಾದನಾ ಕ್ಷೇತ್ರದ ಜಾಗತಿಕ ನೆಲೆಯಾಗಿ ಭಾರತವನ್ನು ಸೂಕ್ತ ಪರಿಸರವನ್ನು ರೂಪಿಸಲು ಕಲ್ಪಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಒಟ್ಟು ರೂ 1.26 ಕೋಟಿ ರೂಪಾಯಿಗಳ ವೆಚ್ಚದ 250 ಹೂಡಿಕೆ ಪ್ರಸ್ತಾಪಗಳು ಜಗತ್ತಿನೆಲ್ಲಡೆಯಿಂದ ಬಂದಿವೆ. ಜಾಗತಿಕ ಉದ್ಯಮ ನಾಯಕರು ಮೊಬೈಲ್ ಉತ್ಪದನಾ ಕಂಪನಿಗಳು ಭಾರತದಲ್ಲಿ ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸುವ ಆಸಕ್ತಿಯನ್ನು ತೋರಿಸಿವೆ. ಇದಕ್ಕಾಗಿ ಪ್ರೋತ್ಸಾಹಕರ ಯೋಜನೆಗಳಾದ M-SIPS ಮತ್ತು EDFಗೆ ರೂ. 745 ಕೋಟಿ ರೂಪಾಯಿಗಳನ್ನು 2017–18ನೇ ಸಾಲಿನಲ್ಲಿ ನಿಗದಿಪಡಿಸಲಾಗಿದ್ದು ಇದು ಸಾರ್ವಕಾಲಿಕ ದಾಖಲೆಯಾಗಿದೆ.

### ಬ. ತೈಲ ಮತ್ತು ನೈಸರ್ಗಿಕ ಅನಿಲ

ಪೆಟ್ರೋಲಿಯಂ ಆಧುನಿಕ ಬದುಕಿಗೆ ಸಂಜೀವಿನಿಯಾಗಿದೆ. ಕೃಷಿ, ಕೈಗಾರಿಕೆ ಮತ್ತು ಸಾರಿಗೆ ಕ್ಷೇತ್ರಗಳ ಶಕ್ತಿಮೂಲವಾಗಿರುವ ಇದು ಅಗತ್ಯ ಕೈಗಾರಿಕೆಗಳ ಚಕ್ರ ಸುಲಲಿತವಾಗಿ ತಿರುಗಲು ನೆರವಾಗಲಿದೆ. ಈ ಕಾರಣದಿಂದ ತೈಲ ಮತ್ತ ನೈಸರ್ಗಿಕ ಅನಿಲ ಕ್ಷೇತ್ರವು ವಿಸ್ತರಣಕ್ಕೆ ಸಾಕಷ್ಟು ಅವಕಾಶಗಳನ್ನು



ಹೊಂದಿದ್ದು ಉದ್ಯೋಗಾವಕಾಶವನ್ನು ಸೃಷ್ಟಿಸ ಬಲ್ಲದಾಗಿದೆ. ಮೂಲಭೂತ ಸೌಕರ್ಯಗಳ ರಂಗದಲ್ಲಿ ಈ ಕಾರಣದಿಂದಲೇ ಇದು ಸುವ್ಯವಸ್ಥಿತ ಸಾಂಪ್ರದಾಯಿಕ ರಂಗ ಎನ್ನಿಸಿಕೊಂಡಿದೆ.

ಅಟೋಮೊಬೈಲ್ ರಂಗದಲ್ಲಿ ಹೆಚ್ಚುತ್ತಿರುವ ಬೇಡಿಕೆ, ಮನೆಗಳಲ್ಲಿ ಹೆಚ್ಚುತ್ತಿರುವ ಇಂಧನದ ಬಳಕೆ ಈ ಕ್ಷೇತ್ರವು ಸುಸಜ್ಜಿತವಾಗಿ ದಕ್ಷವಾಗಿ ಕಾರ್ಯ ನಿರ್ವಹಿಸ ಬೇಕಾದ ಅಗತ್ಯವನ್ನು ಹೇಳುತ್ತಿದೆ. ಇಂಧನದ ಲಭ್ಯತೆಯಲ್ಲಿ ಕೊರತೆ ಮತ್ತು ಪರಿಸರಕ್ಕೆ ಮಾಲಿನ್ಯದಿಂದ ಉಂಟಾಗಬಹುದಾದ ಹಾನಿ ಎರಡನ್ನೂ ಗಮನದಲ್ಲಿರಿಸಿ ಈ ರಂಗವನ್ನು ನಿರ್ವಹಿಸಬೇಕಾಗಿದೆ.



ಇಂಧನ ರಂಗವನ್ನು ಸದೃಢಗೊಳಿಸಲು ಸರ್ಕಾರವು ಯೋಜಿತ ಕಚ್ಚಾ ತೈಲ ನಿಕ್ಷೇಪಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಲು ನಿರ್ಧರಿಸಿದೆ,. ಮೊದಲ ಹಂತದಲ್ಲಿ ಇಂತಹ ಮೂರು ಘಟಕಗಳನ್ನು ರೂಪಿಸಲಾಯಿತು.ಎರಡನೇ ಹಂತದಲ್ಲಿ ಇನ್ನೂ ಎರಡು ಕಡೆ ಅಂದರೆ ಒಡಿಶಾದ ಚಂಡಿಕೋಲೆ ಮತ್ತು ರಾಜಾಸ್ತಾನದ ಬಿಕನೂರಿನಲ್ಲಿ ಅಂತಹ ಘಟಕಗಳನ್ನು ಸ್ಥಾಪಿಸಲಾಗುತ್ತದೆ. ಇದರಿಂದ ಯೋಜಿತ ಮೀಸಲು ಪ್ರಮಾಣ 15.33 ಎಂ.ಎಂ. ಟಿಯಷ್ಟಾಗಲಿದೆ. ಬಜೆಟ್‌ನಲ್ಲಿ ಕ್ಷೇತ್ರಕ್ಕೆ ರೂ 29,158 ಕೋಟಿ ರೂಪಾಯಿಗಳನ್ನು 2017–18ರ ಬಜೆಟ್‌ನಲ್ಲಿ ನಿಗದಿಪಡಿಸಲಾಗಿದೆ. ಹಾಗೆ ನೋಡಿದರೆ ಅದು ಬಜೆಟ್ ಮತ್ತು ಪರಿಷ್ಕೃತ ಅಂದಾಜಿಗಿಂತಲೂ ಕಡಿಮೆಯಾಗಿದೆ.

2016–17ನೇ ಸಾಲಿಗೆ ಈ ರಂಗಕ್ಕೆ ರೂ 29, 160 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದ್ದು ಇದನ್ನು ಪರಿಷ್ಕೃತ ಲೆಕ್ಕಾಚಾರಕ್ಕೆ ಬಂದಾಗ ಹೆಚ್ಚಿಸಲಾಗಿತ್ತು. 2017–18ರ ಉದ್ದೇಶಿತ ಮೀಸಲು ಪ್ರಮಾಣವನ್ನು ಸೂಚಿಸಲಾಗಿಲ್ಲ ಆದರೆ ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಬಡವರಿಗೆ ಎಲ್.ಪಿ.ಜಿ. ಸಂಪರ್ಕ ನೀಡಲಾಗುವ ಯೋಜನೆಗೆ 2017–18ರಲ್ಲಿ ರೂ 2,000 ಕೋಟಿಯಿಂದ ರೂ 2,500 ಕೋಟಿಗೆ ಅನುದಾನವನ್ನು ಹೆಚ್ಚಿಸಲಾಗಿದೆ. ಇದು 2016–17ರ ಪರಿಷ್ಕೃತ ಅಂದಾಜಿಗೆ ಸಮೀಪವಾಗಿದೆ.

**4. ಜಲ ಸಂಪನ್ಮೂಲ ಮತ್ತು ಒಳಚರಂಡಿ**

ಸ್ವಚ್ಛ ಭಾರತ ಮಿಷನ್(ಗ್ರಾಮೀಣ) ಸುರಕ್ಷಿತ ಶೌಚಾಲಯಗಳಿಗೆ ಗಮನ ನೀಡುದ್ದು ಬಯಲು ಶೌಚಾಲಯದ ಪ್ರಮಾಣ ಈ ಕಾರಣದಿಂದ ಕುಗ್ಗುತ್ತಿದೆ. ಅಕ್ಟೋಬರ್ 2014ರಲ್ಲಿ ಗ್ರಾಮೀಣ ಭಾರತದಲ್ಲಿ ಶೇ 42 ಗ್ರಾಮಗಳಲ್ಲಿ ಮಾತ್ರ ಶೌಚಾಲಯದ ವ್ಯವಸ್ಥೆ ಇತ್ತು.ಈಗ ಅದು ಶೇ 60ಕ್ಕೆ ಏರಿಕೆಯನ್ನು ಕಂಡಿದೆ.

ಬಯಲು ಶೌಚಾಲಯಗಳ ಬಳಕೆಯನ್ನು ನಿಲ್ಲಿಸಿದ ಗ್ರಾಮಗಳಿಗೆ ಶುದ್ದ ನೀರನ್ನು ಒದಗಿಸುವಲ್ಲಿ ಮಹತ್ವವನ್ನು ನೀಡಲಾಗುತ್ತಿದೆ. ಈ ಯೋಜನೆಗೆ ಮತ್ತಷ್ಟು ಮಹತ್ವವನ್ನು ನೀಡುವ ಉದ್ದೇಶದಿಂದ 28,000 ಅರ್ಸೆನಿಕ್, ಫ್ಲೋರೈಡ್ ಪೀಡಿತ ವಸತಿಗಳಿಗೆ ಮುಂದಿನ ನಾಲ್ಕು ವರ್ಷದಲ್ಲಿ ಕೊಳಾಯಿ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ 2016–17ನೇ ಸಾಲಿನ ಅಂದಾಜು ರೂ 5,000 ಕೋಟಿಯಿಂದ 2017–18ನೇ ಸಾಲಿಗೆ ರೂ 6,050 ಕೋಟಿಗೆ ಅನುದಾನವನ್ನು ಹೆಚ್ಚಿಸಲಾಗಿದೆ.

**ಒಟ್ಟಾಗಿ ಬಜೆಟ್‌ನ ಪರಾಮರ್ಶೆ**

ಒಟ್ಟಾಗಿ 2017–18ನೇ ಸಾಲಿನ ಬಜೆಟ್‌ನ ಸೂಚ್ಯಾಂಕಗಳು ಸರ್ಕಾರವು ಉದ್ದೇಶಿತ ಗುರಿಗಳ ಕಡೆಗೆ ಸಮಯೋಚಿತ ಮತ್ತು ಸಕಾಲಿಕ ಕ್ರಮಗಳನ್ನು ತೆಗೆದು ಕೊಳ್ಳುತ್ತಿರುವುದನ್ನು ಖಚಿತಪಡಿಸಿವೆ. ಮೂಲಭೂತ ಸೌಕರ್ಯಗಳ ಕ್ಷೇತ್ರಕ್ಕೆ





ಬಜೆಟ್‌ನಲ್ಲಿ ಸರಿಸುಮಾರು 1/5ರಷ್ಟು ಪ್ರಮಾಣದ ಅನುದಾನವನ್ನು ನಿಗದಿಪಡಿಸಿರುವುದೇ ಇದಕ್ಕೆ ಸಾಕ್ಷಿ. ಇದು ಗುರಿಗಳನ್ನು ಮಹತ್ವಾಕಾಂಕ್ಷೆಯಿಂದ ಸಾಧಿಸಿ ಮೂಲಭೂತ ಕ್ಷೇತ್ರವನ್ನು ಮುನ್ನೆಗೆತದ ಸ್ಥಿತಿಗೆ ಕರೆದೊಯ್ಯಬಹುದಾಗಿದೆ. ಇದು ಆರ್ಥಿಕ ಬೆಳವಣಿಗೆಗೆ ಉತ್ತೇಜನಕಾರಿಯಾಗಿದ್ದು ಯುವ ಜನತೆಗೆ ಸಾಕಷ್ಟು ಉದ್ಯೋಗಾವಕಾಶವನ್ನು ಕಲ್ಪಿಸಲಿದೆ. ವಿದೇಶಿ ಹೂಡಿಕೆಗೆ ಸೂಕ್ತ ವೇದಿಕೆಯನ್ನು ಕಲ್ಪಸಬಲ್ಲ ಈ ಯೋಜನೆಗಳು ಗ್ರಾಮೀಣ ಭಾರತಕ್ಕೆ ಹೊಸ ಜೀವನವನ್ನು ಒದಗಿಸಲಿವೆ.

ಮುನ್ನೆಗೆತವನ್ನು ಸಾಧಿಸುವ ಉದ್ದೇಶದ ಕಾಲಘಟ್ಟ ಕೊಂಚ ವಿಸ್ತಾರವಾಗಬಹುದು. ಏಕೆಂದರೆ ಹಲವಾರು ಸವಾಲುಗಳನ್ನು ಇಲ್ಲಿ ಎದುರಿಸಬೇಕಾಗಿದೆ.ಈ ವಿಸ್ತಾರವು ಯೋಜನೆಯ ವೆಚ್ಚ ಮತ್ತು ಸಮಯದ ಮಿತಿ ಹೆಚ್ಚಳಕ್ಕೂ ಕಾರಣವಾಗಬಲ್ಲದು. ಭೂಮಿಯನ್ನು ವಶಪಡಿಸಿಕೊಳ್ಳುವುದು, ಪರಿಸರ ಮಾಲಿನ್ಯದ ಕುರಿತ ಪರವಾನಗಿ, ಕಾನೂನು ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳು, ವಿವಿಧ ಸಚಿವಾಲಯಗಳ ನಡುವಿನ ಹೊಂದಾಣಿಕೆ, ಕೌಶಲ್ಯಪೂರಿತ ಉದ್ಯೋಗಿಗಳ ಲಭ್ಯತೆ, ಯೋಜನೆಯಲ್ಲಿ ಅವರ ತಕ್ಷಣದ ತೊಡಗಿಕೊಳ್ಳುವಿಕೆ, ಸುರಕ್ಷತೆ ಮತ್ತು ಹಣಕಾಸಿನ ಅಂಶಗಳು – ಇತ್ಯಾದಿ ಸಂಗತಿಗಳು ಸಾಕಷ್ಟು ಸಮಯವನ್ನು ಬೇಡುವುದರಿಂದ ಉದ್ದೇಶಿತ ಕಾಲಮಿತಿ ಮತ್ತು ವೆಚ್ಚ ಎರಡೂ ಸಾಧ್ಯವಾಗದೆ ಹೋಗ ಬಹುದು.

ಸರ್ಕಾರದ ಬಳಿ ಈ ಗುರಿಯನ್ನು ಸಾಧಿಸಲು ಸಮಯ ಕಡಿಮೆ ಇದೆ. ಇದಕ್ಕಾಗಿ ಈ ಯೋಜನೆಗಳನ್ನು ಪ್ರತಿನಿತ್ಯವೂ ಪರಾಮರ್ಶಿಸಿ ಸಂಬಂಧಿಸಿದ ವೆಬ್ ಸೈಟ್‌ಗಳಲ್ಲಿ ಪ್ರಗತಿಯನ್ನು ಸೂಚಿಸ ಬೇಕು ಇಲ್ಲದಿದ್ದರೆ ವಾಸ್ತವಿಕ ಅಂದಾಜು ಘಟ್ಟಕ್ಕೇ ಯೋಜನೆಯ ಪ್ರಗತಿ ಬಂದು ನಿಂತು ಬಿಡಬಹುದು. ❑

# ದುರ್ಬಲ ವರ್ಗಗಳ ಕಲ್ಯಾಣ



* ಶ್ರೀಕರ್ ನಾಯಕ್
** ಅಂಜಲಿ ಬನ್ಸಾಲಿ

**ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಹಾಗೂ ಇತರೆ ಸಾಮಾಜಿಕ ಸಮುದಾಯಗಳ ಯುವಕರಿಗೆ ಉದ್ಯೋಗ ಹಾಗೂ ಉದ್ಯಮಶೀಲತಾ ಅವಕಾಶಗಳನ್ನು ಒದಗಿಸುವುದು ಆಯವ್ಯಯದ ಮತ್ತೊಂದು ಆದ್ಯತಾ ವಲಯವಾಗಿದೆ.**

ಕೇಂದ್ರ ಸರ್ಕಾರದ 2017–18ನೇ ಸಾಲಿನ ಆಯವ್ಯಯವು ದುರ್ಬಲ ಹಾಗೂ ಶೋಷಿತ ವರ್ಗಗಳ ಅಭಿವೃದ್ಧಿ ಬಗ್ಗೆ ಭರವಸೆಯ ದೃಷ್ಟಿಕೋನ ಹೊಂದಿದೆ. ಈ ಆಯವ್ಯಯದಲ್ಲಿ ಒಟ್ಟಾರೆ ಗ್ರಾಮೀಣ ಪ್ರದೇಶದ ಮೂಲಭೂತ ಸೌಲಭ್ಯ ವರ್ಧನೆ ಹಾಗೂ ಬಡತನ ನಿವಾರಣೆಯ ಉದ್ದೇಶವಿದೆ. ಟೆಕ್ ಇಂಡಿಯಾ ತತ್ವದ ಮೇಲೆ, ಅಂದರೆ ಪರಿವರ್ತನೆ, ಸಶಕ್ತೀಕರಣ ಹಾಗೂ ಸ್ವಚ್ಛ ಭಾರತದ ಪರಿಕಲ್ಪನೆಯಲ್ಲಿ ಈ ಆಯವ್ಯಯ ಮಂಡಿಸಲಾಗಿದೆ. ಪರಿವರ್ತನೆ, ಸಶಕ್ತೀಕರಣ ಹಾಗೂ ಸ್ವಚ್ಛತೆ ಎಂಬ ಪದಗಳು ಇಲ್ಲಿ ನಿಖರವಾಗಿ ಸಮಾಜದ ಶೋಷಿತ ಹಾಗೂ ದುರ್ಬಲ ವರ್ಗದವರ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ. ಆಡಳಿತದ ಗುಣಮಟ್ಟವು ಜನರ ಜೀವನ ಮಟ್ಟದ ಮೇಲೆ ನೇರ ಪರಿಣಾಮ ಹೊಂದಿರುವುದರಿಂದ ಆಡಳಿತದ ಗುಣಮಟ್ಟವನ್ನು ಸುಧಾರಿಸುವ ಕಡೆಗೆ ಗಮನಹರಿಸಲಾಗಿದೆ. ಸಮಾಜದ ವಿವಿಧ ವರ್ಗಗಳ ಸಬಲೀಕರಣದ ಉದ್ದೇಶವನ್ನು ಈ ಆಯವ್ಯಯ ಹೊಂದಿದೆ. ವಿಶೇಷವಾಗಿ, ದುರ್ಬಲ ವರ್ಗದವರ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಂಡು ಅವರ ಜೀವನ ಗುಣಮಟ್ಟವನ್ನು ಸುಧಾರಿಸುವ ಧ್ಯೇಯೋದ್ದೇಶ ಹೊಂದಿದೆ.

ಸಾಮಾಜಿಕ ವರ್ಗಗಳಾದ ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ, ಮಹಿಳೆಯರು, ಮಕ್ಕಳು, ಅಲ್ಪಸಂಖ್ಯಾತರು, ವಿಶೇಷಚೇತನರು, ಮುಂತಾದವರ ಶ್ರೇಯೋಭಿವೃದ್ಧಿಗೆ ವಿಶೇಷ ಗಮನಹರಿಸಬೇಕಾಗಿದೆ. ಈ ವರ್ಗಗಳ ಆರ್ಥಿಕ ಹಾಗೂ ಸಾಮಾಜಿಕ ಜೀವನ ಸುಧಾರಣೆ ಮಾಡುವ ಮೂಲಕ ಅವರ ಸ್ಥಾನಮಾನವನ್ನು ಹೆಚ್ಚಿಸುವ ಸರ್ಕಾರದ ಉದ್ದೇಶವನ್ನು ಈ ಆಯವ್ಯಯದಲ್ಲಿ ಪ್ರದರ್ಶಿಸಲಾಗಿದೆ. ಈ ವರ್ಗಗಳಿಗೆ ನೀಡುವ ಅನುದಾನ ಹಂಚಿಕೆಯಲ್ಲಿ ವಿವಿಧ ಸಚಿವಾಯಲಗಳಲ್ಲಿ ಗಣನೀಯವಾದ ಏರಿಕೆಯನ್ನು ಕಾಣಬಹುದು.

ಪ್ರಮುಖವಾಗಿ ಅನುದಾನ ಹೆಚ್ಚಳವಾಗಿರುವ ಸಚಿವಾಲಯಗಳು ಇಂತಿವೆ.

1. ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ (2016–17ನೇ ಸಾಲಿನ ವರೆಗೂ ಈ ಅನುದಾನವನ್ನು ಪರಿಶಿಷ್ಟ ಜಾತಿಯ ಉಪ ಯೋಜನೆ ಎಂದು ಕರೆಯಲಾಗುತ್ತಿತ್ತು) 2016–17ನೇ ಸಾಲಿನಲ್ಲಿ 38,833 ಕೋಟಿ ರೂ.ಗಳು ಇತ್ತು. ಪ್ರಸಕ್ತ 2017–18ರ ಆಯವ್ಯಯದಲ್ಲಿ 52,393 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, ಈ ಮೊತ್ತದಲ್ಲಿ ಶೇ. 35 ರಷ್ಟು ಅನುದಾನ ಹೆಚ್ಚಳ ಮಾಡಲಾಗಿದೆ.

2. ಬುಡಕಟ್ಟು ಜನಾಂಗದವರ ಕಲ್ಯಾಣಕ್ಕಾಗಿ (2016–17ನೇ ಬುಡಕಟ್ಟು ಜನಾಂಗಗಳ ಉಪ ಯೋಜನೆ ಎಂದು ಕರೆಯಲಾಗುತ್ತಿತ್ತು) 2016–17ನೇ ಸಾಲಿನಲ್ಲಿ 24005.39 ಕೋಟಿ ರೂ.ಗಳು ಇದ್ದು, 2017–18ನೆ ಸಾಲಿಗೆ 31920 ಕೋಟಿ ರೂ.ಗಳಿಗೆ ಹೆಚ್ಚಿಸಿದೆ. ಈ ಮೊತ್ತದಲ್ಲಿ ಶೇ. 33 ರಷ್ಟು ಹೆಚ್ಚಳವಾಗಿದೆ.

* ಸಲಹೆಗಾರರು (ಎಸ್‌ಜೆಇ), ** ವೈ.ಪಿ., ನೀತಿ ಆಯೋಗ. E-mail : * srikara@gov.in ** anjali.bansal@gov.in

3. ಲಿಂಗ ಆಯವ್ಯಯ (ಜೆಂಡರ್ ಬಜೆಟ್)ಕ್ಕೆ 90769.80 ಕೋಟಿ ರೂ.ಗಳು 2016–17ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿತ್ತು. ಈ ಅನುದಾನ ಪ್ರಸಕ್ತ ಆಯವ್ಯಯದಲ್ಲಿ 113326.65 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಅಂದರೆ ಶೇ. 24.85 ರಷ್ಟು ಹೆಚ್ಚಳ ಮಾಡಲಾಗಿದೆ.

4. ಮಕ್ಕಳ ಕಲ್ಯಾಣಕ್ಕಾಗಿ ಅನುದಾನ ಹಂಚಿಕೆಯಲ್ಲಿಯೂ ಹೆಚ್ಚಳವಾಗಿದೆ. 2016–17ನೇ ಸಾಲಿನಲ್ಲಿ 65758.45 ಕೋಟಿ ರೂ.ಗಳು ಈ ಉದ್ದೇಶಕ್ಕೆ ಹಂಚಿಕೆಯಾಗಿತ್ತು. 2017–18ನೇ ಸಾಲಿನಲ್ಲಿ 71305.35 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ನೀಡಿಕೆಯನ್ನು ಶೇ. 8.44 ರಷ್ಟು ಹೆಚ್ಚಿಸಲಾಗಿದೆ.

5. ಅಲ್ಪಸಂಖ್ಯಾತರ ಸಚಿವಾಲಯಕ್ಕೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 4195 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಮೊತ್ತ ಹಿಂದಿನ 2016–17ನೇ ಸಾಲಿನಲ್ಲಿ 3827 ಕೋಟಿ ರೂ.ಗಳು ಆಗಿತ್ತು. ಇದರಿಂದ ಶೆ. 8.76 ರಷ್ಟು ಅನುದಾನ ಹಂಚಿಕೆ ಏರಿಕೆಯಾಗಿದೆ.



ಪರಿಶಿಷ್ಟ ಜಾತಿಯ ಕಲ್ಯಾಣಕ್ಕೆ ಸಂಬಂಧಿಸಿದಂತೆ 26 ಸಚಿವಾಲಯಗಳು/ಇಲಾಖೆಗಳು ಅನುದಾನ ಹಂಚಿಕೆ ಮಾಡಿದ್ದರೆ ಬುಡಕಟ್ಟು ಜನಾಂಗದವರ ಕಲ್ಯಾಣಕ್ಕೆ 32 ಸಚಿವಾಲಯಗಳು/ಇಲಾಖೆಗಳು ಅನುದಾನ ಹಂಚಿಕೆ ಮಾಡಿವೆ. ಒಟ್ಟಾರೆ ಅನುದಾನ ಹಂಚಿಕೆಯಲ್ಲಿ ಗಣನೀಯವಾದ ಏರಿಕೆಯನ್ನು ಕಾಣಬಹುದಾಗಿದೆ. ಕೃಷಿ, ಕುಡಿಯುವ ನೀರು, ವಸತಿ, ಆರೋಗ್ಯ ಶಿಕ್ಷಣ ಮುಂತಾದ ಕ್ಷೇತ್ರದಲ್ಲಿ ಕೆಲವು ಯೋಜನೆಗಳು ಗಮನ ಸೆಳೆಯುತ್ತವೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದ ಹಂಚಿಕೆಯನ್ನು ಪಟ್ಟಿ 1 ಮತ್ತು ಪಟ್ಟಿ 2ರಲ್ಲಿ ಪ್ರತ್ಯೇಖವಾಗಿ ತೋರಿಸಲಾಗಿದೆ.

ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯು 2016–17ನೇ ಸಾಲು ಮತ್ತು 2017–18ನೇ ಸಾಲಿನಲ್ಲಿ ಕ್ರಮವಾಗಿ ಶೇ. 61 ಮತ್ತು ಶೇ. 41 ರಷ್ಟು ಹೆಚ್ಚಳವನ್ನು ಕಂಡಿವೆ. 2017–18ನೇ ಸಾಲಿನಲ್ಲಿ ಹೊಸದಾಗಿ 'ರೈತರ ಅಲ್ಪಾವಧಿ ಸಾಲದ ಮೇಲೆ ಬಡ್ಡಿ ಸಹಾಯಧನ' ನೀಡುವ ಯೋಜನೆಯನ್ನು ಆರಂಭಿಸಲಾಗುತ್ತಿದೆ. ಇದಕ್ಕಾಗಿ 15000 ಕೋಟಿ ರೂ.ಗಳನ್ನು ಹಂಚಿಕೆ ಮಾಡಿದ್ದು, ಈ ಪೈಕಿ ಪರಿಶಿಷ್ಟ ಜಾತಿಯವರಿಗೆ 2430 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪರಿಶಿಷ್ಟ ಜಾತಿಯವರಿಗೆ ಅನುದಾನದಲ್ಲಿ ಹಂಚಿಕೆ ಮಾಡಿರುವ ಇತರ ಪ್ರಮುಖ ಯೋಜನೆಗಳೆಂದರೆ ಸ್ವಚ್ಛ ಭಾರತ್ ಮಿಷನ್ – ಗ್ರಾಮೀಣ (ಶೇ. 55), ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) – ಗ್ರಾಮೀಣ (ಶೇ. 50), ಮತ್ತು ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ (ಪಿಎಂಕೆವಿವೈ ಶೇ. 51).

ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮಾಡಲಾಗಿರುವ ಹಂಚಿಕೆಯಲ್ಲಿಯೂ ಸಹಾ ಇದೇ ರೀತಿಯ ಹೆಚ್ಚಳವನ್ನು ನೋಡಬಹುದು. ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಯಲ್ಲಿ 83% ಏರಿಕೆಯಾಗಲಿದೆ. ಪ್ರಧಾನಮಂತ್ರಿ ಕೃಷಿ

**ಪಟ್ಟಿ – 1 : ಪ್ರಮುಖ ಯೋಜನೆಗಳಲ್ಲಿ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಮಾಡಲಾದ ಹಂಚಿಕೆ ವಿವರ**

ಬಜೆಟ್ ಅಂದಾಜು (ರೂ. ಕೋಟಿಗಳಲ್ಲಿ)

| ಸಚಿವಾಲಯಗಳು/ಇಲಾಖೆಗಳು | ಯೋಜನೆಗಳು | 2016–17 ಸಾಲಿನಲ್ಲಿ | 2017–18 ಸಾಲಿನಲ್ಲಿ | ಶೇಕಡವಾರು ಏರಿಕೆ |
|---|---|---|---|---|
| ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ | ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ | 921.00 | 1484.67 | 61.20 |
| ಕೃಷಿ ಸಹಕಾರ ಮತ್ತು ರೈತರ ಕಲ್ಯಾಣ | ರೈತರ ಅಲ್ಪಾವಧಿ ಸಾಲದ ಮೇಲೆ ಬಡ್ಡಿ ಸಹಾಯಧನ ಯೋಜನೆ | – | 2430.00 | ಹೊಸ ಯೋಜನೆ |
| ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ | ಪ್ರಧಾನ ಮಂತ್ರಿ ಕೃಷಿ ಸಿಂಚಯ ಯೋಜನೆ | 391.32 | 550.80 | 40.75 |
| ಕುಡಿಯುವ ನೀರು ಮತ್ತು ನೈರ್ಮಲ್ಯ | ಸ್ವಚ್ಛ ಭಾರತ ಮಿಷನ್–ಗ್ರಾಮೀಣ | 1980.00 | 3068.62 | 54.98 |
| ಕುಡಿಯುವ ನೀರು ಮತ್ತು ನೈರ್ಮಲ್ಯ | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಮಿಷನ್ | 1100.00 | 1331.00 | 21 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ | 3931.02 | 4272.93 | 8.69 |
| ಗ್ರಾಮೀಣ ಅಭಿವೃದ್ಧಿ | ಪ್ರಧಾನ ಮಂತ್ರಿ ಆವಾಸ್ ಯೋಜನಾ (ಪಿಎಂಎವೈ)–ಗ್ರಾಮೀಣ | 5116.74 | 7652.72 | 49.56 |
| ಕೌಶಲ್ಯ ಅಭಿವೃದ್ಧಿ | ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ | 311.00 | 470.00 | 51.12 |
| ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | ನವೋದಯ ವಿದ್ಯಾಲಯ ಸಮಿತಿ | 380.00 | 418.27 | 10.07 |

ಸಿಂಚಾಯಿ ಯೋಜನೆಯಲ್ಲಿ ಶೇ 45% ಏರಿಕೆಯಾಗಲಿದೆ. ಸ್ವಚ್ಛ ಭಾರತ್ ಮಿಷನ್–ಗ್ರಾಮೀಣ ಯೋಜನೆಯಲ್ಲಿ ಶೇ 55% ಏರಿಕೆಯಾಗಲಿದೆ. ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣ ಯೋಜನೆಯಲ್ಲಿ ಶೇ 39% ಏರಿಕೆಯಾಗಲಿದೆ. ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯಲ್ಲಿ ಶೇ. 51ರಷ್ಟು ಏರಿಕೆಯಾಗಲಿದೆ. ಈ ಹಂಚಿಕೆಯಲ್ಲಿ 2016–17 ನೇ ಸಾಲಿನ ಆಯವ್ಯಯಕ್ಕಿಂತ 2017–18ರ ಆಯವ್ಯಯದಲ್ಲಿ ಏರಿಕೆಯನ್ನು ಕಾಣಬಹುದು. 2017–18ರ ಸಾಲಿನಲ್ಲಿ ಹೊಸದಾಗಿ ರೈತರ ಅಲ್ಪಾವಧಿ ಸಾಲಕ್ಕೆ ಬಡ್ಡಿ ಸಹಾಯಧನ ನೀಡುವ ಯೋಜನೆಯನ್ನು ಆರಂಭಿಸಲಾಗುತ್ತಿದೆ. ಈ ಯೋಜನೆಗೆ ಬುಡಕಟ್ಟು ಜನಾಂಗದವರಿಗೆ 1200 ಕೋಟಿ ರೂಪಾಯಿಗಳ ಹಂಚಿಕೆಯನ್ನು ಮಾಡಲಾಗುತ್ತಿದೆ. ಈ ವಿವರಗಳನ್ನು ಪಟ್ಟಿ – 2 ರಲ್ಲಿ ತೋರಿಸಲಾಗಿದೆ.

ಈ ಆಯವ್ಯಯದಲ್ಲಿ ಪರಿಶಿಷ್ಟ ಜಾತಿಗಳು, ಬುಡಕಟ್ಟು ಜನಾಂಗಗಳು, ಇತರೆ ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರು ಹಾಗೂ ವಿಶೇಷ ಚೇತನರ ಸಮುದಾಯಗಳ ವ್ಯವಹಾರ ನಡೆಸುವ ನೋಡಲ್ ಇಲಾಖೆಗಳು ಹಾಗೂ ನೋಡಲ್ ಸಚಿವಾಲಯಗಳಿಗೆ ಪೂರಕವಾದ ಖರ್ಚು ವೆಚ್ಚ ಅಂಶಗಳನ್ನು ಪ್ರದರ್ಶಿಸಲಾಗಿದೆ. ಈ ಸಾಮಾಜಿಕ ವಿಷಯಗಳಿಗೆ ಸಂಬಂಧಪಟ್ಟ ಸಚಿವಾಲಯಗಳು / ಇಲಾಖೆಗಳಿಗೆ ಆಯವ್ಯಯದಲ್ಲಿ ಮಾಡಲಾದ ಹಂಚಿಕೆಯ ವಿವರಗಳನ್ನು ಪಟ್ಟಿ–3ರಲ್ಲಿ ತೋರಿಸಲಾಗಿದೆ.



ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗಗಳ ಹಿಂದುಳಿವಿಕೆಗೆ ಬಹಳ ಮುಖ್ಯಕಾರಣ ಶಿಕ್ಷಣದಲ್ಲಿನ ಕೊರತೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು, ಅರ್ಧದಲ್ಲಿ ಶಾಲೆ ಬಿಡುವ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ ಎಂದು ಗಮನಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಆ ಕುಟುಂಬಗಳ ಬಡತನದ ಪರಿಸ್ಥಿತಿ. ಬಹುತೇಕ ಪ್ರಕರಣಗಳಲ್ಲಿ ಈ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕರು ಬೆಂಬಲ ನೀಡಲು ಸಮರ್ಥರಿಲ್ಲದಿರುವುದು ಅಥವಾ ಪೋಷಕರ ಬೆಂಬಲಕ್ಕೆ ಮಕ್ಕಳು ಹೆಚ್ಚುವರಿಯಾಗಿ ದುಡಿದು ಕುಟುಂಬದ ಆದಾಯ ಹೆಚ್ಚಿಸಲು ಶಾಲೆ ಬಿಡುವ ಅಂಶಗಳು ಕಂಡು ಬಂದಿವೆ. ಈ ಅಂಶದ ಬಗ್ಗೆ ಆಯವ್ಯಯದಲ್ಲಿ ಹೆಚ್ಚು ಒತ್ತು ನೀಡಲಾಗಿದೆ. ಉದಾರಣೆಗೆ ದುರ್ಬಲ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನದ ಯೋಜನೆಗಳಿಗೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿನ ಅನುದಾನವನ್ನು ಆಯವ್ಯಯದಲ್ಲಿ ನೀಡಲಾಗಿದೆ. 2016–17ರಲ್ಲಿ ಪರಿಶಿಷ್ಟ ಜಾತಿಯ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನ 2791 ಕೋಟಿ ರೂ. ಇತ್ತು. ಈ ಮೊತ್ತ 2017–18 ರಲ್ಲಿ 3348 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇಲ್ಲಿ ಶೇ 20% ಹೆಚ್ಚಳ ಉಂಟಾಗಿದೆ.

ಮನೆ ಮತ್ತು ಶಾಲೆಯ ನಡುವಿನ ಅಂತರವು ಸಹಾ ದುರ್ಬಲ ವರ್ಗಗಳ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಶಾಲೆಯಿಂದ ಹೊರಗೆ ಉಳಿಯಲು ಪ್ರಮುಖ ಕಾರಣವಾಗಿದೆ. 2017–18ರ ಆಯವ್ಯಯದಲ್ಲಿ ಈ ಸಮಸ್ಯೆಯ ಬಗ್ಗೆಯೂ ಗಮನ ಸೆಳೆಯಲಾಗಿದೆ. ಈ ಉದ್ದೇಶದಿಂದ 2016–17ರ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಸಮುದಾಯಗಳ ಬಾಲಕರು ಮತ್ತು ಬಾಲಕಿಯರ ಹಾಸ್ಟೆಲ್ ನಿರ್ಮಾಣಕ್ಕೆ ಒದಗಿಸಿದ್ದ 45 ಕೋಟಿ ರೂ.ಗಳ ಮೊತ್ತವನ್ನು 2017–18ನೇ ಆಯವ್ಯಯದಲ್ಲಿ

**ಪಟ್ಟಿ – 2 : ಪ್ರಮುಖ ಯೋಜನೆಗಳಲ್ಲಿ ಬುಡಕಟ್ಟು ಜನಾಂಗದವರ ಕಲ್ಯಾಣಕ್ಕಾಗಿ ಮಾಡಲಾದ ಹಂಚಿಕೆ ವಿವರ**

ಬಜೆಟ್ ಅಂದಾಜು (ರೂ. ಕೋಟಿಗಳಲ್ಲಿ)

| ಸಚಿವಾಲಯಗಳು/ಇಲಾಖೆಗಳು | ಯೋಜನೆಗಳು | 2016–17 ಸಾಲಿನಲ್ಲಿ | 2017–18 ಸಾಲಿನಲ್ಲಿ | ಶೇಕಡವಾರು ಏರಿಕೆ |
|---|---|---|---|---|
| ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ | ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ | 392.86 | 719.04 | 83.02 |
| ಕೃಷಿ ಸಹಕಾರ ಮತ್ತು ರೈತರ ಕಲ್ಯಾಣ | ರೈತರ ಅಲ್ಪಾವಧಿ ಸಾಲದ ಮೇಲೆ ಬಡ್ಡಿ ಸಹಾಯಧನ ಯೋಜನೆ | – | 1200.00 | ಹೊಸ ಯೋಜನೆ |
| ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ | ಪ್ರಧಾನ ಮಂತ್ರಿ ಕೃಷಿ ಸಿಂಚಯ ಯೋಜನೆ | 187.20 | 272.00 | 45.29 |
| ಕುಡಿಯುವ ನೀರು ಮತ್ತು ನೈರ್ಮಲ್ಯ | ಸ್ವಚ್ಛ ಭಾರತ ಮಿಷನ್–ಗ್ರಾಮೀಣ | 900.00 | 1394.83 | 54.98 |
| ಕುಡಿಯುವ ನೀರು ಮತ್ತು ನೈರ್ಮಲ್ಯ | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಮಿಷನ್ | 500.00 | 605.00 | 21 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ | 2125.22 | 2332.28 | 9.74 |
| ಗ್ರಾಮೀಣ ಅಭಿವೃದ್ಧಿ | ಪ್ರಧಾನ ಮಂತ್ರಿ ಆವಾಸ್ ಯೋಜನಾ (ಪಿಎಂಎವೈ)–ಗ್ರಾಮೀಣ | 3823.43 | 5318.28 | 39.09 |
| ಕೌಶಲ್ಯ ಅಭಿವೃದ್ಧಿ | ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ | 157.75 | 238.15 | 50.96 |
| ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | ನವೋದಯ ವಿದ್ಯಾಲಯ ಸಮಿತಿ | 203.00 | 223.81 | 10.25 |



155 ಕೋಟಿಗೆ ಹೆಚ್ಚಿಸಲಾಗಿದೆ. ಇದಲ್ಲದೆ, ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವ ಯೋಜನೆಗಳಲ್ಲಿಯೂ ಅನುದಾನವನ್ನು ಹೆಚ್ಚಿಸಲಾಗಿದೆ. ಉದಾಹರಣೆಗೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ರಾಷ್ಟ್ರೀಯ ಫೆಲೋಶಿಫ್ ಅನುದಾನವನ್ನು 2016–17ನೇ ಸಾಲಿನಲ್ಲಿ ಇದ್ದ 200 ಕೋಟಿ ರೂ.ಗಳನ್ನು 2017–18ನೇ ಸಾಲಿನಲ್ಲಿ 230 ಕೋಟಿ ರೂ. ಗಳಿಗೆ ಹೆಚ್ಚಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯಿಂದ ಪ್ರಧಾನ ಮಂತ್ರಿ ಸಂಶೋಧನಾ ಫೆಲೋಶಿಪ್ ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಲ್ಲಿ 2017–18ನೇ ಸಾಲಿನಲ್ಲಿ 12 ಕೋಟಿ ರೂ. ಗಳ ಪರಿಶಿಷ್ಟ ಜಾತಿಯ ಘಟಕವು ಸೇರಿದೆ. ಬುಡಕಟ್ಟು ಜನಾಂಗದವರ ನಾಗರಿಕ ಹಕ್ಕುಗಳ ರಕ್ಷಣೆಯನ್ನು ಸರ್ಕಾರ ಆದ್ಯತಾ ವಲಯ ಎಂದು ಪರಿಗಣಿಸಿದ್ದು, 2017–18ರ ಕೇಂದ್ರದ ಆಯವ್ಯಯದಲ್ಲಿ ಇದನ್ನು ಕಾಣಬಹುದಾಗಿದೆ. ದೌರ್ಜನ್ಯ ತಡೆ ಕಾಯ್ದೆ 1989 ಮತ್ತು ನಾಗರಿಕ ಹಕ್ಕುಗಳ ರಕ್ಷಣಕಾಯ್ದೆ 1995ರ ಕಾಯ್ದೆಗಳನ್ನು ಜಾರಿಗೊಳಿಸುವ ಆಡಳಿತ ಯಂತ್ರವನ್ನು ಬಲಪಡಿಸಲು 2016–17ರಲ್ಲಿ 150 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಈ ಮೊತ್ತ 2017–18ನೇ ಸಾಲಿನಲ್ಲಿ 300 ಕೋಟಿ ರೂ. ಗಳಿಗೆ ಹೆಚ್ಚಿಸಲಾಗಿದೆ.

ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನ ಯೋಜನೆಗಳಂತೆ ಪ್ರಮುಖ ಯೋಜನೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ನೀಡಿದಂತೆ ಬುಡಕಟ್ಟು ಜನಾಂಗಗಳಿಗೂ ಅನುದಾನ ಹೆಚ್ಚಿಸಲಾಗಿದೆ. 2017–18ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ 1347 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಯೋಜನೆಗೆ 2016–17ರಲ್ಲಿ 1200 ಕೋಟಿರೂ. ಮೊತ್ತವನ್ನು ಒದಗಿಸಲಾಗಿತ್ತು. ಈ ಯೋಜನೆಯಡಿ ಶೇಕಡ 12.25ರಷ್ಟು ಹೆಚ್ಚಿಸಲಾಗಿದೆ. ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೀಡುವ ವಿದ್ಯಾರ್ಥಿ ವೇತನ ಹಾಗೂ ರಾಷ್ಟ್ರೀಯ ಫೆಲೋಶಿಪ್ ಯೋಜನೆಗಳಲ್ಲಿಯೂ ಅನುದಾನ ಹೆಚ್ಚಿಸಲಾಗಿದೆ. ಈ ಉದ್ದೇಶಕ್ಕೆ 2016–17 ರಲ್ಲಿ ಇದ್ದ 50 ಕೋಟಿ ರೂ. ಗಳ ಮೊತ್ತವನ್ನು 2017–18ರ ಸಾಲಿನಲ್ಲಿ 120 ಕೋಟಿ ರೂ.ಗೆ ಹೆಚ್ಚಿಸಿದ್ದು, ಶೇ 140 ರಷ್ಟು ಹೆಚ್ಚಳ ಉಂಟಾಗಿದೆ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ನೀತಿ ಹಾಗೂ ಕಾರ್ಯಕ್ರಮವನ್ನು ರೂಪಿಸಲು ಪ್ರಾಥಮಿಕ ಹಾಗೂ ಪರಿಣಾಮಕಾರಿ ಸಂಪನ್ಮೂಲವನ್ನು ಪಡೆಯುವ ಉದ್ದೇಶದಿಂದ ಬುಡಕಟ್ಟು ಸಂಶೋಧನ ಸಂಸ್ಥೆಗಳನ್ನು ಉತ್ತೇಜಿಸುವ ಸರ್ಕಾರದ ಉದ್ದೇಶವು ಸಹಾ ಈ ಆಯವ್ಯಯದಲ್ಲಿ ಕಂಡುಬರುತ್ತದೆ.

ಬುಡಕಟ್ಟು ಸಂಶೋಧನಾ ಸಂಸ್ಥೆಗಳ ಉತ್ತೇಜನಕ್ಕಾಗಿ 2016–17ನೇ ಸಾಲಿನಲ್ಲಿ 21 ಕೋಟಿ ರೂ. ಅನುದಾನ ನೀಡಲಾಗುತ್ತು ಈ ಮೊತ್ತವನ್ನು 2017–18ರಲ್ಲಿ 80



ಕೋಟಿ ರೂ.ಗೆ ಹೆಚ್ಚಿಸಲಾಗಿದ್ದು ಸುಮಾರು 5 ಪಟ್ಟು ಹೆಚ್ಚಾದಂತೆ ಆಗಿದೆ. 2017–18ರ ಆಯವ್ಯಯದಲ್ಲಿ ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಅಲ್ಪಸಂಖ್ಯಾತರ ಸಚಿವಾಲಯಕ್ಕೆ ಅನುದಾನ ಹಂಚಿಕೆಯನ್ನು ಶೇ 96% ರಷ್ಟು 2017–18ರಲ್ಲಿ ಹೆಚ್ಚಿಸಲಾಗಿದ್ದು, 4195 ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಈ ಮೊತ್ತ 2016–17ರಲ್ಲಿ 3827 ಕೋಟಿ ರೂ. ಇತ್ತು. ಒಟ್ಟಾರೆ ಅಲ್ಪಸಂಖ್ಯಾತರ ಶೈಕ್ಷಣಿಕ ಸಬಲೀಕರಣಕ್ಕೆ ಒದಗಿಸಿರುವ ಅನುದಾನ 2016–17ರಲ್ಲಿ ಇದ್ದ 1949 ಕೋಟಿ ರೂ.ಗಳಿಂದ 2054 ಕೋಟಿ ರೂ.ಗೆ 2017–18ರಲ್ಲಿ ಹೆಚ್ಚಿಸಲಾಗಿದ್ದು ಒಟ್ಟು 105 ಕೋಟಿರೂ. ಹೆಚ್ಚಿಸಿದಂತಾಗಿದೆ. ಇದೆ ರೀತಿ ಈ ಸಮುದಾಯದ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯಕ್ಕೆ 2016–17ರಲ್ಲಿ ಇದ್ದ 542 ಕೋಟಿ ರೂ.ಗಳನ್ನು 2017–18ರಲ್ಲಿ 635 ಕೋಟಿಗೆ ಹೆಚ್ಚಿಸಿದ್ದು ಶೇ 17% ಹೆಚ್ಚಿದಂತಾಗಿದೆ.

ವಿಶೇಷ ಗಮನ ಸೆಳೆದಿರುವ ಮತ್ತೊಂದು ಸಾಮಾಜಿಕ ನೋಡಲ್ ಇಲಾಖೆ ಎಂದರೆ ವಿಶೇಷಚೇತನರ ಸಬಲೀಕರಣ ಇಲಾಖೆಯಾಗಿದೆ. ಈ ಇಲಾಖೆಗೆ ಶೇ 10% ಹೆಚ್ಚುವರಿ ಅನುದಾನ ದೊರೆಯಲಿದ್ದು 2016–17ರಲ್ಲಿ 784 ಇದ್ದ ಕೋಟಿ ರೂ.ಗಳ ಅನುದಾನವನ್ನು 2017–18 ರಲ್ಲಿ 855 ಕೋಟಿ ರೂ.ಗಳಿಗೆ ಏರಿಕೆ ಮಾಡಲಾಗಿದೆ. ಪ್ರತಿಯೊಬ್ಬರಿಗೂ ಒಂದು ಸೂರು ಕಲ್ಪಿಸಿಕೊಡಬೇಕು ಎಂಬ ಧ್ಯೇಯೋದ್ದೇಶವನ್ನು ಸರ್ಕಾರ ಹೊಂದಿದೆ. ಈ ಧ್ಯೇಯೋದ್ದೇಶದ ಸಾಕಾರಕ್ಕಾಗಿ ಈಗಾಗಲೇ ಪ್ರಧಾನ ಮಂತ್ರಿ ಆವಾಸ್ ಯೋಜನ–ಗ್ರಾಮೀಣ ಯೋಜನೆಯಡಿ ವಸತಿಗಳನ್ನು ನಿರ್ಮಿಸುವ ಕಾರ್ಯ

**ಪಟ್ಟಿ – 3 : ಸಾಮಾಜಿಕ ಸಚಿವಾಲಯಗಳು ಹಾಗೂ ಇಲಾಖೆಗಳಿಗೆ 2017–18ರ ಆಯವ್ಯಯದಲ್ಲಿನ ವೆಚ್ಚದ ವಿವರಗಳು ಇಂತಿವೆ**

(ರೂ. ಕೋಟಿಗಳಲ್ಲಿ)

| ಸಚಿವಾಲಯಗಳು/ಇಲಾಖೆಗಳು | 2016–17 ಸಾಲಿನಲ್ಲಿ | 2017–18 ಸಾಲಿನಲ್ಲಿ | ಹೆಚ್ಚಳದ ಶೇಖಡವಾರು |
|---|---|---|---|
| ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ | 6566.95 | 6908.00 | 5.20 |
| ಬುಡಕಟ್ಟು ವ್ಯವಹಾರಗಳ ಇಲಾಖೆ | 4827.00 | 5329.00 | 10.39 |
| ಅಲ್ಪಸಂಖ್ಯಾತರ ವ್ಯವಹಾರಗಳ ಇಲಾಖೆ | 3827.00 | 4195.00 | 9.61 |
| ವಿಶೇಷಚೇತನರ ಸಬಲೀಕರಣ ಇಲಾಖೆ | 784.00 | 855.00 | 9.05 |




ಪ್ರಗತಿಯಲ್ಲಿದೆ. ಪಟ್ಟಿ 1 ಮತ್ತು 2 ರಲ್ಲಿ ತೋರಿಸಿದಂತೆ ವಸತಿ ಉದ್ದೇಶಕ್ಕಾಗಿ ಪರಿಶಿಷ್ಟ ಜಾತಿಯವರಿಗೆ ಮಾಡಲಾದ ಹಂಚಿಕೆಯಲ್ಲಿ ಶೇ 50 ಹಾಗೂ ಬುಡಕಟ್ಟು ಜನಾಂಗದವರ ವಸತಿಗಾಗಿ ಮಾಡಲಾದ ಹಂಚಿಕೆಯಲ್ಲಿ ಶೇ.39 ರಷ್ಟು ಹೆಚ್ಚಿಸಲಾಗಿದೆ.

ಬಡಕುಟುಂಬದವರಿಗೆ ಎಲ್.ಪಿ.ಜಿ. ಅನಿಲ ಸಂಪರ್ಕವನ್ನು ಉಚಿತವಾಗಿ ಒದಗಿಸುವುದು ಸರ್ಕಾರದ ಅತ್ಯಂತ ಮಹತ್ವದ ಯಶಸ್ವಿ ಕ್ರಮವಾಗಿದೆ. ಈ ಯೋಜನೆಯನ್ನು ಮುಂದುವರಿಸಲು ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ 2016–17ರಲ್ಲಿ ಇದ್ದ 500 ಕೋಟಿ ರೂ.ಗಳನ್ನು 2017–18ರಲ್ಲಿ 520 ಕೋಟಿಗೆ ಹೆಚ್ಚಿಸಲಾಗಿದೆ.

ಮುಂದಿನ ಎರಡು ವರ್ಷಗಳಲ್ಲಿ 5 ಕೋಟಿ ಕುಟುಂಬಗಳಿಗೆ ಈ ಯೋಜನೆಯಡಿ ಎಲ್‌ಪಿಜಿ ಸಂಪರ್ಕವನ್ನು ಉಚಿತವಾಗಿ ಕಲ್ಪಿಸುವ ಗುರಿ ಹೊಂದಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಸಾಮಾಜಿಕ ಸಮುದಾಯಗಳ ಯುವಕರಿಗೆ ಉದ್ಯೋಗ ಹಾಗೂ ಉದ್ಯಮಶೀಲತಾ ಅವಕಾಶಗಳನ್ನು ಒದಗಿಸುವುದು ಆಯವ್ಯಯದ ಮತ್ತೊಂದು ಆದ್ಯತಾ ವಲಯವಾಗಿದೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳು ಈ ಮುಂದಿನಂತಿವೆ.


* ಸ್ಟ್ಯಾಂಡ್ ಅಪ್ ಇಂಡಿಯಾ ಕ್ರಮದ ಫಲವಾಗಿ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನಾಂಗಗಳ ಜನರಲ್ಲಿ ಉದ್ಯಮಶೀಲತಾ ಕೌಶಲ್ಯಗಳನ್ನು ಹೆಚ್ಚಿಸುವುದು. ಈ ಯೋಜನೆಗೂ ಆಯವ್ಯಯದಲ್ಲಿ 2017–18ರಲ್ಲಿ 520 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಈ ಮೊತ್ತ 2016–17ನೇ ಸಾಲಿನಲ್ಲಿ 500 ಕೋಟಿ ರೂ.ಗಳು ಇತ್ತು.

* ಕೈಗಾರಿಕಾ ಮೌಲ್ಯ ವಿಸ್ತರಣೆಗೆ (STRIVE) ಕೌಶಲ್ಯ ಬಲಪಡಿಸುವ ಮುಂದಿನ ಹಂತವನ್ನು ಆರಂಭಿಸಲು 2017–18ರಲ್ಲಿ 2200 ಕೋಟಿ ರೂ.ಗಳಲ್ಲಿ ಗುಣಮಟ್ಟ ವರ್ಧನೆ ಹಾಗೂ ಮಾರುಕಟ್ಟೆಗೆ ಸಂಬಂಧಿಸಿದ ತರಬೇತಿಯನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೊಡಲು ಹಾಗೂ ಕೈಗಾರಿಕಾ ಕ್ಲಸ್ಟರ್ ಮಾರ್ಗದ ಮೂಲಕ ಅಪ್ರೆಂಟಿಶಿಪ್ ಕಾರ್ಯಕ್ರಮಗಳನ್ನು ಬಲಪಡಿಸಲು ಉದ್ದೇಶಿಸಿದೆ.

* ಅರಿವು ಹಾಗೂ ಕೌಶಲ್ಯ ಗಳಿಸಲು 2017–18ರಲ್ಲಿ ಜೀವನೋಪಾಯ ಉತ್ತೇಜನ ಕಾರ್ಯಕ್ರಮ (ಸಂಕಲ್ಪ) ಆರಂಭಿಸಲಾಗುತ್ತಿದೆ. ಇದಕ್ಕಾಗಿ 4000 ಕೋಟಿ ರೂ.ಗಳ ಬಂಡವಾಳದಲ್ಲಿ 3.5 ಕೋಟಿ ಯುವಕರಿಗೆ ಮಾರುಕಟ್ಟೆಗೆ ಸಂಬಂಧಿಸಿದ ತರಬೇತಿ ನೀಡಲು ವಿನಿಯೋಗಿಸಲಾಗುತ್ತದೆ.

* 8000 ಕೋಟಿ ರೂ. ಬಂಡವಾಳದಲ್ಲಿ ನಬಾರ್ಡ್‌ನಲ್ಲಿ ಡೈರಿ (ಹೈನು) ಸಂಸ್ಕರಣೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗುವುದು. ಮುಂದಿನ ಮೂರು ವರ್ಷಗಳಲ್ಲಿ ಸಾಕಷ್ಟು ಸಂಸ್ಕರಣೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ದೇಶದಲ್ಲಿ ಡೈರಿ ಅಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತದೆ. ಆರಂಭದಲ್ಲಿ ಈ ನಿಧಿಯು 2000 ಕೋಟಿ ರೂ.ಗಳ ಬಂಡವಾಳದಲ್ಲಿ ಆರಂಭವಾಗುತ್ತಿದೆ.

* ಉಳಿದ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ಆಯವ್ಯಯದಲ್ಲಿ ಕೈಗೊಂಡ ಇತರ ಪ್ರಮುಖ ಕ್ರಮಗಳು ಮುಂದಿನಂತಿವೆ. ಹಿರಿಯ ನಾಗರಿಕರಿಗೆ ಆಧಾರ್ ಆಧಾರಿತ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ಕ್ರಮವನ್ನು ಪರಿಚರಿಸುವುದು. ಈ ಸ್ಮಾಟ್ ಕಾರ್ಡ್‌ಗಳಲ್ಲಿ ಹಿರಿಯ ನಾಗರಿಕರ ಆರೋಗ್ಯದ ವಿವರ ಸಹಾ ಇರುತ್ತದೆ. ಆರಂಭಿಕವಾಗಿ 2017–18 ರಲ್ಲಿ 15 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಯೋಜನೆಯನ್ನು ಕೈಗೊಳ್ಳಲಾಗುವುದು.



* ಮಹಾತ್ಮಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆ ಅಂಗವಾಗಿ 2019ರ ವೇಳೆಗೆ 50 ಸಾವಿರ ಗ್ರಾಮ ಪಂಚಾಯಿತಿಗಳನ್ನು ಮತ್ತು 1 ಕೋಟಿ ಕುಟುಂಬಗಳನ್ನು ಬಡತನದಿಂದ ಮುಕ್ತಗೊಳಿಸುವ 'ಮಿಷನ್ ಅಂತ್ಯೋದಯ' ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ನಿರ್ಗತಿಕರ ಜೀವನ ಮಟ್ಟದ ಸುಧಾರಣೆಗೆ ಸೂಕ್ಷ್ಮ ಯೋಜನೆ ರೂಪಿಸಲು ಈ ಮಿಷನ್ ಗಮನ ಹರಿಸುವುದು.

* ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ 2015–16ರಲ್ಲಿ ಇದ್ದ ಸಾಲದ ಗುರಿಯನ್ನು ಈ ಆಯವ್ಯಯದಲ್ಲಿ ದ್ವಿಗುಣಗೊಳಿಸಲಾಗಿದೆ. ದಲಿತರು, ಬುಡಕಟ್ಟು ವರ್ಗದವರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಸಣ್ಣ ಪ್ರಮಾಣದ ವ್ಯವಹಾರ ಹಾಗೂ ಉದ್ಯಮ ಆರಂಭಿಸಲು ಉತ್ತೇಜನ ನೀಡುವ ಸಲುವಾಗಿ 2017–18ರಲ್ಲಿ 2.44 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಒಟ್ಟಾರೆ ಕೇಂದ್ರದ 2017–18ರ ಆಯವ್ಯಯದಲ್ಲಿ ಶಿಕ್ಷಣ, ವಸತಿ, ಅಭಿವೃದ್ಧಿ ಕೌಶ್ಯಲಗಳು, ಆರ್ಥಿಕ ನೆರವು ಮುಂತಾದವುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬಜೆಟ್ ಹಂಚಿಕೆಯು ಸರ್ಕಾರದ ಬದ್ಧತೆಯ ಪ್ರತೀಕ ಆಗಿದೆ. ಉತ್ಪಾದನೆ ಹಾಗೂ ಪ್ರತಿಫಲದ ನಿರ್ವಹಣೆಗೆ ಪರಿಣಾಮಕಾರಿ ಯಾಂತ್ರಿಕತೆಗೆ ಹೆಚ್ಚು ಒತ್ತು ನೀಡಿರುವುದರಿಂದ ದುರ್ಬಲ ಹಾಗೂ ಶೋಷಿತ ಸಮುದಾಯಗಳು ತಮ್ಮ ಜೀವನ ಮಟ್ಟದಲ್ಲಿ ಪೂರಕ ಸುಧಾರಣೆಯನ್ನು ನಿರೀಕ್ಷಿಸಬಹುದಾಗಿದೆ. ❑

# ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಾಯಕಲ್ಪ

* ಡಾ. ರಂಜಿತ್ ಮೆಹ್ತಾ



**ಕೈಗೆಟುಕಬಲ್ಲ ವಸತಿಯನ್ನು ನಿರ್ಮಿಸುವ ರಿಯಲ್ ಎಸ್ಟೇಟ್ ವಲಯವನ್ನು 'ಮೂಲ ಸೌಕರ್ಯ'ವೆಂಬ ಪಟ್ಟಿಗೆ ಸೇರಿಸಿರುವುದು, '2022 ರ ಹೊತ್ತಿಗೆ ಎಲ್ಲರಿಗೂ ವಸತಿ' ಎಂಬ ಕಾರ್ಯ ಯೋಜನೆಗೆ ಭದ್ರ ಅಡಿಪಾಯವನ್ನು ಕಲ್ಪಿಸಿದೆ.**

ಕೇಂದ್ರ ಬಜೆಟ್ ಬೇರೆ ಬೇರೆ ರೀತಿಗಳಿಂದ ಅನನ್ಯವಾಗಿದೆ. ಮೊದಲನೆಯದಾಗಿ, ಇದುವರೆವಿಗೂ ವರ್ಗೀಕರಿಸುತ್ತಿದ್ದ, ಯೋಜನಾ ವೆಚ್ಚ ಮತ್ತು ಯೋಜನೇತರ ವೆಚ್ಚ, ಎಂಬ ಎರಡು ಶ್ರೇಣಿಗಳನ್ನು ತೆಗೆಯಲಾಗಿದೆ. ಇದನ್ನೇ ಆದಾಯ ಮತ್ತು ಬಂಡವಾಳ ವೆಚ್ಚ ಎಂಬ ಎರಡು ತಲೆಬರಹದಡಿ ವರ್ಗೀಕರಿಸಲಾಗುತ್ತದೆ. 92 ವರ್ಷಗಳಿಂದ ನಡೆಸಿಕೊಂಡು ಬಂದಿದ್ದ ರೈಲ್ವೆ ಬಜೆಟ್‌ನ್ನು ಮಂಡಿಸುವ ಸಂಪ್ರದಾಯವನ್ನು ವರ್ಜಿಸಿ, ಅದನ್ನು ಕೇಂದ್ರ ಬಜೆಟ್‌ನೊಂದಿಗೆ ಸೇರಿಸಲಾಗಿದೆ. ಇವೆರಡೂ ಹೆಜ್ಜೆಗಳು ಸರಿಯಾದ ಮಾರ್ಗದಲ್ಲಿದ್ದು, ಮುಂದಿನ ದಿನಗಳಲ್ಲಿ, ಬಜೆಟ್‌ನ ವ್ಯವಸ್ಥೆಯಲ್ಲಿ ಸುಧಾರಣೆ ತರುವಲ್ಲಿ ದಿಟ್ಟ ಹೆಜ್ಜೆಗಳಾಗಿವೆ.

ವಿಶ್ವಾದ್ಯಂತ ಬೇರೆ ಬೇರೆ ದೇಶಗಳ ಹಣಕಾಸು ಸಚಿವರ ತಮ್ಮ ವಾರ್ಷಿಕ ಬಜೆಟ್ ರೂಪಿಸುವಾಗ, ಆರ್ಥಿಕ ವ್ಯವಸ್ಥೆ ನಿಧಾನ ಗತಿಯಲ್ಲಿ ಸಾಗುತ್ತಿದ್ದರೆ, ಅದರ ಗತಿಯನ್ನು ತ್ವರಿತಗೊಳಿಸಲು ಬಳಸುವ ಅಸ್ತ್ರಗಳು ಎರಡೇ. ಬೇಡಿಕೆ ಹೆಚ್ಚಾಗುವಂತೆ ಮಾಡುವುದು; ಇಲ್ಲದಿದ್ದರೆ ಪೂರೈಕೆಯ ಕಡೆ ಗಮನ ಕೊಡುವುದು; ಒಂದೊಂದು ಬಾರಿ ಇವೆರಡು ಅಂಶಗಳನ್ನೂ ಒಳಗೊಂಡ ನೀತಿಯನ್ನು ಪಾಲಿಸುವುದುಂಟು. ಬೇಡಿಕೆ ಹೆಚ್ಚಾಗಬೇಕಾದರೆ, ಕೊಳ್ಳುವವರ ಸಂಖ್ಯೆ ಹೆಚ್ಚಬೇಕು ಅಥವಾ ಅವರು ಕೊಳ್ಳುವ ಪ್ರಮಾಣ ಹೆಚ್ಚಬೇಕು. ನಾಗರಿಕರು ಸರ್ಕಾರಕ್ಕೆ ಕೊಡುವ ತೆರಿಗೆಗಳನ್ನು (ಅದು ನೇರ ತೆರಿಗೆಯಾಗಬಹುದು ಅಥವಾ ಪರೋಕ್ಷ ತೆರಿಗೆಯಾಗಿರಬಹುದು) ಕಡಿಮೆ ಮಾಡಿದಲ್ಲಿ, ಆ ಮಟ್ಟಿಗೆ ಪ್ರಜೆಗಳ ಕೈಯಲ್ಲಿ ದುಡ್ಡು ಉಳಿದು, ಅವರು ಕೊಳ್ಳುವ ಸಂಭವನೀಯತೆ ಹೆಚ್ಚಾಗಬಹುದೆಂಬುದು ಇದರ ಹಿಂದಿನ ಆಶಯ. ಇನ್ನೊಂದು ಮಾದರಿಯೆಂದರೆ, ನಾಗರಿಕರ ಬೇಡಿಕೆಯನ್ನು, ಸಹಾಯಧನದ ಮೂಲಕವಾಗಿಯೋ, ಅನುದಾನವಾಗಿಯೋ ಹೆಚ್ಚಾಗಿಸುವ ನೀತಿಯನ್ನು ಜಾರಿಗೊಳಿಸುವುದು. ಪೂರೈಕೆಯನ್ನು ಹೆಚ್ಚಿಸುವಲ್ಲಿ ಇದು ಕೆಲಸ ಮಾಡಿ, ನಾಗರಿಕರು ಕೊಳ್ಳುವ ವಸ್ತು ಮತ್ತು ಸೇವೆಗಳ ಬೇಡಿಕೆಯನ್ನು ಹೆಚ್ಚಿಸಿ, ಒಟ್ಟು ದೇಶದ ಆರ್ಥಿಕತೆಗೆ ಅನುಕೂಲ ಒದಗಿಸುತ್ತದೆ ಎನ್ನುವುದು ಇದರ ಗುರಿ. ಆದರೆ ಬಹುತೇಕ ಹಣಕಾಸು ಸಚಿವರು, ಇಂತಹ ಹಲವಾರು ಅಸ್ತ್ರಗಳಲ್ಲಿ ಒಂದನ್ನೇ ಬಳಸುವುದಿಲ್ಲ. ಸಾಮಾನ್ಯವಾಗಿ, ಈ ಎರಡೂ ಸಾಧನಗಳನ್ನು ಬಳಸಿ ಸಮ್ಮಿಳಿತವಾದ ಒಂದು ನೀತಿಯನ್ನು ಅನುಸರಿಸುತ್ತಾರೆ. ಇದು ಪೂರೈಕೆ ಮತ್ತು ಬೇಡಿಕೆ – ಎರಡನ್ನೂ ಹೆಚ್ಚಿಸುವ ಗುರಿಯನ್ನು ಹೊಂದಿರುತ್ತದೆ.

2017 ರ ಬಜೆಟ್ ನಲ್ಲಿ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ ಯವರು ಬೇಡಿಕೆ ಹೆಚ್ಚಾಗುವಂತಹ ಯೋಜನೆಗಿಂತ, ಬಂಡವಾಳ ಮೂಲವನ್ನಾಗಿಟ್ಟುಕೊಂಡು ಪ್ರಗತಿಯನ್ನು ಸಾಧಿಸುವ ಗುರಿಯನ್ನಿಟ್ಟುಕೊಂಡಿದ್ದಾರೆ. ಈಗಾಗಲೇ ಗ್ರಾಹಕ ಮತ್ತು ಕೈಗಾರಿಕಾ ವಲಯದಲ್ಲಿ ಆರ್ಥಿಕತೆ ಕುರಿತಾದ ಭಾವನೆ ಸ್ವಲ್ಪ ಋಣಾತ್ಮಕವಾಗಿರುವುದರಿಂದ, ತೆರಿಗೆಯನ್ನು ಕಡಿಮೆ ಮಾಡಿದಾಗ, ಬೇಡಿಕೆ ಹೆಚ್ಚಾಗಬಹುದೆಂಬ ಊಹೆ ಸುಳ್ಳಾಗುವ ಸಾಧ್ಯತೆ ಹೆಚ್ಚಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ,ಆರ್ಥಿಕತೆಯ ಪ್ರಗತಿ, ತೆರಿಗೆ ಸಂಗ್ರಹ ಕಡಿಮೆಯಾದರೂ,ಈ

* ನಿರ್ದೇಶಕರು, ಪಿಹೆಚ್‌ಡಿ ವಾಣಿಜ್ಯೋದ್ಯಮ ಸಂಘಟನೆ, ನವದೆಹಲಿ. E-mail : ranjeetmehta@gmail.com

ಕಡಿತದ ದುಷ್ಪರಿಣಾಮಗಳನ್ನು ಕಡಿಮೆ ಮಾಡೀತು ಎನ್ನುವ ಯೋಜನೆ ಸ್ವಲ್ಪ ಅಪಾಯದ್ದು ಎನ್ನಿಸಿರಲೂ ಬಹುದು. ಆದ್ದರಿಂದ ಈ ಮಾರ್ಗವನ್ನು ಅನುಸರಿಸದೆ, ಸರ್ಕಾರದ ಬಂಡವಾಳದಿಂದ ನಡೆಯುವ ಯೋಜನೆಗಳಿಗೆ ಪುಷ್ಟಿ ನೀಡಿ ಆ ಮೂಲಕ ದೇಶದ ಆರ್ಥಿಕತೆಯನ್ನು ನಿರಂತರವಾಗಿ ಮೇಲ್ಮುಖವಾಗಿ ಚಲಿಸುವಂತೆ ನೋಡಿಕೊಳ್ಳುವುದೇ ಹಣಕಾಸು ಸಚಿವರ ಬಜೆಟ್‌ನ ಮೂಲಸ್ರೋತವಾಗಿದೆ.

ಹಣಕಾಸು ಸಚಿವರು ತಮ್ಮ ಬಳಿ ಇರುವ ಎಲ್ಲಾ ಸಂಪನ್ಮೂಲಗಳನ್ನು ಬಂಡವಾಳ ಹೆಚ್ಚಿಸಲು ಅಥವಾ ಪೂರೈಕೆಯನ್ನು ಹೆಚ್ಚಿಸಲು ಬಳಸಿಕೊಂಡಿದ್ದಾರೆ. ಮೂಲ ಸೌಕರ್ಯಗಳಿಗೆ 3.96 ಲಕ್ಷ ಕೋಟಿ, ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿರುವ ಉದಯ್ ಹೆಸರಿನ ಯೋಜನೆಗೆ 2.44 ಲಕ್ಷ ಕೋಟಿ ರೂಪಾಯಿ, ಗ್ರಾಮೀಣ ಮತ್ತು ಕೃಷಿಗೆ 1.85 ಲಕ್ಷ ಕೋಟಿ, ಗ್ರಾಮೀಣ ಭಾಗಗಳಲ್ಲಿ ಉತ್ಪಾದಕ ಆಸ್ತಿಗಳನ್ನು ಸೃಜಿಸಲು ಕೇಂದ್ರ ಯೋಜನೆಗಳ ಮೂಲಕ 48 ಸಾವಿರ ಕೋಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆಂದು 1.84 ಲಕ್ಷ ಕೋಟಿ ವಿನಿಯೋಗಿಸಬೇಕೆಂದು ಯೋಜಿಸಲಾಗಿದೆ. ಈ ಮೂಲಕ, ಈ ಮೇಲೆ ಹೇಳಿದ ಕ್ಷೇತ್ರಗಳಲ್ಲದೆ, ಇವುಗಳ ಸುತ್ತಲೂ ಇರುವ ಸಂಯೋಜಿತ ವಲಯಗಳಲ್ಲೂ ಅಭಿವೃದ್ಧಿ ಹೊಂದಿ, ಒಟ್ಟಾರೆ ದೇಶದ ಒಟ್ಟೂ ಆರ್ಥಿಕ ಪ್ರಗತಿಗೆ ಕಾರಣವಾಗುತ್ತದೆಂಬುದು ಇದರ ಆಶಯ. ಬೇಡಿಕೆ ಹೆಚ್ಚಳ ಮತ್ತು ಪೂರೈಕೆಯಲ್ಲಿ ಹೆಚ್ಚಳ – ಈ ಎರಡೂ ಒಟ್ಟು ಆರ್ಥಿಕ ಪ್ರಗತಿಯಲ್ಲಿ ಸಹಾಯ ಮಾಡುವುದಾದರೂ, ಇವೆರಡರಲ್ಲಿ ಸ್ವಲ್ಪ ಭಿನ್ನತೆಯೂ ಇದೆ. ಬೇಡಿಕೆ ಹೆಚ್ಚಾಗುವ ನೀತಿಯನ್ನು ಅನುಸರಿಸಿದರೆ, ಬಳಸುವ ಪ್ರಮಾಣವೂ ಹೆಚ್ಚಾಗಿ, ಆರ್ಥಿಕತೆಯ ಮೇಲೆ ಸುಮಾರು ಮೂರು ತಿಂಗಳಲ್ಲಿ ಯೋಜನೆಗಳ ಫಲ ಕಾಣಸಿಕ್ಕೀತು. ಇದಕ್ಕೆ ಸಂವಾದಿಯಾಗಿ, ಬಂಡವಾಳ ಮೂಲವಾದ ಯೋಜನೆಗಳಿಂದ ಆರ್ಥಿಕತೆಯ ಒಂದು ಪ್ರಮಾಣವಾದ ಜಿಡಿಪಿ ಅನುಪಾತದ ಹೆಚ್ಚಳ ನಿಚ್ಚಳವಾಗಿ ಕಾಣುವುದಕ್ಕೆ ಒಂಭತ್ತು ತಿಂಗಳುಗಳೇ ಬೇಕು. ಭಾರತದ ರಿಯಲ್ ಎಸ್ಟೇಟ್ ಉದ್ಯಮದ ಹಾಗೂ ಅದರ ಸುತ್ತಲೂ ಇರುವ ಸಂಬಂಧಿತ ವಲಯಗಳಲ್ಲಿ (265 ಸಂಬಂಧಿತ ಕೈಗಾರಿಕೆಗಳನ್ನು ಸೂಚಿಸಲಾಗಿದೆ) ಪ್ರಗತಿಯನ್ನು ಕಾಣಲು, ತುರ್ತಾದ ನೀತಿ ಬದಲಾವಣೆಗಳು ಬೇಕಿದ್ದವು. ಈಚಿನ ವರ್ಷಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮವು ದಾಪುಗಾಲು ಹಾಕಿದ್ದು, ಭಾರತದ ಆರ್ಥಿಕತೆಗೆ ತುಂಬ ಮುಖ್ಯವಾದ ಕಾಣಿಕೆಯನ್ನು ಕೊಡುತ್ತಿದೆ. ಆದರೆ ಇತ್ತೀಚಿನ ನೋಟುಗಳ ಅಮಾನ್ಯೀಕರಣದಿಂದ ಈ ಉದ್ಯಮದ ಪ್ರಗತಿ ಕುಂಠಿತವಾಗಿದೆ. ಬೇರೆ ಉದ್ಯಮಗಳಿಗೆ ಹೋಲಿಸಿದರೆ, ರಿಯಲ್ ಎಸ್ಟೇಟ್ ಉದ್ಯಮ ಅಸಂಘಟಿತವಾಗಿಯೂ ಛಿದ್ರಛಿದ್ರವಾಗಿ ಹಂಚಿ ಹೋಗಿದ್ದಾಗಿಯೂ ತೋರುತ್ತದೆ. ಬೇರೆ ದೇಶಗಳಲ್ಲಿ, ಅದರಲ್ಲೂ ಮುಂದುವರಿದ ದೇಶಗಳಲ್ಲಿ, ರಿಯಲ್ ಎಸ್ಟೇಟ್ ಉದ್ಯಮವು ತುಂಬ ಸಂಘಟಿತವಾಗಿ ಮತ್ತು ವ್ಯವಸ್ಥಿತ ರಚನೆಯುಳ್ಳದ್ದಾಗಿರುತ್ತದೆ. ಭಾರತದ ಉದ್ಯಮವೂ ಇದೇ ನಿಟ್ಟಿನಲ್ಲಿ ಮಾರ್ಪಾಡಾಗಬೇಕಾದ ಅನಿವಾರ್ಯತೆ ಇದೆ. ವಿಶ್ವದ ಆರ್ಥಿಕ ಭೂಪಟದಲ್ಲಿ ಭಾರತಕ್ಕೆ ಸಿಗುತ್ತಿರುವ ಮಾನ್ಯತೆಯನ್ನು ದೃಢೀಕರಿಸಬೇಕಾದರೆ ರಿಯಲ್ ಎಸ್ಟೇಟ್ ಉದ್ಯಮದ ಜವಾಬ್ದಾರಿ ಹೆಚ್ಚಿದೆ.

ರಿಯಲ್ ಎಸ್ಟೇಟ್ ಉದ್ಯಮವು 2017–18 ರ ಕೇಂದ್ರ ಬಜೆಟ್ ನಲ್ಲಿ ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಂಡಿದೆ. ಕೈಗೆಟುಕಬಲ್ಲ ವಸತಿ ಯನ್ನು ನಿರ್ಮಿಸುವ ರಿಯಲ್ ಎಸ್ಟೇಟ್ ವಲಯವನ್ನು 'ಮೂಲ ಸೌಕರ್ಯ'ವೆಂಬ ಪಟ್ಟಿಗೆ ಸೇರಿಸಿರುವುದು, '2022 ರ ಹೊತ್ತಿಗೆ ಎಲ್ಲರಿಗೂ ವಸತಿ'ಎಂಬ ಕಾರ್ಯ ಯೋಜನೆಗೆ ಭದ್ರ ಅಡಿಪಾಯವನ್ನು ಕಲ್ಪಿಸಿದೆ. ಕೈಗೆಟಕುವ ವಸತಿ ನಿರ್ಮಾಣದಲ್ಲಿ ತೊಡಗಿರುವ ಎಲ್ಲ ಸಂಸ್ಥೆಗಳಿಗೂ ಈ ಘೋಷಣೆ ತುಂಬ ಸಹಕಾರಿಯಾಗಿದ್ದು, ಆಯಾ ಕಂಪನಿಗಳು ತಮ್ಮ ಉದ್ಯಮವನ್ನು ಹಲವಾರು ಪಟ್ಟು ಬೆಳೆಸುವಲ್ಲಿ ಸಹಕಾರಿಯಾಗಲಿದೆ. '2022 ರ ಹೊತ್ತಿಗೆ ಎಲ್ಲರಿಗೂ ವಸತಿ' ಎಂಬ ಘೋಷಣಾ ವಾಕ್ಯದ ಈ ಯೋಜನೆಯಡಿಯಲ್ಲಿ 305 ನಗರ ಹಾಗೂ ಪಟ್ಟಣಗಳನ್ನು ಗುರುತಿಸಲಾಗಿದೆ ಮತ್ತು ಈ ಪ್ರದೇಶಗಳಲ್ಲಿರುವ ಬಡವರಿಗೆ 2022 ರ ಹೊತ್ತಿಗೆ, 2 ಕೋಟಿ ಮನೆಗಳನ್ನು ಕಟ್ಟುವ ಯೋಜನೆಯನ್ನೂ ಹಾಕಿಕೊಳ್ಳಲಾಗಿದೆ. ಈ ಯೋಜನೆ ಸಾಕಾರವಾಗಬೇಕಾದರೆ 38 ದಶಲಕ್ಷ ಕೆಲಸಗಾರರು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಉದ್ಯಮದಲ್ಲಿ ಈಗಿರುವ ಕೆಲಸಗಾರರ



ಸಂಖ್ಯೆ 29 ದಶಲಕ್ಷ. ಈ ಎರಡು ಸಂಖ್ಯೆಗಳ ಅಂತರವನ್ನು ಹೊಸ ಕೆಲಸಗಾರರಿಂದ ತುಂಬಬೇಕಾಗಿರುವುದರಿಂದ, ಇದು ತುಂಬ ಪ್ರಮುಖವಾದ ಯೋಜನೆಯೆಂದು ಪರಿಗಣಿಸಲಾಗಿದೆ.

2017 ಬಜೆಟ್ ನ ಧ್ಯೇಯವಾಕ್ಯ – 'ರೂಪಾಂತರಿಸು, ಶಕ್ತಿವರ್ಧಿಸು ಮತ್ತು ಸ್ವಚ್ಛಗೊಳಿಸು'. ಇದನ್ನು ಸಾಕಾರಗೊಳಿಸಲು ಕೆಳಗೆ ತೋರಿರುವ ಹತ್ತು ಧ್ಯೇಯಗಳು ಹೀಗೆ ಇವೆ:

1. ರೈತರ ಆದಾಯವನ್ನು ಐದು ವರ್ಷಗಳಲ್ಲಿ ದ್ವಿಗುಣಗೊಳಿಸುವುದು
2. ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯ ಮತ್ತು ಉದ್ಯೋಗಾವಕಾಶಗಳನ್ನು ಉತ್ತಮ ಪಡಿಸುವುದು
3. ಶಿಕ್ಷಣ ಮತ್ತು ಉದ್ಯೋಗದ ಮೂಲಕ ಯುವಕರ ಮನೋಸ್ಥೈರ್ಯವನ್ನು ಹೆಚ್ಚಿಸುವುದು
4. ಸಾಮಾಜಿಕ ಭದ್ರತೆ ಮತ್ತು ಕೈಗೆಟಕುವ ವಸತಿಯ ಲಭ್ಯತೆಯ ಮೂಲಕ ಬಡವರ ಮತ್ತು ನಿರ್ಗತಿಕರನ್ನು ಮುಖ್ಯ ಧಾರೆಗೆ ತರುವುದು
5. ಉತ್ಪಾದಕತೆ, ಜೀವನದ ಗುಣಮಟ್ಟ ಸುಧಾರಣೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಬೇಕಾದ ಮೂಲ ಸೌಕರ್ಯ ನಿರ್ಮಾಣ
6. ಗಟ್ಟಿಯಾದ ತಳಹದಿಯುಳ್ಳ ಸಾಂಸ್ಥಿಕ ರಚನೆಗೆ ಆದ್ಯತೆ ಕೊಟ್ಟು ಹಣಕಾಸು ವಲಯದಲ್ಲಿ ಅಭಿವೃದ್ಧಿ ಮತ್ತು ಭದ್ರತೆಯನ್ನು ಹೆಚ್ಚಿಸುವುದು
7. ತ್ವರಿತ ಮತ್ತು ಪಾರದರ್ಶಕ ಸೇವೆಗಳಿಗಾಗಿ ಡಿಜಿಟಲ್ ತಂತ್ರಜ್ಞಾನದ ಬಳಕೆ
8. ಸಾರ್ವಜನಿಕ ಸೇವೆಗಳಲ್ಲಿ ಪ್ರಜೆಗಳ ಭಾಗವಹಿಸುವಿಕೆಯೂ ಸೇರಿದಂತೆ

ಪಾರದರ್ಶಕತೆ ತಂದು ಸೇವಾ ವಲಯದಲ್ಲಿ ದಕ್ಷತೆಯನ್ನು ಹೆಚ್ಚಿಸುವುದು

9. ಇರುವ ಸಂಪನ್ಮೂಲಗಳ ಸದ್ಬಳಕೆ ಮಾಡಲು ಮತ್ತು ವಿತ್ತೀಯ ಭದ್ರತೆಯನ್ನು ಸಾಧಿಸಲು ಬೇಕಾದ ಹಣಕಾಸಿನ ನಿರ್ವಹಣೆ

10. ತೆರಿಗೆ ನಿರ್ವಹಣೆ – ನಿಯತ್ತು ತೋರುವವರನ್ನು ಗೌರವಿಸುವುದು

ರಿಯಲ್ ಎಸ್ಟೇಟ್ ವಲಯವನ್ನು ಅಭಿವೃದ್ಧಿಪಡಿಸುವುದಕ್ಕೆ 2007 ರ ಬಜೆಟ್ ನಲ್ಲಿ ಅಳವಡಿಸಿರುವ ಪ್ರಮುಖಾಂಶಗಳು

- 'ಕೈಗೆಟುಕುವ ವಸತಿ ಸಮುಚ್ಚಯ' ಗಳಿಗೆ ಮೂಲ ಸೌಕರ್ಯ ದರ್ಜೆಯ ಸ್ಥಾನ
- 2019 ರ ಒಳಗೆ ಒಂದು ಕೋಟಿ ಗ್ರಾಮೀಣ ವಸತಿ ನಿರ್ಮಾಣ
- ರಾಷ್ಟ್ರೀಯ ವಸತಿ ಬ್ಯಾಂಕ್‌ನಿಂದ 20,000 ಕೋಟಿ ರೂ. ಹಣಕಾಸು ನೆರವು
- ಪ್ರಧಾನ ಮಂತ್ರಿ ವಸತಿ ಯೋಜನೆಗೆ 23,000 ಕೋಟಿ ರೂ. ನೆರವು
- ಇನ್ನೂ ಮಾರಲಾಗದ ಮನೆಗಳ ಮೇಲೆ, ರಿಯಲ್ ಎಸ್ಟೇಟ್ ಅಭಿವರ್ಧಕ ಕಂಪನಿಗಳಿಗೆ ತೆರಿಗೆ ವಿನಾಯಿತಿ. ಬಂಡವಾಳ ವೃದ್ಧಿ ತೆರಿಗೆಯನ್ನು 'ಯೋಜನೆ ಮುಕ್ತಾಯ' ವಾದ ಮೇಲೆ ಮಾತ್ರ ಕೊಡಬಹುದಾದ ಪ್ರಸ್ತಾಪ.
- 'ಕೈಗೆಟುಕುವ ವಸತಿ' ಎನ್ನುವುದರ ವ್ಯಾಪ್ತಿಯನ್ನು 30/60 ಚದರ ಮೀಟರ್ "ಕಟ್ಟಿದ ಜಾಗ" ಎನ್ನುವುದರ ಬದಲಾಗಿ, 30/60 'ಕಾರ್ಪೆಟ್ ಹಾಸಿನ' ವಿಸ್ತಾರ ಎಂದು ಬದಲಿಸಿರುವುದು
- ಸ್ಥಿರಾಸ್ತಿಯ ಮೇಲಣ ಬಂಡವಾಳ ವೃದ್ಧಿ ತೆರಿಗೆಯನ್ನು ಮೂರು ವರ್ಷಗಳಿಂದ ಎರಡು ವರ್ಷಗಳಿಗೆ ಇಳಿಸಿರುವುದು
- ಇನ್ನೂ ಮಾರಾಟವಾಗಿಲ್ಲದ, ಮನೆಗಳ ಮೇಲೆ, ನಿರ್ಮಾಣವಾದ ಮೇಲೆ 1 ವರ್ಷದವರೆಗೂ ತೆರಿಗೆ ಕೊಡಬಹುದಾದ ಹೊಸ ಕಾನೂನು



- 3 ಲಕ್ಷದ ಮೇಲೆ ಯಾವುದೇ ನಗದು ವ್ಯವಹಾರವಿಲ್ಲ
- ಇಂದಿರಾ ವಸತಿ ಯೋಜನೆಯನ್ನು ಇನ್ನೂ 600 ಜಿಲ್ಲೆಗಳಿಗೆ ವಿಸ್ತರಿಸಲಾಗುವುದು
- ಬಂಡವಾಳ ವೃದ್ಧಿ ತೆರಿಗೆಯನ್ನು ಲೆಕ್ಕ ಹಾಕುವಾಗ ಬಳಸುವ ಸೂಚಿಯನ್ನು 1–4–1981 ರಿಂದ 1–4–2001 ಎಂದು ಬದಲಾಯಿಸಲಾಗಿದೆ.

**'ಕೈಗೆಟುಕುವ ವಸತಿ' ನಿರ್ಮಾಣಕ್ಕೆ ಮೂಲ ಸೌಕರ್ಯ ಸ್ಥಾನಮಾನ**

ಆರ್ಥಿಕ ಸುಧಾರಣೆಗಳನ್ನು ಮುಂದಿನ ಹಂತಕ್ಕೆ ಒಯ್ಯುವ ಧ್ಯೇಯದಿಂದ ಪ್ರಸ್ತಾಪಗೊಂಡಿರುವ 2017 ರ ಬಜೆಟ್, ಹಣದುಬ್ಬರವನ್ನು ನಿಯಂತ್ರಿಸುವ ಮತ್ತು ಹಣಕಾಸಿನ ನಿರ್ವಹಣೆಯನ್ನು ವಿವೇಚನೆಯಿಂದ ಮಾಡುವ ಸದುದ್ದೇಶವನ್ನು ಹೊಂದಿದೆ. 'ಕೈಗೆಟುಕುವ ವಸತಿ' ನಿರ್ಮಾಣಕ್ಕೆ ಮೂಲ ಸೌಕರ್ಯ ದರ್ಜೆಗೆ ಸೇರಿಸುವ ಪ್ರಕ್ರಿಯೆಯಿಂದ ಮಧ್ಯಮ ವರ್ಗಕ್ಕೆ ಅನುಕೂಲವಾಗಲಿದ್ದು ಆ ವರ್ಗದ ನಾಗರಿಕರು ಸ್ವಂತ ಮನೆಯನ್ನು ಹೊಂದುವುದಕ್ಕೆ ತಮ್ಮ ಬಂಡವಾಳವನ್ನು ಬಳಸುವ ಉತ್ಸುಕತೆಯನ್ನು ತೋರುತ್ತಾರೆ ಎಂದು ನಂಬಲಾಗಿದೆ. ಇದರಿಂದ 2022 ರ ಹೊತ್ತಿಗೆ ತಲುಪಲಾಗುವುದೆಂದು ಯೋಜಿಸಿರುವ 'ಎಲ್ಲರಿಗೂ ಮನೆ' ಯೋಜನೆ ಸಫಲವಾಗುತ್ತದೆಂದು ಎನಿಸುತ್ತದೆ. ಖಾಸಗಿ ಕ್ಷೇತ್ರದಲ್ಲಿ ಈ ವಲಯದ ಬಗ್ಗೆ ಇನ್ನಷ್ಟು ಆಶಾಭಾವವನ್ನು ಮೂಡಿಸಿ, ಅವರು ಇದರಲ್ಲಿ ಬಂಡವಾಳ ತೊಡಗಿಸುವಂತೆ ಮಾಡಿದಾಗ, ಈ ಕ್ಷೇತ್ರ ಇನ್ನಷ್ಟು ಸ್ಪರ್ಧಾತ್ಮಕವಾಗಿ, ಕೊನೆಗೆ ಬಳಕೆದಾರನಿಗೆ ಉಪಯೋಗುವ ನಿರೀಕ್ಷೆ ಇದೆ. ಇದರಿಂದ ಮಧ್ಯಮ ಮತ್ತು ಕೆಳ ವರ್ಗದ ಜನರಿಗೆ, ತಮ್ಮ ಮೊದಲ ಸ್ವಂತ ಮನೆ ಹೊಂದುವ, ಕನಸು ನನಸಾಗುವ ಸಂಭಾವ್ಯತೆ ಹೆಚ್ಚಾಗುತ್ತದೆ. ರಿಯಲ್ ಎಸ್ಟೇಟ್ ಉದ್ಯಮವನ್ನು ಇದುವರೆವಿಗೆ ಒಂದು 'ಕೈಗಾರಿಕೆ' ಎಂದು ಪರಿಗಣಿಸಲಿರಲಿಲ್ಲ. ಬಹಳ ವರ್ಷಗಳಿಂದ ಈ ವಲಯವು ತಮ್ಮ ಕ್ಷೇತ್ರವನ್ನು 'ಕೈಗಾರಿಕೆ' ಎಂದು ವರ್ಗೀಕರಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಮಂಡಿಸುತ್ತಲೇ ಬಂದಿದೆ. ಈಗ 'ಕೈಗೆಟುಕುವ ವಸತಿ ನಿರ್ಮಾಣ' ವನ್ನು ಕೈಗಾರಿಕೆ ಎಂದು ವರ್ಗೀಕರಿಸಿರುವುದರಿಂದ ಅಭಿವೃದ್ಧಕರು, ಮನೆ ಕಟ್ಟುವವರು ಮತ್ತು ಹೂಡಿಕೆದಾರರಿಗೆ ಕಡಿಮೆ ಬಡ್ಡಿ ಇರುವ ಸಾಲ ಸಿಗುವುದೆಂದು ಆಶಿಸಲಾಗಿದೆ. ಇದಕ್ಕೆ ಮೊದಲು ಇವರೆಲ್ಲರೂ ಹೆಚ್ಚಿನ ಬಡ್ಡಿ ಕೊಟ್ಟು ಸಾಲ ತೆಗೆದುಕೊಳ್ಳಬೇಕಾದ್ದರಿಂದ ಹಣಕಾಸಿನ ತೊಂದರೆಗೆ ಸಿಕ್ಕಿಹಾಕಿಕೊಳ್ಳುವ ಸಂಭವ ಹೆಚ್ಚಿತ್ತು.

ಪ್ರಧಾನ ಮಂತ್ರಿಗಳ ವಸತಿ ಯೋಜನೆಯಡಿಯಲ್ಲಿ ಕಡಿಮೆ ಬೆಲೆಯ ಮನೆಗಳನ್ನು ಕಟ್ಟುವ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ಯೋಜನೆಯಡಿಯಲ್ಲಿ, 9 ಲಕ್ಷಕ್ಕೂ ಹೆಚ್ಚಿನ ಸಾಲಕ್ಕೆ ಶೇಕಡಾ 4 ರಂತೆಯೂ, 12 ಲಕ್ಷಕ್ಕೂ ಹೆಚ್ಚಿನ ಸಾಲಕ್ಕೆ ಶೇಕಡಾ 3 ರಂತೆಯೂ ಬಡ್ಡಿ ವಿಧಿಸಲಾಗುವುದು. ಮಾರುಕಟ್ಟೆಯ ಬಡ್ಡಿಗಿಂತಲೂ ಈ ದರಗಳೂ ಎಷ್ಟೋ ಪಾಲು ಕಡಿಮೆಯಾಗಿದೆ. ಆದರೆ ಈ ಸಾಲ ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಕ್ಕೆ ಅನ್ವಯಿಸುತ್ತದೋ ಅಥವಾ ಕಡಿಮೆ ವರಮಾನ ಎಂದು ಪರಿಗಣಿಸಿರುವ ವರ್ಗಕ್ಕೆ ಅನ್ವಯಿಸುತ್ತದೋ ಎಂಬುದು ಖಚಿತವಾಗಿ ತಿಳಿದಿಲ್ಲ. ಈ ಯೋಜನೆಯಲ್ಲಿ ಹೆಚ್ಚು ಕಟ್ಟಡ ನಿರ್ಮಾಣ ಯೋಜನೆಗಳು ಆದಾಯಕರದಿಂದ ಮುಕ್ತವಾಗುವ ಸಂಭವವಿದೆ. ಇಂತಹ ಯೋಜನೆಗಳಲ್ಲಿ, ಬೇಡಿಕೆ ಹೆಚ್ಚಾಗಿದ್ದರೂ, ಖಾಸಗಿ ಕ್ಷೇತ್ರದ ಭಾಗವಹಿಸುವಿಕೆ ತುಂಬ ಕಡಿಮೆಯಾಗಿದೆ. ಈ ಕ್ಷೇತ್ರವನ್ನು ಕೈಗಾರಿಕೆ ಎಂದು ಘೋಷಿಸಿರುವುದು ಮತ್ತು ಲಾಭದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದು, ಖಾಸಗಿ ಕ್ಷೇತ್ರದವರೂ ಈ ವಲಯದಲ್ಲಿ ಭಾಗವಹಿಸುವುದಕ್ಕೆ ಅನುವು ಮಾಡಿಕೊಟ್ಟಂತಾಗಿದೆ. ಕೈಗೆಟುಕುವ

ಅಥವಾ ಕಡಿಮೆ ವೆಚ್ಚದ ವಸತಿ ಎಂಬ ವರ್ಗೀಕರಣದ ಹಿಂದಿನ ಸೂತ್ರ – ಕೈಗೆಟುಕುವ ಅಥವಾ ಕಡಿಮೆ ವೆಚ್ಚದ ವಸತಿ ಎಂಬ ವರ್ಗೀಕರಣವನ್ನು ಈ ಮೊದಲು 'ಕಟ್ಟಿದ ವಿಸ್ತಾರ' 30/60 ಚದರ ಮೀಟರ್ ಗಿಂತ ಕಡಿಮೆ ಉಳ್ಳದ್ದು ಎಂಬ ಸೂತ್ರದ ಮೇಲೆ ಆಧಾರವಾಗಿತ್ತು. ಇದನ್ನು ಬದಲಾಯಿಸಿ, 'ಕಾರ್ಪೆಟ್ ವಿಸ್ತಾರ' ಎಂದು ಸೂತ್ರೀಕರಿಸಲಾಗಿದೆ. ಇದರಿಂದ ಇದೇ ವರ್ಗೀಕರಣದಲ್ಲಿ ಸಿಗುವ ಮನೆಗಳು ಸ್ವಲ್ಪ ದೊಡ್ಡದಾಗಿ ಇದ್ದು, ಅಭಿವೃದ್ಧಕರು ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಲು ಸಹಾಯವಾಗುತ್ತದೆಂದು ಭಾವಿಸಲಾಗಿದೆ. ಇದರಲ್ಲಿ 30 ಚದರ ಮೀಟರ್ ಪ್ರಮಾಣ ದೇಶದ 4 ಮೆಟ್ರೊ ನಗರಗಳಿಗೆ ಅನ್ವಯಿಸಿದರೆ, ದೇಶದ ಉಳಿದ ಭಾಗಗಳಿಗೆ ಮತ್ತು ಮೆಟ್ರೋ ಭಾಗ ಬಿಟ್ಟ ಮಹಾನಗರದ ಹೊರ ಭಾಗಗಳಿಗೆ 60 ಚದರ ಮೀಟರ್ ಎಂದು ನಿರ್ಧರಿಸಲಾಗಿದೆ.

ಸ್ಥಿರ ಆಸ್ತಿಗೆ ಸಂಬಂಧಿಸಿದ ದೀರ್ಘಾವಧಿ ಮಾನದಂಡವನ್ನು 3 ರಿಂದ 2 ವರ್ಷಕ್ಕೆ ಇಳಿಸಲಾಗಿದೆ. ಈಗಿನ ಕಾನೂನಿನ ಅಡಿಯಲ್ಲಿ, ಒಂದು ಸ್ಥಿರ ಆಸ್ತಿಯನ್ನು ಮಾರಿದವರು ತೆರಿಗೆಗೆ ಒಳಪಡದೇ ಇರಲು ಹಣವನ್ನು ಬಳಸಲು ಮೂರು ವರ್ಷದವರೆಗೂ ಕಾಯಬೇಕಾಗಿತ್ತು. ಇಲ್ಲವಾದರೆ, ಬಂಡವಾಳ ವೃದ್ಧಿ ತೆರಿಗೆ ಕೊಡಬೇಕಾಗಿತ್ತು. ಇದನ್ನು ಸರಿಪಡಿಸಲು, ಈ ಅವಧಿಯನ್ನು ಮೂರರಿಂದ ಎರಡು ವರ್ಷಗಳವರೆಗೆ ಕಡಿಮೆ ಮಾಡಲು ನಿರ್ಧರಿಸಲಾಗಿದೆ. ಅದೂ ಅಲ್ಲದೆ, ಈಗಿನ ಕಾನೂನಿನ ಪ್ರಕಾರ ಬೆಲೆಯನ್ನು ನಿರ್ಧರಿಸಲು, 1981 ನ್ನು ಸೂಚಿ ವರ್ಷವೆಂದು ನಿರ್ಧರಿಸಲಾಗಿತ್ತು. ಇದಕ್ಕೆ ಬದಲಾಗಿ ಈಗ 2001 ನ್ನು ಸೂಚಿ ವರ್ಷವಾಗಿ ನಿಗದಿಪಡಿಸಲಾಗಿದೆ. ಇವೆರಡೂ ನೀತಿ ಬದಲಾವಣೆಗಳು ಜನರು ತಮ್ಮ



ಆಸ್ತಿಯನ್ನು ಶೀಘ್ರವಾಗಿ ಮಾರಲು ಮತ್ತು ಆ ಆಸ್ತಿಗೆ ಸಂಬಂಧಪಟ್ಟ ಬಂಡವಾಳ ವೃದ್ಧಿ ತೆರಿಗೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಮನೆ ಕಟ್ಟಿದ ಮೇಲೆ ಸಿಗುವ ಪ್ರಮಾಣ ಪತ್ರ ಲಭ್ಯವಾದ ಬಳಿಕ ಒಂದು ವರ್ಷದವರೆಗೂ ತೆರಿಗೆ ಕಟ್ಟಬಹುದೆನ್ನುವ ಉದಾರ ನೀತಿಯಿಂದಲೂ ಅಭಿವೃದ್ಧಕರಿಗೆ ಸ್ವಲ್ಪ ಮಟ್ಟಿಗೆ ಪರಿಹಾರ ಸಿಗುತ್ತದೆ.

ರಾಷ್ಟ್ರೀಯ ವಸತಿ ಬ್ಯಾಂಕ್ 2017 ರ ಬಜೆಟ್ ನಲ್ಲಿ 20,000 ಸಾವಿರ ಕೋಟಿ ರೂಪಾಯಿಗಳನ್ನು ಸಾಲ ಸಹಾಯ ನಿಧಿಯಾಗಿ ಕೊಡಲಿದೆ

2016 ರ ಕೊನೆಯಲ್ಲಿ ಜಾರಿ ಮಾಡಲಾದ ನೋಟುಗಳ ಅಮಾನ್ಯೀಕರಣದಿಂದ, ಬ್ಯಾಂಕ್‌ಗಳ ಹತ್ತಿರ ಸಾಕಷ್ಟು ಹಣ ಬಳಕೆಯಾಗದೇ ಹಾಗೆಯೇ ಉಳಿದಿದೆ. ಇದರಿಂದ, ಕಡಿಮೆ ಬಡ್ಡಿ ದರದ ಮೇಲೆ ಬ್ಯಾಂಕ್‌ಗಳು ಸಾಲ ಕೊಡಲು ಸಾಧ್ಯವಾಗಿದೆ. ಈ ಕಡಿಮೆ ದರದ ಬಡ್ಡಿ ಹೊಸದಾಗಿ ಮನೆ ಕೊಳ್ಳುವವರಿಗೆ ಒಂದು ಸಂತೋಷದ ಸುದ್ದಿ ಮಾತ್ರವಲ್ಲದೆ, ಈಗಾಗಲೇ ತೆಗೆದುಕೊಂಡ ಮನೆಸಾಲದಾರರಾರಿಗೆಅವರು ಕೊಡುವ ಬಡ್ಡಿ ದರದಲ್ಲೂ ಇಳಿತ ಕಂಡುಬರಲಿದೆ. ಇದರಿಂದ, ಈ ವರೆಗೆ ಹೆಚ್ಚು ಬಡ್ಡಿ ಕೊಟ್ಟು ಹೈರಾಣಾಗಿದ್ದ ಎರಡೂ ವರ್ಗದ ಜನರಿಗೆ ಪ್ರಯೋಜನವಾಗಲಿದೆ. ಆಸ್ತಿ ಅಭಿವೃದ್ಧಿಗೆ ಮಾಡುವ "ಜಂಟಿ ಅಭಿವೃದ್ಧಿ ಒಪ್ಪಂದ" ಕ್ಕೆ ಬಂಡವಾಳ ವೃದ್ಧಿ ತೆರಿಗೆ ಯ ಬಾಧ್ಯತೆಯಲ್ಲಿ ಬದಲಾವಣೆ. ಭೂಮಿಯ ಒಡೆಯರು ಅಭಿವೃದ್ಧಕರ ಜೊತೆಗೂಡಿ ಮಾಡುವ "ಜಂಟಿ ಅಭಿವೃದ್ಧಿ ಒಪ್ಪಂದ" ದ ಅಡಿಯಲ್ಲಿ ಕೊಡಬೇಕಾದ ಬಂಡವಾಳ ವೃದ್ಧಿ ತೆರಿಗೆಯ ಪಾಲನ್ನು ಆ ಯೋಜನೆ ಕಾರ್ಯಗತವಾದ ಮೇಲೆ ಕೊಡಬಹುದು ಎಂಬ ಮಹತ್ತರ ಬದಲಾವಣೆಯನ್ನು ಹಣಕಾಸು ಸಚಿವಾಲಯ ಮುಂದಿರಿಸಿದೆ. ಪ್ರಸ್ತುತ ಇರುವ ಕಾನೂನು ಬೇರೆ ಬೇರೆ ವ್ಯಾಖ್ಯೆಗೊಳಪಡುತ್ತಿದ್ದು, ಇನ್ನು ಮುಂದೆ ಒಂದೇ ತೀರ್ಮಾನಕ್ಕೆ ಎಲ್ಲರೂ ಬರುವುದಕ್ಕೆ ಸಾಧ್ಯವಿರುವ ಈ ಸೂಚನೆ ಮಹತ್ತರವಾಗಿದೆ. ಆದ್ದರಿಂದ, ಭೂಮಿಯ ಒಡೆಯ ಅಭಿವೃದ್ಧಕರ ಜೊತೆ ಕೂಡಿ ಮಾಡಿದ "ಜಂಟಿ ಅಭಿವೃದ್ಧಿ ಒಪ್ಪಂದ" ದ ಅಡಿಯಲ್ಲಿ ಕಟ್ಟಿದ ಯೋಜನೆಯು ಕಾರ್ಯಗತವಾದ ಒಂದು ವರ್ಷದ ಒಳಗೆ ಬಂಡವಾಳ ವೃದ್ಧಿ ತೆರಿಗೆ ಕಟ್ಟಬಹುದೆಂದು



ಸೂಚಿತವಾಗಿದೆ. ಇದು ಭೂಮಿಯ ಒಡೆಯರಿಗೂ ಮತ್ತು ಅಭಿವೃದ್ಧಕರಿಗೂ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಮತ್ತು ಅವರ ಬಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಈ ಹೊಸ ಕಾನೂನು ಹೊಸ ಸ್ಥಿರಾಸ್ತಿಗಳು ಅಭಿವೃದ್ಧಿಯ ಎಡೆಗೆ ಸಿಗುವಂತೆ ಮಾಡಿ, ಪೂರೈಕೆ ಹೆಚ್ಚಾಗುವಲ್ಲಿ ಸಹಾಯ ಮಾಡುತ್ತದೆ. ಕಳೆದ ಮೂರು ವರ್ಷಗಳಲ್ಲಿ ಭೂಮಿ ಅಲಭ್ಯವಾಗುವುದನ್ನು ಕಂಡ ಈ ವಲಯದಲ್ಲಿ ಸುಧಾರಣೆ ಕಾಣಬಹುದು ಎಂದು ಭಾವಿಸಲಾಗಿದೆ. ನೋಟು ಅಮಾನ್ಯದ ಮುಂದಿನ ಹೆಜ್ಜೆಯಾಗಿ ಯಾವುದೇ ವ್ಯವಹಾರ ಮೂರು ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ, ಅದನ್ನು ನಗದಿನಲ್ಲಿ ವ್ಯವಹರಿಸುವುದನ್ನು ಕಾನೂನು ಮಾನ್ಯ ಮಾಡುವುದಿಲ್ಲ. ರಿಯಲ್ ಎಸ್ಟೇಟ್ ಉದ್ಯಮದಲ್ಲಂತೂ, ನಗದು ವ್ಯವಹಾರವೇ ಹೆಚ್ಚಿದ್ದು, ಅದಕ್ಕೆ ಕಡಿವಾಣ ಹಾಕಬೇಕಾದ ಅವಶ್ಯಕತೆ ಇದೆ. ನಗದು ವ್ಯವಹಾರವೇ ಹೆಚ್ಚಿದ್ದರಿಂದ, ನೋಟು ಅಮಾನ್ಯೀಕರಣ ಈ ಉದ್ಯಮದ ಮೇಲೆ ಹೆಚ್ಚಿನ ಋಣಾತ್ಮಕ ಪರಿಣಾಮವನ್ನುಂಟು ಮಾಡಿದೆ. ನೋಟು ಅಮಾನ್ಯದ ನಂತರ ನಗದು ವ್ಯವಹಾರ ಗಣನೀಯವಾಗಿ ಕಡಿಮೆಯಾಗಿದೆ. ಆದ್ದರಿಂದ ಮೂರು ಲಕ್ಷಕ್ಕಿಂತ ಹೆಚ್ಚಿನ ವ್ಯವಹಾರ ನಗದಿನಲ್ಲಿ ಆಗಕೂಡದು ಎಂಬ ಕಾನೂನು ಅಲ್ಪಾವಧಿಯಲ್ಲಿ ಪ್ರತಿಕೂಲ ಪರಿಣಾಮವನ್ನುಂಟುಮಾಡಿದರೂ, ದೀರ್ಘಾವಧಿಯಲ್ಲಿ ವ್ಯವಹಾರದ ಪಾರದರ್ಶಕತೆ ಮತ್ತು ವಿದೇಶಿ ಹಣ ಹರಿದು ಬರುವ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಹೊಸದಾಗಿ ರಚಿತವಾಗಿರುವ ಆಂಧ್ರ ರಾಜ್ಯದ ಹೊಸ ರಾಜಧಾನಿಗೆ ಬೇಕಾದ ಭೂಮಿಯನ್ನು ಒಟ್ಟು ಮಾಡಲು ಹೊಸ ಮಾದರಿಯೊಂದನ್ನು ರಚಿಸಲಾಗಿದೆ. ವಿಸ್ತಾರವಾದ ಜಾಗದಲ್ಲಿ ಆಗಬೇಕಾದ ಅಭಿವೃದ್ಧಿ ಯೋಜನೆಗಳಿಗೆ ಭೂ ಸ್ವಾಧೀನ ಕಾಯಿದೆ ತುಂಬ ಅಡ್ಡಿಯನ್ನು ಉಂಟುಮಾಡುತ್ತಿರುವ ಕಾಯಿದೆಯಾಗಿದೆ.

ಈ ಹೊಸ ಮಾದರಿ, ಆಸ್ತಿಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಕಡಿಮೆ ಮಾಡುವುದಲ್ಲದೇ ಅಭಿವೃದ್ಧಿ ಶೀಘ್ರವಾಗುವುದಕ್ಕೂ ಸಹಾಯ ಮಾಡುತ್ತದೆ. ಬಂಡವಾಳ ವೃದ್ಧಿ ತೆರಿಗೆಯಿಂದ ವಿನಾಯಿತಿಯನ್ನು ಘೋಷಿಸಿರುವ ಸರ್ಕಾರದ ಈ ನಡೆ, ಭೂಮಿಯ ಒಡೆಯರ ವಿಶ್ವಾಸವನ್ನು ಗಳಿಸಲು ಸಾಧ್ಯವಾಗುವುದೆಂದು ಆಶಿಸಲಾಗಿದೆ. ಸರ್ಕಾರದ ಯೋಜನೆಯಡಿ ಇವರ ಭೂಮಿಯನ್ನೇ ಸಂಚಯಿಸಿ ರಾಜಧಾನಿ ನಿರ್ಮಿಸುತ್ತಿರುವುದರಿಂದ ಇಂಥ ವಿಶ್ವಾಸ ಗಳಿಕೆ ಅತಿ ಅಗತ್ಯವಾಗಿದೆ. ಆದರೆ, ಈ ತೆರಿಗೆ ವಿನಾಯಿತಿ, ಆಂಧ್ರ ಪ್ರದೇಶ ರಾಜ್ಯ ಘೋಷಿಸಿದ ದಿನ, ಅಂದರೆ ಜೂನ್ 2, 2014 ರಿಂದ ಅನ್ವಯವಾಗುತ್ತದೆ. ಅಂದರೆ, ಆ ದಿನದಂದು ಯಾರ ಹೆಸರಿನಲ್ಲಿ ಭೂಮಿಯಿತ್ತೋ ಅವರು ಈ ವಿನಾಯಿತಿಗೆ ಅರ್ಹರಾಗುತ್ತಾರೆ.

ವಾರ್ಷಿಕ ವರಮಾನ 2.5 ಲಕ್ಷದಿಂದ 5 ಲಕ್ಷವಿರುವವರಿಗೆ, ಆದಾಯ ತೆರಿಗೆಯಲ್ಲಿ ಶೇಕಡಾ 5 ಇಳಿಕೆ ಮಾಡಲಾಗಿದೆ. ಮೊದಲು ಇದ್ದ ಶೇಕಡಾ 10 ನ್ನು ಅರ್ಧದಷ್ಟು ಇಳಿಸಿ ಶೇಕಡಾ 5 ಎಂದು ನಿರ್ಧರಿಸಲಾಗಿದೆ. ತಮ್ಮ ಮೊದಲ ಸ್ವಂತ ಮನೆಯನ್ನು ಹೊಂದುವ ಇಚ್ಛೆಯುಳ್ಳವರಿಗೆ ಇದು ಸಹಾಯಕವಾಗಲಿದೆ. ಈ ಇಳಿಕೆ, ತೆರಿಗೆ ಕೊಡುವವರ ಸಂಖ್ಯೆಯನ್ನು ಹೆಚ್ಚಿಸುತ್ತದೆ ಎಂದು ನಂಬಲಾಗಿದೆ. ಆದಾಯ ತೆರಿಗೆ ಇಳಿಕೆಯಿಂದ ಗ್ರಾಹಕರ ಹತ್ತಿರ ಹೆಚ್ಚು ಹಣ ಇರುವುದರಿಂದ ಇದರಲ್ಲಿ ಒಂದು ಭಾಗ ಮನೆ ಕೊಳ್ಳುವುದಕ್ಕೂ ಉಪಯೋಗಗೊಳ್ಳಲಿದೆ ಎಂಬುದು ಸರ್ಕಾರದ ಆಶಯವಾಗಿದೆ.

ಬ್ಯಾಂಕ್ ಸಾಲದ ಬಡ್ಡಿ ದರದ ಇಳಿಕೆಯ ಜೊತೆ ಜೊತೆಯಲ್ಲೇ ಇರುವ ಈ ಸಾಧನ, 'ಕೈಗೆಟುಕುವ ವಸತಿ' ಕ್ಷೇತ್ರದಲ್ಲಿ ಅಭಿವೃದ್ಧಿಯಾಗಲು ನಾಂದಿ ಹಾಡುತ್ತದೆ.

2017 ರ ಬಜೆಟ್ ರಿಯಲ್ ಎಸ್ಟೇಟ್ ವಲಯಕ್ಕಂತೂ ಒಂದು ಕ್ರಾಂತಿಕಾರಕ ರೂಪಾಂತರಕ್ಕೆ ಕಾರಣವಾಗಬಲ್ಲ ಬಜೆಟ್ ಎಂದೇ ಹೇಳಬೇಕಾಗುತ್ತದೆ. ತೆರಿಗೆ ಕಟ್ಟುವುದನ್ನು ಮತ್ತು ಅದರ ಸದ್ಬಳಕೆಯಾಗುವುದರ ಬಗ್ಗೆ ಜನರಲ್ಲಿ ಸದಾಭಿಪ್ರಾಯ ಮೂಡಿಸುವಲ್ಲಿ ಸರ್ಕಾರ ನಿರಂತರ ಕಾರ್ಯ ವಹಿಸುತ್ತಿದೆ. ನಿಧಾನವಾಗಿಯಾದರೂ, ಖಚಿತ ಹೆಜ್ಜೆಗಳಿಂದ, ಸರ್ಕಾರ ಆರ್ಥಿಕ




ಸುಧಾರಣೆಗಳನ್ನು ಹಂತ ಹಂತವಾಗಿ ಜಾರಿಗೊಳಿಸುತ್ತಿದೆ. ಕೆಲ ನೋಟುಗಳ ಅಮಾನ್ಯೀಕರಣದಿಂದ ಒಂದು ತಾತ್ಕಾಲಿಕ ಹಿನ್ನಡೆಯಾಗಿದ್ದರೂ, ನಮ್ಮ ದೇಶದ ಆರ್ಥಿಕತೆ ಇದನ್ನೂ ಮೀರಿ ಬೆಳೆಯಲಿದೆ. ವಸ್ತು ಮತ್ತು ಸೇವೆಗಳ ತೆರಿಗೆಯಲ್ಲಿ ಸಾಮಾನ್ಯೀಕರಣಕ್ಕೆ ಒತ್ತು ನೀಡುವ ಜಿಎಸ್‌ಟಿ ಇದೇ ವರ್ಷದ ಎರಡನೇ ಭಾಗದಲ್ಲಿ ದೇಶದೆಲ್ಲೆಡೆ ಜಾರಿಯಾಗಲಿದೆ.

ರಿಯಲ್ ಎಸ್ಟೇಟ್ ವಲಯವನ್ನು ಕಾಡುತ್ತಿರುವ ಕೆಲವು ಮೂಲಭೂತ ಸಮಸ್ಯೆಗಳನ್ನು ಮತ್ತು ವಿಘ್ನಗಳನ್ನು ತೊಡೆದು ಹಾಕಿದರೆ, ಈ ಮಾರುಕಟ್ಟೆಯಲ್ಲಿ ಒಳ್ಳೆಯ ಗುಣಮಟ್ಟದ ಸರಕು ಗ್ರಾಹಕರಿಗೆ ಸಿಗುವ ಸಾಧ್ಯತೆಗಳಿವೆ. ಅಭಿವೃದ್ಧಕರು, ಹೆಚ್ಚು ಹೆಚ್ಚು ಭೂಮಿಯೊಡೆಯರ ಜೊತೆ ಸೇರಿ ಜಂಟಿ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಇದರಿಂದ ಅವರ ಬಾಧ್ಯತೆ ಕಡಿಮೆಯಾಗಿ, ಬಂಡವಾಳವೂ ನಿಯಂತ್ರಣದಲ್ಲಿರುತ್ತದೆ. ಸರ್ಕಾರ, ರಿಯಲ್ ಎಸ್ಟೇಟ್ ವಲಯದಿಂದ ಕಪ್ಪು ಹಣವನ್ನು ಸಂಪೂರ್ಣ ತೆಗೆದುಹಾಕಬೇಕೆಂಬ ಪಣ ತೊಟ್ಟಿರುವುದರಿಂದ, ಚೆಕ್ ಮೂಲಕ ಮಾತ್ರ ವ್ಯವಹಾರಗಳನ್ನು ಮಾಡಲಾಗಿ, ಪಾರದರ್ಶಕತೆ ಮತ್ತು ಜವಾಬ್ದಾರಿ ಹೆಚ್ಚಾಗುತ್ತದೆ ಎಂದು ನಂಬಲಾಗಿದೆ.

ಈ ಬಜೆಟ್‌ನ ಹತ್ತು ಧ್ಯೇಯಗಳ ಗುರಿ ಈ ರೀತಿ ಇದೆ – 'ರೂಪಾಂತರ, ಶಕ್ತಿವರ್ಧನೆ ಮತ್ತು ಸ್ವಚ್ಛತೆ'. ಹಣಕಾಸಿನ ವಿಷಯದಲ್ಲಿ ವಿವೇಕ, ಬಂಡವಾಳದ ಮೂಲಕ ಪ್ರಗತಿಯತ್ತ ನೋಟ, ಗ್ರಾಹಕ ವರ್ಧನೆ ಮತ್ತು ಉತ್ಪಾದಕತೆ ಹೆಚ್ಚಿಸುವ ಗುರಿ'. ಹಲವಾರು ಪಾರ್ಶ್ವಗಳಿಂದ ನೋಡಿದರೂ, ಈ ಬಜೆಟ್‌ನಲ್ಲಿ ಎದ್ದು ಕಾಣುವುದು 'ಕೈಗೆಟುಕುವ ವಸತಿ' ಯ ಮೇಲಿರುವ ಒತ್ತು. ನಗರಗಳಲ್ಲಿ, 18.9 ದಶಲಕ್ಷ ಮನೆಗಳ ಬೇಡಿಕೆಯಿದ್ದು, ಇದರಲ್ಲಿ ಶೇಕಡಾ 96 ರಷ್ಟು ಬೇಡಿಕೆ, ಆರ್ಥಿಕ ದುರ್ಬಲರ ಮತ್ತು ಕಡಿಮೆ ವರಮಾನ ಇರುವ ನಾಗರಿಕರದ್ದೇ ಆಗಿದೆ. ಈ ನಿಟ್ಟಿನಲ್ಲಿ, ಸರ್ಕಾರದ ಗಮನ ಈ ವರ್ಗಕ್ಕೆ ಅತ್ಯಗತ್ಯವಾಗಿ ಸೇರಬೇಕಾಗಿದ್ದು, ಎಲ್ಲರನ್ನೂ ಒಳಗೊಂಡ ಆರ್ಥಿಕ ಪ್ರಗತಿ ಮತ್ತು ಪ್ರಕೃತಿಯ ಎಲ್ಲವುದನ್ನೂ ಒಳಗೊಂಡ ಪ್ರಗತಿಯಾಗಬೇಕಾಗಿದೆ.

ಕಟ್ಟಡ ನಿರ್ಮಾತೃಗಳ ಮತ್ತು ಅಭಿವೃದ್ಧಕರನ್ನು ಪ್ರೋತ್ಸಾಹಿಸುವುದಕ್ಕಾಗಿ, ಈ ಬಜೆಟ್ ನಲ್ಲಿ ಅನೇಕ ರೀತಿಯ ಮತ್ತು ವ್ಯಾಪ್ತಿಯ ನೀತಿಗಳನ್ನು ಜಾರಿಮಾಡಲಾಗಿದೆ. 'ಕೈಗೆಟುಕುವ ವಸತಿ' ಕ್ಷೇತ್ರಕ್ಕೆ ಮೂಲ ಸೌಕರ್ಯ ಎಂದು ವರ್ಗೀಕರಣ ಮಾಡಲಾಗಿದ್ದು. ಇದರಿಂದ ಹಣದ ಪೂರೈಕೆ ಹೆಚ್ಚಾಗಿ ಮತ್ತು ಅದನ್ನು ನಿಭಾಯಿಸುವ ವೆಚ್ಚವೂ ಕಡಿಮೆಯಾಗಲಿದೆ. ರಾಷ್ಟ್ರೀಯ ವಸತಿ ಬ್ಯಾಂಕ್ 20,000 ಕೋಟಿ ರೂಪಾಯಿ ಹಣವನ್ನು ವ್ಯಕ್ತಿಗತ ಮನೆ ಸಾಲ ಕೊಡುವುದಕ್ಕೆ ತೆಗೆದಿರಿಸಲಾಗಿದೆ.

ಆದಾಯ ತೆರಿಗೆಯ ಮೊದಲ ಶ್ರೇಣಿಯ ಶೇಕಡಾವಾರು ಪ್ರಮಾಣವನ್ನು ಕಡಿಮೆ ಮಾಡಿದ್ದು ಮತ್ತು ಬಡ್ಡಿ ದರಗಳಲ್ಲಿನ ಇಳಿಕೆ – ಇವೆರಡೂ ಈ ವಲಯದ ಬೇಡಿಕೆಯನ್ನು ಹೆಚ್ಚಿಸಲು ಸಹಾಯಕವಾಗಲಿದೆ. ಇಂದಿನ ಭಾರತದ ಜನಸಂಖ್ಯೆಯ ಬಹುಭಾಗ ಯುವಕ/ಯುವತಿಯವರದ್ದಾಗಿದ್ದು, ಅದು ಬೇರೆ ದೇಶಗಳಿಗೆ ಹೋಲಿಸಿದಲ್ಲಿ ಬಹು ದೊಡ್ಡ ಆಸ್ತಿಯಾಗಿದೆ. ಆದರೆ, ಈ ಜನಸಂಖ್ಯೆಯ ಸದ್ಬಳಕೆ ಯಾಗುವುದು ತುಂಬ ಮುಖ್ಯ. ಈ ಯುವಕ, ಯುವತಿಯರಿಗೆ ಕೆಲಸ ಸಿಗುವಂತೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ವಸತಿ ನಿರ್ಮಾಣವೆನ್ನುವುದು, ಶ್ರಮ ಬೇಡುವ ಕ್ಷೇತ್ರವಾಗಿದ್ದು ಮತ್ತು ಈ ವಲಯದ ಸುತ್ತ ಇರುವ ಅನೇಕ ಕೈಗಾರಿಕೆಗಳು ಇದರ ಜೊತೆಗೇ ಅಭಿವೃದ್ಧಿಗೊಂಡು, ವಿಧವಿಧವಾದ ವಲಯಗಳಲ್ಲಿ ನೌಕರಿಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೀಗಾದಾಗ, ನಮ್ಮ ಜನಸಂಖ್ಯೆಯ ಬಹುಭಾಗವಾದ ಯುವಕರ ಮನೋಸ್ಥೈರ್ಯ ಮತ್ತು ಆದಾಯ ಹೆಚ್ಚಾಗಿ ಇಡೀ ಸಮಾಜದ ಅಭಿವೃದ್ಧಿ ಯಾಗುತ್ತದೆ. ಆದ್ದರಿಂದ ಈ 2017–18 ರ ಬಜೆಟ್ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದೆಯೆನ್ನುವುದರಲ್ಲಿ ಸಂಶಯವಿಲ್ಲ. ❑

# ಅಭಿವೃದ್ಧಿಯ ಹಾದಿಯಲ್ಲಿ ಗ್ರಾಮೀಣ ಭಾರತ

* ನಿರೇಂದ್ರ ದೇವ್



ಹಳ್ಳಿಗಳಲ್ಲಿ ರಸ್ತೆ ಅಭಿವೃದ್ಧಿ, ವಿದ್ಯುದೀಕರಣದ ಜತೆಗೆ, ಬಡತನ ನಿರ್ಮೂಲನೆಯಾಗಬೇಕಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡೇ ಗ್ರಾಮೀಣ ಅಭಿವೃದ್ಧಿಗಾಗಿ ರೂ. 3 ಲಕ್ಷ ಕೋಟಿ ಹಣವನ್ನು ವ್ಯಯಿಸಲಾಗುತ್ತದೆ.

ಕೇಂದ್ರ ಸರ್ಕಾರ ಕೃಷಿ ಕ್ಷೇತ್ರ ಹಾಗೂ ರೈತರ ಕಲ್ಯಾಣಕ್ಕಾಗಿ ಆದ್ಯತೆ ನೀಡುತ್ತಿದೆ.ಮಾತ್ರವಲ್ಲ, ಗ್ರಾಮೀಣ ಪ್ರದೇಶದ ಉನ್ನತೀಕರಣ ಮತ್ತು ಉದ್ಯೋಗ ಸೃಷ್ಟಿಗೂ ಪ್ರಾಮುಖ್ಯ ನೀಡುತ್ತಿದೆ.ಈ ಎರಡೂ ಕ್ಷೇತ್ರಗಳಲ್ಲಾಗಿರುವ ಸುಧಾರಣೆಗಮನಿಸಿ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಈ ಕ್ಷೇತ್ರಗಳ ಅಭಿವೃದ್ಧಿಗಾಗಿ ಹಣ ಮೀಸಲಿಡುವ ಪ್ರಯತ್ನ ಮಾಡಲಾಗುತ್ತಿದೆ.

ಹಲವು ತಜ್ಞರ ವಿಶ್ಲೇಷಣೆಯಂತೆ ಹಿಂದಿನ ವರ್ಷಗಳಬಜೆಟು ಕೃಷಿ ಆರ್ಥಿಕತೆ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರಗಳಲ್ಲಿ ಹೇಳಿಕೊಳ್ಳುವಂಥ ಸಾಧನೆಯಾಗಿಲ್ಲ. ಆದರೆ 2017–18ರ ಆಯವ್ಯಯದ ಮೂಲಕ ಈ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆ ತರಬಹುದೆಂದು ನಿರೀಕ್ಷಿಸಲಾಗಿದೆ. ಬಜೆಟ್‌ನಲ್ಲಿ ಕೃಷಿ – ಗ್ರಾಮೀಣ ಕ್ಷೇತ್ರಗಳ ಅಭಿವೃದ್ಧಿಗಾಗಿ ಹಿಂದಿನ ವರ್ಷಕ್ಕಿಂತ ಹೆಚ್ಚು ಹಣ ತೆಗೆದಿಟ್ಟಿರುವುದು, ಸೂಕ್ತ ಯೋಜನೆಗಳನ್ನು ಗುರುತಿಸಿ ಸಮರ್ಪಕ ಯೋಜನಾ ನಕ್ಷೆ ರೂಪಿಸುವ ಮೂಲಕ ಕೃಷಿ ಕ್ಷೇತ್ರದ ಅಭಿವೃದ್ಧಿಗಿರುವ ಅಡೆತಡೆಗಳನ್ನು ನಿವಾರಿಸಬಹುದಾಗಿದೆ.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದರೂ, ರೈತರು ಮತ್ತು ನಗರ ಪ್ರದೇಶದ ಗ್ರಾಹಕರಿಗೂ ಆದ್ಯತೆ ನೀಡಲಾಗಿದೆ.ಈ ಬಜೆಟ್‌ನಲ್ಲಿ ಕಳೆದ ವರ್ಷಕ್ಕಿಂತ ಶೇ 24ರಷ್ಟು ಹೆಚ್ಚುವರಿ ಹಣವನ್ನು ಗ್ರಾಮೀಣ ಮತ್ತು ಕೃಷಿ ಕ್ಷೇತ್ರ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕ್ಷೇತ್ರಗಳ ಅಭಿವೃದ್ಧಿಗಾಗಿ ತೆಗೆದಿಡಲಾಗಿದೆ. ಈ ಮೂಲಕ ಸರ್ಕಾರ ಕೃಷಿ – ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಬದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ. ಪ್ರಸಕ್ತ ಸಾಲಿನ ಬಜೆಟ್ ನಲ್ಲಿ ಸದರಿ ಕ್ಷೇತ್ರಗಳ ಅಭಿವೃದ್ಧಿಗಾಗಿ ರೂ 1,87,223 ಕೋಟಿ ತೆಗೆದಿರಿಸಲಾಗಿದೆ. ಹಲವು ದಶಕಗಳಿಂದ ಕೃಷಿಕರು ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಮಾರುಕಟ್ಟೆಯಲ್ಲೂ ಇದೇ ಪರಿಸ್ಥಿತಿ ಇದೆ. ಇವೆಲ್ಲವನ್ನು ಗಮನಿಸಿದ ಸರ್ಕಾರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡುವಂತಹ ಯೋಜನೆಗಳನ್ನು ಈ ಬಾರಿಯ ಬಜೆಟ್‌ನಲ್ಲಿ ರೂಪಿಸಿದೆ. ಬೆಲೆ ನಿಗದಿಗೆ ಇದ್ದ ಎಲ್ಲ ಅಡೆತಡೆಗಳನ್ನು ನಿವಾರಿಸಲು ಸಜ್ಜಾಗುತ್ತಿದೆ.

### ಗ್ರಾಮೀಣಾಭಿವೃದ್ಧಿಗೆ ಮತ್ತಷ್ಟು ಒತ್ತು

2014ರಿಂದ ಬಜೆಟ್ ಮಂಡಿಸುತ್ತಿರುವ ಹಣಕಾಸು ಸಚಿವರು, ಪ್ರತಿ ಬಜೆಟ್‌ನಲ್ಲೂ ಹಳ್ಳಿಗಳ ಅಭಿವೃದ್ಧಿ ಕುರಿತು ಪ್ರಸ್ತಾಪಿಸಿದ್ದಾರೆ. ಕೇವಲ ಪ್ರಸ್ತಾವನೆಯಿಂದ ಹಳ್ಳಿಗಳ ಅಭಿವೃದ್ಧಿ ಅಸಾಧ್ಯವಾಗಿದೆ. ಗ್ರಾಮೀಣ ಕ್ಷೇತ್ರ ಅಭಿವೃದ್ಧಿಯಾಗಬೇಕಾದರೆ, ಆ ಕ್ಷೇತ್ರಕ್ಕೆ ಹೆಚ್ಚಿನ ಹಣಕಾಸು ಪೂರೈಸಬೇಕು. ಈ ಬಾರಿಯ ಬಜೆಟ್ ನಲ್ಲೂ ಅದನ್ನು ಪ್ರಸ್ತಾಪಿಸಿದ್ದಾರೆ.

ಹಳ್ಳಿಗಳಲ್ಲಿ ರಸ್ತೆ ಅಭಿವೃದ್ಧಿ, ವಿದ್ಯುದೀಕರಣದ ಜತೆಗೆ, ಬಡತನ ನಿರ್ಮೂಲನೆಯಾಗಬೇಕಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡೇ ಗ್ರಾಮೀಣ ಅಭಿವೃದ್ಧಿಗಾಗಿ ರೂ 3 ಲಕ್ಷ ಕೋಟಿ ಹಣವನ್ನು ವ್ಯಯಿಸಲಾಗುತ್ತದೆ.

2019ರ ವೇಳೆಗೆ ಮಿಷನ್ ಅಂತ್ಯೋದಯ ಯೋಜನೆಯಡಿ 1 ಕೋಟಿ ಜನರನ್ನು ಬಡತನ ರೇಖೆಯಿಂದ ಹೊರ ತರಲಾಗಿದೆ.50 ಸಾವಿರ ಗ್ರಾಮ ಪಂಚಾಯಿತಿಗಳನ್ನು ಬಡತನ ಮುಕ್ತವಾಗಿಸುವ ಗುರಿ ಹೊಂದಲಾಗಿದೆ.

* ದೇಶದ ಕೃಷಿ ಆರ್ಥಿಕ ಪರಿಸ್ಥಿತಿ ಮತ್ತು ಗ್ರಾಮೀಣ ಅಭಿವೃದ್ಧಿ ವಿಚಾರಗಳ ಬಗ್ಗೆ ಒಳನೋಟಗಳುಳ್ಳ ಬರಹಗಾರ. E-mail : nirendev1@gmail.com

## ನರೇಗಾ – ಉದ್ಯೋಗ ಯೋಜನೆ

ರೈತರ ಆದಾಯ ದ್ವಿಗುಣಗೊಳಿಸುವ ಗುರಿ ಹೊಂದಿರುವ ಕೇಂದ್ರ ಸರ್ಕಾರ ಇದಕ್ಕಾಗಿ ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಸುವ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗೆ ಉತ್ತೇಜನ ನೀಡುತ್ತಿದೆ. ನರೇಗ ಯೋಜನೆಯಡಿ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಕ್ಕೆ ಕನಿಷ್ಠ 100 ಉದ್ಯೋಗ ನೀಡುವ ಮೂಲಕ, ಆದಾಯ ನೀಡುವಂತಹ ಸ್ವತ್ತುಗಳನ್ನು ಸೃಷ್ಟಿಸುವ ಜತೆಗೆ, ಕೃಷಿ ಉತ್ಪನ್ನ ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ಗುರಿ ಹೊಂದಲಾಗಿದೆ.

ಕಳೆದ ಬಜೆಟ್‌ನಲ್ಲಿ ನರೇಗಾ ಅನುದಾನದಲ್ಲಿ 5 ಲಕ್ಷ ಕೃಷಿ ಹೊಂಡಗಳು, 10 ಲಕ್ಷ ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು. ಯಶಸ್ವಿಯಾಗಿ ಗುರಿ ಮುಟ್ಟಲಾಗಿದೆ. ಮಾತ್ರವಲ್ಲ, 2017ರ ಮಾರ್ಚ್ ಅಂತ್ಯದೊಳಗೆ 10 ಲಕ್ಷ ಕೃಷಿ ಹೊಂಡಗಳು ನಿರ್ಮಾಣವಾಗುವ ವಿಶ್ವಾಸವಿದೆ. ಅದೇ ರೀತಿ 2017–18ನೇ ಸಾಲಿನಲ್ಲಿ 5 ಲಕ್ಷ ಕೃಷಿ ಹೊಂಡಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇಂಥ ಒಂದು ಯೋಜನೆಯಿಂದಾಗಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಬರಗಾಲವನ್ನು ಎದುರಿಸಲು ಸಹಾಯವಾಗುತ್ತದೆ.

ನರೇಗಾದಲ್ಲಿ ಮಹಿಳೆಯರ ಪಾಲ್ಗೊಳ್ಳುವ ಪ್ರಮಾಣ ಶೇ 55ರಷ್ಟು ಹೆಚ್ಚಾಗಿದ್ದು, ಕಳೆದ ವರ್ಷ ಈ ಪ್ರಮಾಣ ಶೇ 48ರಷ್ಟಿತ್ತು. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹಣಕಾಸು ಸಚಿವರು ನೀಡಿದ ವಿವರಣೆಯಂತೆ, "2016–17ನೇ ಸಾಲಿನಲ್ಲಿ ನರೇಗಾಕ್ಕೆ ರೂ 38500 ಕೋಟಿ ಹಣ ತೆಗೆದಿಡಲಾಗಿತ್ತು. 2017–18ನೇ ಸಾಲಿನಲ್ಲಿ ರೂ. 48 ಸಾವಿರ ಕೋಟಿ ತೆಗೆದಿಡಲಾಗಿದೆ. ನರೇಗಾದಲ್ಲಿ ನಡೆಯುವ ಕಾಮಗಾರಿಗಳನ್ನು ಮತ್ತಷ್ಟು ಪಾರದರ್ಶಕವಾಗಿಸುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಎಲ್ಲ ನರೇಗಾ ಚಟುವಟಿಕೆಗಳಿಗೆ ಜಿಪಿಎಸ್ ಅಳವಡಿಸಿದೆ.

## ಗ್ರಾಮೀಣರ ಅಭ್ಯುದಯಕ್ಕೆ ಸಂಕಲ್ಪ

ಗ್ರಾಮೀಣ ಪ್ರದೇಶದ ಅಭ್ಯದಯಕ್ಕಾಗಿ ಹಳೆಯ ಮತ್ತು ಹೊಸ ಕಾರ್ಯಕ್ರಮಗಳನ್ನು ಸರ್ಕಾರ ಅನುಷ್ಠಾನಗೊಳಿಸಲು ನಿರ್ಧರಿಸಿದೆ.ಈ ವರ್ಷದ ಬಜೆಟ್



ನಲ್ಲೂ ಗ್ರಾಮೀಣ ಪ್ರದೇಶದವರ ಕೌಶಲ್ಯ ಅಭಿವೃದ್ಧಿಗಾಗಿ ಹೊಸ ಹೊಸ ಔದ್ಯೋಗಿಕ ತರಬೇತಿ ನೀಡಲು ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ.2022ರ ವೇಳೆಗೆ 5 ಲಕ್ಷ ವ್ಯಕ್ತಿಗಳಿಗೆ ಕಟ್ಟಡ ನಿರ್ಮಾಣದ (ಮೇಸನ್) ತರಬೇತಿ ನೀಡಲು ನಿರ್ಧರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕನಿಷ್ಠ 20 ಸಾವಿರ ವ್ಯಕ್ತಿಗಳಿಗೆ ಈ ತರಬೇತಿ ನೀಡಬೇಕೆಂಬ ಗುರಿ ಹೊಂದಲಾಗಿದೆ ಎಂದು ಸರ್ಕಾರ ಪ್ರಕಟಸಿದೆ.

ಹಳ್ಳಿಗಳಲ್ಲಿ ಅಭಿವೃದ್ಧಿ ಪೂರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಈಗಲೂ ಮಾನವ ಸಂಪನ್ಮೂಲಗಳ ಕೊರತೆ ಎದುರಿಸುತ್ತಿವೆ. ಈ ಹಿನ್ನಲೆಯಲ್ಲಿ 'ಉತ್ತಮ ಫಲಿತಾಂಶಕ್ಕಾಗಿ ಮಾನವ ಸಂಪನ್ಮೂಲ ಸುಧಾರಣೆ' ಎಂಬ ಕಾರ್ಯಕ್ರಮವನ್ನು ಇದೇ 2017–18ನೇ ಸಾಲಿನಲ್ಲಿ ಆರಂಭಿಸಲಾಗುತ್ತದೆ' ಎಂದು ಸಚಿವರು ತಿಳಿಸಿದ್ದಾರೆ.

## ಹೆಣ್ಣು ಮಗು ಮತ್ತು ಮಹಿಳೆ

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' – ಗ್ರಾಮೀಣ ಮತ್ತು ಕೃಷಿ ಸಮುದಾಯದ ಅಭ್ಯುದಯದ ಹಿನ್ನಲೆಯಲ್ಲಿ ಸರ್ಕಾರ ಇಟ್ಟುಕೊಂಡಿರುವ ಗುರಿ.ಈ ಹಿನ್ನಲೆಯಲ್ಲಿ ಹಣಕಾಸು ಸಚಿವರು ಈ ಬಾರಿಯ ಬಜೆಟ್ ಅನ್ನು ಹೆಣ್ಣು ಮಗು ಮತ್ತು ಮಹಿಳೆಯಿಂದಲೇ ಆರಂಭಿಸಿದ್ದಾರೆ. ದೇಶದ ಹಳ್ಳಿಗಳಲ್ಲಿರುವ 14 ಲಕ್ಷ ಐಸಿಡಿಎಸ್ ಅಂಗನವಾಡಿ ಕೇಂದ್ರಗಳಲ್ಲಿ ರೂ 500 ಕೋಟಿ ವೆಚ್ಚದಲ್ಲಿ 'ಮಹಿಳಾ ಶಕ್ತಿ ಕೇಂದ್ರ'ಗಳನ್ನು ಆರಂಭಿಸಲು ತೀರ್ಮಾನಿಸಲಾಗಿದೆ.ಈ ಕೇಂದ್ರಗಳು ಒಂದೇ ಸೂರಿನಡಿ ಮಹಿಳಾ ಸಬಲೀಕರಣಕ್ಕೆ ಬೇಕಾಗುವ ಕೌಶಲ್ಯಾಭಿವೃದ್ಧಿ, ಉದ್ಯೋಗ, ಡಿಜಿಟಲ್ ಸಾಕ್ಷರತೆ, ಆರೋಗ್ಯ, ಪೌಷ್ಟಿಕಾಂಶದಂತಹ ಹಲವು ಸೌಲಭ್ಯಗಳನ್ನು ನೀಡಲಿದೆ.

ಡಿಸೆಂಬರ್ 31, 2016ರಂದು ಪ್ರಧಾನಿ ನರೇಂದ್ರ ಮೋದಿಯವರು ಗರ್ಭಿಣಿಯರಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಘೋಷಿಸಿದ್ದಾರೆ. ಈ ಯೋಜನೆಯಡಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಹಾಗೂ ನವಜಾತ ಶಿಶುವಿಗೆ ಲಸಿಕೆ ಹಾಸುವಂತಹ ಮಹಿಳೆಯರ ಬ್ಯಾಂಕ್ ಖಾತೆಗೆ ರೂ 6 ಸಾವಿರ ಹಣವನ್ನು ನೇರವಾಗಿ ವರ್ಗಾವಣೆ ಮಾಡುತ್ತಿದೆ.ಈ ಮೂಲಕ ಗ್ರಾಮೀಣ ಜನರ ನೆರವಿಗೆ ಸರ್ಕಾರ ಸಹಾಯಾಸ್ತ ಚಾಚಿದೆ.

'ಪಿಎಂಜಿಎಸ್ ವೈ ಯೋಜನೆಯಡಿ 2011–12ರಲ್ಲಿ ಒಂದು ದಿನಕ್ಕೆ 73 ಕಿ.ಮೀ ರಸ್ತೆ ನಿರ್ಮಾಣವಾಗುತ್ತಿತ್ತು. 2016–17ರಲ್ಲಿ ಒಂದು ದಿನಕ್ಕೆ 173 ಕಿ.ಮೀ ನಿರ್ಮಾಣವಾಗುತ್ತಿದೆ. ಅದೇ ರೀತಿ ಬಡವರಿಗೆ ವಸತಿ ವ್ಯವಸ್ಥೆ ಕಲ್ಪಿಸುವ ಪ್ರಧಾನಮಂತ್ರಿ ಆವಾಸ್ ಯೋಜನೆಗಾಗಿ ಪ್ರತಿ ವರ್ಷ ಮೀಸಲಿಡುತ್ತಿದ್ದ ಅನುದಾನವನ್ನು ಶೇ 44ರಷ್ಟು ಹೆಚ್ಚಿಸಲಾಗಿದೆ. ಆ ಪ್ರಕಾರ ರೂ 27 ಸಾವಿರ ಕೋಟಿ ವೆಚ್ಚದಲ್ಲಿ 10 ದಶಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅದೇ ರೀತಿ ದೀನ್ ದಯಾಳ್ ಉಪಾಧ್ಯ ಗ್ರಾಮ ಜ್ಯೋತಿ ಯೋಜನೆಯಡಿ ಹಳ್ಳಿಗಳಿಗೆ ವಿದ್ಯುದ್ದೀಕರಣಕ್ಕಾಗಿ ರೂ 4,814 ಕೋಟಿ ಹಣವನ್ನು ತೆಗೆದಿರಿಸಲಾಗಿದೆ.ಕಳೆದ ವರ್ಷಕ್ಕಿಂತ ಶೇ 43ರಷ್ಟು ಹೆಚ್ಚಿನ ಅನುದಾನ ಮೀಸಲಿಡಲಾಗಿದೆ' ಎಂದು ಹಣಕಾಸು ಸಚಿವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

## ಉಪಸಂಹಾರ

ಗ್ರಾಮೀಣ ಪ್ರದೇಶ, ಪುಟ್ಟ ನಗರಗಳು, ಪಟ್ಟಣಗಳಅಭಿವೃದ್ಧಿ, ಬಡತನ ನಿರ್ಮೂಲನೆ, ಉದ್ಯೋಗ, ಕೃಷಿ ಮತ್ತು ಕೃಷಿಯೇತರ ಕ್ಷೇತ್ರದ ಅಭಿವೃದ್ಧಿ, ಪ್ರತಿ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸು–ವುದಕ್ಕಾಗಿ ಕೇಂದ್ರ ಸರ್ಕಾರ ಕಳೆದ ಎರಡೂವರೆ ವರ್ಷಗಳಿಂದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಒಟ್ಟಾರೆ ಹಳ್ಳಿಗಳ ಅಭಿವೃದ್ಧಿ, ರೈತರು ಜೀವನ ಪರಿಸ್ಥಿತಿ ಸುಧಾರಿಸುವ ಮೂಲಕವೇ ಭಾರತದ ಆರ್ಥಿಕ ಪ್ರಗತಿ ಸಾಧ್ಯ ಎಂಬುದನ್ನು ಕೇಂದ್ರ ಸರ್ಕಾರ ಗಮನದಲ್ಲಿಟ್ಟುಕೊಂಡು ಪ್ರಸಕ್ತ ಸಾಲಿನ ಬಜೆಟ್ ಮಂಡಿಸಿದೆ. ❑

# ಆಯವ್ಯಯದಲ್ಲಿ 'ಆರೋಗ್ಯ'ಕರ ಬೆಳವಣಿಗೆ

* ರಾಜೀವ್ ಅಹುಜಾ




ಆಯವ್ಯಯದಲ್ಲಿ ಆರೋಗ್ಯ ಹಂಚಿಕೆಯ ಪ್ರಮಾಣ ಸುಮಾರು ಶೇ.27% ಅಧಿಕವಾಗಿತ್ತು, ಇದು ಆರೋಗ್ಯಕರ ಬೆಳವಣಿಗೆಯನ್ನು ಸೂಚಿಸುತ್ತದೆ. ಇದು ಆರೋಗ್ಯ ವೆಚ್ಚಗಳ ಆರೋಗ್ಯಕರ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ.

ಕೇಂದ್ರ ಆಯವ್ಯಯದಲ್ಲಿ ಆರೋಗ್ಯ ಕ್ಷೇತ್ರಕ್ಕೆ 50,283 ಕೋಟಿ ರೂ. ಗಳಷ್ಟು ಹಂಚಿಕೆಯಾಗಿದೆ, 39,533 ಕೋಟಿ ರೂ. ಗಳನ್ನು ಹಂಚಿಕೆ ಮಾಡಿದ್ದ ಹಿಂದಿನ ಆಯವ್ಯಯಕ್ಕಿಂತ ಶೇ.27% ರಷ್ಟು ಹೆಚ್ಚಿರುವುದು ಆರೋಗ್ಯಕರ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ. ಕಳೆದ 15 ವರ್ಷಗಳಿಗಿಂತ ಹೆಚ್ಚಿನ ದಾಖಲೆಯ ಪ್ರಮಾಣದ ಹಂಚಿಕೆಯನ್ನು 2017–18 ರ ಆಯವ್ಯಯದಲ್ಲಿ ಆರೋಗ್ಯ ಕ್ಷೇತ್ರಕ್ಕೆ ನೀಡಲಾಗಿದೆ. ಈ ಹಿಂದೆ ಅತ್ಯಲ್ಪ ಪ್ರಮಾಣದಲ್ಲಿ ಹಂಚಿಕೆಯಾಗುತ್ತಿತ್ತು. (ರೇಖಾಚಿತ್ರ – 1)

ರೇಖಾಚಿತ್ರವು, 2004–05 ರಿಂದ 2017–18 ರವರೆಗಿನ ಕೇಂದ್ರ ಆರೋಗ್ಯ ಹಂಚಿಕೆ ಮತ್ತು ಖರ್ಚು–ವೆಚ್ಚದ (ಅತ್ಯಲ್ಪ ನಿಬಂಧನೆಯಲ್ಲಿ) ಬೆಳವಣಿಗೆಯ ದರವನ್ನು ಚಿತ್ರಿಸುತ್ತದೆ. ದೇಶದ ಆರ್ಥಿಕತೆ ಬೆಳವಣಿಗೆ ಉನ್ನತ ಮಟ್ಟದಲ್ಲಿದ್ದಾಗ ಸರ್ಕಾರದ ಆದಾಯ ಉನ್ನತ ಮಟ್ಟದಲ್ಲಿದ್ದ ಸಂದರ್ಭದಲ್ಲಿ 2005–06ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಆರಂಭಿಸಲಾಯಿತು. 2013–14 ರಿಂದ 2015–16ರ ವರೆಗಿನ ಮೂರು ವರ್ಷಗಳನ್ನು ಹೊರತು ಪಡಿಸಿ,2004–05 ರಿಂದ 2017–18 ವರೆಗೆ ಕೇಂದ್ರ ಆರೋಗ್ಯದ ಹಂಚಿಕೆಯು ಎಲ್ಲ ವರ್ಷಗಳಲ್ಲಿ ಶೇ 10% ಕ್ಕಿಂತ ಹೆಚ್ಚಿನ ದರದಲ್ಲಿ ಬೆಳೆಯಿತು. ಈ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರದಲ್ಲಿ ಆಡಳಿತ ಬದಲಾವಣೆಯಾಗಿದೆ ಮತ್ತು 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯಗಳ ಪ್ರಾತಿನಿಧಿಕ ತೆರಿಗೆಯ ಪ್ರಮಾಣ ಹೆಚ್ಚಿದೆ. ತೆರಿಗೆ ವಿಕೇಂದ್ರೀಕರಣದ ಹೆಚ್ಚಿನ ಪಾಲನ್ನು ರಾಜ್ಯಗಳಿಗೇ ನೀಡಿ, ಆರೋಗ್ಯ ಸೇವೆ ಸೇರಿದಂತೆ ವಿವಿಧ ಅಗತ್ಯಸೇವೆ ಪೂರೈಕೆ ವಹಿಸಲಾಯಿತು.

**ರೇಖಾ ಚಿತ್ರ : 1 – ಕೇಂದ್ರ ಆರೋಗ್ಯ ಆಯವ್ಯಯದಲ್ಲಿ ಬೆಳವಣಿಗೆ**




ಮೂಲ : ಹಲವು ವರ್ಷಗಳ ಕೇಂದ್ರ ಆಯವ್ಯಯದ ದಾಖಲೆಗಳು

* ಅಭಿವೃದ್ಧಿ ಅರ್ಥಶಾಸ್ತ್ರಜ್ಞ, E-mail : ahujaahuja@yahoo.com



ಕೇಂದ್ರ ಆರೋಗ್ಯ ಹಂಚಿಕೆಯ 2010–11 ರವರೆಗೂ ಬೆಳವಣಿಗೆ ದರ ಶೇ.10 %ಕ್ಕಿಂತಲೂ ಕಡಿಮೆಯಿತ್ತು, ಅದು 2015–16 ರವರೆಗೂ ಹಾಗೇ ಮುಂದುವರೆದಿತ್ತು. ಈಗ ವೃದ್ಧಿಯು ಆರಂಭವಾಗಿದೆ. 2016–17 ನೇ ಸಾಲಿನ ಆರೋಗ್ಯದ ಖರ್ಚು–ವೆಚ್ಚಗಳು ಇನ್ನೂ ಲಭ್ಯವಿಲ್ಲ, ಆದರೂ ಪರಿಷ್ಕೃತ ಅಂದಾಜಿನ ಪ್ರಕಾರ ಈ ವರ್ಷದ ಆರೋಗ್ಯ ಖರ್ಚು–ವೆಚ್ಚದ ಬೆಳವಣಿಗೆಯು ಶೇ.17% ರಷ್ಟಾಗಬಹುದು. 2015–16 ರಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಆರೋಗ್ಯ ಹಂಚಿಕೆಯು ಶೇ. 15% ರಷ್ಟು ತೀವ್ರವಾಗಿ ಕುಸಿದಿದೆ (ಬೆಳವಣಿಗೆಯ ದರ ಮೈನಸ್ 15% ಎಂದು) ಆದರೂ, ಆರೋಗ್ಯ ವೆಚ್ಚವು ಶೇ.9% ರಷ್ಟು ಬೆಳೆಯಿತು, ಮಧ್ಯ ವಾರ್ಷಿಕ ಆಯವ್ಯಯದ ಪರಿಷ್ಕರಣೆಯ ಸಮಯದಲ್ಲಿ ಮೇಲ್ಮುಖ ತಿದ್ದುಪಡಿಯನ್ನು ಸೂಚಿಸಲಾಯಿತು.

ಈ ಹಿನ್ನೆಲೆಯಲ್ಲಿ, 2017–18ರ ಆಯವ್ಯಯದಲ್ಲಿ ಆರೋಗ್ಯ ಹಂಚಿಕೆಯ ಪ್ರಮಾಣ ಸುಮಾರು ಶೇ.27% ಅಧಿಕವಾಗಿತ್ತು, ಇದು ಆರೋಗ್ಯಕರ ಬೆಳವಣಿಗೆಯನ್ನು ಸೂಚಿಸುತ್ತದೆ. ಮತ್ತು 2017–18ನೇ ಸಾಲಿನಲ್ಲಿ ಕೇಂದ್ರದ ಆರೋಗ್ಯ ವೆಚ್ಚವು ವಾಸ್ತವವಾಗಿ ಯೋಜಿಸಿದಂತೆ, ಇದು ಆರೋಗ್ಯ ವೆಚ್ಚಗಳ ಆರೋಗ್ಯಕರ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ. ಆರೋಗ್ಯ ವೆಚ್ಚಕ್ಕೂ ಆರೋಗ್ಯ ಹಂಚಿಕೆಗೂ ಹೊಂದಾಣಿಕೆ ಆಗುವುದಿಲ್ಲ ಎಂದು ನಾವೇಕೆ ನಂಬಬೇಕು? ಕಳೆದ ಎರಡು ವರ್ಷಗಳಲ್ಲಿ ಆಯವ್ಯಯದ ಬಳಕೆಯ ಪ್ರಮಾಣದಲ್ಲಿ ಸುಧಾರಣೆ ಆಗಿರುವುದು ಈ ನಂಬಿಕೆಗೆ ಸ್ಫೂರ್ತಿ. (ಕೋಷ್ಟಕವನ್ನು ನೋಡಿ.)

### ಆಯವ್ಯಯದ ಹಂಚಿಕೆ ಒಂದು ಸಮೀಪ ನೋಟ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯವ್ಯಯವನ್ನು ಅವಲೋಕಿಸಿದಾಗ, ಕೆಲವು ಕುತೂಹಲಕಾರಿ ಅಂಶ ಕಂಡು ಬಂದಿದೆ. (ಕೋಷ್ಠಕವನ್ನು ಸಹ ಗಮನಿಸಿ)

* ಆರೋಗ್ಯ ಆಯವ್ಯಯದ ಶೇ.59% ರಷ್ಟು, ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಗಳಾದ ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ರಾಷ್ಟ್ರೀಯ ಆರೋಗ್ಯ ಸುರಕ್ಷತಾ ಯೋಜನೆಗಳಿಗಾಗಿ ರಾಜ್ಯಗಳಿಗೆ/ ಕೇಂದ್ರಾಡಳಿತಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ.
* ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿ.ಎಂ.ಎಸ್.ಎಸ್.ವೈ) ನಂತಹ ಕೇಂದ್ರ ವಲಯದ ಯೋಜನೆಗಳು ಎ.ಐ.ಐ.ಎಂ.ಎಸ್ ನಂತಹ ಸಂಸ್ಥೆಗಳ ಸ್ಥಾಪನೆಗೆ ಮತ್ತು ವೈದ್ಯಕೀಯ ಕಾಲೇಜು ಸಂಸ್ಥೆಗಳ ಉನ್ನತೀಕರಣಕ್ಕೆ ಶೇ.15% ರಷ್ಟು ಹಂಚಿಕೆ ಪಡೆಯುತ್ತವೆ.
* ಎನ್.ಆರ್.ಎಚ್.ಎಂ. (ರೂ. 3100 ಕೋಟಿ) ಗೆ ಹಂಚಿಕೆಯಾದ ಹೆಚ್ಚಳವನ್ನು ಅನುಸರಿಸಿ ಮತ್ತು ಪಿ.ಎಂ.ಎಸ್.ಎಸ್.ವೈ (ರೂ. 1525 ಕೋಟಿ) ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಕ್ಕಾಗಿ ಮಾನವ ಸಂಪನ್ಮೂಲವು ಆಯವ್ಯಯದಲ್ಲಿ ಅತಿ ಹೆಚ್ಚಿನ ಹಂಚಿಕೆಯನ್ನು ಸ್ವೀಕರಿಸಿದೆ (ರೂ. 3425 ಕೋಟಿ ಗೆ ಹೆಚ್ಚಳ). ಈ ಮೂರು ಇಲಾಖೆಗಳ ಒಟ್ಟೂ ಆರೋಗ್ಯ ಹಂಚಿಕೆಯ ಹೆಚ್ಚಳ ಶೇ.80% ರಷ್ಟು.
* ವೈದ್ಯಕೀಯ ಸಿಬ್ಬಂದಿಗಳ, ವಿಶೇಷವಾಗಿ ತಜ್ಞ ವೈದ್ಯರ ಕೊರತೆಯ ಕಾರಣದಿಂದ, ಆರೋಗ್ಯಕ್ಕಾಗಿ ಮಾನವ ಸಂಪನ್ಮೂಲ ಹೆಚ್ಚಿಸುವಂತೆ ಸರ್ಕಾರದ ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆ. ಆಯವ್ಯಯ ಭಾಷಣದಲ್ಲಿ, ಹಣಕಾಸು ಸಚಿವರು ವರ್ಷಕ್ಕೆ ಹೆಚ್ಚುವರಿ 5,000 ಪದವಿ ಸೀಟ್‌ಗಳ ರಚನೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದು, ಆಯವ್ಯಯದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಕ್ಕಾಗಿ ಮಾನವ ಸಂಪನ್ಮೂಲವು ಪಡೆದ ಅತಿ ಹೆಚ್ಚಿನ ಹೆಚ್ಚಳವಾಗಿದೆ.
* ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಂಚಿಕೆಯಲ್ಲಿ ಸುಮಾರು ಶೇ.45% ರಷ್ಟನ್ನು ಎನ್.ಆರ್.ಎಚ್.ಎಂ ಆರೋಗ್ಯ ಆಯವ್ಯಯದಡಿಯಲ್ಲಿ ಪಡೆದಿದೆ. ಆದಾಗ್ಯೂ, ಎನ್.ಆರ್.ಎಚ್.ಎಂ.ನ ಒಳಹಂಚಿಕೆಯು, ಎನ್.ಆರ್.ಎಚ್.ಎಂ. ಅಡಿಯಲ್ಲಿ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚು ಒತ್ತು ನೀಡುವಂತೆ ಸೂಚಿಸುತ್ತದೆ.
* ಆಯವ್ಯಯ ಪಟ್ಟಿಯಲ್ಲಿ ಊಹಿಸಿದ ಬಂಡವಾಳ ವೆಚ್ಚವು ರೂ. 3510 ಕೋಟಿ ಗಳಿಗೆ ಹೆಚ್ಚಳವಾಗಿದೆ, 2016–17 ರಲ್ಲಿ ಸುಮಾರು 1760 ಕೋಟಿಗಳಷ್ಟು, ಬಂಡವಾಳ ವೆಚ್ಚದ ಖಾತೆಯು ಪಿ.ಎಂ.ಎಸ್.ಎಸ್.ವೈ. ಅಡಿಯಲ್ಲಿ ಬರುವ ಸಾರ್ವಜನಿಕ ಆಸ್ಪತ್ರೆಗಳನ್ನು ಒಳಗೊಂಡಂತೆ ಹೆಚ್ಚು ವ್ಯಯಿಸುತ್ತದೆ.

### ಯಾವಾಗ ಹೆಚ್ಚಿರುವುದು ಕಡಿಮೆಯಾಗುತ್ತದೆ

ಕೆಲವರು ಈ ಆಯವ್ಯಯದಿಂದ ಇನ್ನೂ ಹೆಚ್ಚಿನ ಹಂಚಿಕೆಯನ್ನು ನಿರೀಕ್ಷಿಸಿದ್ದು, ಆರೋಗ್ಯ ಹಂಚಿಕೆಯ ಶೇ.27% ರಷ್ಟು ಹೆಚ್ಚಳ ಅವರಿಗೆ ಸಂತೋಷ ಉಂಟುಮಾಡಿಲ್ಲ. ಈ ಆಯವ್ಯಯದಿಂದ ಹೆಚ್ಚಿನ ನಿರೀಕ್ಷೆಗಳಿಗೆ

| ಆಯವ್ಯಯದ ಬಳಕೆಯ ದರ | 2010–11 | 2011–12 | 2012–13 | 2013–14 | 2014–15 | 2015–16 | 2016–17 |
|---|---|---|---|---|---|---|---|
| ಆಯವ್ಯಯದ ಪರಿಷ್ಕೃತ ಪಾಲು | 99.6 | 92.9 | 84.9 | 82.6 | 81.5 | 105.0 | 103.7 |
| ವಾಸ್ತವದಲ್ಲಿ ಆಯವ್ಯಯದ ಪಾಲು | 97.2 | 85.0 | 80.9 | 80.7 | 81.9 | 105.7 | |
| ಮೂಲ : ಹಲವು ವರ್ಷಗಳ ಕೇಂದ್ರ ಆಯವ್ಯಯದ ದಾಖಲೆಗಳು | | | | | | | |



ಆಧಾರವಾದರೂ ಏನು? ಒಂದು, ಭಾರತದಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚದ ದಾಖಲೆ, ಎರಡು, ರಾಷ್ಟ್ರೀಯ ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಯೋಜನೆಗಳ ಅಭಾವ ಹಾಗೂ ಇತ್ತೀಚೆಗೆ ಘೋಷಿಸಿದ ಹೊಸ ಕಾರ್ಯಕ್ರಮಗಳಿಗೆ ಸ್ಪಷ್ಟವಾದ ಹಣಕಾಸಿನ ಮೂಲ. ಕೆಲವು ವಿವರಗಳನ್ನು ಪರಿಶೀಲಿಸಿದರೆ, ಈ ಎರಡು ಕಾರಣಗಳಿಂದಾಗಿ ಈ ಆಯವ್ಯಯದ ಬಗ್ಗೆ ಹೆಚ್ಚಿನ ನಿರೀಕ್ಷೆಗಳು ಹುಟ್ಟಿರಬಹುದು. ಭಾರತದಲ್ಲಿ ಕಡಿಮೆ ಸಾರ್ವಜನಿಕ ಆರೋಗ್ಯ ವೆಚ್ಚ: ಜಿಡಿಪಿಯ (2014–15ರಲ್ಲಿ 1.3%) ಯಾವ ಅಂಶವನ್ನು ಸರ್ಕಾರವು ಆರೋಗ್ಯ ವೆಚ್ಚದ ಸೂಚಕವನ್ನಾಗಿ ಪರಿಗಣಿಸಲ್ಪಟ್ಟಿದೆ ಎಂಬುದು ವಿಷಯವಲ್ಲ ಅಥವಾ ಸರ್ಕಾರದ ಒಟ್ಟೂ ವೆಚ್ಚದ ಒಂದು ಪಾಲು (2014–15ರಲ್ಲಿ 4.8%) ಅಥವಾ ತಲಾ ಖರ್ಚು (2013–14ರಲ್ಲಿ 20$ ಕ್ಕಿಂತ ಕಡಿಮೆ)ಎಂದು, ಸಮಾನ ದೇಶಗಳಿಗೆ ಹೋಲಿಸಿದಾಗ ಭಾರತವು ಅತ್ಯಲ್ಪ ಸ್ಥಿತಿಯಲ್ಲಿ ಇರುವುದು ಕಂಡು ಬರುತ್ತದೆ. ಆದಾಗ್ಯೂ, ಭಾರತದಲ್ಲಿ, ಆರೋಗ್ಯಕ್ಕಾಗಿ ಸರ್ಕಾರ ಮಾಡುವ ವೆಚ್ಚವು ಐತಿಹಾಸಿಕವಾಗಿ ಕಡಿಮೆ.

ಈ ಐತಿಹಾಸಿಕ ಅಸ್ಪಷ್ಟತೆಯನ್ನು ಕೆಲವೇ ಕೆಲವು ವರ್ಷಗಳ ಆಯವ್ಯಯದಿಂದ ಸರಿಪಡಿಸಬಹುದು ಎಂಬುದನ್ನು ನಿರೀಕ್ಷಿಸುವುದು ತಪ್ಪು ಅಥವಾ ಅಸಮತೋಲನ ಒಂದು ಪರಂಪರೆಯ ವಿಷಯವಾಗಿದೆ. ಇದಲ್ಲದೇ, ಕೇಂದ್ರ ಸರ್ಕಾರವು, ಸರ್ಕಾರದ ಒಟ್ಟೂ ಆರೋಗ್ಯ ವೆಚ್ಚದ 1/3 ರಷ್ಟನ್ನು ಮಾತ್ರ ವ್ಯಯಿಸುತ್ತದೆ. ಇದರರ್ಥ, ಸರ್ಕಾರದ ಬಹುಪಾಲು ವೆಚ್ಚ (2/3 ರಷ್ಟು) ವಾಸ್ತವವಾಗಿ ರಾಜ್ಯಗಳಿಂದ ಬರುತ್ತದೆ. ಆದ್ದರಿಂದ ಭಾರತದಲ್ಲಿ, ಸರ್ಕಾರದ ಆರೋಗ್ಯ ವೆಚ್ಚ ಹೆಚ್ಚಿಸುವಲ್ಲಿ ರಾಜ್ಯಗಳು ಮಹತ್ವ ಪಾತ್ರ ವಹಿಸುತ್ತವೆ.

ರಾಜ್ಯ ಮಟ್ಟದಲ್ಲಿ, ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆ ಕೇವಲ ಹಣಕಾಸಿನ ಕುರಿತಾದದ್ದಲ್ಲ. ಆರೋಗ್ಯ ಸೇವೆಗಳನ್ನು ತಲುಪಿಸುವುದು ಕೂಡ ರಾಜ್ಯಗಳ ಜವಾಬ್ದಾರಿಯಾಗಿದೆ. ಸಾರ್ವಜನಿಕ ಆರೋಗ್ಯ ವಿತರಣಾ ವ್ಯವಸ್ಥೆಯಲ್ಲಿ ಸಾಕಷ್ಟು ಅಂತರಗಳಿರುವುದು ಚಿರಪರಿಚಿತ ಸತ್ಯ. ರಾಜ್ಯಗಳು ಅನುಷ್ಠಾನಕ್ಕೆ ತರುವ ಸಂಸ್ಥೆಗಳು ಮತ್ತು ವಾಸ್ತವ ಸ್ಥಿತಿಗೆ ಸನಿಹದಲ್ಲಿ ಇರುವವರು, ಆರೋಗ್ಯ ವಿತರಣೆ ಮತ್ತು ಹಣಕಾಸು ಆರೋಗ್ಯ ಬಂಡಿಯ ಎರಡು ಚಕ್ರಗಳು ಎಂಬುದನ್ನು ಚೆನ್ನಾಗಿ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯವ್ಯಯ**

ರೂ. ಕೋಟಿಗಳಲ್ಲಿ

| | **ಆಯವ್ಯಯ 2016–17** | **ಆಯವ್ಯಯ 2017–18** | **ಸಂಪೂರ್ಣ ಬದಲಾವಣೆ** | **ಶೇಖಡಾವಾರು % ಬದಲಾವಣೆ** |
|---|---|---|---|---|
| | ಎ | ಬಿ | ಬಿ–ಎ | % |
| 1 ಕೇಂದ್ರ ವೆಚ್ಚದ ನಿರ್ವಹಣೆ | 3804 | 4731 | 927 | 24.4 |
| 2 ಕೇಂದ್ರ ವಲಯದ ಕಾರ್ಯಯೋಜನೆ /ಯೋಜನೆ ಇದು | 4789 | 6967 | 2178 | 45.5 |
| ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ | 2450 | 3975 | 1525 | 62.2 |
| 3 ಇತರ ಕೇಂದ್ರ ವಲಯದ ವೆಚ್ಚ, ಇದು | 6607 | 7965 | 1358 | 20.6 |
| ಶಾಸನಬದ್ಧ ಮತ್ತು ನಿಯಮಬದ್ಧ ಸಂಸ್ಥೆಗಳು | 100 | 171 | 71 | 71.0 |
| ಸ್ವಾಯತ್ತ ಸಂಸ್ಥೆಗಳು | 5174 | 6088 | 914 | 17.7 |
| ಇತರ | 1333 | 1706 | 373 | 28.0 |
| 4 ಇತರ ಕೇಂದ್ರದ ಪ್ರಾಯೋಜಿತ ಯೋಜನೆಗಳು (ಎ+ಬಿ) | 21862 | 27691 | 5829 | 26.7 |
| (ಎ) ರಾಷ್ಟ್ರೀಯ ಆರೋಗ್ಯ ಮಿಷನ್, ಇದು | 20362 | 26691 | 6329 | 31.1 |
| ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ | 18087 | 21189 | 3102 | 17.2 |
| ರಾಷ್ಟ್ರೀಯ ನಗರ ಆರೋಗ್ಯ ಮಿಷನ್ | 950 | 752 | –198 | –20.8 |
| ತೃತೀಯ ಕಾಳಜಿ ಕಾರ್ಯಕ್ರಮಗಳು | 725 | 725 | 0.0 | 0.0 |
| ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಕ್ಕಾಗಿ ಎಚ್ಆರ್‌ಗಳು | 600 | 4025 | 3425 | 570.8 |
| (ಬಿ) ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ | 1500 | 1000 | –500 | –3 .3 |
| **ಒಟ್ಟು** | **37062** | **47354** | **10292** | **27.8** |

ಮೂಲ : 2017–18ರ ಕೇಂದ್ರ ಆಯವ್ಯಯ



ಅರ್ಥೈಸಿಕೊಂಡಿರುತ್ತಾರೆ. ನೇರವಾಗಿ ಮುಂದಕ್ಕೆ ಸಾಗಲು ಬಂಡಿಯ ಎರಡೂ ಚಕ್ರಗಳೂ ಚಲಿಸಬೇಕಾಗುತ್ತದೆ.

ರಾಜ್ಯಗಳು ಗಮನಾರ್ಹ ಆರೋಗ್ಯ ವೆಚ್ಚವನ್ನು ಪಡೆದು ಆರೋಗ್ಯ ಸೇವೆಗಳನ್ನು ಸುಧಾರಿಸಬೇಕು. ಆರೋಗ್ಯ ಸೇವೆಗಳ ಸುಧಾರಣೆ ಮತ್ತು ಸೇವೆಯ ವಿತರಣೆಯಲ್ಲಿನ ಅಂತರವನ್ನು ನೀಗಿಸುವುದು ಸರಳ ಪ್ರಶ್ನೆಯಲ್ಲ. ವಿತರಣಾ ವ್ಯವಸ್ಥೆಯಲ್ಲಿ, ಅನಾರೋಗ್ಯದ ಹೊರೆಯನ್ನು ಸರಿಪಡಿಸಲು ನಿರ್ಮಾಣ ವ್ಯವಸ್ಥೆಯನ್ನು, ಜನರ ಅಗತ್ಯಗಳ ಕಾರಣದಿಂದ ಪ್ರತಿಕ್ರಿಯಿಸುವಂತೆ ಮಾಡಬೇಕು ಮತ್ತು ಒಳ್ಳೆಯ ಆಡಳಿತ ನಿರ್ವಹಣೆ ಹಾಗೂ ವಿತರಣಾ ವ್ಯವಸ್ಥೆಯ ಹೆಚ್ಚಿನ ಹೊಣೆಗಾರಿಕೆ ಅಗತ್ಯ. ಪ್ರತಿ ರಾಜ್ಯದಲ್ಲಿ ನಿರ್ಮಾಣ ವ್ಯವಸ್ಥೆಯನ್ನು ಸರಿಪಡಿಸಲು ಹೆಚ್ಚಿನ ರಾಜಕೀಯ ಬದ್ಧತೆ, ಬಲವಾದ ನಾಯಕತ್ವ ಮತ್ತು ದೂರದೃಷ್ಟಿಯ ಅವಶ್ಯಕತೆ ಇದೆ.

ರಾಷ್ಟ್ರೀಯ ಆರೋಗ್ಯ ಸುರಕ್ಷತಾ ಯೋಜನೆ (ಎನ್.ಎಚ್.ಪಿ.ಎಸ್.): ಅಗಸ್ಟ್ 2016ರ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು, ಸರ್ಕಾರವು ಬಡವರಿಗೆ ರೂ. ಒಂದು ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸುವ ಕುರಿತು ಕೆಲಸ ಮಾಡುತ್ತಿರುವುದಾಗಿ ಉಲ್ಲೇಖಿಸಿದ್ದರು. ಫೆಬ್ರವರಿ 2016ರ ಆಯವ್ಯಯ ಭಾಷಣದಲ್ಲಿ, ಹಣಕಾಸು ಸಚಿವರು ಸಹ ಎನ್.ಎಚ್.ಪಿ.ಎಸ್.ನ್ನು ಪ್ರಾರಂಭಿಸುವುದು ಸರ್ಕಾರದ ಉದ್ದೇಶವಾಗಿದೆ, ಇದು ಆಸ್ಪತ್ರೆಯ ಖರ್ಚು–ವೆಚ್ಚಗಳಿಗೆ ಅಧಿಕ ಹಣಕಾಸಿನ ರಕ್ಷಣೆ ಒದಗಿಸುವುದಲ್ಲದೇ, ಹೆಚ್ಚಿನ ಜನರನ್ನು ಇದರಡಿಯಲ್ಲಿ ತರಲು ಪ್ರಯತ್ನಿಸಲಾಗುವುದು ಎಂಬುದನ್ನು ಪ್ರಸ್ತಾಪಿಸಿದ್ದರು. ಈ ಹಿನ್ನೆಲೆಯಲ್ಲಿ, 2017–18ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಎನ್.ಎಚ್.ಪಿ.ಎಸ್.ನ್ನು ಘೋಷಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಹಣಕಾಸು ಸಚಿವರು ಈ ಕುರಿತು ಯಾವುದೇ ಘೋಷಣೆ ಮಾಡದೇ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ.

ಈ ಎಲ್ಲ ಸಂಭಾವ್ಯತೆಯಲ್ಲಿ ಯೋಜನೆಯನ್ನು ಮುಂದೂಡಲಾಗಿದೆಯೇ ಹೊರತು, ಕೈ ಬಿಡಲಾಗಿಲ್ಲ. ಬಹುಶಃ ಐದು ರಾಜ್ಯಗಳ ವಿಧಾನ ಸಭೆ ಚುನಾವಣೆಯ ದೃಷ್ಟಿಯಿಂದ ಇದು ಸರಿಯಾದ ಸಮಯವಲ್ಲ. ಬಹುಶಃ ಸರ್ಕಾರ ಎಚ್ಚರಿಕೆಯ ಹೆಜ್ಜೆಗಳನ್ನಿಡಲು ನಿರ್ಧರಿಸಿ, ಐದು ರಾಜ್ಯಗಳಲ್ಲಿನ ಸಮೀಕ್ಷೆಯಂತೆ, ಯೋಜನೆಯ ಘೋಷಣೆಯು ಮತದಾರರ ಮನವೊಲಿಸುವ ಜನಪ್ರಿಯ ನಡೆ ಎಂದು ಪರಿಗಣಿಸಿದೆ. ಹಾಗೆಯೇ, ಇತ್ತೀಚೆಗೆ ಘೋಷಿಸಿದ ಕೆಲ ಯೋಜನೆಗಳಿಗೆ ಹಣಕಾಸಿನ ಮೂಲ ಅಸ್ಪಷ್ಟವಾಗಿದೆ. ಉದಾಹರಣೆಗೆ, ರೂ. 6,000 ನಗದು ವರ್ಗಾವಣೆಯು ವಿತರಣಾ ಸಂಸ್ಥೆಗಳ ಉತ್ತೇಜವನ್ನು ನಿರೀಕ್ಷಿಸುತ್ತಿರುವ ಮಾತ್ರ ಸಂಸ್ಥೆ ಎಂದು ಬಿಂಬಿಸಲಾಗುತ್ತಿದೆ ಮತ್ತು 2017ರ ಹೊತ್ತಿಗೆ ಕಾಲಾ ಜ್ವರ ಮತ್ತು ಫೈಲಾರಿಯಾಸಿಸ್, 2018ರ ಹೊತ್ತಿಗೆ ಕುಷ್ಠರೋಗ, 2020 ರ ಹೊತ್ತಿಗೆ ದಡಾರವನ್ನು ಮತ್ತು 2025ರ ಹೊತ್ತಿಗೆ ಕ್ಷಯ ರೋಗವನ್ನು ನಿರ್ಮೂಲನೆ ಮಾಡುವ ಮತ್ತು ಪ್ರತಿರಕ್ಷಣೆ ಮಾಡುವ ಗುರಿ ಹೊಂದಲಾಗಿದೆ.

ಈ ಮಹತ್ವಾಕಾಂಕ್ಷೆ ಗುರಿಗಳ ಸಾಧನೆಗೆ ಬಂಡವಾಳ ಒದಗಿಸುವ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ರಾಜ್ಯಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಆದಾಗ್ಯೂ ಈ ಯೋಜನೆಯ ಹಂಚಿಕೆಗಳು ಆಯವ್ಯಯದ ವೇಳೆಯಲ್ಲಿ/ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಈಗಾಗಲೇ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿದ್ದರೆ, ಎಲ್ಲೋ ಹಣಕಾಸಿನ ಅವಕಾಶ ಇದ್ದಿರಬೇಕು.

ಇದಲ್ಲದೇ, ಹಣಕಾಸು ಸಚಿವರು ದೇಶದಾದ್ಯಂತ ಆರೋಗ್ಯ ಉಪ–ಕೇಂದ್ರಗಳನ್ನು (ಎಸ್.ಸಿ.ಗಳು) ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ ಪರಿವರ್ತಿಸುವ ಘೋಷಣೆ ಮಾಡಿದ್ದಾರೆ. ರಾಷ್ಟ್ರವ್ಯಾಪಿ 1.5 ಲಕ್ಷ ಉಪ–ಕೇಂದ್ರಗಳಿಗೆ ಬದಲಾವಣೆ ಹೊಂದಲು ಯಾವುದೇ ಸಮಯ ಮಿತಿ ನೀಡಿಲ್ಲ ಹಾಗೂ ಇಲ್ಲಿಯ ತನಕ ಯಾವುದೇ ಹಣಕಾಸಿನ ಬದ್ಧತೆಯನ್ನೂ ನೀಡಿಲ್ಲ. ಬಹುಶಃ, ಈ ಯೋಜನೆಯ ಬಗ್ಗೆ ಕೇವಲ ಚರ್ಚಿಸಲಾಗಿದೆ, ಮುಂದಿನ ವರ್ಷಗಳಲ್ಲಿ ಧನಸಹಾಯವನ್ನು ನೀಡಬಹುದು.

ಕೊನೆಯದಾಗಿ, ನ್ಯಾಯವಾದ ಬೆಲೆಯಲ್ಲಿ ಔಷಧಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಜನರಿಕ್ ಔಷಧಗಳನ್ನು ಉತ್ತೇಜಿಸಲು ಔಷಧ ಮತ್ತು ಪ್ರಸಾಧನ ನಿಯಮಗಳ ತಿದ್ದುಪಡಿಯನ್ನು ಆಯವ್ಯಯದಲ್ಲಿ ಘೋಷಿಸಲಾಗಿದೆ ಮತ್ತು ವೈದ್ಯಕೀಯ ಸಾಧನಗಳ ಬೆಲೆ ಮೇಲೆ ಆಯವ್ಯಯ ಪರಿಣಾಮ ಬೀರಿಲ್ಲ. ❑


## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ–ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು**. ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ**. ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಯುವಜನತೆಯ ಬಜೆಟ್

* ಎಸ್. ಎಸ್. ಮಂಥ



**ಅಂಕೀಕರಣ, ಯುವಜನತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಇದುವರೆಗೆ ಸಾಂಪ್ರದಾಯಿಕ ಶೈಲಿಯಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದವು. ಆದರೆ ಇದೀಗ ಡಿಜಿಟಲ್ ಆರ್ಥಿಕತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲವು ಮಹತ್ವದ ನೀತಿಗಳನ್ನು ಬಜೆಟ್‌ನಲ್ಲಿ ಮಂಡಿಸಲಾಗಿದೆ.**

ವಿಶ್ವ ಸಂಸ್ಥೆ 2016ರಲ್ಲಿ ಬಿಡುಗಡೆ ಮಾಡಿದ ಜಾಗತಿಕ ಜನಸಂಖ್ಯೆ ಕುರಿತ ವರದಿಯಲ್ಲಿ ಭಾರತದ ಜನಸಂಖ್ಯೆ 1.3 ಬಿಲಿಯನ್ ಇದ್ದು, ವಿಶ್ವದಲ್ಲೇ ಭಾರತ ಎರಡನೇ ಸ್ಥಾನದಲ್ಲಿದೆ. ಅಂದಾಜಿನ ಪ್ರಕಾರ 2022 ರ ವೇಳೆಗೆ ಭಾರತ 1.5ಬಿಲಿಯನ್ ತಲುಪಲಿದ್ದು, ಜನಸಂಖ್ಯೆಯಲ್ಲಿ ಚೀನಾವನ್ನೂ ಹಿಂದಿಕ್ಕಲಿದೆ. ಸದ್ಯ ಭಾರತ ಒಟ್ಟು ಜನಸಂಖ್ಯೆಯಲ್ಲಿ ಶೇ.60 ರಷ್ಟು ಜನ 35 ವರ್ಷ ವಯಸ್ಸಿಗಿಂತಲೂ ಕಡಿಮೆ ಇದ್ದವರು ಇದ್ದಾರೆ. 2020 ರ ವೇಳೆಗೆ ಶೇ.60 ರಷ್ಟು ಜನ 29 ವರ್ಷ ವಯಸ್ಸಿಗಿಂತಲೂ ಕಡಿಮೆ ವಯೋಮಾನದವರಾಗಿರುತ್ತಾರೆ. ನಾವು ಈಗಾಗಲೇ 2020 ರ ಸನಿಹದಲ್ಲಿದ್ದೇವೆ. ಮೇಲ್ಕಂಡ ಅಂಕಿ–ಅಂಶಗಳನ್ನು ಎದುರಿಸಲು ನಾವು ಸಿದ್ಧವಾಗಿದ್ದೇವೆಯೇ? ಶಿಕ್ಷಣ ನೀಡಿಕೆ, ಕೌಶಲ, ಉದ್ಯೋಗ ಸೃಷ್ಟಿಯು ಅಭಿವೃದ್ಧಿಶೀಲ ರಾಷ್ಟ್ರದ ಸವಾಲುಗಳಾಗಿವೆ. ಈ ಕುರಿತು ದೀರ್ಘಕಾಲೀನ ಯೋಜನೆಗಳ ಅವಶ್ಯಕತೆ ಇದೆ. ಇತ್ತೀಚೆಗೆ ಮಂಡನೆಯಾದ 2017 ರ ಕೇಂದ್ರ ಬಜೆಟ್ ಈ ಎಲ್ಲ ಕನಸುಗಳನ್ನು ನನಸು ಮಾಡುವಲ್ಲಿ ಸಹಕಾರಿಯಾಗಿದೆ.

ಟಿಇಸಿ ಇಂಡಿಯಾ ಇದು ಬಜೆಟ್‌ನ ಅಂತರಾಳ. ಇದರಿಂದ ಉತ್ತಮ ಗುಣಮಟ್ಟದ ಆಡಳಿತ ಹಾಗೂ ಜೀವನದ ನಿರೀಕ್ಷೆ ಇದೆ. ಗ್ರಾಮೀಣಾಭಿವೃದ್ಧಿ, ಮೂಲಭೂತ ಸೌಕರ್ಯ, ಔದ್ಯೋಗಿಕ ಯೋಜನೆಗಳು, ಕೈಗೆಟಕುವ ದರದಲ್ಲಿ ಮನೆ ಸೌಲಭ್ಯ ಹಾಗೂ ನಗದು ರಹಿತ ಆರ್ಥಿಕತೆಯ ವೃದ್ಧಿ, ಪಾರದರ್ಶಕತೆ ಇತ್ಯಾದಿಗಳು ಟಿಇಸಿಯ ವಿಶಾಲಾರ್ಥದಲ್ಲಿ ಒಳಗೊಂಡಿರುವ ಪ್ರಧಾನ ಅಂಶಗಳು. ನಿಯಮಿತವಾದ ಸೌಲಭ್ಯಗಳು, ಸಂಪನ್ಮೂಲಗಳ ಕೊರತೆ ಇತ್ಯಾದಿ ಪ್ರಮುಖ ಅಂಶಗಳು ಪ್ರಸ್ತುತ ಗ್ರಾಮೀಣ ಭಾರತದ ಲಕ್ಷಣಗಳಾಗಿವೆ. ಅಮೆರಿಕದ ಅಲ್ವಿನ್ ಟಾಫ್ಲರ್ ಹೇಳುವಂತೆ, ಸಮಾಜಕ್ಕೆ ತಮ್ಮ ಅವಶ್ಯಕತೆಯಿಲ್ಲ, ಅದು ತನ್ನಷ್ಟಕ್ಕೇ ತಾನೇ ಚಲಿಸುತ್ತಿರುತ್ತದೆ ಎಂದು ಯುವಜನತೆ ತಿಳಿದುಕೊಂಡಿದೆ. ಆದರೆ ಅದು ಕಷ್ಟಸಾಧ್ಯ. ಯುವಶಕ್ತಿ, ಅವರ ಕನಸುಗಳು, ಅವರ ಪ್ರತಿಭೆ ಸಮಾಜದ ಸಂಕಷ್ಟಗಳನ್ನು ಕಳೆಯಲು ಅವಶ್ಯಕ. ಸಮಾಜದ ಅನೇಕ ಸಮಸ್ಯೆಗಳನ್ನು ಯುವಜನತೆಯ ಪಾಲ್ಗೊಳ್ಳುವಿಕೆ ಇಲ್ಲದೇ ಪರಿಹರಿಸುವುದು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಶಿಕ್ಷಣ ಅತಿ ಮಹತ್ವದ ಪಾತ್ರವಹಿಸುತ್ತದೆ. ಸಮಾಜವಾದದ ಮೌಲ್ಯಗಳು, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ, ಸ್ವತಂತ್ರ ಮನೋಭಾವ ವೃದ್ಧಿ ಹಾಗೂ ಸ್ಫೂರ್ತಿ ತುಂಬುವಲ್ಲಿ ಇದು ಸಹಕಾರಿ. ಇದರಿಂದ ಆರ್ಥಿಕತೆಯ ವಿವಿಧ ಹಂತಗಳಿಗೆ ಅನುಕೂಲವಾಗುವಂತೆ ಮಾನವ ಶಕ್ತಿಯು ರೂಪಗೊಳ್ಳುವ ಸಾಧ್ಯತೆ ಇದೆ. ನೇಪಾಳದಲ್ಲಿ ಅಳವಡಿಸಿಕೊಂಡಿರುವ ರಾಷ್ಟ್ರೀಯ ನೀತಿ ಎಂದರೆ ಎಲ್ಲದಕ್ಕಾಗಿ ಶಿಕ್ಷಣ. 2010 ರಲ್ಲಿ ಜಾರಿಗೆ ಬಂದ ಆರ್‌ಟಿಇ ಕೂಡಾ ಈ ನಿಟ್ಟಿನಲ್ಲಿ ಬಹು ಮಹತ್ವದ ಮೆಟ್ಟಿಲು ಎನ್ನಬಹುದು. ಅಭಿವೃದ್ಧಿಯ ದಾರಿಯಲ್ಲಿ ಯಾವಾಗಲೂ ಅಡೆತಡೆಗಳು ಇರುವುದು ಸಾಮಾನ್ಯ. ಇದರಲ್ಲಿ ಪ್ರಮುಖವಾದುದೆಂದರೆ ಇನ್ನೂ ಪೂರ್ಣಗೊಳ್ಳದ ಅಥವಾ ಅಭಿವೃದ್ಧಿಯಾಗಿದ ಮೂಲಸೌಕರ್ಯಗಳು. ವಿಶೇಷವಾಗಿ ಗ್ರಾಮಗಳು, ಅಲ್ಲಿ ಉತ್ತಮ ಶಿಕ್ಷಕರು ಹಾಗೂ ಅವಶ್ಯಕ ವಸ್ತುಗಳ ಕೊರತೆಯನ್ನು ಅನುಭವಿಸುತ್ತವೆ. ಬಡತನದ ಹೆಚ್ಚಳ, ಬಾಲ ಕಾರ್ಮಿಕತೆ, ಬೇಗ ಶಿಕ್ಷಣದಿಂದ ವಿಮುಖರನ್ನಾಗಿ ಮಾಡಿಬಿಡುವುದು ಹಾಗೂ ಅನಕ್ಷರತೆ ಇವು ಅಭಿವೃದ್ಧಿಯ ಹಿನ್ನಡೆಗೆ ಕಾರಣವಾದ ಪ್ರಧಾನ ಅಂಶಗಳು. ಆಧುನಿಕ ತಂತ್ರಜ್ಞಾನದ ಅಳವಡಿಕೆಯಿಂದಲೇ ಇವೆಲ್ಲ ಸಮಸ್ಯೆಗಳಿಗೆ ಸವಾಲೆಸೆಯಬಹುದು.

* ಪ್ರಾಧ್ಯಾಪಕರು, ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ, ಬೆಂಗಳೂರು. E-mail : ssmantha@vjti.org.in

ಡಿಜಿಟಲ್ ಟೆಕ್ನಾಲಜಿಯು ಆಧುನಿಕ ಸವಾಲುಗಳಿಗೆ ಉತ್ತರವಾಗಿ ಬಂದಿದೆ. ಮೊದಲು ಗುರುಕುಲಗಳು ಇದ್ದವು, ಅವುಗಳಿಗೆ ಬರುವ ಮಕ್ಕಳು ತಮ್ಮ ಕುಟುಂಬವನ್ನು ಬಿಟ್ಟು ಬರಬೇಕಿತ್ತು. ಅಲ್ಲಿ ಜೀವನದ ಮರ್ಮವನ್ನು ಅಥವಾ ಜೀವನದ ಬಗೆಯನ್ನು ಪಾಠ ಮಾಡುತ್ತಿದ್ದರು. ಅಂತೆಯೇ ಈಗ ತನ್ನ ಕುಟುಂಬಕ್ಕೆ ಕೈಜೋಡಿಸುತ್ತಲೇ ಆಧುನಿಕ ತಂತ್ರಜ್ಞಾನದ ಸಹಕಾರದಿಂದ ಕಲಿಕೆಯಲ್ಲಿಯೂ ಭಾಗವಹಿಸಬಹುದು. ಇದೆಲ್ಲವನ್ನು ಸಾಧಿಸಲು ಗ್ರಾಮೀಣ ಪ್ರದೇಶಗಳಲ್ಲಿ ವೈಫೈ ಸೌಲಭ್ಯ, ಟಿವಿ ಬಳಕೆ, ರೇಡಿಯೊ ಹಾಗೂ ಕಂಪ್ಯೂಟರ್ ಇವುಗಳು ಕಲಿಕೆಯ ಮೂಲವಾಗಿವೆ.

ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಗೇ ಸಂಚಕಾರ ಬಂದಿದ್ದು, ಖಾಸಗಿಯಲ್ಲಿ ಸಂಶೋಧನೆ, ಹೊಸತನಕ್ಕೆ ಆದ್ಯತೆ ನೀಡುವುದೇ ಇಲ್ಲ. ಪ್ರಸ್ತುತ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡ ಈ ಬಾರಿಯ ಕೇಂದ್ರದ ಬಜೆಟ್ ಸಕಾರಾತ್ಮಕವಾಗಿ ಸ್ಪಂದಿಸಿದೆ ಎನ್ನಬಹುದು. 'ಇನ್ನೋವೇಶನ್ ಫಂಡ್ ಫಾರ್ ಸೆಕೆಂಡರಿ ಎಜ್ಯುಕೇಶನ್'ಗೆ ಎಂದು ಬಜೆಟ್‌ನಲ್ಲಿ ಮಂಡಿಸಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಉತ್ತೇಜನ ನೀಡುವಲ್ಲಿ ಇದು ಸಹಕಾರಿಯಾಗಲಿದೆ. ಇದು ಎಲ್ಲರಿಗೂ ದೊರಕಬಹುದಾಗಿದ್ದು ಗುಣಮಟ್ಟವೂ ಸಹಜವಾಗಿ ಹೆಚ್ಚಲಿದೆ.

ಶೈಕ್ಷಣಿಕವಾಗಿ ಹಿಂದುಳಿದ 3479 ಶಾಲೆಗಳಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿದ್ದು, ಇದೇ ನಿಯಮವನ್ನು ಭಾರತದ ಎಲ್ಲ ಜನರಿಗೂ ತಲುಪುವಂತೆ ಮಾಡುವ ಅಗತ್ಯವಿದೆ. ಉನ್ನತ ವ್ಯಾಸಂಗಕ್ಕಾಗಿ ನಿರ್ಮಾಣವಾದ ವಿಶ್ವವಿದ್ಯಾಲಯಗಳು ಜ್ಞಾನವನ್ನು ನೀಡುತ್ತವಲ್ಲದೇ ಪದವಿ ಹಾಗೂ ಡಿಪ್ಲೊಮಾಗಳನ್ನು ನೀಡುತ್ತವೆ. ಕಲಿಯುವ ಹುಮ್ಮಸ್ಸು, ಚರ್ಚೆ ಹಾಗೂ ಸಂಶಯಗಳಿಗೆ ಅನೇಕ ಪರಿಹಾರ ಅಲ್ಲಿ ದೊರಕುತ್ತದೆ. ಕಲಿಕೆಯ ವಾತಾವರಣವನ್ನು ಪ್ರಾಮಾಣಿಕವಾಗಿ ಸೃಷ್ಟಿಸಿದ್ದಲ್ಲದೇ ಅದನ್ನು ರಕ್ಷಿಸಿದ್ದೂ ಉಂಟು. ಉತ್ತಮ ಗುಣಮಟ್ಟದ ಕಲಿಕೆಯು ಉಚಿತವಾಗಿ ಸಿಗುವ ಸಂದರ್ಭದಿಂದಲೂ, ವಿವಿಧ ವಿಭಾಗಗಳಲ್ಲಿ ಪರಿಣಿತರ ಮಧ್ಯೆ ಪರಸ್ಪರ ಸಂವಹನ ನಡೆಯುತ್ತಿದ್ದವು.

ಕೆಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಸಮಾಜ ವಿಜ್ಞಾನ, ಮೂಲಭೂತ ವಿಜ್ಞಾನ ಉದಾರ ಕಲೆಗಳನ್ನು ಪೋಷಿಸುತ್ತ ಬಂದಿವೆ. ಶಿಕ್ಷಣದ ಗುಣಮಟ್ಟ ಹಾಗೂ ಅಗತ್ಯವಾದ ಅನುದಾನದ ಕೊರತೆಯಿಂದ ಬಳಲುತ್ತಿರುವ ಸಂಸ್ಥೆಗಳು ಅಫಿಲಿಯೇಶನ್‌ಗೆ ಮೊರೆ ಹೋಗುವುದು ಅನಿವಾರ್ಯವಾಗಿದೆ. ನಿರ್ವಹಣೆಯ ತೊಂದರೆ ಕಾರಣ, ವಿಶ್ವವಿದ್ಯಾಲಯಗಳ ಅಫಿಲಿಯೇಶನ್ ವ್ಯವಸ್ಥೆಯು ವೃದ್ಧಿಸಿದೆ. ಇದರ ಪರಿಣಾಮ ಇದೀಗ ಜ್ಞಾನ ಹಾಗೂ ಕಲಿಕೆಯ ಬದಲು ಆಡಳಿತಾತ್ಮಕ ವಿಷಯವೇ ವಿಶ್ವವಿದ್ಯಾಲಯದ ಅಂತರಾಳವಾಗಿಬಿಟ್ಟಿದೆ. ಪರೀಕ್ಷೆ ಹಾಗೂ ಫಲಿತಾಂಶ ಪ್ರಕಟಣೆಯೇ ಪ್ರಧಾನವಾಗಿದೆ. ಮ್ಯಾನೇಜ್‌ಮೆಂಟ್ ಕೌನ್ಸಿಲ್/ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ಗಳು ಒಂದಿಲ್ಲೊಂದು ರಾಜಕೀಯ ಗುಂಪಿಗೆ ಸೇರಿದವರಾಗಿದ್ದಾರೆ.

ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಕೊಡುವುದರಿಂದ ಇಂಥ ಬಿಕ್ಕಟ್ಟುಗಳನ್ನು ತಡೆಯಬಹುದು. ಸರ್ಕಾರವೂ ಕೂಡಾ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ. ಜೀವನ ಪರ್ಯಂತ ಕಲಿಯುವಿಕೆ ಅಥವಾ ವಾಸ್ತವಿಕ ಕಲಿಕೆಗಳು ನಮ್ಮ ಜೀವನದ ದಿನಗಳನ್ನು ಪರಿವರ್ತಿಸುತ್ತಿವೆ. ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಇದೀಗ ಆನ್‌ಲೈನ್ ಹಾಗೂ ಆಫ್‌ಲೈನ್‌ಗಳೆರಡರಲ್ಲೂ ಕಲಿಯುವ





ಅವಕಾಶವಿದೆ. ಸರ್ಕಾರವೂ ಆನ್‌ಲೈನ್ ಮೂಲಕ 350ಕ್ಕೂ ಹೆಚ್ಚು ಆನ್‌ಲೈನ್ ಕೋರ್ಸ್‌ಗಳನ್ನು ಪರಿಚಯಿಸಲು ಯೋಜನೆ ರೂಪಿಸಿದೆ.

ನ್ಯಾಶನಲ್ ಟೆಸ್ಟಿಂಗ್ ಏಜೆನ್ಸಿಗೆ ಸ್ವಾಯತ್ತ ಸಂಸ್ಥೆಯ ಮಾನ್ಯತೆ ನೀಡುವುದು ಹಾಗೂ ಎಲ್ಲ ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಕುರಿತು ಪ್ರಸ್ತಾವಿಸಿದ್ದು ಈ ಬಜೆಟ್‌ನ ಪ್ರಮುಖ ಅಂಶ. ಮಕ್ಕಳ ಹಾಗೂ ಪೋಷಕರ ಒತ್ತಡವನ್ನು ತಡೆಯುವ ನಿಟ್ಟಿನಲ್ಲಿ ಈ ನೀತಿ ಜಾರಿಗೆ ತರುವ ಯೋಚನೆ ಮಾಡಲಾಗಿದೆ.

ಫ್ರಾನ್‌ಹಾಫರ್ ಮಾದರಿಯಲ್ಲಿ ಇನ್ಸ್ಟಿಟ್ಯೂಶನ್‌ಗಳನ್ನು ತೆರೆಯುವುದನ್ನು ಉತ್ತೇಜಿಸುವ ಯೋಜನೆಗಳು ಸ್ವಾಗತಾರ್ಹ. ಇದು ಖಾಸಗಿ–ಸಾರ್ವಜನಿಕ ವ್ಯವಸ್ಥೆಯ ಸೊಸೈಟಿಗಳು ಉದ್ದಿಮೆ ಅಥವಾ ನಿರ್ದಿಷ್ಟ ಸರ್ಕಾರಿ ಯೋಜನೆಗಳಿಂದ ಶೇ. 70 ಹಣ ಪಡೆದು ಹಾಗೂ ಉಳಿದ ಶೇ. 30 ರಷ್ಟನ್ನು ರಾಜ್ಯ ಸರ್ಕಾರಗಳಿಂದ ಹಣ ವಿನಿಯೋಗಿಸಿ ನಡೆಸುವ ವ್ಯವಸ್ಥೆಯಾಗಿದೆ.

ಮ್ಯಾಕ್ಸ್ ಪ್ಲ್ಯಾಂಕ್ ಮಾದರಿಯ ಇನ್‌ಸ್ಟಿಟ್ಯೂಶನ್‌ಗಳ ಪ್ರಾಥಮಿಕ ಗುರಿ ಎಂದರೆ, ಪ್ರಾಕೃತಿಕ ಅಥವಾ ಸಹಜತೆಗೆ ಸಂಬಂಧಿಸಿದ ಸಂಶೋಧನೆ, ಜೀವನ ಮತ್ತು ಸಾಮಾಜಿಕ ವಿಜ್ಞಾನ, ಕಲೆ ಹಾಗೂ ಮಾನವೀಯತೆಗೆ ಸಂಬಂಧಿಸಿದಂತೆ ಸಂಶೋಧನೆಗೆ ವಿಶೇಷ ಆದ್ಯತೆ. ಈ ಸಂಸ್ಥೆಗಳು ಸ್ವತಂತ್ರವಾಗಿ ವಿಶ್ವವಿದ್ಯಾಲಯಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದರೂ, ವಿಶ್ವವಿದ್ಯಾಲಯದಲ್ಲಿ ಸಾಧ್ಯವಾಗದ ಸಂಶೋಧನೆಯನ್ನು ಈ ಸಂಸ್ಥೆಗಳು ಮಾಡಬಲ್ಲವು.

ನಮಗೀಗ ಬೇಕಿರುವುದು ಸುಸ್ಥಿರ ಅಭಿವೃದ್ಧಿ. ಅದಕ್ಕಾಗಿ ಭಾರತದ ಯುವಜನತೆಗೆ ಸಹಕರಿಸುವುದು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೌಶಲವನ್ನು ಬೆಳೆಸುವುದು ಅಗತ್ಯ. ನಮಗೆ ಕೌಶಲಾಧಾರಿತ ತರಬೇತಿ ನೀಡುವವರ ಸಂಪರ್ಕ

ಬೇಕಿದೆ. ಇದು ನಮ್ಮ ಶ್ರಮ ಸಂಸ್ಕೃತಿಯ ದ್ಯೋತಕವೂ ಹೌದು. ಇನ್ನೊಂದು ಹಂತದ ಚರ್ಚೆ ಎಂದರೆ ಪಾರಂಪರಿಕ ಶಿಕ್ಷಣ ಹಾಗೂ ಕೌಶಲಾಧಾರಿತ ಇನ್ಸ್ಟಿಟ್ಯೂಟ್‌ಗಳು ಅಭಿವೃದ್ಧಿ ಹೊಂದಬೇಕಿದೆ.

ವೃತ್ತಿಪರ ಶಿಕ್ಷಣ ಹಾಗೂ ತರಬೇತಿ (ವಿಇಟಿ) ಯು ದೇಶದ ಶೈಕ್ಷಣಿಕ ಅಭಿವೃದ್ಧಿಯ ಮೂಲ. ದೇಶದ ಅಭಿವೃದ್ಧಿ ದೃಷ್ಟಿಯಲ್ಲಿಯೂ ವೃತ್ತಿಪರ ತರಬೇತಿ ಪಡೆದವರ ಅಗತ್ಯ ಹೆಚ್ಚಾಗಿದೆ. ವೃತ್ತಿಪರ ಶಿಕ್ಷಣ ಪಡೆಯುವಲ್ಲಿ ಇರುವ ಅಡೆತಡೆಗಳೇನು ಮತ್ತು ತರಬೇತಿಯು ಹೇಗೆ ಸರಳ ಹಾಗೂ ಕ್ರಿಯಾಶೀಲವಾಗಿದೆ ಎಂಬ ಅಂಶವು ಇಲ್ಲಿ ಮುಖ್ಯ.

ಪ್ರಸ್ತುತ ಬಜೆಟ್ ಇವೇ ಮುಂತಾದ ಅನೇಕ ಅಂಶಗಳನ್ನು ಜಾರಿಗೆ ತಂದಿದೆ. ಅದರ ಪರಿಣಾಮವೇ ಪ್ರಧಾನ ಮಂತ್ರಿ ಕೌಶಲ ಕೇಂದ್ರಗಳನ್ನು 600 ಕ್ಕೂ ಹೆಚ್ಚು ಜಿಲ್ಲಾ ಕೇಂದ್ರಗಳಿಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ. ಅಲ್ಲದೇ 100 ಇಂಡಿಯಾ ಇಂಟರ್‌ನ್ಯಾಶನಲ್ ಸ್ಕಿಲ್ಸ್ ಸೆಂಟರ್ಸ್‌ಗಳನ್ನು ತೆರೆಯುವ ಹಾಗೂ ಸಂಕಲ್ಪ ಸ್ಕಿಲ್ ಅಕ್ವಿಜಿಷನ್ ಆಂಡ್ ನಾಲೆಡ್ಜ್ ಅವೇರ್‌ನೆಸ್ ಫಾರ್ ಲೈವ್ಲಿವುಡ್ ಪ್ರಮೋಶನ್ ಪ್ರೋಗ್ರಾಮ್ ಸಲುವಾಗಿ 4000 ಕೋಟಿ ಮೀಸಲಿಡಲಾಗಿದೆ. 3.5 ಕೋಟಿ ಯುವಜನತೆಗೆ ಅಗತ್ಯ ಮಾರುಕಟ್ಟೆಯ ತರಬೇತಿ ನೀಡಲಾಗುತ್ತದೆ.

**ಕೆಲವು ಅಂಕಿ ಅಂಶಗಳು**

* 2012 ರಲ್ಲಿ 474.1 ಮಿಲಿಯನ್ ಕೆಲಸಗಾರರಿದ್ದು, ಚೈನಾದ ನಂತರದ (ಎರಡನೇ) ಸ್ಥಾನ ಭಾರತದ್ದು. * 94% ಕ್ಕಿಂತಲೂ ಹೆಚ್ಚು ಜನ, ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವವರು. * ಸಂಘಟಿತ ವಲಯವು ಸರ್ಕಾರಿ ನೌಕರರನ್ನೂ ಒಳಗೊಳ್ಳುತ್ತದೆ, ಅವುಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಣ್ಣ ಉದ್ಯಮಗಳು ಇರಬಹುದು. * ಭಾರತದಲ್ಲಿ 60% ಕ್ಕಿಂತಲೂ ಹೆಚ್ಚು ಜನ ಸ್ವಯಂ ಉದ್ಯೋಗಸ್ಥರು, ಇವರಲ್ಲಿ ಅನೇಕರು ದುರ್ಬಲರಾಗಿಯೇ ಇದ್ದಾರೆ. * ಅಂದಾಜು 30% ದಿನಗೂಲಿ ನೌಕರರು ಹಾಗೂ 10% ಕಾಯಂ ನೌಕರರು * ಭಾರತವು ಅತೀ ಕಡಿಮೆ ಹಂತದ ಆದಾಯ ಹೊಂದಿದ್ದೂ ಅಲ್ಲದೇ ಉತ್ಪಾದನೆಯ ಪ್ರಮಾಣದಲ್ಲೂ ಕುಂಠಿತವಾಗಿದೆ. ತಲಾ



ಆದಾಯ ಜಪಾನ್‌ನಲ್ಲಿ 30.000 ಡಾಲರ್ಸ್, ಶ್ರೀಲಂಕಾದಲ್ಲಿ 879 ಡಾಲರ್ಸ್ ಆದರೆ ಭಾರತದಲ್ಲಿ ಇದು 433 ಡಾಲರ್ಸ್ ಆಗಿದೆ. ಪ್ರಸ್ತುತ ಭಾರತದ ತಲಾ ಆದಾಯವು 7.5% ಆಗಿದೆ. * 55% ಕ್ಕೂ ಹೆಚ್ಚು ಜನರಿಗೆ ಕೃಷಿ ಕ್ಷೇತ್ರವು ಬೆನ್ನೆಲುಬಾಗಿ ನಿಂತಿದೆ. ಹಳ್ಳಿ ಹಾಗೂ ನಗರ ಪ್ರದೇಶಗಳ ಮಧ್ಯೆ ಆಗುವ ವಲಸೆ ಸಾಕಷ್ಟು ಸಮಸ್ಯೆಗಳಿಗೆ ಕಾರಣವಾಗಿದೆ.

ಇಂಥ ಸಂದರ್ಭದಲ್ಲಿ ಸಂಕಲ್ಪ ಯೋಜನೆಯ ಅನುಷ್ಠಾನಕ್ಕೆ ಬರುವುದು ಅವಶ್ಯವಾಗಿದೆ. ಕೈಗಾರಿಕಾ ಮೌಲ್ಯ ವರ್ಧನೆಗೋಸ್ಕರ ಕೌಶಲಕ್ಕೆ ವಿಶೇಷ ಆದ್ಯತೆ ನೀಡಬೇಕಿದೆ. ಅಲ್ಲದೇ ಇನ್ನೂ ಗಮನಾರ್ಹ ಸಂಗತಿ ಎಂದರೆ, ಲೆದರ್ ಹಾಗೂ ಫುಟ್‌ವೇರ್ ಇಂಡಸ್ಟ್ರಿಯಲ್ಲಿ ಉದ್ಯೋಗ ಸೃಷ್ಟಿ ಮಾಡುವ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪವಾಗಿವೆ. ಟೆಕ್ಸ್‌ಟೈಲ್ಸ್ ಉದ್ಯಮಕ್ಕೆ ಪ್ರೋತ್ಸಾಹ ನೀಡುವುದು. ಅಲ್ಲದೇ ಪ್ರವಾಸೋದ್ಯಮ ಹಾಗೂ ಸ್ಥಳೀಯ ಉದ್ಯೋಗ ಸೃಷ್ಟಿಯನ್ನಿಟ್ಟುಕೊಂಡಿರುವುದು ಗಮನಾರ್ಹ. ಆರ್ಥಿಕತೆ ಅಭಿವೃದ್ಧಿ ಹೊಂದುತ್ತ ಸಾಗಿದ್ದರೂ, ಜನಸಂಖ್ಯೆ ಪರಿಣಾಮ ಉದ್ಯೋಗಾವಕಾಶದಲ್ಲೂ ಸಮಸ್ಯೆ ಎದುರಾಗಿದೆ. ಕೆಲವು ದಿನಗಳಲ್ಲಿ ಯಾವ್ಯಾವ ದೇಶಗಳಲ್ಲಿ ಜನಸಂಖ್ಯೆ ಎಲ್ಲಿಗೆ ಮುಟ್ಟಬಹುದು ಎಂದು ಅಂದಾಜಿಸಿದ ಇತ್ತೀಚೆಗಿನ ವರದಿಯ ಪ್ರಕಾರ, ಈ ಪ್ರಮಾಣ ಜಪಾನ್‌ನಲ್ಲಿ 8 ಮಿಲಿಯನ್, ಯುಎಸ್‌ಎ17 ಮಿ.

**ಉಪ-ಸಂಹಾರ**

ಅಂಕೀಕರಣ, ಯುವಜನತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಇದುವರೆಗೆ ಸಾಂಪ್ರದಾಯಿಕ ಶೈಲಿಯಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದವು. ಆದರೆ ಇದೀಗ ಡಿಜಿಟಲ್ ಆರ್ಥಿಕತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲವು ಮಹತ್ವದ ನೀತಿಗಳನ್ನು ಬಜೆಟ್‌ನಲ್ಲಿ ಮಂಡಿಸಲಾಗಿದೆ. ಭೀಮ್ ಆ್ಯಪ್ ಬಂತು, ಅಲ್ಲದೇ ರೆಫರಲ್ ಬೋನಸ್ ಸ್ಕೀಂ, ಕ್ಯಾಶ್‌ಬ್ಯಾಕ್ ಸ್ಕೀಂ ಫಾರ್ ಮರ್ಚೆಂಟ್ ಮುಂತಾದ ಯೋಜನೆಗಳನ್ನು ಪರಿಚಯಿಸಲಾಗಿದೆ. ಪ್ರಸ್ತಾವಿತ ಉದ್ದೇಶವನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದು, 2017-18 ಸಾಲಿನಲ್ಲಿ ಯುಪಿಐ, ಯುಎಸ್‌ಎಸ್‌ಡಿ, ಆಧಾರ್, ಪೇ, ಐಎಂಪಿಎಸ್ ಮತ್ತು ಡೆಬಿಟ್ ಕಾರ್ಡ್ಸ್ ಸೇರಿದಂತೆ 2500 ಕೋಟಿ ಡಿಜಿಟಲ್ ವ್ಯವಹಾರ ನಡೆಯಬೇಕೆಂದು ಆಶಿಸಲಾಗಿದೆ.

ಸರ್ಕಾರದಿಂದ ಕೊಡಮಾಡುವ ಎಲ್ಲ ರಸೀದಿಗಳೂ ಡಿಜಿಟಲ್ ರೂಪದಲ್ಲಿರಲಿವೆ. ಈ ನೂತನ ನೀತಿಯ ಪ್ರಕಾರ ಪಾರದರ್ಶಕತೆ, ಲೆಕ್ಕಪತ್ರ ಸರಿಯಾಗಿರುತ್ತದೆ. ಈ ನೀತಿಯನ್ನು ಕೇವಲ ಸರ್ಕಾರಿ ಸಂಸ್ಥೆಗಳಿಗೆ ಸೀಮಿತಗೊಳಿಸದೇ ಖಾಸಗಿಗೂ ಅನ್ವಯಿಸಲಾಗುವುದು. ಡಿಜಿಟಲ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾ ಮುಂತಾದ ಕನಸುಗಳ ನನಸಿಗೆ ಮೊದಲೇ ಹೇಳಿದ ಮ್ಯಾಕ್ಸ್ ಪ್ಲ್ಯಾಂಕ್ ಅಥವಾ ಫ್ರಾನ್ ಹಾಫರ್ ಇನ್ಸ್ಟಿಟ್ಯೂಟ್ ಮಾದರಿ ಅನುಸರಿಸಿರುವುದು ಉತ್ತಮ. ಮೇಕ್ ಇನ್ ಇಂಡಿಯಾ ಎಂಬುದು ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ.

ರಕ್ಷಣಾ ಇಲಾಖೆ, ರೈಲ್ವೆ ಇತ್ಯಾದಿಗಳು ಬಜೆಟ್‌ನ ಮುಖ್ಯಾಂಶಗಳು. ಕೌಶಲ ಮತ್ತು ಶಿಕ್ಷಣಕ್ಕೆ ನಮ್ಮ ಶಾಲೆ, ಕಾಲೇಜುಗಳಲ್ಲಿ ಆದ್ಯತೆ ನೀಡುವ ಯೋಜನೆ ಹಾಗೂ ಸಾಮಾನ್ಯ ಶಿಕ್ಷಣದಿಂದ ವೃತ್ತಿಪರ ಶಿಕ್ಷಣದತ್ತ ಸಾಗುವ ಉಭಯ ವ್ಯವಸ್ಥೆ ಸ್ವಾಗತಾರ್ಹ.

ನ್ಯಾಶನಲ್ ಸ್ಕಿಲ್ ಯುನಿವರ್ಸಿಟಿಯ ಸ್ಥಾಪನೆಯ ಕುರಿತು ಆಲೋಚಿಸಿದ ಕೇಂದ್ರದ ಚಿಂತನೆ ನಿಜಕ್ಕೂ ಮಹತ್ವದ ನಡೆ. ಯುವಶಕ್ತಿಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಅನೇಕ ಕ್ರಮಗಳಲ್ಲಿ, ಶಿಕ್ಷಣಕ್ಕೆ ಹೆಚ್ಚಿನ ಖರ್ಚು ಮಾಡುತ್ತಿರುವುದು ಗಮನಾರ್ಹ. ಭಾರತದ ಅಭಿವೃದ್ಧಿ ಹಾಗೂ ಭವಿಷ್ಯದ ದೃಷ್ಟಿಯಿಂದ ಸರ್ಕಾರ ಹೊಸ ಅಧ್ಯಾಯವನ್ನೇ ಬರೆಯುವ ನಂಬಿಕೆ ಬಲವಾಗಿದೆ. ಇದರಲ್ಲಿ ಸಾರ್ವಜನಿಕ ಸಹಭಾಗಿತ್ವ ಇರುವುದೂ ಅಷ್ಟೇ ಮುಖ್ಯ. ಮುಂದಿನ ಪೀಳಿಗೆಗೆ ನಾವು ಉತ್ತಮ ಶಕ್ತಿ ಹಾಗೂ ಜವಾಬ್ದಾರಿಯನ್ನು ಬಳುವಳಿಯಾಗಿ ನೀಡಬೇಕಿದೆ. ❑

# 2017–18 ನೇ ಸಾಲಿನ ಆಯವ್ಯಯದ ಮುಖ್ಯಾಂಶಗಳು



**ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿಯವರು ಸಂಸತ್ತಿನಲ್ಲಿ ಮಂಡಿಸಿದ 2017–18ನೇ ಸಾಲಿನ ಆಯವ್ಯಯದ ಸಂಕ್ಷಿಪ್ತ ನೋಟ.**

* ಡಿ.ಎಸ್. ಮಲ್ಲಿಕ್

ಕೇಂದ್ರದ 2017–18ನೇ ಸಾಲಿನ ಮುಂಗಡ ಪತ್ರ, ಖಜಾನೆಯನ್ನು ಗಮನದಲ್ಲಿರಿಸಿಕೊಂಡು ಸಶಕ್ತವಾದ ಬೃಹತ್ ಆರ್ಥಿಕ ಯೋಜನೆಯ ತಳಹದಿಯ ಮೇಲೆ ಪ್ರಸ್ತಾಪಿಸಿದ ಭರವಸೆದಾಯಕ ಆಯವ್ಯಯವಾಗಿದೆ.ಹೆಚ್ಚಿನ ಮುಖ ಬೆಲೆಯ ನೋಟುಗಳ ರದ್ದತಿ, ಜಿಎಸ್‌ಟಿ ಮತ್ತು ಜೆಎಎಮ್ ಸಕಾರಾತ್ಮಕ ದೃಷ್ಟಿಕೋನ ಹೊಂದಿದ್ದು ಕಳೆದ ಸಾಲಿನ ಸುಧಾರಣಾ ನೀತಿಗಳು ಆರ್ಥಿಕತೆಯನ್ನು ಬಲಗೊಳಿಸಿದೆ. ಬಜೆಟ್‌ನ ಕಿರು ಚಿತ್ರಣ ಮುಂದಿದೆ.

* ಪ್ರಗತಿ ದೃಷ್ಟಿ ಸಕಾರಾತ್ಮಕವಾಗಿದೆ.
* ರಾಜ್ಯದ ಖಜಾನೆಯ ಕೊರತೆ 3.2% ಇದ್ದು ಮುಂಬರುವ ಸಾಲಿನಲ್ಲಿ 3% ಕ್ಕೆ ಇಳಿಸುವ ಗುರಿ ಹೊಂದಿದೆ.
* ರಾಜ್ಯದ ಆದಾಯದ ಕೊರತೆ ಈ ವರ್ಷ ಕಡಿಮೆಯಾಗಿದ್ದು ಮುಂಬರುವ ವರ್ಷ 1.9% ಗೆ ಇಳಿಸಲಾಗುವುದು.
* ಮಾರುಕಟ್ಟೆಗೆ ಕಡ ಸಾಲ ತರುವಿಕೆ ಪ್ರಮಾಣ 2017–18 ನೇ ಸಾಲಿನಲ್ಲಿ 3.48 ಲಕ್ಷ ಕೋಟಿ ಇರಲಿದ್ದು ಕಳೆದ ಸಾಲಿಗೆ ಹೋಲಿಸಿದರೆ ಇದು ಉತ್ತಮ ಪ್ರಗತಿಯಾಗಿದೆ.
* ಸುಸ್ಥಿರ ಸಾಲದ ಬಗ್ಗೆ ಆರ್ಥಿಕ ನೀತಿಯ ಬದ್ಧತೆ.


**ಗ್ರಾಮೀಣ ಜನಸಮುದಾಯ ಮತ್ತು ಜನಸಂಖ್ಯೆ**


* ಅಂತ್ಯೋದಯ ಯೋಜನೆಯ ಮೂಲಕ ಒಂದು ಕೋಟಿ ಕುಟುಂಬಗಳನ್ನು ಬಡತನದಿಂದ ಮುಕ್ತಗೊಳಿಸಲಾಗುವುದು ಮತ್ತು 2019 ರ ವೇಳೆ 50000 ಗ್ರಾಮ ಪಂಚಾಯತಗಳನ್ನು ಬಡತನದಿಂದ ಮುಕ್ತಗೊಳಿಸಲಾಗುವದು.
* ಎಮ್‌ಜಿಎನ್‌ಆರ್‌ಇಜಿಎ – ಯೋಜನೆಗೆ ಇದುವರೆಗಿನ ಗರಿಷ್ಠ 48 ಸಾವಿರ ಕೋಟಿ ರೂ. ಹಂಚಿಕೆ (2017–18 ನೇ ಸಾಲಿಗೆ) ನೀಡಲಾಗಿದೆ. ಉದ್ಯೋಗ ಮತ್ತು ಸ್ಥಿರಾಸ್ಥಿ ಸೃಷ್ಟಿಗೆ ವಿಶೇಷ ಒತ್ತು ನೀಡಲಾಗುವದು.
* ಪಿಎಮ್‌ಜಿಎಸ್‌ವೈ– ರಾಜ್ಯದ ಪಾಲು ಸೇರಿ 2017–18 ನೇ ಸಾಲಿಗೆ 27000 ಕೋಟಿ ನೀಡಲಾಗಿದ್ದು 2011–14 ಸಾಲಿನಲ್ಲಿ ರಸ್ತೆ ನಿರ್ಮಾಣ ಪ್ರತಿ ದಿನಕ್ಕೆ 73 ಕಿ.ಮೀ ಇದ್ದು ಅದನ್ನು 2016–17 ನೇ ಸಾಲಿನಲ್ಲಿ ಪ್ರತಿ ದಿನಕ್ಕೆ 133 ಕಿ.ಮೀ.ಗೆ ಹೆಚ್ಚಿಸಲಾಗಿದೆ.
* ಮುಂದಿನ ನಾಲ್ಕು ವರ್ಷಗಳಲ್ಲಿ ಅರ್ಸನಿಕ್ ಮತ್ತು ಫ್ಲೋರೈಡ್ ಬಾಧಿತ 28000 ಪ್ರದೇಶಗಳಿಗೆ ಸುರಕ್ಷಿತ ಕುಡಿಯುವ ನೀರು ಪೂರೈಸಲಾಗುವದು.

**ಯುವಜನತೆ, ಉದ್ಯೋಗ ಸೃಷ್ಟಿ ಮತ್ತು ಶಿಕ್ಷಣ**

* ಯುಜಿಸಿಯಲ್ಲಿ ಸುಧಾರಣೆ ತರಲಾಗುವದು.
* ಸ್ವಯಂ ಯೋಜನೆ ಮೂಲಕ ಕನಿಷ್ಠ 350 ಆನ್–ಲೈನ್ ಕೋರ್ಸಗಳನ್ನು ಪ್ರಾರಂಭಿಸಲಾಗುವುದು.

* ಹೆಚ್ಚುವರಿ ಮಹಾನಿರ್ದೇಶಕರು ಪಿಐಬಿ, ನವದೆಹಲಿ. E-mail : dprfinance@gmail.com


ಉತ್ತಮ ಭಾರತಕ್ಕಾಗಿ ಬಜೆಟ್
ರೂಪಾಯಿಯಲ್ಲಿ ಆಯ ನಿರೀಕ್ಷೆ
ಉತ್ತಮ ಭಾರತಕ್ಕಾಗಿ ಬಜೆಟ್ 2017-18
ಸಾಲೇತರ ಬಂಡವಾಳ ಸ್ವೀಕೃತಿ 3 ಪೈ
ತೆರಿಗೆಯೇತರ ಆದಾಯ 10 ಪೈ
ಸಾಲ ಮತ್ತು ಇತರ ಹೊಣೆಗಾರಿಕೆ 19 ಪೈ
ಸೇವಾ ತೆರಿಗೆ ಮತ್ತು ಇತರ ತೆರಿಗೆ 10 ಪೈ
ಕಾರ್ಪೊರೇಶನ್ ತೆರಿಗೆ 19 ಪೈ
ಕೇಂದ್ರ ಅಬಕಾರಿ ಸುಂಕ 14 ಪೈ
ಕಸ್ಟಮ್ಸ್ 9 ಪೈ
ಆದಾಯ ತೆರಿಗೆ 16 ಪೈ
81 ಪೈ ಸ್ವೀಕೃತಿ
19 ಪೈ ಸಾಲ


ಉತ್ತಮ ಭಾರತಕ್ಕಾಗಿ ಬಜೆಟ್
ರೂಪಾಯಿಯಲ್ಲಿ ವ್ಯಯ ಅಂದಾಜು
ಉತ್ತಮ ಭಾರತಕ್ಕಾಗಿ ಬಜೆಟ್ 2017-18
ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯಗಳ ಪಾಲು 24 ಪೈ
ಇತರೆ ವೆಚ್ಚ 13 ಪೈ
ಕೇಂದ್ರ ಪ್ರಾಯೋಜಿತ ಯೋಜನೆ 10 ಪೈ
ಹಣಕಾಸು ಆಯೋಗ ಮತ್ತು ಇತರ ವರ್ಗಾವಣೆ 5 ಪೈ
ಕೇಂದ್ರ ವಲಯ ಯೋಜನೆ 11 ಪೈ
ಸಹಾಯ ಧನ 10 ಪೈ
ರಕ್ಷಣೆ 9 ಪೈ
ಬಡ್ಡಿ ಪಾವತಿ 18 ಪೈ

* ಸಂಕಲ್ಪ ಸಾಮರ್ಥ್ಯ ಅಭಿವೃದ್ಧಿ ಯೋಜನೆ ಮೂಲಕ 4000 ಸಾವಿರ ಕೋಟಿ ವೆಚ್ಚದಲ್ಲಿ 3.5 ಕೋಟಿ ಯುವ ಸಮುದಾಯಕ್ಕೆ ತರಬೇತಿ ನೀಡಲಾಗುವದು.
* ಜವಳಿ ಕ್ಷೇತ್ರಕ್ಕೆ ಇರುವ ಯೋಜನೆಯನ್ನು ಹೋಲುವಂತಹ ಯೋಜನೆಯೊಂದನ್ನು ಚರ್ಮ ಮತ್ತು ಪಾದರಕ್ಷೆ ತಯಾರಿಸುವ ಕೈಗಾರಿಕೆಗಳಿಗೂ ರೂಪಿಸಿ ಜಾರಿಗೊಳಿಸಲಾಗುವದು.
* 5 ಹೊಸ ಪ್ರವಾಸಿ ವಲಯ ಸೃಷ್ಟಿಸಲಾಗುವುದು.

**ಬಡವರು ಮತ್ತು ಅವಕಾಶ ವಂಚಿತರು**

* ಮಹಿಳಾ ಶಕ್ತಿ ಕೇಂದ್ರಗಳನ್ನು ಗ್ರಾಮಮಟ್ಟದಲ್ಲಿ ಸ್ಥಾಪಿಸಿ 14 ಲಕ್ಷ ಅಂಗನವಾಡಿ ಕೇಂದ್ರಗಳ ಮೂಲಕ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಉದ್ಯೋಗ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳಿವಳಿಕೆ ನೀಡಿ ಅವರನ್ನು ಸಶಕ್ತಗೊಳಿಸಲಾಗುವುದು.
* ಗೃಹ ನಿರ್ಮಾಣವನ್ನು ಮೂಲಭೂತ ಸೌಕರ್ಯ ಎಂದು ಪರಿಗಣಿಸಲಾಗುವದು. ಇದರಿಂದ ಬ್ಯಾಂಕ್‌ಗಳ ಮೂಲಕ ಗೃಹಸಾಲವನ್ನು ಸುಲಭವಾಗಿ ಪಡೆಯಬಹುದು.
* ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಮೂಲಕ 2017–18 ನೇ ಸಾಲಿನಲ್ಲಿ 20,000 ಕೋಟಿ ಸಾಲ ನೀಡಲಾಗುವುದು.
* ಕಾಲಾ–ಅಜರ್, ಫೈಲೆರಿಸಸ್, ಕುಷ್ಠರೋಗ, ಸಿಡುಬು ಮತ್ತು ಕ್ಷಯ ರೋಗಗಳ ನಿರ್ಮೂಲನೆಗೆ ಕೆಲವು ನಿರ್ದಿಷ್ಟ ಯೋಜನೆಗಳನ್ನು ರೂಪಿಸಲಾಗಿದೆ.
* ಐಎಮ್‌ಆರ್ ಮತ್ತು ಎಮ್‌ಎಮ್‌ಆರ್ ಗಳನ್ನು ಕಡಿಮೆ ಮಾಡಲಾಗುವದು.
* 1.5 ಲಕ್ಷ ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಯೋಗಕ್ಷೇಮ ಕೇಂದ್ರಗಳಿಗೆ ಮೇಲ್ದರ್ಜೆಗೊಳಿಸಲಾಗುವದು.
* ವೈದ್ಯಕೀಯ ಶಿಕ್ಷಣ ಮತ್ತು ವೃತ್ತಿಗೆ ನಿಯಂತ್ರಕ ಚೌಕಟ್ಟು ಯೋಜನೆ ರೂಪಿಸಲಾಗುವುದು.



* ಜಾರ್ಖಂಡ ಮತ್ತು ಗುಜರಾತ್‌ನಲ್ಲಿ ಎರಡು ಹೊಸ ಏಮ್ಸ್ ವೈದ್ಯ ವಿಜ್ಞಾನ ಸಂಸ್ಥೆ ಸ್ಥಾಪಿಸಲಾಗುವದು.
* ಚಾಲ್ತಿಯಲ್ಲಿರುವ ಕಾರ್ಮಿಕ ಕಾನೂನುಗಳನ್ನು ಪ್ರಮಾಣಬದ್ಧ ಮತ್ತು ಕ್ರಮಬದ್ಧಗೊಳಿಸಿ ನಾಲ್ಕು ಸಂಕ್ಷಿಪ್ತ ಸಂಹಿತೆಗಳಲ್ಲಿ ತರಲಾಗುವುದು.

**ಮೂಲಭೂತ ಸೌಕರ್ಯ**

* ರೈಲ್ವೆ–ಬಂಡವಾಳ ಮತ್ತು ಅಭಿವೃದ್ಧಿ ವೆಚ್ಚ ಸರ್ಕಾರದ 55,000 ಕೋಟಿ ಸೇರಿಸಿ 1,31,000 ಕೋಟಿ.
* ರಾಷ್ಟ್ರೀಯ ರೇಲ್ವೆ ಸುರಕ್ಷಾ ಕೋಶಗಳಿಗಾಗಿ ಮುಂದಿನ 5 ವರ್ಷಗಳಲ್ಲಿ ಲಕ್ಷ ಕೋಟಿ ಮೊತ್ತದ ನಿಧಿ ಸೃಷ್ಟಿಸಲಾಗುವುದು.
* ರೈಲ್ವೆ ಇಲಾಖೆ ಮತ್ತು 9 ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಆಯ್ದ 70 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವದು.
* ರೈಲ್ವೆ – ಸರಕು ಸಾಮಗ್ರಿಯನ್ನು ಪೂರ್ಣವಾಗಿ ಸಮರ್ಪಕವಾಗಿ ಸಾಗಿಸುವ ವ್ಯವಸ್ಥೆ ಕಲ್ಪಿಸಲಿದೆ.
* ಲೆಕ್ಕ ಪರಿಶೋಧನೆಯ ವ್ಯವಸ್ಥೆಯಲ್ಲಿ ಸುಧಾರಣೆ ರೈಲ್ವೆಯು ಮಾರ್ಚ 2019ರಲ್ಲಿ ನಿಖರವಾದ ಲೆಕ್ಕ ಪತ್ರ ವ್ಯವಸ್ಥೆಯನ್ನು ಅಳವಡಿಸಲಾಗುವದು.
* ಹೊಸ ಮೆಟ್ರೊ ರೈಲು ಯೋಜನೆಯನ್ನು ಘೋಷಣೆ ಮಾಡಿ ಹೊಸ ಮೆಟ್ರೊ ರೈಲು ನೀತಿ ಜಾರಿ ಮಾಡಲಾಗುವದು.
* ರಸ್ತೆ ಅಭಿವೃದ್ಧಿ ವಲಯಕ್ಕೆ ಒತ್ತು ನೀಡಲಾಗುವದು.
* ಎರಡನೇ ದರ್ಜೆ ಪಟ್ಟಣದಲ್ಲಿರುವ ವಿಮಾನ ನಿಲ್ದಾಣಗಳನ್ನು ಪಿಪಿಪಿ ಮಾದರಿಯಲ್ಲಿ ನಿರ್ಮಿಸಿ ನಿರ್ವಹಿಸಲಾಗುವದು.
* ವಿಮಾನ ನಿಲ್ದಾಣ ಅಭಿವೃದ್ಧಿ ಪ್ರಾಧಿಕಾರದ ಕಾನೂನಿಗೆ ತಿದ್ದುಪಡಿ ಮಾಡಿ ಅದರ ಸ್ಥಿರಾಸ್ಥಿಗಳ ಪರಿಣಾಮಕಾರಿ ಉಸ್ತುವಾರಿಗೆ ಯೋಜನೆ ರೂಪಿಸಲಾಗುವದು.
* ಭಾರತ ನೆಟ್ ಯೋಜನೆ 2017–18 ನೇ ಸಾಲಿಗೆ 1.5 ಲಕ್ಷ ಗ್ರಾಮ ಪಂಚಾಯತಿಗಳಿಗೆ ಓಎಫ್‌ಎಸ್ ಬ್ರಾಡ್ ಬ್ಯಾಂಡ್ ಮೂಲಕ ಅಂತರ್ಜಾಲ ಸಂಪರ್ಕ ಕಲ್ಪಿಸಲಾಗುವದು.
* ಒಡಿಶಾ ಮತ್ತು ರಾಜಸ್ಥಾನಗಳಲ್ಲಿ 2 ಹೊಸ ಕಚ್ಚಾತೈಲ ಸಂಗ್ರಹಾಲಯ ಸ್ಥಾಪಿಸಲಾಗುವುದು.
* ಎರಡನೆ ಹಂತದಲ್ಲಿ ಸೌರ ಶಕ್ತಿ ಉದ್ಯಾವನವನ್ನು ಹೆಚ್ಚುವರಿ 20,000 ಮೆಗಾವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗುವುದು.
* ಪರಿಸರ ಸ್ನೇಹಿ ವಾತಾವರಣ ನಿರ್ಮಿಸಿ ವಿದ್ಯುನ್ಮಾನ ವಸ್ತುಗಳ ತಯಾರಿಕೆಗೆ ಅನುಕೂಲ ಕಲ್ಪಿಸಿ ಭಾರತವನ್ನು ವಿದ್ಯುನ್ಮಾನ ವಸ್ತುಗಳ ಜಾಗತಿಕ ವ್ಯಾಪಾರ ಕೇಂದ್ರವಾಗಿ ಮಾಡಲಾಗುವದು.

**ಆರ್ಥಿಕ ವಲಯ**

* ವಿದೇಶಿ ಬಂಡವಾಳ ವರ್ಧನೆ ಮಂಡಳಿಯನ್ನು (ಎಫ್‌ಬಿಐಬಿ)ನ್ನು 2017–18 ನೇ ಸಾಲಿನಲ್ಲಿ ರದ್ದುಗೊಳಿಸಲಾಗುವದು.
* ದಿನನಿತ್ಯ ಬಳಕೆ ವಸ್ತುಗಳನ್ನು ಮಾರಾಟ ಮಾಡುವ ನಿಗದಿತ ಮಾರುಕಟ್ಟೆ ಮತ್ತು ಮೂಲ ಮಾರುಕಟ್ಟೆಗಳ ಅಭಿವೃದ್ಧಿ ಮತ್ತು ಕಾನೂನಾತ್ಮಕ ಚಟುವಟಿಕೆಗಳಿಗೆ ಕಾನೂನು ರೂಪಿಸಲು ತಜ್ಞರ ಸಮಿತಿ ರಚಿಸಲಾಗುವದು.
* ಬಡ ಹೂಡಿಕೆದಾರರ ಮತ್ತು ಸುಲಭವಾಗಿ ಮೋಸ ಹೋಗಬಹುದಾದ ಮುಗ್ಧ

ಹೂಡಿಕೆದಾರರ ರಕ್ಷಣೆಗಾಗಿ ಬಹು ರಾಜ್ಯ ಸಹಕಾರ ಸಂಘಗಳ ಕಾಯಿದೆಗೆ ತಿದ್ದುಪಡಿ ಮಾಡಲಾಗುವದು.

* ಪಾರ್ಲಿಮೆಂಟ್ ಅಧಿವೇಶನದಲ್ಲಿ ಹಣಕಾಸು ವ್ಯವಹಾರ ನಡೆಸುವ ಸಂಸ್ಥೆಗಳಿಗೆ ಸಂಬಂಧಿಸಿದ ಮಸೂದೆಯನ್ನು ಮಂಡಿಸಲಾಗುವುದು.
* ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಪಿಪಿಪಿಗೆ ಸಂಬಂಧಿಸಿದ ನಿರ್ಮಾಣ ಗುತ್ತಿಗೆಗಳ ತಕರಾರುಗಳ ಪರಿಹಾರಕ್ಕಾಗಿ ಮಧ್ಯಸ್ಥಿಕೆ ಮತ್ತು ಸಂಧಾನ ಕಾನೂನಿಗೆ ತಿದ್ದುಪಡಿ ತರಲಾಗುವುದು.

**ಡಿಜಿಟಲ್ ಆರ್ಥಿಕ ನೀತಿ**

* ವರ್ತಕ ಸ್ನೇಹಿ ಆಧರಿತ ಹಣ ಪಾವತಿ ವ್ಯವಸ್ಥೆ ಆಧಾರ್ ಪೇ ಯೋಜನೆಯನ್ನು ಶೀಘ್ರವೆ ಪ್ರಾರಂಭಿಸಲಾಗುವುದು.
* ಆರ್ಥಿಕ ಒಳಗೊಳ್ಳುವಿಕೆ ನಿಧಿಯನ್ನು ಅಭಿವೃದ್ಧಿ ಪಡಿಸಲಾಗುವುದು.
* ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಯನ್ನು, ಪ್ರಸ್ತುತ ಡಿಜಿಟಲ್ ಪಾವತಿ ಅಗತ್ಯಗಳಿಗೆ ತಕ್ಕಂತೆ ಸಮಗ್ರವಾಗಿ ಪರಿವರ್ತಿಸಲಾಗುವುದು ಮತ್ತು ಈ ಕಾಯಿದೆಗೆ ತಿದ್ದುಪಡಿ ಮಾಡಿ ಭಾರತೀಯ ರಿಸರ್ವ ಬ್ಯಾಂಕ್‌ನಲ್ಲಿ ಪಾವತಿ ನಿಯಂತ್ರಣ ಮಂಡಳಿ ರಚಿಸಲಾಗುವುದು.
* ಬ್ಯಾಂಕ್ ವ್ಯವಹಾರ ಹೆಚ್ಚಾಗಿ ಇರುವುದರಿಂದ ಉದ್ಭವವಾಗಿರುವ ಹೊಸ ಸವಾಲುಗಳನ್ನು ಎದುರಿಸಲು ಸಂಬಂಧಪಟ್ಟ ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆಗೆ ತಿದ್ದುಪಡಿ ತರಲಾಗುವದು.

**ಸಾರ್ವಜನಿಕ ಸೇವೆ**

* ಪ್ರಧಾನ ಅಂಚೆ ಕಛೇರಿಗಳು ಇನ್ನು ಮುಂದೆ ಪಾಸ್‌ಪೋರ್ಟ್ ಸೇವೆ ಸಲ್ಲಿಸುವ ಕಾರ್ಯ ಮಾಡಲಿವೆ.
* ಆರ್ಥಿಕ ತಪ್ಪಿತಸ್ಥರು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳದಿರಲು ಸದ್ಯ ಇರುವ ಕಾನೂನಿಗೆ ತಿದ್ದುಪಡಿ ಅಥವಾ ಹೊಸ ಕಾನೂನು ಜಾರಿ ಮಾಡಲಾಗುವದು.

**ವಲಯವಾರು ಮೊತ್ತ**

ಕೋಟಿ ರೂಪಾಯಿಗಳಲ್ಲಿ

| ಕ್ರ.ಸಂ. | ವಲಯಗಳು | BE 2016–17 | RE 2016–17 | BE 2017–18 |
|---|---|---|---|---|
| 1 | ಕೃಷಿ ಮತ್ತು ಇತರ ವಲಯಗಳು | 48572 | 52821 | 58663 |
| 2 | ಗ್ರಾಮೀಣ ಅಭಿವೃದ್ಧಿ | 102543 | 114947 | 128560 |
| 3 | ಮೂಲ ಸೌಕರ್ಯ ಅಭಿವೃದ್ಧಿ | 348952 | 358634 | 396135 |
| 3a | ಸಾರಿಗೆ ವಲಯ | 216268 | 216903 | 241387 |
| 4 | ಸಾಮಾಜಿಕ ವಲಯಗಳು | 168100 | 176225 | 195473 |
| 4a | ಶಿಕ್ಷಣ ಮತ್ತು ಆರೋಗ್ಯ | 112138 | 114806 | 130215 |
| 4b | ಸಾಮಾಜಿಕ ವಲಯ ಮತ್ತು ಸಮಾಜ ಕಲ್ಯಾಣ | 55962 | 61419 | 65258 |
| 5 | ಉದ್ಯೋಗಾವಕಾಶ ಅಭಿವೃದ್ಧಿ ಸಾಮರ್ಥ್ಯ ಮತ್ತು ಉಪಜೀವನ | 12006 | 14735 | 17273 |
| 6 | ವಿಜ್ಞಾನ ವಲಯ | 33467 | 44359 | 37435 |

ಮೂಲ : 2017–18 ರ ಆಯವ್ಯಯದ (ವೆಚ್ಚ ಮತ್ತು ಪಕ್ಷಿನೋಟ)

## ಭಾಗ–2 ರಲ್ಲಿ ಪ್ರಸ್ತಾಪಿಸಿದ ತೆರಿಗೆ ಪ್ರಸ್ತಾವನೆಯ ಸಂಕ್ಷಿಪ್ತ ಮಾಹಿತಿ

**ಗೃಹ ನಿರ್ಮಾಣ ವಲಯ**

1. ಗೃಹ ನಿರ್ಮಾಣ ಕ್ಷೇತ್ರದಲ್ಲಿ 3 ವಿಧದ ತೆರಿಗೆ ವಿನಾಯತಿಗಳನ್ನು ಪ್ರಸ್ತಾಪಿಸಲಾಗಿದೆ.
   * 30 ರಿಂದ 60 ಚ.ಮೀ. ಕಟ್ಟಡದ ವಿಸ್ತೀರ್ಣವನ್ನು ಬಿಲ್ಡ್–ಅಪ್ ಏರಿಯಾದ ಬದಲು ಕಾರ್ಪೆಟ್ ಏರಿಯಾ ಎಂದು ಪರಿಗಣಿಸಬಹುದು.
   * 30 ಚ.ಮೀ.ನ ಮಿತಿ 4 ರಾಜಧಾನಿ ಪಟ್ಟಣಗಳಿಗೆ ಇದ್ದು ದೇಶದ ಇತರ ಪಟ್ಟಣಗಳಿಗೆ 60 ಚ.ಮೀ. ನಿಗದಿ ಪಡಿಸಲಾಗಿದೆ.
   * ಮುಕ್ತಾಯದ ಅವಧಿಯನ್ನು 3 ರಿಂದ 5 ವರ್ಷಗಳಿಗೆ ಹೆಚ್ಚಿಸಲಾಗಿದೆ.
2. ಬಿಲ್ಡರ್ಸ್‌ಗಳಿಗೆ ವಿಧಿಸುವ ಕಾಲ್ಪನಿಕ ಬಾಡಿಗೆ ಆದಾಯವನ್ನು ಇನ್ನು ಮುಂದೆ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಿದ ವರ್ಷದ ಕೊನೆ ತಿಂಗಳಿಗೆ ಲೆಕ್ಕ ಹಾಕಲಾಗುವದು.
3. ಸ್ಥಿರಾಸ್ತಿಗೆ ಮಾರಾಟದಿಂದ ಬರುವ ಬಂಡವಾಳಕ್ಕೆ ಸಂಬಂಧಿಸಿದ ತೆರಿಗೆಯಲ್ಲಿ 3 ಬದಲಾವಣೆಗಳನ್ನು ಮಾಡಲಾಗಿದೆ.
   * ದೀರ್ಘಾವಧಿ ಲಾಭವನ್ನು ಇನ್ನು ಮುಂದೆ 3 ವರ್ಷದ ಬದಲು 2 ವರ್ಷಕ್ಕೆ ಲೆಕ್ಕ ಹಾಕಲಾಗುವದು.
   * ಸ್ಥಿರಾಸ್ತಿ ಸೇರಿದಂತೆ ಎಲ್ಲ ತರಹದ ಆಸ್ತಿಯ ಮೌಲ್ಯವನ್ನು ಲೆಕ್ಕ ಹಾಕುವಾಗ ದಿನಾಂಕವನ್ನು 01-04-1981 ರ ಬದಲು 01-04-2001 ಎಂದು ಪರಿಗಣಿಸುವದು.
   * ಆಸ್ತಿ ಮಾರಾಟದಿಂದ ಬಂದ ಲಾಭವನ್ನು ತೆರಿಗೆ ಇಲ್ಲದೆ ಮರು ವಿನಿಯೋಗಿಸುವ ವಿಧಿಸುವ ಸಾಧನ ಮಿತಿ ಹೆಚ್ಚಿಸಲಾಗುವದು.

* ಜಂಟಿ ಅಭಿವೃದ್ಧಿ ಒಪ್ಪಂದ ಮಾಡುವಾಗ ಆಸ್ತಿ ಮಾರಾಟದಿಂದ ಬಂಧ ಲಾಭದ ಮೇಲೆ ವಿಧಿಸುವ ತೆರಿಗೆಯನ್ನು ಹಣ ಸಂದಾಯವಾದ ವರ್ಷದಿಂದ ಲೆಕ್ಕ ಹಾಕಲಾಗುವದು.
* ಆಂಧ್ರ ಪ್ರದೇಶಕ್ಕೆ ಸಂಬಂಧಿಸಿದಂತೆ 02–06–2014ರ ವರೆಗೆ ಭೂಮಿ ಹೊಂದಿರುವ ಭೂ ಮಾಲೀಕರು (ಲ್ಯಾಂಡ್ ಪೂಲಿಂಗ್ ವಿಧಾನದಲ್ಲಿ ವಿನಾಯತಿ ಪಡೆದಿರದಿದ್ದರೆ) ತೆರಿಗೆ ವಿನಾಯತಿ ನೀಡಲಾಗುವದು.

**ಅಭಿವೃದ್ಧಿ ಉತ್ತೇಜಿಸುವ ಮಾರ್ಗೋಪಾಯಗಳು**

1. ವಿದೇಶಿ ಸಂಸ್ಥೆಗಳು ಭಾರತದಲ್ಲಿ ನೀಡಿದ ಸಾಲದ ಮೇಲಿನ ಬಡ್ಡಿ ಮೇಲೆ 5% ರಿಯಾಯತಿ ನೀಡಲಾಗುವದು.
2. ನವೋದ್ಯಮಿಗಳು ಆದಾಯ ತೆರಿಗೆ ಪಾವತಿಸುವಲ್ಲಿ ಎರಡು ವಿನಾಯತಿ ಪಡೆಯಲಿದ್ದಾರೆ.
   * ಮೂಲ ಹೂಡಿಕೆ ಹಾಗೇ ಇರುವವರೆಗೂ ಶೇ. 51ರ ವೋಟಿಂಗ್ ಹಕ್ಕಿನ ಕಡ್ಡಾಯದಲ್ಲಿ ಸಡಿಲಿಕೆ ಇರುತ್ತದೆ.
   * ಈ ವಿನಾಯ್ತಿ ಉದ್ಯಮ ಸ್ಥಾಪನೆಯಾಗಿ 7 ವರ್ಷದವರೆಗೆ ಇದ್ದು ಅದರಲ್ಲಿ ಯಾವುದೇ 3 ವರ್ಷ ವಿನಾಯತಿ ಪಡೆಯಬಹುದಾಗಿದೆ.
3. ಮ್ಯಾಟ್‌ನಲ್ಲಿ ಜಮೆ ಇರುವ ಹಣವನ್ನು ಪಡೆಯುವ ಅವಧಿಯನ್ನು 10 ರಿಂದ 15 ವರ್ಷಗಳಿಗೆ ಹೆಚ್ಚಿಸಲಾಗಿದೆ.
4. 2015–16 ನೇ ಸಾಲಿನಲ್ಲಿ ವಾರ್ಷಿಕ 50 ಕೋಟಿಯ ವ್ಯವಹಾರ ನಡೆಸುವ ಕಂಪನಿಗಳಿಗೆ ಆದಾಯ ತೆರಿಗೆ ಮಿತಿಯನ್ನು 30% ರಿಂದ 25% ಗೆ ಇಳಿಸಲಾಗಿದೆ ಇದರಿಂದ ಸದ್ಯ



ಚಾಲ್ತಿಯಲ್ಲಿರುವ 96% ಕಂಪನಿಗಳಿಗೆ (6.67 ಲಕ್ಷ) ಲಾಭವಾಗುತ್ತದೆ.

5. ಬ್ಯಾಂಕುಗಳ ಅನುತ್ಪಾದಕ ಸ್ವತ್ತನ್ನು ಶೇ. 7.5 ರ ಬದಲಾಗಿ ಶೇ. 8.5 ರ ಲಾಭದಿಂದ ಕಡಿತಗೊಳಿಸಲಾಗುವುದು.
6. ನಾನ್ ಶೆಡ್ಯೂಲ್ಡ್ ಬ್ಯಾಂಕುಗಳ ಅನುತ್ಪಾದಕ ಸ್ವತ್ತು ಕುರಿತಂತೆ, ಬಡ್ಡಿ ಬಂದ ಮೇಲೆ ಅದನ್ನು ಆದಾಯ ಎಂದು ಪರಿಗಣಿಸಲಾಗುವುದು.

**ಡಿಜಿಟಲ್ ಆರ್ಥಿಕತೆಗೆ ಉತ್ತೇಜನ**

1. ಸಣ್ಣ ಉದ್ದಿಮೆದಾರರಿಗೆ ಕಲ್ಪಿತ ಆದಾಯ ತೆರಿಗೆಯನ್ನು 6% ಎಂದು ಅವರ ವಾರ್ಷಿಕವಾಗಿ ಗಣಕೀಕೃತ ಅಥವಾ ಬ್ಯಾಂಕ್ ಮೂಲಕ ಮಾಡಿದ ವ್ಯವಹಾರದ ಮೇಲೆ ಲೆಕ್ಕ ಹಾಕುವದು.
2. ನಗದು ವ್ಯವಹಾರ ಮಿತಿಯನ್ನು ಪ್ರಸ್ತುತ 20,000 ಸಾವಿರದಿಂದ 10,000ಕ್ಕೆ ಇಳಿಸಲಾಗಿದೆ.
3. ನಗದು ವ್ಯವಹಾರವನ್ನು 3 ಲಕ್ಷ ರೂಪಾಯಿಗಳಿಗೆ ನಿಗದಿಗೊಳಿಸಿದ್ದು ಇದನ್ನು ಉಲ್ಲಂಘಿಸಿದಲ್ಲಿ ಇಷ್ಟೆ ಮೊತ್ತದ ದಂಡ ವಿಧಿಸಲಾಗುವದು.

**ಚುನಾವಣೆ ನಿಧಿಯ ಪಾರದರ್ಶಕತೆ**

1. ವ್ಯಯಕ್ತಿಕವಾಗಿ ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆ ಮಿತಿಯನ್ನು 20 ಸಾವಿರದಿಂದ 2 ಸಾವಿರಕ್ಕೆ ಕಡಿತಗೊಳಿಸಲಾಗಿದೆ.
2. ತೆರಿಗೆ ಪಾವತಿ ಮಾಡಿದ ಹಣದ ದೇಣಿಗೆಗೆ ಇಲೆಕ್ಟ್ರಲ್ ಬಾಂಡ್ ನೀಡಲು ಪ್ರಸ್ತಾಪಿಸಿದ್ದು ಗೌಪ್ಯತೆಯನ್ನು ಕಾಪಾಡಲಾಗುವದು.
3. ಆದಾಯ ತೆರಿಗೆ ಇಲಾಖೆಯ ನಿಯಮದಂತೆ ರಾಜಕೀಯ ಪಕ್ಷಗಳು ಆದಾಯ ತೆರಿಗೆ ಪಾವತಿ ವಿವರ ಸಲ್ಲಿಸಬೇಕು.

**ವ್ಯವಹಾರ ಸರಳೀಕರಣ**

1. ಸ್ವದೇಶದಲ್ಲಿ ವ್ಯವಹಾರ ನಡೆಸುವ ಎರಡು ಲಾಭಾಂಶ ಹಂಚಿಕೆ ಕಂಪನಿಗಳಿದ್ದರೆ ಒಂದು ಕಂಪನಿಗೆ ದೇಶೀಯ ವರ್ಗಾವಣೆ ಬೆಲೆಗೆ ಅವಕಾಶ ನೀಡುವದು.
2. ಕಲ್ಪಿತ ಆದಾಯ ಯೋಜನೆ ಅಡಿಯಲ್ಲಿ ಬರುವ ಕಂಪನಿಗಳಿಗೆ ಲೆಕ್ಕ ಪರಿಶೋಧನಾ ಮಿತಿಯನ್ನು ಒಂದು ಕೋಟಿಯ ಬದಲಾಗಿ ಎರಡು ಕೋಟಿಗೆ ಹೆಚ್ಚಿಸಲಾಗಿದೆ.
3. ವೈಯಕ್ತಿಕ ಮತ್ತು ಹಿಂದೂ ಅವಿಭಕ್ತ ಕುಟುಂಬ ತೆರಿಗೆದಾರರು ಅವರ ವಹಿವಾಟು 25 ಲಕ್ಷದವರೆಗೆ ಇದ್ದರೆ ಅಥವಾ ಆದಾಯ 2.5 ಲಕ್ಷದವರೆಗೆ ಇದ್ದರೆ ಯಾವುದೇ ಲೆಕ್ಕಖಾತೆ ಇಡುವ ಅಗತ್ಯವಿಲ್ಲ.
4. ಒಂದು ಮತ್ತು ಎರಡನೇ ವರ್ಗದ ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಪರೋಕ್ಷ ವರ್ಗಾವಣೆಯಲ್ಲಿ ವಿನಾಯ್ತಿ ನೀಡಲಾಗಿದೆ.
5. ವೈಯಕ್ತಿಕ ವಿಮಾ ಪ್ರತಿನಿಧಿಗಳು ಅವರ ವಾರ್ಷಿಕ ಆದಾಯ ನಿಗದಿತ ಮಿತಿಗಿಂತ ಹೆಚ್ಚಾಗಿಲ್ಲ ಎಂದು ಪ್ರಮಾಣೀಕರಣ ನೀಡಿದರೆ ಅವರಿಗೆ 5% ಟಿಡಿಎಸ್ ಕಡಿತ ಇರುವುದಿಲ್ಲ.
6. ಕಲ್ಪಿತ ಆದಾಯ ಯೋಜನೆಯಲ್ಲಿ ವೃತ್ತಿಪರರು ಪೂರ್ವಭಾವಿ ತೆರಿಗೆಯನ್ನು ನಾಲ್ಕು ಕಂತುಗಳ ಬದಲು ಮಾರ್ಚ್ ತಿಂಗಳಲ್ಲಿ ಒಂದೆ ಕಂತಿನಲ್ಲಿ ಸಂದಾಯ ಮಾಡಬಹುದು.
7. ಆದಾಯ ತೆರಿಗೆ ಪಾವತಿ ಮರು ಪರಿಶೀಲನಾ ಅವಧಿಯನ್ನು 12 ತಿಂಗಳಿಗೆ ಇಳಿಸಲಾಗಿದೆ. 2019–20ರ ಸಾಲಿನ ನಂತರ ವಿವರವನ್ನು ಪೂರ್ತಿಯಾಗಿ ಪರಿಶೀಲಿಸುವ ಅವಧಿಯನ್ನು 12 ತಿಂಗಳಿಗೆ ಮಿತಿಗೊಳಿಸಲಾಗಿದೆ.

(70ನೇ ಪುಟಕ್ಕೆ)

# ಉಪಗ್ರಹ ಉಡಾವಣೆ; ಇಸ್ರೋ ವಿಕ್ರಮ ಸಾಧನೆ




ಪಿಎಸ್‌ಎಲ್‌ವಿ ವಾಹನ ಜೋಡಣೆಯ ವೇಳೆಯಲ್ಲಿ ಅದರ ಮೊದಲ ಹಂತದ ಕೆಳಭಾಗ

* ಬಿ. ಆರ್. ಗುರುಪ್ರಸಾದ್

ಒಂದೇ ಯಾನದಲ್ಲಿ 104 ಉಪಗ್ರಹಗಳನ್ನು ಕಕ್ಷೆಗೆ ಕೊಂಡೊಯ್ದ ಪಿಎಸ್‌ಎಲ್‌ವಿ : ಅಂತರಿಕ್ಷದಲ್ಲಿ ಭಾರತದ ಮತ್ತೊಂದು ಅಪೂರ್ವ ಸಾಧನೆ.

ತನ್ನ ಅನೇಕ ಸಾಧನೆಗಳಿಂದಾಗಿ ಇಂದು ಅಂತರಿಕ್ಷ ಕ್ಷೇತ್ರದಲ್ಲಿ ಜಗತ್ತಿನ ಕೆಲವೇ ಪ್ರಮುಖ ರಾಷ್ಟ್ರಗಳ ಪೈಕಿ ಭಾರತ ಒಂದಾಗಿ ಪರಿಗಣಿಸಲ್ಪಟ್ಟಿದೆ. ಭಾರತದ ಇತ್ತೀಚಿನ ಒಂದು ಅಂತರಿಕ್ಷ ಸಾಧನೆ ಹೊರ ಜಗತ್ತಿನ ಗಮನವನ್ನು ಪ್ರಮುಖವಾಗಿ ಸೆಳೆಯಿತು. 'ಕಾರ್ಯಾಶ್ವ (ವರ್ಕ್ ಹಾರ್ಸ್)' ಎಂಬ ಖ್ಯಾತಿಯನ್ನು ಪಡೆದ ತನ್ನ ಪಿಎಸ್‌ಎಲ್‌ವಿ ಉಡಾವಣಾ ರಾಕೆಟ್ ನ ಯಾನದ ನಡುವೆ 104 ಉಪಗ್ರಹಗಳನ್ನು 2017 ರ ಫೆಬ್ರವರಿ 15 ರಂದು ಉಡಾಯಿಸಿದ್ದೇ ಆ ಸಾಧನೆಯಾಗಿದೆ.

ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೋ' ಇದನ್ನು ಒಂದು ದಾಖಲೆಯೆಂದು ಹೇಳಿಕೊಳ್ಳದಿದ್ದರೂ ರಾಷ್ಟ್ರೀಯ ಮತ್ತು ಜಾಗತಿಕ ಮಾಧ್ಯಮಗಳು ಇದನ್ನು ಆ ರೀತಿಯಲ್ಲೇ ಅರ್ಥೈಸಿವೆ. ಈ ಸಂಬಂಧದಲ್ಲಿ ಬಹುತೇಕ ಅಂತಾರಾಷ್ಟ್ರೀಯ ಮಾಧ್ಯಮಗಳು ಭಾರತವನ್ನು ಶ್ಲಾಘಿಸಿದ್ದರೂ ಕೆಲವು ಈರ್ಷ್ಯೆಯಿಂದ ಕೂಡಿದ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ.

ಇದೇನೇ ಇದ್ದರೂ ಒಂದೆರಡಲ್ಲ, ತನ್ನ ಒಂದೇ ರಾಕೆಟ್ ಯಾನದ ನಡುವೆ 104 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾಯಿಸುವಂತಹ ಸಂಕೀರ್ಣವಾದ ತಾಂತ್ರಿಕ ಸಾಧನೆಯನ್ನು 'ಇಸ್ರೋ' ಮಾಡಿರುವುದು ಭಾರತೀಯರಿಗೆ ಹೆಮ್ಮೆಯ ವಿಷಯವೇ ಸರಿ. ಇದಕ್ಕೆ ಮೊದಲು ಉಡಾವಣಾ ರಾಕೆಟ್‌ನ ಯಾನವೊಂದರ ನಡುವೆ 37 ಉಪಗ್ರಹಗಳನ್ನು ರಷ್ಯಾ ಉಡಾಯಿಸಿತ್ತು. ಈಗ ಭಾರತ ಅದಕ್ಕೆ ಸುಮಾರು ಮೂರರಷ್ಟು ಉಪಗ್ರಹಗಳನ್ನು ತನ್ನ ರಾಕೆಟ್ಟೊಂದರ ಒಂದೇ ಯಾನದ ನಡುವೆ ಯಶಸ್ವಿಯಾಗಿ ಉಡಾಯಿಸಿದೆ.


104 ಉಪಗ್ರಹಗಳನ್ನು ಯಾನವೊಂದರ ನಡುವೆ ಕಕ್ಷೆಗೆ ಸೇರಿಸುವ ಮೂಲಕ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ಕಳೆದ ಫೆಬ್ರವರಿ 15 ರಂದು ಮತ್ತೊಮ್ಮೆ ಪರಿಚಯಿಸಿದ ಪಿಎಸ್‌ಎಲ್‌ವಿ (ಧೃವೀಯ ಉಪಗ್ರಹ ಉಡಾವಣಾ

> ತನ್ನ ಒಂದೇ ರಾಕೆಟ್ ಯಾನದ ನಡುವೆ 104 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾಯಿಸುವಂತಹ ಸಂಕೀರ್ಣವಾದ ತಾಂತ್ರಿಕ ಸಾಧನೆಯನ್ನು 'ಇಸ್ರೋ' ಮಾಡಿರುವುದು ಭಾರತೀಯರಿಗೆ ಹೆಮ್ಮೆಯ ವಿಷಯವೇ ಸರಿ.




ಪಿಎಸ್‌ಎಲ್‌ವಿ ಸಿ–37 ವಾಹನದ ಎರಡನೆಯ ಹಂತ

* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ. E-mail : gurubr@isro.gov.in



**ತನ್ನ ಸೌರ ಫಲಕಗಳನ್ನು ಹರಡಿಕೊಂಡಿರುವ ಕಾರ್ಟೊಸ್ಯಾಟ್ – 2 ಸರಣಿಯ ಉಪಗ್ರಹ**

ವಾಹನ) ಇಸ್ರೋ ಸಂಸ್ಥೆ ಯೋಜಿಸಿ, ರೂಪಿಸಿ, ನಿರ್ಮಿಸಿರುವ ಒಂದು ಉಪಗ್ರಹ ಉಡಾವಣಾ ವಾಹನ. 1993 ರ ಸೆಪ್ಟೆಂಬರ್ ನಿಂದ 2017 ಫೆಬ್ರವರಿಯ ವರೆಗೂ ಜರುಗಿರುವ ತನ್ನ ಮೂವತ್ತೊಂಭತ್ತು ಯಾನಗಳ ಪೈಕಿ ಮೊದಲನೆಯದನ್ನು ಬಿಟ್ಟರೆ ಆ ನಂತರ ಪಿ ಎಸ್ ಎಲ್ ವಿ ಮೂವತ್ತೆಂಟು ಬಾರಿ ಸತತವಾಗಿ ಯಶಸ್ಸನ್ನು ಕಂಡಿದೆ. ಈ ನಂಬಿಕಾರ್ಹತೆಯಿಂದಾಗಿಯೇ ಆ ವಾಹನವನ್ನು ಅನೇಕ ವಿದೇಶಿ ಅಂತರಿಕ್ಷ ಸಂಸ್ಥೆಗಳೂ ಅವಲಂಬಿಸುತ್ತಿವೆ.

ಫೆಬ್ರವರಿ 15ರಂದು ಶ್ರೀಹರಿಕೋಟಾದ ಸತೀಶ್ ಧವನ್ ಅಂತರಿಕ್ಷ ಕೇಂದ್ರದಿಂದ ಭೋರ್ಗರೆಯುತ್ತಾ ಮೇಲೇರಿದ ಪಿ ಎಸ್ ಎಲ್ ವಿ ಹೊತ್ತ 104 ಉಪಗ್ರಹಗಳ ಪೈಕಿ 101 ವಿದೇಶಿ ಉಪಗ್ರಹಗಳೇ ಆಗಿದ್ದವು. ಅವುಗಳಲ್ಲಿ 96 ಅಮೇರಿಕಾದವಾಗಿದ್ದರೆ ಉಳಿದ ಐದು ನೆದರ್ ಲ್ಯಾಂಡ್ಸ್, ಸ್ವೆಟ್ಸರ್ ಲ್ಯಾಂಡ್, ಕಝಕ್‌ಸ್ಥಾನ್, ಇಸ್ರೇಲ್ ಮತ್ತು ಯು ಎ ಇ ಗಳದಾಗಿದ್ದವು.

ಈ ವಿಷಯ ಜಾಗತಿಕ ಮಟ್ಟದಲ್ಲಿ ಪಿಎಸ್‌ಎಲ್‌ವಿ ಗಳಿಸಿರುವ ಖ್ಯಾತಿಯನ್ನು ಸೂಚಿಸುತ್ತದೆ. 1999 ಹಾಗೂ 2017ರ ನಡುವಿನ ಆವಧಿಯಲ್ಲಿ ಪಿ ಎಸ್ ಎಲ್ ವಿ ಅಮೇರಿಕ, ಫ್ರಾನ್ಸ್, ಬ್ರಿಟನ್, ಇವುಗಳನ್ನೂ ಒಳಗೊಂಡಂತೆ 23 ದೇಶಗಳಿಗೆ ಸೇರಿದ ಒಟ್ಟು 180 ಉಪಗ್ರಹಗಳನ್ನು ಕಕ್ಷೆಗೆ ಉಡಾಯಿಸಿದೆ.

ಹದಿನೈದು ಮಹಡಿಗಳಷ್ಟು ಎತ್ತರವಿರುವ ಪಿಎಸ್‌ಎಲ್‌ವಿ ಉಡಾವಣೆಯ ವೇಳೆಯಲ್ಲಿ 320 ಟನ್ ತೂಕವಿರುವ ದೈತ್ಯ ವಾಹನವಾಗಿದೆ. ಇದರ ಅಗಾಧತೆಯನ್ನು ಹತ್ತಿರದಿಂದ ಕಂಡಾಗ ಈ ವಾಹನವು ಗುರುತ್ವಾಕರ್ಷಣೆಯನ್ನು ಮೀರಿ ಗಗನಕ್ಕೇರುವುದು ಸಾಧ್ಯವಾದರೂ ಹೇಗೆ ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತದೆ. ಒಂದರ ಮೇಲೊಂದು ಜೋಡಿಸಲ್ಪಟ್ಟ ನಾಲ್ಕು ರಾಕೆಟ್ ಹಂತಗಳಿಂದ ಪಿಎಸ್‌ಎಲ್‌ವಿ ಯನ್ನು ರೂಪಿಸಲಾಗಿದೆ. ಆ ಪೈಕಿ ಮೊದಲ ಮತ್ತು ಮೂರನೆಯ ಹಂತಗಳು ಹಾಗೂ ಮೊದಲ ಹಂತವನ್ನು ಸುತ್ತುವರೆದಿರುವ ಆರು 'ಸ್ಟ್ರಾಪ್ ಆನ್' ಗಳು ಘನರೂಪದಲ್ಲಿರುವ ರಾಕೆಟ್ ನೋದನಕಾರಿಗಳನ್ನು (ಇಂಧನ–ದಹನಾನುಕೂಲಿಗಳ ಜೋಡಿ) ಉರಿಸುತ್ತವೆ. ಆದರೆ ಆ ವಾಹನದ ಎರಡನೇ ಹಾಗೂ ನಾಲ್ಕನೇ ಹಂತಗಳು ದ್ರವರೂಪದಲ್ಲಿರುವ ನೋದನಕಾರಿಗಳನ್ನು ಉರಿಸುತ್ತವೆ.

ಕಾರ್ಯ ಮುಗಿಸಿದ ತನ್ನ ರಾಕೆಟ್ ಹಂತಗಳನ್ನು ಬೇರ್ಪಡಿಸಿ 'ಕೊಡವಿಕೊಂಡು' ಆ ಮೂಲಕ ಕಾಲಕಳೆದಂತೆ ಹಗುರವಾಗುವ ಉಡಾವಣಾ ವಾಹನವೊಂದು ತಾನು ಹೊತ್ತ ಉಪಗ್ರಹಗಳನ್ನು ದಕ್ಷವಾಗಿ ಕಕ್ಷೆಗೆ ಸೇರಿಸಬಲ್ಲದು.

ಪಿಎಸ್‌ಎಲ್‌ವಿ ಯೂ ಇದಕ್ಕೆ ಹೊರತಲ್ಲ. ಪಿಎಸ್‌ಎಲ್‌ವಿ ಯ ಯಾನ ಪ್ರಾರಂಭವಾದಾಗಿನಿಂದ ಹಿಡಿದು ಅದು ಯಶಸ್ವಿಯಾಗಿ ಮುಗಿಯುವವರೆಗೂ ಆ ವಾಹನವನ್ನು ಅತ್ಯಂತ ಸಂಕೀರ್ಣವಾದ ತತ್ರಾಂಶಗಳನ್ನು (ಸಾಫ್ಟ್‌ವೇರ್) ಹೊಂದಿರುವ ಅದರ ಎಲಕ್ಟ್ರಾನಿಕ್ ಮೆದುಳು ನಿಯಂತ್ರಿಸುತ್ತದೆ.


ಕಳೆದ ಫೆಬ್ರವರಿ 15ರ ಉಡಾವಣೆಯ ಹಿಂದಿನ ಕೆಲ ಕ್ಷಣಗಳ ವರೆಗೂ ಶ್ರೀಹರಿಕೋಟಾ ದ್ವೀಪದಲ್ಲಿರುವ ಸತೀಶ್ ಧವನ್ ಅಂತರಿಕ್ಷ ಕೇಂದ್ರದಲ್ಲಿನ ಮೊದಲ ಉಡಾವಣಾ ವೇದಿಕೆಯ ಮೇಲೆ ಒಂದು ಬೃಹತ್ ಮೂರ್ತಿಯಂತೆ ಮೇಲೆ ಸ್ಥಿರವಾಗಿ ನಿಂತಿದ್ದ ಪಿಎಸ್‌ಎಲ್‌ವಿ ನಿಗದಿಯಾದ ಸಮಯಕ್ಕೆ ಅಂದರೆ ಬೆಳಗ್ಗೆ 9:28ಕ್ಕೆ ಸರಿಯಾಗಿ ಭೋರ್ಗರೆಯುತ್ತಾ ಮೇಲೇರಿತು. ನಂತರ ಅದರ ಯಾನಕ್ಕೆ ಸಂಬಂಧಿಸಿದ ಪ್ರತಿಯೊಂದು ಕಾರ್ಯವೂ ಸುಸೂತ್ರವಾಗಿ ನಡೆಯಿತು.

ಮೊದಲಿಗೆ ಅದರ ದೈತ್ಯ ಮೊದಲ ಹಂತ ಹಾಗೂ ಉಡಾವಣೆಯ ವೇಳೆಯಲ್ಲಿ ಪಿ ಎಸ್ ಎಲ್ ವಿ ಗೆ ಹೆಚ್ಚುವರಿ ನೂಕುಬಲವನ್ನು (ಥ್ರಸ್ಟ್) ಒದಗಿಸುವ ಸಲುವಾಗಿ ಮೊದಲ ಹಂತದ ಸುತ್ತ ಅಳವಡಿಸಲಾಗಿದ್ದ ಆರು 'ಸ್ಟ್ರಾಪ್ ಆನ್' ರಾಕೆಟ್ಟುಗಳ ಪೈಕಿ ನಾಲ್ಕು ಕಾರ್ಯಾರಂಭ ಮಾಡಿದವು. ನಂತರ ಆ ರಾಕೆಟ್ ವಾಹನವು ಕ್ಷಣ ಕಳೆದಂತೆ ತನ್ನ ವೇಗವನ್ನು ವೃದ್ಧಿಸಿಕೊಳ್ಳುತ್ತಾ ಮುಂದೆ ಸಾಗಿದಂತೆ ಮತ್ತೆರಡು 'ಸ್ಟ್ರಾಪ್ ಆನ್' ಗಳು ಕಾರ್ಯಾರಂಭ ಮಾಡಿದವು. ಉಡಾವಣೆಯಾದ ನಂತರದ 109 ಸೆಕೆಂಡುಗಳು ಕಳೆಯುವ ಹೊತ್ತಿಗೆ ಪಿಎಸ್‌ಎಲ್‌ವಿ ಯ ಮೊದಲ ಹಂತ ಹಾಗೂ 'ಸ್ಟ್ರಾಪ್ ಆನ್' ಗಳೆಲ್ಲವೂ ಕಳಚಿ ಬಿದ್ದಿದ್ದವು.

ಹೀಗೆ ಸಾಕಷ್ಟು ಹಗುರವಾದ ಪಿಎಸ್‌ಎಲ್‌ವಿ ಯ ಎರಡನೆಯ ಹಂತ ಮರುಕ್ಷಣವೇ ಕಾರ್ಯಾರಂಭ ಮಾಡಿತು. ಇದರಿಂದಾಗಿ ಮತ್ತಷ್ಟು ವೇಗವನ್ನು ಸಾಧಿಸಿದ ಆ ವಾಹನವು ಇನ್ನೂ ಮೇಲೇರಿ ಭೂವಾತಾವರಣದ ಮೇಲ್ಭಾಗವನ್ನು ತಲುಪಿತು.

ಪಿಎಸ್‌ಎಲ್‌ವಿ ಯ ಶಿರದ ಮೇಲೆ ಜೋಡಿಸಲ್ಪಟ್ಟಿದ್ದ 104 ಉಪಗ್ರಹಗಳನ್ನು ಭೂವಾತಾವರಣದಿಂದ ರಕ್ಷಿಸುವ ಸಲುವಾಗಿ ಅವುಗಳನ್ನು ಆವರಿಸಿದ್ದ 'ಶಾಖ ಕವಚ'ದ ಅಗತ್ಯವಿಲ್ಲವಾಗಿ ಅದೂ ಸಹ ಪಿಎಸ್‌ಎಲ್‌ವಿ ಯಿಂದ ಆ ವೇಳೆಯಲ್ಲಿ ಬೇರ್ಪಟ್ಟಿತು.

ಕೆಲಕಾಲದ ನಂತರ ಎರಡನೇ ಹಂತದ ಕಾರ್ಯವೂ ಮುಗಿಯಲಾಗಿ ಆ ಹಂತವೂ ಪಿಎಸ್‌ಎಲ್‌ವಿ ಯಿಂದ ಬೇರ್ಪಟ್ಟಿತು. ಅಲ್ಲಿಂದ ಮುಂದೆ ಮೂರನೆಯ ಹಂತವು ಕಾರ್ಯಾರಂಭಿಸಿ ತನ್ನ ಕೆಲಸವಾದ ನಂತರ ಅದೂ ಸಹ ಬೇರ್ಪಟ್ಟಿತು. ಕೊನೆಯದಾಗಿ ಕಾರ್ಯಾರಂಭ ಮಾಡಿದ ನಾಲ್ಕನೆಯ ಹಂತವು ತನ್ನ ಕಾರ್ಯವನ್ನು ಸ್ಥಗಿತಗೊಳಿಸುವ ಹೊತ್ತಿಗೆ ಉಡಾವಣೆಯಾಗಿ ಹತ್ತಿರ ಹತ್ತಿರ ಹದಿನೇಳು



**ಪಿಎಸ್‌ಎಲ್‌ವಿ ಸಿ – 37 ಹಾರಲು ಸನ್ನದ್ಧ**



ಪಿಎಸ್‌ಎಲ್‌ವಿ ಸಿ – 37 ಚಿಮ್ಮುತ್ತಿರುವುದು

ನಿಮಿಷಗಳು ಕಳೆದಿದ್ದವು. ಆ ವೇಳೆಗಾಗಲೇ ಪಿಸ್‌ಎಸ್‌ಎಲ್‌ವಿ ಯ ನಾಲ್ಕನೆಯ ಹಂತ ಹಾಗೂ ಅದರ ಮೇಲೆ ಜೋಡಿಸಲ್ಪಟ್ಟಿದ್ದ 104 ಉಪಗ್ರಹಗಳು ಗಂಟೆಗೆ ಸುಮಾರು ಇಪ್ಪತ್ತೇಳು ಸಾವಿರ ಕಿಲೋಮೀಟರ್‌ಗಳ ವೇಗವನ್ನು ಸಾಧಿಸಿದ್ದವು. ಹೀಗೆ ಪಿಎಸ್‌ಎಲ್‌ವಿಯ ನಾಲ್ಕನೆಯ ಹಂತ ಪೂರ್ವಯೋಜಿತವಾದ 505 ಕಿಲೋಮೀಟರ್ ಎತ್ತರದ ಕಕ್ಷೆಯನ್ನು ತಲುಪಿದ ನಂತರ ಅದಕ್ಕೆ ಜೋಡಿಸಲ್ಪಟ್ಟಿದ್ದ 104 ಉಪಗ್ರಹಗಳು ಒಂದಾದ ಮೇಲೊಂದರಂತೆ ಬೇರ್ಪಡಲಾರಂಭಿಸಿದವು.

ಇದರಲ್ಲಿ ಮೊದಲಿಗೆ ಆ ಯಾನದ ಪ್ರಮುಖ ಪ್ರಯಾಣಿಕನಾಗಿದ್ದ ಭಾರತದ 'ಕಾರ್ಟೋಸ್ಯಾಟ್–2' ಸರಣಿಯ ಉಪಗ್ರಹ ಬೇರ್ಪಟ್ಟಿತು. ಕೆಲಕ್ಷಣಗಳಲ್ಲೇ ಭಾರತದ ಮತ್ತೆರಡು ಪುಟ್ಟ ಉಪಗ್ರಹಗಳು ಬೇರ್ಪಟ್ಟವು. ಅದಾದಂತೆ 101 ವಿದೇಶಿ ಉಪಗ್ರಹಗಳನ್ನು ಬೇರ್ಪಡಿಸುವ ಕಾರ್ಯ ಆರಂಭವಾಗಿ ಯಾವ ಅಡೆ ತಡೆಯೂ ಇಲ್ಲದೇ ಮುನ್ನಡೆಯಲಾರಂಭಿಸಿತು.

ಪಿಎಸ್‌ಎಲ್‌ವಿ ಯ 39 ನೇ ಯಾನ ಈ ರೀತಿ ಸುಸೂತ್ರವಾಗಿ ನಡೆಯುತ್ತಿರುವ ದೃಶ್ಯವನ್ನು ಪಿಎಸ್‌ಎಲ್‌ವಿ ಯ ನಾಲ್ಕನೆಯ ಹಂತದಲ್ಲಿ ಅಳವಡಿಸಲ್ಪಟ್ಟಿದ್ದ ಐದು ಕ್ಯಾಮರಾಗಳು ಅದ್ಭುತವಾಗಿ ಸೆರೆಹಿಡಿದು ನಂತರ ಅದನ್ನು ರೇಡಿಯೊ ತರಂಗಗಳ ರೂಪದಲ್ಲಿ ಭೂಮಿಗೆ ರವಾನಿಸಿದವು. ಇಸ್ರೋ ಬಿಡುಗಡೆ ಮಾಡಿರುವ ಆ ವೀಡಿಯೊ ಇಂದು ಅಂತರ್ ಜಾಲದ ಪ್ರತಿಷ್ಠಿತ ಸುದ್ದಿ ತಾಣಗಳಲ್ಲಿ ಲಭ್ಯವಿದ್ದು ಜಾಗತಿಕ ಮಟ್ಟದಲ್ಲಿ ಜನಪ್ರಿಯವಾಗಿದೆ.

ಇತ್ತೀಚಿನ ಪಿಎಸ್‌ಎಲ್‌ವಿ ಯಲ್ಲಿ ಯಶಸ್ವಿಯಾಗಿ ಕಕ್ಷೆಗೆ ತೆರಳಿದ 104 ಉಪಗ್ರಹಗಳಲ್ಲಿ ಅತ್ಯಂತ ಪ್ರಮುಖವಾದದ್ದು ಕಾರ್ಟೋಸ್ಯಾಟ್–2 ಸರಣಿಯ ಉಪಗ್ರಹ. 714 ಕಿಲೋಗ್ರಾಂ ತೂಕದ ಈ ಉಪಗ್ರಹವು ನಿಖರವಾದ ಭೂಪಟಗಳ ತಯಾರಿಕೆಗೆ ಅಗತ್ಯವಾದ ಮಾಹಿತಿಯನ್ನು ಚಿತ್ರರೂಪದಲ್ಲಿ ಒದಗಿಸುತ್ತದೆ.

ಜೊತೆಗೇ ಸೂಕ್ಷ್ಮ ದೃಷ್ಟಿಯುಳ್ಳ ಈ ಉಪಗ್ರಹವು ಕಳುಹಿಸುವ ಚಿತ್ರಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳ ಕ್ರಮಬದ್ಧವಾದ ಅಭಿವೃದ್ಧಿ, ಕರಾವಳಿ ಪ್ರದೇಶದ ಬಳಕೆ ಹಾಗೂ ಅದರ ನಿಯಂತ್ರಣ, ರಸ್ತೆಯ ಜಾಲದ ಗಮನಿಸುವಿಕೆ, ಜಲ ವಿತರಣೆ, ಈ ಬಗೆಯ ಅನೇಕ ಅಭಿವೃದ್ಧಿ ಕಾರ್ಯಗಳಿಗಾಗಿ ಮತ್ತು ಭೂಮಿಯ ಬಳಕೆಯ ನಕ್ಷೆಗಳ ತಯಾರಿಕೆ, ಭೌಗೋಳಿಕ ಹಾಗೂ ಮಾನವ ನಿರ್ಮಿತ ಸ್ವರೂಪಗಳಲ್ಲಿನ ಬದಲಾವಣೆಯ ಗಮನಿಸುವಿಕೆ, ಹೀಗೆ ಭೂ ಮಾಹಿತಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆಗಳಿಗೆ ಸಂಬಂಧಿಸಿದ ಅನ್ವಯೀಕರಣ ಕಾರ್ಯಗಳಲ್ಲಿ ಬಳಸಿಕೊಳ್ಳಬಹುದು.

ಪಿಎಸ್‌ಎಸ್‌ಎಲ್‌ವಿ ಯಲ್ಲಿ ಈ ಉಪಗ್ರಹ ತಲುಪಿದ ಕಕ್ಷೆಯು ಧೃವಪ್ರದೇಶಗಳ ಮೇಲೆ ಉತ್ತರ ದಕ್ಷಿಣಾಭಿಮುಖವಾಗಿ ಹಾದು ಹೋಗುವುದರಿಂದ ಈ ಉಪಗ್ರಹವು ಬಹುಮಟ್ಟಿಗೆ ಇಡೀ ಜಗತ್ತನ್ನು ವೀಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ.

ಕೇವಲ 95 ನಿಮಿಷಗಳಿಗೊಮ್ಮೆ ಭೂಮಿಯನ್ನೊಮ್ಮೆ ಸುತ್ತುವ ಸಾಮರ್ಥ್ಯ ಈ ಉಪಗ್ರಹಕ್ಕಿದೆ. ಈ ಉಪಗ್ರಹದೊಂದಿಗೇ ಕಕ್ಷೆಗೆ ತೆರಳಿದ ಐ ಎನ್ ಎಸ್–1ಎ ಮತ್ತು 1ಬಿ ಎಂಬ ಭಾರತದ ಇನ್ನೂ ಎರಡು ಉಪಗ್ರಹಗಳು, ಅಷ್ಟೇಕೆ, ಪಿಎಸ್‌ಎಲ್‌ವಿ ಯಲ್ಲಿ ಇತ್ತೀಚೆಗೆ ತೆರಳಿದ ಇತರ 101 ಉಪಗ್ರಹಗಳೂ ಇದೇ ಕಕ್ಷೆಯಲ್ಲಿ ಭೂಮಿಯನ್ನು ಸುತ್ತುತ್ತಿವೆ.

ಐಎನ್‌ಎಸ್–1ಎ ಮತ್ತು 1ಬಿ ಉಪಗ್ರಹಗಳನ್ನು ಇಸ್ರೋ ಅಭಿವೃದ್ಧಿಪಡಿಸಿರುವ ಕೆಲವು ಅಂತರಿಕ್ಷ ತಂತ್ರಜ್ಞಾನಗಳನ್ನು ಪರೀಕ್ಷಿಸುವುದಕ್ಕಾಗಿ ಹಾರಿಬಿಡಲಾಗಿದೆ. ಒಂದರಿಂದ ಹತ್ತು ಕಿಲೋಗ್ರಾಂ ನಷ್ಟು ಉಡಾವಣಾ ತೂಕವಿರುವ ಇಂತಹ ಉಪಗ್ರಹಗಳಿಗೆ ನ್ಯಾನೋ ಉಪಗ್ರಹಗಳೆಂದು ಹೆಸರು. ಕಾರ್ಟೋಸ್ಯಾಟ್–2 ಸರಣಿಯ ಉಪಗ್ರಹವೊಂದನ್ನು ಬಿಟ್ಟರೆ ಪಿಎಸ್‌ಎಲ್‌ವಿ ಯಲ್ಲಿ ಕಕ್ಷೆಗೆ ತೆರಳಿದ ಉಳಿದ ಇತರ ಎಲ್ಲ ಉಪಗ್ರಹಗಳೂ ನ್ಯಾನೋ ಉಪಗ್ರಹಗಳೇ ಆಗಿವೆ.ತನ್ನ ನಂಬಿಕಾರ್ಹತೆ ಹಾಗೂ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ಕಕ್ಷೆಗಳಿಗೆ ಉಪಗ್ರಹಗಳನ್ನು ಉಡಾಯಿಸುವ ಸಾಮರ್ಥ್ಯದಿಂದಾಗಿ ಪಿಎಸ್‌ಎಲ್‌ವಿಗೆ ಭಾರತದ ಕಾರ್ಯಾಶ್ವ ಉಡಾವಣಾ ವಾಹನ ಎಂಬ ಹೆಸರು ಬಂದಿದೆ.



ಗುರಿಯತ್ತ ಮುನ್ನುಗ್ಗುತ್ತಿರುವ ಪಿಎಸ್‌ಎಲ್‌ವಿ ನೌಕೆ


ಈ ವಾಹನದ ನಿರ್ಮಾಣದಲ್ಲಿ ಭಾರತದ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದಲ್ಲಿರುವ ಕೈಗಾರಿಕಾ ಸಂಸ್ಥೆಗಳು ಕೊಡುಗೆಯನ್ನು ನೀಡಿವೆ. ಆ ಪೈಕಿ ಎಚ್‌ಎಎಲ್, ಲಾರ್ಸನ್ ಅಂಡ್ ಟ್ಯೂಬ್ರೋ, ವಾಲ್ ಚಂದ್ ನಗರ್ ಇಂಡಸ್ಟ್ರೀಸ್, ಗೋದ್ರೇಜ್ ಅಂಡ್ ಬಾಯ್ಸ್, ಎಮ್‌ಟಿಎಆರ್, ಮುಂತಾದ ಕೈಗಾರಿಕಾ ಸಂಸ್ಥೆಗಳೂ ಸೇರಿವೆ.

ಇದು ನಮ್ಮ ಅಂತರಿಕ್ಷ ಕಾರ್ಯಕ್ರಮವು ದೇಶದ ಆರ್ಥಿಕ ಮುನ್ನಡೆಗೂ ಕಾರಣವಾಗಿರುವುದರ ಸೂಚಕವಾಗಿದೆ.

ಒಟ್ಟಿನಲ್ಲಿ ಇತ್ತೀಚೆಗೆ ಜರುಗಿದ ಪಿಎಸ್‌ಎಲ್‌ವಿಯ 39 ನೇ ಯಾನದ ಯಶಸ್ಸು ಉಡಾವಣಾ ರಾಕೆಟ್ ಮತ್ತು ಉಪಗ್ರಹಗಳು, ಈ ಎರಡು ಪ್ರಮುಖ ಕ್ಷೇತ್ರಗಳಲ್ಲೂ ಭಾರತದ ಸಾಮರ್ಥ್ಯ ಏನೆಂಬುದನ್ನು ಮತ್ತೊಮ್ಮೆ ಹೊರಜಗತ್ತಿಗೆ ಮನದಟ್ಟು ಮಾಡಿಕೊಡುವುದರಲ್ಲಿ ಯಶಸ್ವಿಯಾಗಿದೆ. ❑

# ಅನ್ನದಂಗಳದಲ್ಲಿ ಅರುಣೋದಯ

* ಪ್ರೊ. ಶಿವಾನಂದ ಬಿ. ಹೊಸಮನಿ



e- National Agriculture Market (NAM)

> ಮಧ್ಯವರ್ತಿಗಳ ಹಾವಳಿಯಿಂದಾಗಿ ಪ್ರಸ್ತುತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳಿಗೆ ನೈಜ ಬೆಲೆ ಸಿಗುತ್ತಿಲ್ಲ. ಮಧ್ಯವರ್ತಿಗಳ ಸಮಸ್ಯೆ ನಿವಾರಿಸುವುದೇ ಸದ್ಯಕ್ಕಿರುವ ದೊಡ್ಡ ಸವಾಲು. ಮಧ್ಯವರ್ತಿಗಳ ಸಮಸ್ಯೆಗೆ ಇತಿಶ್ರೀ ಹಾಡಿ, ದೇಶದಾದ್ಯಂತ ಕೃಷಿ ಉತ್ಪನ್ನಗಳಿಗೆ ಒಂದೇ ಬೆಲೆ ದೊರಕಿಸಿಕೊಡುವುದೇ ಇ–ನಾಮ್ ವೇದಿಕೆಯ ಉದ್ದೇಶವಾಗಿದೆ.

ಕೇಂದ್ರ ಸರ್ಕಾರದ 2017–18 ಸಾಲಿನ ಬಜೆಟ್ ಕೃಷಿಕರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ರೈತರು ಕೃಷಿಗಾಗಿ ಮಳೆಯನ್ನೇ ಆಶ್ರಯಿಸಿದ್ದಾರೆ. ಮಳೆ ಕೈ ಕೊಟ್ಟರೆ ಅಥವಾ ಸಕಾಲದಲ್ಲಿ ಮಳೆ ಆಗದಿದ್ದರೆ ರೈತ ಕಂಗಾಲಾಗುತ್ತಾನೆ. ದುಡಿಯುವ ಯೋಗಿಗೆ ಎಲ್ಲ ರೀತಿಯಲ್ಲಿ ನೆರವು ಕಲ್ಪಿಸಲು ಸರ್ಕಾರ ವಿವಿಧ ಕ್ರಮಗಳನ್ನು ಪ್ರಕಟಿಸಿದೆ.

ದೇಶದ ಬೆನ್ನೆಲುಬು ಆಗಿರುವ ರೈತರ ನೆರವಿಗೆ ಧಾವಿಸಿರುವ ಕೇಂದ್ರ ವಿತ್ತ ಸಚಿವರು ಮುಂದಿನ 5 ವರ್ಷಗಳಲ್ಲಿ ಕೃಷಿಕರ ಉತ್ಪಾದನೆ ದ್ವಿಗುಣಗೊಳಿಸುವ ಕ್ರಮಕ್ಕೆ ಮುಂದಾಗಿದ್ದಾರೆ. ಅಲ್ಲದೇ ಕೃಷಿ ನೀರಾವರಿ ಸಾಲಕ್ಕಾಗಿ ರೂ.10 ಸಾವಿರ ಕೋಟಿ ನಿಗದಿಗೊಳಿಸಿದ್ದು, ಬರ ನಿವಾರಣೆಗಾಗಿ ರೂ.5 ಲಕ್ಷ ಕೃಷಿ ಹೊಂಡಗಳ ನಿರ್ಮಾಣಕ್ಕೆ ಒತ್ತು ನೀಡಿದ್ದಾರೆ.

### ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ

ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ನೀಡುವ ಮೂಲಕ ರೈತರಿಗೆ ನೆರವಾಗುವ ಹಿನ್ನೆಲೆಯಲ್ಲಿ ಗುತ್ತಿಗೆ ಆಧರಿತ ಕೃಷಿಗಾಗಿ ರೂಪಿಸಿರುವ ಮಾದರಿ ಕಾನೂನಿನ ಸುತ್ತೋಲೆಯನ್ನು ಎಲ್ಲ ರಾಜ್ಯಗಳಿಗೂ ಕಳುಹಿಸಿಕೊಡುವುದಾಗಿ ತಿಳಿಸಲಾಗಿದೆ. ಮಾತ್ರವಲ್ಲ, ಈ ಹಿಂದೆ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ವ್ಯಾಪ್ತಿಯಲ್ಲಿ ಎಲೆಕ್ಟ್ರಾನಿಕ್ ನ್ಯಾಷನಲ್ ಅಗ್ರಿಕಲ್ಚರ್ ಮಾರ್ಕೆಟ್ (ಇ–ನಾಮ್) ವೇದಿಕೆ ಸ್ಥಾಪಿಸಲು ಆಸಕ್ತಿ ತೋರಿದ್ದು, ಅದನ್ನು ಈ ಹಂತದಲ್ಲಿ ಸ್ಥಾಪಿಸಲು ಒತ್ತು ನೀಡುತ್ತಿದೆ.

'ದೇಶದಲ್ಲಿ ಎಪಿಎಂಸಿ ಮಾರುಕಟ್ಟೆ ವ್ಯಾಪ್ತಿಯಲ್ಲಿ ಪ್ರಸ್ತುತ 250 'ಇ–ನಾಮ್ ಮಾರುಕಟ್ಟೆಗಳಿದ್ದು, ಅದನ್ನು 585 ಮಾರುಕಟ್ಟೆಗಳಿಗೆ ಹೆಚ್ಚಿಸಲಾಗುತ್ತಿದೆ' ಎಂದು ಹಣಕಾಸು ಸಚಿವರು, ಈ ಬಾರಿಯ ತಮ್ಮ ಬಜೆಟ್ ಭಾಷಣದಲ್ಲಿ ಪ್ರಕಟಿಸಿದರು. ಪ್ರತಿ ಇ–ನಾಮ್ ಮಾರುಕಟ್ಟೆಯಲ್ಲಿ ರೂ. 75 ಲಕ್ಷದವರೆಗೂ ವಹಿವಾಟು ನಡೆಸುವ ಗಡಿಯನ್ನು ನಿಗದಿಪಡಿಸಿರುವುದಾಗಿ ಅವರು ತಿಳಿಸಿದರು. ಈ ಹಣದಲ್ಲಿ ಉತ್ಪನ್ನಗಳ ಶುದ್ಧೀಕರಣ (ಕ್ಲೀನಿಂಗ್), ಗ್ರಾತ್ರಾನುಸಾರ ವಿಂಗಡನೆ (ಗ್ರೇಡಿಂಗ್) ಮತ್ತು ಪೊಟ್ಟಣ (ಪ್ಯಾಕೇಜಿಂಗ್) ಕಟ್ಟುವ ಸೌಲಭ್ಯ ಅಳವಡಿಕೆಗೆ ಬಳಸಬಹುದು ಎಂದು ತಿಳಿಸಿದ್ದರು. 2016ರಲ್ಲಿ ಆರಂಭವಾದ ಈ ಇ–ನಾಮ್ ವೇದಿಕೆಯನ್ನು "ಪರಿವರ್ತನೆಯ ರೂವಾರಿ" ಎಂದೇ ಬಿಂಬಿಸಲಾಗಿದೆ.

### ಮಧ್ಯವರ್ತಿಗಳಿಗೆ ಕಡಿವಾಣ

ಮಧ್ಯವರ್ತಿಗಳ ಹಾವಳಿಯಿಂದಾಗಿ ಪ್ರಸ್ತುತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳಿಗೆ ನೈಜ ಬೆಲೆ ಸಿಗುತ್ತಿಲ್ಲ. ಮಧ್ಯವರ್ತಿಗಳ ಸಮಸ್ಯೆನಿವಾರಿಸುವುದೇ ಸದ್ಯಕ್ಕಿರುವ ದೊಡ್ಡ ಸವಾಲು. ಮಧ್ಯವರ್ತಿಗಳ ಸಮಸ್ಯೆಗೆ ಇತಿಶ್ರೀ ಹಾಡಿ, ದೇಶದಾದ್ಯಂತ ಕೃಷಿ ಉತ್ಪನ್ನಗಳಿಗೆ ಒಂದೇ ಬೆಲೆ ದೊರಕಿಸಿಕೊಡುವುದೇ ಇ–ನಾಮ್ ಯೋಜನೆಯ ಉದ್ದೇಶವಾಗಿದೆ. ಇ–ನಾಮ್, ಖರೀದಿದಾರರಿಗೆ ಪ್ರಸ್ತುತವಿರುವ ಮಂಡಿಗಳ ಜತೆಗೆ ವ್ಯಾಪಾರ ವಹಿವಾಟು ಸುಲಭಗೊಳಿಸುವ ಜತೆಗೆ, ಹೊರ ರಾಜ್ಯದಲ್ಲಿರುವ ವ್ಯಾಪಾರಸ್ಥರಿಗೂ ಸ್ಥಳೀಯಮಟ್ಟದ ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುತ್ತದೆ.

ಎಂಟು ರಾಜ್ಯಗಳ 21 ಮಂಡಿಗಳಿಗೆ ಒಂದಕ್ಕೊಂದು ಸಂಪರ್ಕಕಲ್ಪಿಸುವುದು ಇ–ನಾಮ್ ಯೋಜನೆಯ ಉದ್ದೇಶ. ಅದರಂತೆ ಉತ್ತರ ಪ್ರದೇಶದಲ್ಲಿ 6, ಗುಜರಾತ್‌ನಲ್ಲಿ 3, ತೆಲಂಗಾಣ 5, ರಾಜಸ್ತಾನ, ಮಧ್ಯಪ್ರದೇಶ, ಜಾರ್ಖಂಡ್‌ನಲ್ಲಿ

* ಕುಲಪತಿಗಳು. ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. E-mail : hosamanisb@gmail.com

ತಲಾ ಒಂದೊಂದು ಹಾಗೂ ಹಿಮಾಚಲ ಪ್ರದೇಶ ಮತ್ತು ಹರಿಯಾಣದಲ್ಲಿ ತಲಾ 2 ಮಂಡಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಉದ್ದೇಶವಿದೆ. ಇವುಗಳ ನಡುವೆ ಕೃಷಿ ಕ್ಷೇತ್ರಕ್ಕೆ ಹೊಂದಿಕೊಂಡಿರುವ ಕೆಲವು ಭಾಗಗಳನ್ನು ಮತ್ತೊಮ್ಮೆ ಗಮನಿಸಬೇಕಾದ ಅಗತ್ಯವಿದೆ. ರೈತರನ್ನು ಖರೀದಿದಾರ / ದಲ್ಲಾಳಿಗಳಿಂದ ದೂರ ಉಳಿಸುವ ಮೂಲಕ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತರುವ ಅವಶ್ಯಕತೆ ಇದೆ. ಈ ವಿಚಾರವನ್ನೇ ಗಮನದಲ್ಲಿಟ್ಟುಕೊಂಡು ಇತ್ತೀಚೆಗಿನ ಬಜೆಟ್ ಭಾಷಣದಲ್ಲಿ ಹಣಕಾಸು ಸಚಿವರು 'ಮಾರುಕಟ್ಟೆ ಸುಧಾರಣೆ' ಅಗತ್ಯವಾಗಿದ್ದು, ರಾಜ್ಯ ಸರ್ಕಾರಗಳು ಶೀಘ್ರಕೊಳೆಯುವಂತಹ ಹಣ್ಣು–ತರಕಾರಿಗಳನ್ನು ಎಪಿಎಂಸಿಯಿಂದ ಬೇರ್ಪಡಿಸಬೇಕೆಂಬ ತೀರ್ಮಾನ ಕೈಗೊಳ್ಳಬೇಕಿದೆ. ಇದರಿಂದ ರೈತರಿಗೆ ತಮ್ಮ ಉತ್ಪನ್ನಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಲು ಅವಕಾಶ ಲಭ್ಯವಾಗಲಿದೆ' ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಪ್ರಸ್ತಾಪಿಸಿರುವಂತೆ, ಹಣ್ಣು ಮತ್ತು ತರಕಾರಿ ಬೆಳೆಯುವ ರೈತರಿಗೆ ಉತ್ತಮ ಮಾರುಕಟ್ಟೆ ಒದಗಿಸುವ ಹಾಗೂ ಕೊಯ್ಲೋತ್ತರ ನಷ್ಟವನ್ನು ತಗ್ಗಿಸಬೇಕಾದರೆ, ಅಂಥ ರೈತರನ್ನು ಕೃಷಿ ಸಂಸ್ಕರಣಾ ಘಟಕಗಳೊಂದಿಗೆ ಸಂಪರ್ಕ ಕಲ್ಪಿಸಬೇಕು.

**ಸರ್ಕಾರದ ಇಲಾಖೆಗಳ ನೆರವು**

'ಪ್ರತಿ ಹನಿ ನೀರು, ಬೆಳೆ ಜೋರು' ಎಂಬ ಗುರಿಯೊಂದಿಗೆ ಕೃಷಿ ಸಮುದಾಯದ ಅಭಿವೃದ್ಧಿಗಾಗಿ ನಬಾರ್ಡ್ ಸಂಸ್ಥೆ 'ಸೂಕ್ಷ್ಮ ನೀರಾವರಿ'ಗಾಗಿ ಪ್ರತ್ಯೇಕ ಹಣ ತೆಗೆದಿಟ್ಟಿರು–ವುದಾಗಿ ಪ್ರಕಟಿಸಿದೆ. ಈ ಯೋಜನೆಗಾಗಿ ಸರ್ಕಾರ ರೂ. 5000 ಕೋಟಿ ವ್ಯಯಿಸುವುದಾಗಿ ತಿಳಿಸಿದೆ. ಹೈನೋದ್ಯಮ



ಅಭಿವೃದ್ಧಿಗಾಗಿ ಹೈನು ಉತ್ಪನ್ನಗಳ ಸಂಸ್ಕರಣಾ ಘಟಕಗಳಿಗೆ ಮೂಲ ಸೌಲಭ್ಯ ಕಲ್ಪಿಸಲು ರೂ 8 ಸಾವಿರ ಕೋಟಿಹಣಮೀಸಲಿಟ್ಟಿದೆ. ಪ್ರಸ್ತುತ ದೇಶದಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಹೈನೋದ್ಯಮದಲ್ಲಿ ಉತ್ತಮ ಪ್ರಗತಿ ಸಾಧಿಸಿವೆ. ಈ ಎಲ್ಲ ಬೆಳವಣಿಗೆಗಳ ನಡುವೆ ರೈತರು ವಿವಿಧ ಬ್ಯಾಂಕ್ ಮತ್ತು ಸಹಕಾರ ಸಂಘಗಳಿಂದ ಪಡೆದಿರುವ ಸಾಲವನ್ನು ಗಡುವಿನೊಳಗೆ ಮರುಪಾವತಿಸಿದರೆ, ಅಂಥವರಿಗೆ ಶೇ 3ರಷ್ಟು ಸಹಾಯಧನ ನೀಡುವುದಾಗಿ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್ ನಲ್ಲಿ ಪ್ರಕಟಿಸಿದೆ.ಕಳೆದ ಆರ್ಥಿಕ ವರ್ಷದಲ್ಲಿ ಕೃಷಿ ಕ್ಷೇತ್ರದಲ್ಲಿ ಶೇ 4.1ರಷ್ಟು ಪ್ರಗತಿ ಸಾಧಿಸಿದೆ.

**ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ**

ರೈತರಿಗೆ ಪ್ರತಿ ಹಂತದಲ್ಲಿ ನೆರವಾಗುವ ದೃಷ್ಟಿಯಿಂದ ಕೇಂದ್ರ ಸರ್ಕಾರ "ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಎಂಬ ಹೊಸ ಬೆಳೆ ವಿಮೆಯನ್ನು ಕಳೆದ ವರ್ಷ ಜಾರಿಗೆ ತಂದಿತ್ತು. ಪ್ರಸಕ್ತ ಸಾಲಿನ ಬಜೆಟ್ ನಲ್ಲಿ ಈ ಬೆಳೆ ವಿಮೆ ಯೋಜನೆಗಾಗಿ ರೂ. 13240 ಕೋಟಿ ಹಣವನ್ನು ತೆಗೆದಿಟ್ಟಿದೆ. ಕಳೆದ ವರ್ಷ ರೂ 5 ಸಾವಿರ ಕೋಟಿಯನ್ನು ವಿಮೆಗಾಗಿ ತೆಗೆದಿಡಲಾಗಿತ್ತು. ಮುಂದಿನ ಹಣಕಾಸು ವರ್ಷಕ್ಕೆ ರೂ. 9 ಸಾವಿರ ಕೋಟಿಯಷ್ಟು ಏರಿಕೆ ಮಾಡಲು ಚಿಂತನೆ ನಡೆಸಲಾಗಿದೆ. 'ಕಳೆದ ವರ್ಷ ಫಸಲ್ ಬಿಮಾ ಯೋಜನೆಯಡಿ ಒಳಪಡಿಸಿದ್ದ ಬೆಳೆ ವಿಸ್ತೀರ್ಣವನ್ನು 2016–17ನೇ ಸಾಲಿನಲ್ಲಿ ಶೇ. 30ರಷ್ಟು ಮಾಡಲಾಗಿದೆ. 2017–18 ಸಾಲಿನಲ್ಲಿ ಶೇ. 40 ರಷ್ಟು ಹಾಗೂ 2017–18 ಸಾಲಿನಲ್ಲಿ ಶೇ. 50ರಷ್ಟು ಹೆಚ್ಚಿಸಲಾಗುವುದು ಎಂದು ಹಣಕಾಸು ಸಚಿವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಫಸಲ್ ಬಿಮಾ ಯೋಜನೆಯಂತೆ ನೀರಾವರಿ ಕ್ಷೇತ್ರದ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ರೂಪಿಸಿರುವ 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ' ಕುರಿತು ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

"ಮಣ್ಣು ಆರೋಗ್ಯ ಕಾರ್ಡ್' ಕುರಿತು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ ಹಣಕಾಸು ಸಚಿವರು, ದೇಶದಲ್ಲಿರುವ 648 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಹೊಸ ಕಿರು ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಅಳವಡಿಸಲು ಸರ್ಕಾರ ಯೋಜನೆ ರೂಪಿಸಿದೆ. ಈ ಮೂಲಕ ಶೇ 100ರಷ್ಟು ಪ್ರಮಾಣದಲ್ಲಿ ರೈತರ ಜಮೀನಿನ ಮಣ್ಣು ಪರೀಕ್ಷೆ ಮಾಡಲು ಗುರಿ ಹೊಂದಲಾಗಿದೆ.ಇದರ ಜತೆಗೆ ಸ್ಥಳೀಯ ನುರಿತ ಉದ್ಯಮಿಗಳಿಂದಲೂ ಒಂದು ಸಾವಿರ ಕಿರು ಮಣ್ಣು ಪ್ರಯೋಗಾಲಯ ಸ್ಥಾಪನೆಗೂ ಉತ್ತೇಜ ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

**ಮಳೆ ನೀರು ಸಂಗ್ರಹಕ್ಕೆ ಆದ್ಯತೆ**

ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ರೈತರು ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ರಚಿಸಿಕೊಂಡು, ಮಳೆ ನೀರು ಸಂಗ್ರಹಿಸಿ, ತುಂತುರು, ಹನಿ ನೀರಾವರಿಯಂತಹ ತಂತ್ರಜ್ಞಾನ ಬಳಸಿಕೊಳ್ಳುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ಮಳೆ ನೀರು ಸಂಗ್ರಹಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾನೂನನ್ನು ಜಾರಿಗೊಳಿಸಲಾಗಿದೆ. 2014ರಲ್ಲಿ ಆರಂಭವಾದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕೂಡ ಇಂಥ ಜಲಸಂರಕ್ಷಣಾ ಯೋಜನೆಗೆ ಒತ್ತು ನೀಡಿದೆ. ಈ ಯೋಜನೆ ಮೂಲಕ 2022ರ ವೇಳೆಗೆ ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿರುವವರ ಗ್ರಾಮೀಣರ ಆದಾಯವನ್ನು ದ್ವಿಗುಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

❑

**ಬಜೆಟ್ ಭಾಷಣದ ಮುಖ್ಯಾಂಶಗಳು**

* ಕೃಷಿ ಸಾಲಕ್ಕಾಗಿ ರೂ 10 ಲಕ್ಷ ಕೋಟಿ
* ಮಣ್ಣು ಆರೋಗ್ಯ ಕಾರ್ಡ್ ಯೋಜನೆ ವಿಸ್ತರಣೆ: ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಮಿನಿ ಮಣ್ಣು ಪ್ರಯೋಗಾಲಯ ಸ್ಥಾಪನೆ
* ನಬಾರ್ಡ್ ಬ್ಯಾಂಕ್‌ಗಳಲ್ಲಿ 'ದೀರ್ಘ ಕಾಲದ ನೀರಾವರಿ ಯೋಜನೆ'ಗಾಗಿ ರೂ 40 ಸಾವಿರ ಕೋಟಿ ಭವಿಷ್ಯ ನಿಧಿ ಸ್ಥಾಪನೆ
* ಗುತ್ತಿಗೆ ಕೃಷಿ ಪದ್ಧತಿ ಅಳವಡಿಕೆಗಾಗಿ ಮಾದರಿ ಕಾನೂನು ರಚನೆ, ರಾಜ್ಯ ಸರ್ಕಾರಗಳಿಗೆ ರವಾನೆ.
* ಡೇರಿ ಸಂಸ್ಕರಣೆ ಘಟಕಗಳ ಸ್ಥಾಪನೆ, ಮೂಲ ಸೌಲಭ್ಯಕ್ಕಾಗಿ ರೂ 8,000 ಕೋಟಿ ಭವಿಷ್ಯನಿಧಿ ಸ್ಥಾಪನೆ

# ಕೇಂದ್ರ ಮುಂಗಡ ಪತ್ರದಲ್ಲಿ ಮಹಿಳೆ

* ಡಾ. ಹೆಚ್. ಆರ್ ಉಮಾ



ಬಹು ನಿರೀಕ್ಷಿತ 2017–18 ಕೇಂದ್ರ ಮುಂಗಡ ಪತ್ರ ನಮ್ಮ ಮುಂದಿದೆ.

ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿಯವರು ಮಹಿಳೆ ಮತ್ತು ಮಕ್ಕಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹತ್ತು ಹಲವು ಕಾರ್ಯಕ್ರಮಗಳನ್ನು ಸಾದರಪಡಿಸಿದ್ದಾರೆ. ಇದಕ್ಕಾಗಿ ಸುಮಾರು 16–17ರಲ್ಲಿದ್ದ 156528 ಕೋಟಿ ರೂಗಳನ್ನು 184632 ಕೋಟಿಗಳಿಗೆ ಈ ಬಜೆಟ್‌ನಲ್ಲಿ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈ ವರ್ಷ ಸರಿಸುಮಾರು ಶೇ 20 ರಷ್ಟು ಏರಿಕೆಯನ್ನು ತನ್ನ ಪರ ಬಜೆಟ್ ಹಂಚಿಕೆಯಲ್ಲಿ ಪಡೆದಿದೆ. ಒಟ್ಟು ಹಂಚಿಕೆ ಸುಮಾರು 17640 ಕೋಟಿಯಿಂದ 22,095 ಕೋಟಿಗೆ ಏರಿರುವುದು ಇದು ಮಹಿಳಾ ಪರ ಎಂಬ ವಾದವನ್ನು ಪುಷ್ಟೀಕರಿಸುತ್ತಿದೆ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಪ್ರಿಯ ಕಾರ್ಯಕ್ರಮ 'ಬೇಟಿ ಬಚಾವೋ ಬೇಟಿ ಪಢಾವೋ' 'ಸಬ್‌ಕಾ ಸಾತ್ ಸಬ್‌ಕಾ ವಿಕಾಸ್' ಈ ನಿಟ್ಟಿನಲ್ಲಿ ಹೆಚ್ಚು ಜನಪ್ರಿಯವೆನಿಸಿವೆ.

'ಎಲ್ಲರ ಜೊತೆ ಎಲ್ಲರ ವಿಕಾಸ' ಘೋಷಣೆಯಂತೆ ಗ್ರಾಮೀಣ ಪ್ರಗತಿಯ ಅದರಲ್ಲೂ ಯುವ ಜನಾಂಗ ಹಾಗೂ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಪೂರಕವಾದ ಕಾರ್ಯಕ್ರಮವಾಗಿ ನೀಡಿದ್ದಾರೆ. ಗ್ರಾಮೀಣ ಪ್ರದೇಶದ ಮಹಿಳೆಯರ ಸಶಕ್ತೀಕರಣಕ್ಕೆ 500 ಕೋಟಿ ರೂಗಳನ್ನು 14 ಲಕ್ಷ ಅಂಗನವಾಡಿಗೆ ಕೇಂದ್ರಗಳಲ್ಲಿ ಮಹಿಳಾ ಶಕ್ತಿ ಕೇಂದ್ರಗಳಾಗಿ ಸ್ಥಾಪಿಸಲು ನಿರ್ಧರಿಸಲಾಗಿದೆ. ಭಾರತದ ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳಾ ಜನಸಂಖ್ಯೆಯ ಮೇಲೆ ಮಾಡುತ್ತಿರುವ ವೆಚ್ಚ ಶೇ 45 ಎಂಬುದು ವಿಷಾದನೀಯ. ಈ ನಿಟ್ಟಿನಲ್ಲಿ ಸರ್ಕಾರ ತಾನು ಮಾಡುತ್ತಿರುವ ಒಟ್ಟು ವೆಚ್ಚದಲ್ಲಿ ಸರಿಸುಮಾರು 90624.76 ಕೋಟಿ (13.3 ಬಿಲಿಯನ್) ನಷ್ಟು ಮಹಿಳೆಯರ ಪ್ರಗತಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ವ್ಯಯಿಸಲು ಈ ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ. ಈ ಹಣವನ್ನು ಮಹಿಳಾ ಸಂಬಂಧಿ ಎಲ್ಲಾ ಕಾರ್ಯಕ್ರಮಗಳ ಮೇಲೆ ವೆಚ್ಚಮಾಡಬಹುದಾಗಿದೆ. ಹೆಣ್ಣುಮಕ್ಕಳಿಗೆ ಅವಶ್ಯಕವಾದ ಪೌಷ್ಟಿಕ ಆಹಾರ, ದೌರ್ಜನ್ಯದ ವಿರುದ್ಧ ರಕ್ಷಣೆ, ಸಬಲೀಕರಣ ಕಾರ್ಯಕ್ರಮಗಳು ಶಿಕ್ಷಣ, ಆರೋಗ್ಯ ಇವೆಲ್ಲವೂ ಇದರಲ್ಲಿ ಪರಿಗಣಿಸಲ್ಪಟ್ಟಿದೆ. ವಿಷಾದನೀಯವೆಂದರೆ ಈ ಮೊತ್ತ ಹಿಂದಿನ ಬಜೆಟ್‌ನ ಶೇ 5 ಕ್ಕಿಂತ ಕಡಿಮೆಯಿರುವುದು.

ಇನ್ನು ಗರ್ಭಿಣಿ ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಈ ಮುಂಗಡ ಪತ್ರ ಮಹತ್ತರ ನಿರ್ಧಾರಗಳನ್ನು ಪ್ರಕಟಿಸಿದೆ. ಸುಮಾರು 184633 ಕೋಟಿ ಮಹಿಳಾ ಮತ್ತು ಮಕ್ಕಳ ಆರೋಗ್ಯಕ್ಕೆ ಮೀಸಲಿರಿಸಲಾಗಿದೆ. ಇದು ಶೇ 27 ರಷ್ಟು ಹೆಚ್ಚಳ ಎಂಬುದು ಇಲ್ಲಿ ಗಮನಾರ್ಹ. ಇಡೀ

ಇನ್ನು ಗರ್ಭಿಣಿ ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಈ ಮುಂಗಡ ಪತ್ರ ಮಹತ್ತರ ನಿರ್ಧಾರಗಳನ್ನು ಪ್ರಕಟಿಸಿದೆ. ಸುಮಾರು 184633 ಕೋಟಿ ಮಹಿಳಾ ಮತ್ತು ಮಕ್ಕಳ ಆರೋಗ್ಯಕ್ಕೆ ಮೀಸಲಿರಿಸಲಾಗಿದೆ. ಇದು ಶೇ. 27 ರಷ್ಟು ಹೆಚ್ಚಳ ಎಂಬುದು ಇಲ್ಲಿ ಗಮನಾರ್ಹ.



* ಅರ್ಥಶಾಸ್ತ್ರ ಪ್ರಾಧ್ಯಾಪಕರು, ಸರ್.ಎಂ.ವಿ. ಸ್ನಾತಕೋತ್ತರ ಕೇಂದ್ರ, ಮಂಡ್ಯ, ಮೈಸೂರು ವಿಶ್ವವಿದ್ಯಾನಿಲಯ.

ರಾಷ್ಟ್ರ ಮಟ್ಟದಲ್ಲಿ ಗರ್ಭಿಣಿ ಮಹಿಳೆಯರ ಆರ್ಥಿಕ ಸಹಾಯವಾಗಿ 6000 ರೂ ಗಳನ್ನು ಅವಳ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಕುರಿತು ಈ ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ. ಇದು ಆಕೆಯ ಹಲವು ಅವಶ್ಯಕತೆಗಳನ್ನು ಪೂರೈಸಲು ಹಾಗೂ ತಾಯಿ ಮಗುವಿನ ಆರೋಗ್ಯ ತಪಾಸಣೆಗೆ ಸಹಾಯವಾಗುತ್ತದೆ.

ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆಯಡಿ 2700 ಕೋಟಿ ಹಂಚಿಕೆಯಾಗಿದ್ದು ಇದು ಹಿಂದಿನ ವರ್ಷದ ನಿಧಿಯ ನಾಲ್ಕು ಪಟ್ಟು ಹೆಚ್ಚಿರುವುದು ಗಮನಾರ್ಹ. ತಾಯಂದಿರಿಗೆ ಸಿಗುವ ರಜೆ ಸೌಲಭ್ಯವಿಲ್ಲದ ಹೆಣ್ಣುಮಕ್ಕಳಿಗೆ ಈ ಕಾರ್ಯಕ್ರಮದಡಿ ಅನುಕೂಲ ಮಾಡಿರುವುದು ಈ ಬಜೆಟ್ ಲಿಂಗ ಸಂವೇದನೆಗೆ ಸಾಕ್ಷಿಯಾಗಿದೆ.

NNREGAಗೆ ಈ ವರ್ಷ ಸುಮಾರು 4800 ಕೋಟಿ ರೂಗಳು ಹಂಚಿಕೆಯಾಗಿದ್ದು ಇದು ಹಿಂದಿನ ವರ್ಷಕ್ಕಿಂತ ಶೇ 25 ರಷ್ಟು ಹೆಚ್ಚಾಗಿದೆ. ಇದರಿಂದ ಶೇ 55 ರಷ್ಟು ಮಹಿಳೆಯರು ಪ್ರಯೋಜನ ಪಡೆಯುತ್ತಾರೆ ಎಂಬುದು ಸರ್ಕಾರದ ವಾದವಾಗಿದೆ. ಇದರಡಿ 1/3 ಭಾಗ ಉದ್ಯೋಗಗಳನ್ನು ಮಹಿಳೆಯರಿಗೆ ಮೀಸಲಾಗಿರಿಸಿದೆ. ಇದು ಮಹಿಳಾ ಸಬಲೀಕರಣಕ್ಕೆ ನಾಂದಿಯಾಗುತ್ತದೆ. ಇನ್ನು ಜನಪ್ರಿಯ "ಹೆಣ್ಣುಮಕ್ಕಳನ್ನು ಉಳಿಸಿ – ಹೆಣ್ಣು ಮಕ್ಕಳನ್ನು ಓದಿಸಿ" ಕಾರ್ಯಕ್ರಮದಡಿ 200 ಕೋಟಿ ರೂಗಳು ಹಂಚಿಕೆಯಾಗಿದ್ದು ಇದು 5 ಪಟ್ಟು ಹೆಚ್ಚಳವನ್ನು ಕಾಣುತ್ತಿದೆ.

ದೌರ್ಜನ್ಯದ ವಿರುದ್ಧ ಹೋರಾಟಕ್ಕೆ ಮೀಸಲಾದ ನಿರ್ಭಯ ನಿಧಿ ಈ ಸಾರಿ 9 ಪಟ್ಟು ಹೆಚ್ಚಳವನ್ನು ಕಂಡಿದ್ದು ಈ ಬಜೆಟ್ 500 ಕೋಟಿ ರೂಗಳನ್ನು ನಿಧಿಗೆ ಸೇರಿಸಿದೆ. ಇದರೊಂದಿಗೆ ಈ ನಿಧಿಯಲ್ಲಿನ ಒಟ್ಟು ಮೊತ್ತ 3000 ಕೋಟಿ ರೂಗಳಾಗಿದ್ದು ಇದರ ಬಳಕೆ ಸಮರ್ಪಕವಾಗಿ ಆಗುತ್ತಿಲ್ಲ ಎಂಬುದು ವಿಷಾದನೀಯ. ಇದಲ್ಲದೆ ಮಕ್ಕಳ ಸರ್ವ ರಕ್ಷಣೆಗೆ ಸಮಗ್ರ ಮಕ್ಕಳ ಅಭಿವೃದ್ಧಿ




ಯೋಜನೆಯಡಿಯಲ್ಲಿ 648 ಕೋಟಿ ರೂಗಳನ್ನು ಹಂಚಿಕೆ ಮಾಡಿದ್ದು ಇದು ಮಕ್ಕಳ ಸರ್ವಾಭಿವೃದ್ಧಿಗೆ ಕಾರಣವಾಗಬಹುದೇನೋ ಎಂಬ ಆಶಯವಿದೆ.

ಒಟ್ಟಿನಲ್ಲಿ ಈ ಬಜೆಟ್ ಮಹಿಳೆಯನ್ನು ಹಿಂದುಳಿದ ಸಮೂಹವೆಂದು ಪರಿಗಣಿಸಿ ಅವರ ಸರ್ವಾನುಭಿವೃದ್ಧಿಗೆ ಸಬಲೀಕರಣಕ್ಕೆ, ಆರೋಗ್ಯಕ್ಕೆ ಹಾಗೂ ಅವರ ವಿರುದ್ಧದ ದೌರ್ಜನ್ಯದ ವಿರುದ್ಧದ ಹೋರಾಟಕ್ಕೆ ಸ್ಪಂದಿಸುವ ಮೂಲಕ ಕೇಂದ್ರ ಬಜೆಟ್ ಲಿಂಗ ಸಂವೇದನೆ ಹೊಂದಿದೆ ಎಂಬುದನ್ನು ಪ್ರಮಾಣಿಸುವ ಪ್ರಯತ್ನ ಮಾಡಿದೆ. ❑

ಬಜೆಟ್ ರೂಪಿಸುವಾಗ ಅಧಿಕ ಗಮನವನ್ನು ಗ್ರಾಮೀಣ ಪ್ರದೇಶ, ಮೂಲ ಸೌಕರ್ಯ ಮತ್ತು ಬಡತನ ನಿರ್ಮೂಲನೆ ಬಗ್ಗೆ ನೀಡಲಾಗಿದೆ. ಆದಾಗ್ಯೂ ಆರ್ಥಿಕ ವಿವೇಕದ ಗುಣಮಟ್ಟ ಕಾಯ್ದುಕೊಳ್ಳಲಾಗಿದೆ.

ಬೆಳವಣಿಗೆಯ ಫಲ ರೈತರು, ಕಾರ್ಮಿಕರು, ಬಡವರು ಪರಿಶಿಷ್ಠ ಜಾತಿ, ಬುಡಕಟ್ಟು ಜನಾಂಗದವರು, ಮಹಿಳೆಯರು ಹಾಗೂ ಸಮಾಜದ ಇತರ ದುರ್ಬಲ ವರ್ಗದವರನ್ನು ತಲುಪುವಂತೆ ಖಾತರಿಪಡಿಸಲು ಇನ್ನೂ ಹೆಚ್ಚಿನ ಕ್ರಮ ಕೈಗೊಳ್ಳುವುದನ್ನು ಮುಂದುವರಿಸಲಾಗುವುದು.

ಜನರ ನಿರೀಕ್ಷೆಗಳನ್ನು ಪೂರೈಸುವ ಕ್ರಮಗಳನ್ನು ಮುಂದುವರಿಸುತ್ತಲೆ, ಮುಂದಿನ ವರ್ಷಕ್ಕಾಗಿ ನಮ್ಮ ಮುಂದಿರುವ ಕಾರ್ಯಸೂಚಿ ಎಂದರೆ ಟಿಇಸಿ – ಭಾರತವನ್ನು ಪರಿವರ್ತಿಸಿ, ಶಕ್ತಿವರ್ಧಿಸಿ ಮತ್ತು ಸ್ವಚ್ಛಗೊಳಿಸಿ.

– ಆಡಳಿತದ ಗುಣಮಟ್ಟ ಮತ್ತು ನಮ್ಮ ಜನರ ಜೀವನದ ಮಟ್ಟ ಬದಲಿಸಿ / ಪರಿವರ್ತಿಸಿ.

– ಸಮಾಜದ ಅದರಲ್ಲಿಯೂ ವಿಶೇಷವಾಗಿ, ಯುವ ಜನರ, ದುರ್ಬಲ ವರ್ಗದವರಿಗೆ ತಮ್ಮ ನೈಜ ಸಾಮರ್ಥ್ಯ ಪ್ರದರ್ಶಿಸಲು ಸಮರ್ಥರಾಗುವಂತೆ ವಿವಿಧ ವರ್ಗಗಳ ಶಕ್ತಿವರ್ಧಿಸಿ.

– ವ್ಯವಸ್ಥೆಯನ್ನು ಸ್ವಚ್ಛಗೊಳಿಸಲು, ಭ್ರಷ್ಟಾಚಾರ ಮತ್ತು ಕಪ್ಪು ಹಣದ ಪಿಡುಗನ್ನು ತೊಲಗಿಸುವಲ್ಲಿ ಅಂಕೀಕೃತ ಆರ್ಥಿಕತೆ – ಸರ್ಕಾರಿ ಕಾರ್ಯತಂತ್ರದ ಅವಿಭಾಜ್ಯ ಅಂಗವಾಗಿರುತ್ತದೆ.

**ಬಜೆಟ್ ಬಗ್ಗೆ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ** ❑

# ಮನ್ ಕೀ ಬಾತ್




**ಪ್ರಧಾನ ಮಂತ್ರಿ**
**ಶ್ರೀ ನರೇಂದ್ರ ಮೋದಿಯವರು**
**ದಿನಾಂಕ**
**26-2-2017 ರಂದು**
**ಮಾಡಿದ**
**'ಮನ್ ಕಿ ಬಾತ್'**
**29 ನೇ ಭಾಷಣದ**
**ಆಯ್ದ**
**ಕನ್ನಡ ಅವತರಣಿಕೆ.**

ನನ್ನ ಪ್ರೀತಿಯ ದೇಶ ಬಾಂಧವರೇ, ನಮಸ್ಕಾರ. ಚಳಿಗಾಲ ಇನ್ನೇನು ಸರಿದುಹೋಗುತ್ತಿದೆ. ವಸಂತ ಋತು ನಮ್ಮೆಲ್ಲರ ಜೀವನದಲ್ಲಿ ಆಗಮಿಸುತ್ತಿದೆ. ಮನದಾಳದ ಮಾತಿಗಿಂತ ಮೊದಲು ನಾನು ನಿಮ್ಮ ಸಲಹೆಗಳನ್ನು ಕೇಳುತ್ತೇನೆ, ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಸಲಹೆಗಳು ಬರುತ್ತವೆ. ಹಾಗಾಗಿ ಎಲ್ಲದಕ್ಕಿಂತ ಮೊದಲು, ನಾನು ಲಕ್ಷಾಂತರ ನಾಗರಿಕರಿಗೆ ಈ ವಿಷಯಕ್ಕಾಗಿ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ನರೇಂದ್ರ ಮೋದಿ ಆ್ಯಪ್‌ನಲ್ಲಿ, ಟ್ವಿಟರ್‌ನಲ್ಲಿ, ಫೇಸ್‌ಬುಕ್‌ನಲ್ಲಿ, ಅಂಚೆ ಮೂಲಕ ಸಾಕಷ್ಟು ಸಲಹೆಗಳು ಬಂದಿವೆ. ಇದಕ್ಕಾಗಿ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ.

ನನಗೆ ಶೋಭಾ ಜಾಲಾನ್ ಅವರು ನರೇಂದ್ರ ಮೋದಿ ಆ್ಯಪ್‌ನಲ್ಲಿ ಬರೆದು – ಬಹಳಷ್ಟು ಜನಸಾಮಾನ್ಯರಿಗೆ ಇಸ್ರೋದ ಸಾಧನೆ ಬಗ್ಗೆ ಮಾಹಿತಿ ಇಲ್ಲ, ಅದಕ್ಕಾಗಿ 104 ಉಪಗ್ರಹಗಳ ಉಡಾವಣೆ ಮತ್ತು ಇಂಟರ್‌ಸೆಪ್ಟರ್ ಕ್ಷಿಪಣಿ ಬಗ್ಗೆ ಸ್ವಲ್ಪ ಮಾಹಿತಿ ನೀಡಬೇಕು ಎಂದು ಕೇಳಿದ್ದಾರೆ. ಶೋಭಾ ಅವರೇ, ಭಾರತದ ಹೆಮ್ಮೆಯ ಪ್ರತೀಕವನ್ನು ನೀವು ನೆನಪಿಸಿಕೊಂಡಿದ್ದಕ್ಕೆ ನಿಮಗೆ ಅನಂತ ಧನ್ಯವಾದಗಳು. ಬಡತನದಿಂದ ಮುಕ್ತಿ ಹೊಂದುವುದಾಗಲೀ, ರೋಗಗಳಿಂದ ರಕ್ಷಣೆ ಪಡೆಯುವುದಾಗಲೀ, ವಿಶ್ವದೊಂದಿಗೆ ಸಂಪರ್ಕ ಹೊಂದುವುದಾಗಲೀ, ಜ್ಞಾನ, ಮಾಹಿತಿ ರವಾನೆಯಾಗಲೀ ಇವುಗಳಲ್ಲಿ ತಂತ್ರಜ್ಞಾನ ಮತ್ತು ವಿಜ್ಞಾನ ತಮ್ಮ ಸ್ಥಾನವನ್ನು ಸಾಬೀತುಪಡಿಸಿವೆ. 2017 ರ ಫೆಬ್ರವರಿ 15 ಭಾರತದ ಇತಿಹಾಸದಲ್ಲೇ ಮಹತ್ವಪೂರ್ಣ ದಿನವಾಗಿದೆ. ನಮ್ಮ ವಿಜ್ಞಾನಿಗಳು ವಿಶ್ವದಲ್ಲಿಯೇ ಭಾರತದ ಹೆಸರನ್ನು ಹೆಮ್ಮೆಯ ಉತ್ತುಂಗಕ್ಕೇರಿಸಿದ್ದಾರೆ.

ಇಸ್ರೋ ಕಳೆದ ಕೆಲವು ವರ್ಷಗಳಲ್ಲಿ ಅಭೂತಪೂರ್ವವಾದ ಕಾರ್ಯಸರಣಿಗಳನ್ನು ಸಫಲತೆಯಿಂದ ಪೂರ್ಣಗೊಳಿಸಿರುವುದು ನಮಗೆಲ್ಲ ತಿಳಿದ ವಿಷಯ. ಮಂಗಳ ಗ್ರಹದ ಮೇಲೆ ಮಂಗಳಯಾನ ನೌಕೆ ಸಾಧನೆಯ ನಂತರ, ಇತ್ತೀಚೆಗಷ್ಟೇ ಇಸ್ರೋ ಅಂತರಿಕ್ಷ ಕ್ಷೇತ್ರದಲ್ಲಿ ಒಂದು ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಇಸ್ರೋ ಬೃಹತ್ ಕಾರ್ಯ ಸರಣಿಯ ಮೂಲಕ ಅಮೇರಿಕಾ, ಇಸ್ರೇಲ್, ಕಝುಕಿಸ್ತಾನ್, ನೆದರ್‌ಲ್ಯಾಂಡ್, ಸ್ವಿಟ್ಜರ್‌ಲ್ಯಾಂಡ್, ಯುಎಇ ಮತ್ತು ಭಾರತವೂ ಸೇರಿದಂತೆ ವಿಭಿನ್ನ ದೇಶಗಳ 104 ಉಪಗ್ರಹಗಳನ್ನು ಒಂದೇ ಬಾರಿಗೆ ಅಂತರಿಕ್ಷಕ್ಕೆ ಹಾರಿಸಿ ಸಫಲತೆಯನ್ನು ಮೆರೆದಿದೆ. 104 ಉಪಗ್ರಹಗಳನ್ನು ಒಂದೇ ಬಾರಿಗೆ ಅಂತರಿಕ್ಷಕ್ಕೆ ಹಾರಿಸಿ ಹೊಸ ಇತಿಹಾಸ ಬರೆದ ಭಾರತ, ವಿಶ್ವದ ಮೊದಲ ರಾಷ್ಟ್ರವಾಗಿದೆ. ಅಲ್ಲದೇ ಇದು ಪಿಎಸ್‌ಎಲ್‌ವಿಯ 38 ನೇ ಯಶಸ್ವಿ ಉಡ್ಡಯನವಾಗಿದೆ ಎಂಬುದು ಸಂತಸದ ಸಂಗತಿ. ಇದು ಕೇವಲ ಇಸ್ರೋಗೆ ಮಾತ್ರವಲ್ಲ ಸಂಪೂರ್ಣ ಭಾರತಕ್ಕೆ ಒಂದು ಐತಿಹಾಸಿಕ ಸಾಧನೆಯೆನಿಸಿದೆ. ಇಸ್ರೋದವರ ಈ ಮಿತವ್ಯಯದ ದಕ್ಷ ಬಾಹ್ಯಾಕಾಶ ಕಾರ್ಯಕ್ರಮ ಸಂಪೂರ್ಣ ವಿಶ್ವಕ್ಕೆ ಒಂದು ಆಶ್ಚರ್ಯಕರ ಸಂಗತಿಯೆನಿಸಿದೆ ಮತ್ತು ವಿಶ್ವವೇ ಮುಕ್ತ ಮನಸ್ಸಿನಿಂದ ಭಾರತದ ವಿಜ್ಞಾನಿಗಳ ಯಶಸ್ಸನ್ನು ಕೊಂಡಾಡಿದೆ.

ಸೋದರ ಸೋದರಿಯರೇ, ಈ 104 ಉಪಗ್ರಹಗಳಲ್ಲಿ – 'ಕಾರ್ಟೋಸ್ಯಾಟ್-2' ಎಂಬುದು ತುಂಬಾ ಮಹತ್ವಪೂರ್ಣವಾದದ್ದಾಗಿದೆ. ಇದು ಭಾರತದ ಉಪಗ್ರಹವಾಗಿದ್ದು ಇದು ಸೆರೆಹಿಡಿದ ಚಿತ್ರಗಳು, ಸಂಪನ್ಮೂಲಗಳ ನಕ್ಷೆ, ಮೂಲಸೌಕರ್ಯ, ಅಭಿವೃದ್ಧಿಯ ಮೌಲ್ಯಮಾಪನ, ನಗರಾಭಿವೃದ್ಧಿ ಯೋಜನೆಗಾಗಿ ತುಂಬಾ ಸಹಾಯಕವಾಗಲಿವೆ. ವಿಶೇಷವಾಗಿ ನಮ್ಮ ರೈತಾಪಿ ಸೋದರ ಸೋದರಿಯರಿಗೆ, ದೇಶದಲ್ಲಿ ಎಲ್ಲಿ ನೀರಿನ ಮೂಲವಿದೆ, ಎಷ್ಟು ಪ್ರಮಾಣದಲ್ಲಿದೆ,

* ಮೂಲ : ಆಕಾಶವಾಣಿ, ಬೆಂಗಳೂರು.

ಅದರ ಉಪಯುಕ್ತತೆ ಹೇಗೆ ಆಗಲಿದೆ, ಏನೇನು ಮುನ್ನೆಚ್ಚರಿಕೆ ವಹಿಸಬೇಕು ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಈ ಹೊಸ ಉಪಗ್ರಹ ಕಾರ್ಟೋಸ್ಯಾಟ್-2 ಬಹಳ ಸಹಾಯ ಮಾಡಲಿದೆ. ನಮ್ಮ ಉಪಗ್ರಹ ಕಕ್ಷೆಗೆ ತಲುಪಿದ ತಕ್ಷಣವೇ ಕೆಲ ಚಿತ್ರಗಳನ್ನು ಕಳುಹಿಸಿದೆ. ಅದು ತನ್ನ ಕೆಲಸವನ್ನು ಆರಂಭಿಸಿದೆ. ಈ ಸಂಪೂರ್ಣ ಅಭಿಯಾನದ ನೇತೃತ್ವವನ್ನು ನಮ್ಮ ಯುವ ವಿಜ್ಞಾನಿಗಳು, ನಮ್ಮ ಮಹಿಳಾ ವಿಜ್ಞಾನಿಗಳು, ವಹಿಸಿದ್ದರು ಎಂಬುದು ಸಂತಸದ ವಿಷಯವಾಗಿದೆ. ಇಸ್ರೋದಲ್ಲಿ ಯುವ ಮತ್ತು ಮಹಿಳಾ ವಿಜ್ಞಾನಿಗಳ ಅದ್ಭುತವಾದ ಪಾಲುದಾರಿಕೆ ಬಹುದೊಡ್ಡ ಗೌರವತರುವ ಅಂಶವಾಗಿದೆ. ನಾನು ದೇಶವಾಸಿಗಳ ಪರವಾಗಿ ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸಾಮಾನ್ಯ ಜನರಿಗಾಗಿ, ದೇಶ ಸೇವೆಗಾಗಿ ಅಂತರಿಕ್ಷ ವಿಜ್ಞಾನವನ್ನು ಅಳವಡಿಸುವ ನಮ್ಮ ಉದ್ದೇಶವನ್ನು ಅವರು ಎಂದೆಂದಿಗೂ ಜಾಗೃತವಾಗಿಟ್ಟು ನಿತ್ಯವೂ ಹೊಸ ಹೊಸ ಕೀರ್ತಿವಂತ ಕೆಲಸಗಳನ್ನು ಮಾಡುತ್ತಾ ಸಾಗಿದ್ದಾರೆ. ನಮ್ಮ ಈ ವಿಜ್ಞಾನಿಗಳಿಗೆ ಅವರ ತಂಡಕ್ಕೆ ಎಷ್ಟು ಅಭಿನಂದನೆ ಸಲ್ಲಿಸಿದರೂ ಕಡಿಮೆಯೇ ಎನಿಸುತ್ತದೆ.

ಶೋಭಾ ಅವರು ಕೇಳಿರುವ ಇನ್ನೊಂದು ಪ್ರಶ್ನೆ, ಭಾರತದ ಸುರಕ್ಷತೆ ಬಗೆಗಿನದು. ಅದೂ ಭಾರತ ಒಂದು ಮಹತ್ತರ ಸಾಧನೆ ಮೆರೆದಿರುವುದರ ಸಂಬಂಧವಾಗಿ. ಈ ವಿಷಯದ ಬಗ್ಗೆ ಪ್ರಸ್ತುತ ಹೆಚ್ಚು ಚರ್ಚೆಗಳೇನೂ ಆಗಿಲ್ಲ, ಆದರೆ ಈ ಮಹತ್ವಪೂರ್ಣ ವಿಷಯದ ಬಗ್ಗೆ ಶೋಭಾ ಅವರು ಗಮನಹರಿಸಿದ್ದಾರೆ. ಭಾರತ ರಕ್ಷಣಾ ಕ್ಷೇತ್ರದಲ್ಲಿ ಬೆಲಾಸ್ಟಿಕ್ ಇಂಟರ್‌ಸೆಪ್ಟರ್ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ಮಾಡಿದೆ. ತಡೆದು ನಿಲ್ಲಿಸುವ ತಂತ್ರಜ್ಞಾನದ ಈ ಕ್ಷಿಪಣಿ ತನ್ನ ಪರೀಕ್ಷಾ ಸಮಯದಲ್ಲೇ ಭೂಮಿಯಿಂದ ಸುಮಾರು 100 ಕಿಲೋಮೀಟರ್ ಎತ್ತರದಲ್ಲಿ ವೈರಿಗಳ ಕ್ಷಿಪಣಿಯನ್ನು ನಾಶಪಡಿಸಿ ಸಫಲತೆಯನ್ನು ತೋರಿದೆ.

ರಕ್ಷಣಾ ಕ್ಷೇತ್ರದಲ್ಲಿ ಇದು ಒಂದು ಮಹತ್ವಪೂರ್ಣ ಸಾಧನೆ. ವಿಶ್ವದ ನಾಲ್ಕು ಅಥವಾ ಐದು ದೇಶಗಳು ಮಾತ್ರ ಈ ಸಾಧನೆಗೈದಿವೆ ಎಂಬುದನ್ನು ಕೇಳಿ ನಿಮಗೆ ಹರ್ಷವೆನಿಸಬಹುದು. ಮತ್ತು ಭಾರತದ ಮೇಲೆ 2 ಸಾವಿರ ಕಿಲೋಮೀಟರ್




ದೂರದಿಂದ ಆಕ್ರಮಣ ಮಾಡಲು ಯಾವುದೇ ಕ್ಷಿಪಣಿ ಬಂದರೂ ಈ ಕ್ಷಿಪಣಿ ಅದನ್ನು ಅಂತರಿಕ್ಷದಲ್ಲೇ ನಾಶಪಡಿಸುತ್ತದೆ ಎಂಬುದು ಇದರ ಕ್ಷಮತೆಯಾಗಿದೆ.

ಜನಸಾಮಾನ್ಯರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ವಿಜ್ಞಾನದ ಸಿದ್ಧಾಂತಗಳ ಸಹಜ ಉಪಯೋಗ ಹೇಗೆ ಆಗಬೇಕು, ಅದಕ್ಕೆ ಮಾಧ್ಯಮ ಯಾವುದು, ತಂತ್ರಜ್ಞಾನ ಹೇಗಿರಬೇಕು ಎಂದು ಆಲೋಚಿಸಿ ವಿಜ್ಞಾನವನ್ನು ಅಳವಡಿಸಿಕೊಂಡರೆ ಮನುಷ್ಯರಿಗೆ ಅದೇ ದೊಡ್ಡ ಮಹತ್ವಪೂರ್ಣವಾದಂತಹ ಕೊಡುಗೆ ಎಂದೆನಿಸಿಕೊಳ್ಳುತ್ತದೆ. ಕೆಲ ದಿನಗಳ ಹಿಂದೆ ನೀತಿ ಆಯೋಗ ಮತ್ತು ಭಾರತದ ವಿದೇಶಾಂಗ ಸಚಿವಾಲಯ ಜಂಟಿಯಾಗಿ 14 ನೇ ಭಾರತೀಯ ಪ್ರವಾಸಿ ದಿವಸ್ ಸಂದರ್ಭದಲ್ಲಿ ಒಂದು ಅನನ್ಯವಾದ ಸ್ಪರ್ಧೆಯನ್ನು ಆಯೋಜಿಸಿದ್ದವು. ಸಮಾಜಕ್ಕೆ ಉಪಯುಕ್ತವಾಗುವಂತಹ ವಿನೂತನ ಆವಿಷ್ಕಾರಗಳನ್ನು ಆಹ್ವಾನಿಸಲಾಯಿತು. ಇಂಥ ಆವಿಷ್ಕಾರಗಳನ್ನು ಗುರುತಿಸುವುದು, ಪ್ರದರ್ಶಿಸುವುದು, ಜನರಿಗೆ ಮಾಹಿತಿ ನೀಡುವುದು ಮತ್ತು ಇಂಥ ಆವಿಷ್ಕಾರಗಳು ಜನಸಾಮಾನ್ಯರಿಗೆ ಹೇಗೆ ಬಳಕೆಗೆ ಬರುತ್ತವೆ, ಹೇಗೆ ಸಾಮೂಹಿಕ ಉತ್ಪಾದನೆ ಮಾಡುವುದು, ಅದರ ವಾಣಿಜ್ಯಪ್ರಯೋಗ ಹೇಗೆ ಎಂಬೆಲ್ಲ ಅಂಶಗಳ ಮೇಲೆ ಬೆಳಕು ಚೆಲ್ಲಲಾಗಿತ್ತು. ಇದನ್ನೆಲ್ಲ ನೋಡಿದಾಗ ಎಂಥ ಮಹತ್ವಪೂರ್ಣ ಕೆಲಸ ಮಾಡಿದ್ದಾರೆ ಎಂದು ನನಗನ್ನಿಸಿತು. ಉದಾಹರಣೆಗೆ ನಮ್ಮ ಬಡ ಮೀನುಗಾರ ಸೋದರರಿಗೆ ಉಪಯುಕ್ತವಾಗುವ ಒಂದು ಆವಿಷ್ಕಾರವನ್ನು ನೋಡಿದೆ. ಒಂದು ಸಾಮಾನ್ಯವಾದ ಮೊಬೈಲ್ ಆ್ಯಪ್ ಸಿದ್ಧಪಡಿಸಿದ್ದಾರೆ. ಆದರೆ ಅದರ ಶಕ್ತಿ ಎಂತಹದ್ದು ಎಂದರೆ, ಮೀನುಗಾರರು ಮೀನು ಹಿಡಿಯಲು ಹೋದಾಗ, ಎಲ್ಲಿಗೆ ಹೋಗಬೇಕು, ಅಧಿಕ ಮೀನುಗಳಿರುವ ಸ್ಥಳ ಯಾವುದು, ಗಾಳಿಯ ದಿಕ್ಕು ಯಾವುದು, ಅದರ ವೇಗ ಎಷ್ಟಿದೆ, ಅಲೆಗಳ ಎತ್ತರ ಎಷ್ಟಿದೆ ಎಂಬೆಲ್ಲ ಮಾಹಿತಿ ನೀಡುತ್ತದೆ. ಅಂದರೆ ಒಂದು ಮೊಬೈಲ್ ಆಪ್‌ನಲ್ಲಿ ಎಲ್ಲ ಮಾಹಿತಿ ಲಭ್ಯ. ಇದರಿಂದ ನಮ್ಮ ಮೀನುಗಾರ ಸೋದರರು ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚು ಮೀನುಗಳಿರುವ ಸ್ಥಳಕ್ಕೆ ತಲುಪಿ ತಮ್ಮ ಉಪಜೀವನಕ್ಕೆ ದಾರಿ ಕಂಡುಕೊಳ್ಳಬಹುದು.

ಕೆಲವೊಮ್ಮೆ ಸಮಸ್ಯೆಗಳು ಕೂಡಾ ಪರಿಹಾರಕ್ಕೆ ವಿಜ್ಞಾನದ ಅವಶ್ಯಕತೆಯ ಮಹತ್ವವನ್ನು ಪ್ರದರ್ಶಿಸುತ್ತವೆ. 2005 ರಲ್ಲಿ ಮುಂಬೈಯಲ್ಲಿ ಭಾರೀ ಮಳೆ ಸುರಿಯಿತು. ನೆರೆ ಬಂತು, ಸಮುದ್ರ ಕೂಡ ಉಕ್ಕಿ ಹರಿಯಿತು ಮತ್ತು ತುಂಬಾ ತೊಂದರೆಗಳಾದವು. ಆದರೆ ಯಾವುದೇ ಪ್ರಾಕೃತಿಕ ವಿಕೋಪಗಳಾದಲ್ಲಿ ಮೊದಲು ತೊಂದರೆಯಾಗುವುದು ಬಡವರಿಗೆ. ಇಬ್ಬರು ಈ ಕುರಿತು ಮನಸ್ಫೂರ್ತಿಯಾಗಿ ಕೆಲಸ ಮಾಡಿ ಇಂಥ ಸಂದರ್ಭಗಳಲ್ಲಿ ಎದುರಾಗುವ ಸಂಕಷ್ಟಗಳಿಂದ ಮನೆಯನ್ನು ಕಾಪಾಡುವಂಥ, ಮನೆಯಲ್ಲಿರುವವರ ಜೀವವನ್ನು ಕಾಪಾಡುವಂಥ, ನೀರು ಮನೆ ತುಂಬುವುದನ್ನೂ ತಡೆಯುವಂತಹ, ಪ್ರವಾಹದ ಕಾರಣ ನೀರಿನಿಂದ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಯುವಂತಹ ಸಾಧನವನ್ನು ತಯಾರಿಸಿದ್ದಾರೆ. ಇಂಥ ಹಲವು ಆವಿಷ್ಕಾರಗಳಿದ್ದವು ನನ್ನ ಮಾತಿನ ಅರ್ಥ ಇಷ್ಟೇ ಸಮಾಜದಲ್ಲಿ ಇಂಥ ಪಾತ್ರವನ್ನು ವಹಿಸುವ ಜನರು ಬಹಳ ಇರುತ್ತಾರೆ. ಅಲ್ಲದೇ ನಮ್ಮ ಸಮಾಜ ಕೂಡ ತಂತ್ರಜ್ಞಾನ ಪ್ರೇರಿತವಾಗುತ್ತಾ ಸಾಗಿದೆ. ವ್ಯವಸ್ಥೆಗಳು ತಂತ್ರಜ್ಞಾನ ಪ್ರೇರಿತವಾಗುತ್ತಾ ಸಾಗಿವೆ. ಒಂದು ತೆರದಲ್ಲಿ ತಂತ್ರಜ್ಞಾನ ಎಂಬುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗುತ್ತಾ ಸಾಗಿದೆ.

ಕಳೆದ ದಿನಗಳಲ್ಲಿ 'ಡಿಜಿ ಧನ' ಬಗ್ಗೆ ಬಹಳ ಮಹತ್ವ ಕಂಡುಬಂದಿದೆ. ನಿಧಾನವಾಗಿ ಜನರು ಹಣದ ಹೊರತಾಗಿ ಡಿಜಿಟಲ್ ಕರೆನ್ಸಿ ಕಡೆಗೆ ಸಾಗುತ್ತಿದ್ದಾರೆ. ವಿಶೇಷವಾಗಿ ಯುವಜನರು ತಮ್ಮ ಮೊಬೈಲ್ ಫೋನ್‌ನಿಂದಲೇ ಹಣ ಪಾವತಿಸುವ ಅಭ್ಯಾಸ ರೂಢಿಸಿಕೊಳ್ಳುತ್ತಿದ್ದಾರೆ. ಇದೊಂದು ಶುಭ ಸಂಕೇತವೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಕಳೆದ ಕೆಲ ದಿನಗಳಲ್ಲಿ ಲಕ್ಕಿ ಗ್ರಾಹಕ ಯೋಜನೆ, ಡಿಜಿ ಧನ್ ವ್ಯಾಪಾರಿ ಯೋಜನೆಗೆ ಬಹಳ ಮನ್ನಣೆ ದೊರೆತಿದೆ. ಸುಮಾರು 2 ತಿಂಗಳುಗಳಿಂದ ಪ್ರತಿದಿನವೂ 15 ಸಾವಿರ ಜನರಿಗೆ ಸಾವಿರ ರೂಪಾಯಿಯ ಬಹುಮಾನ ಸಿಗುತ್ತಿದೆ.

ಈ ಎರಡೂ ಯೋಜನೆಗಳ ಮೂಲಕ ಭಾರತದಲ್ಲಿ ಡಿಜಿಟಲ್ ವ್ಯವಹಾರವನ್ನು ಒಂದು ಜನಾಂದೋಲನವನ್ನಾಗಿಸುವ ಪ್ರಯತ್ನಕ್ಕೆ ದೇಶಾದ್ಯಂತ ಸ್ವಾಗತ ಸಿಕ್ಕಿದೆ. ಇಲ್ಲಿವರೆಗೆ ಡಿಜಿ ಧನ್ ಯೋಜನೆಯಲ್ಲಿ ಸುಮಾರು 10 ಲಕ್ಷ ಜನರಿಗೆ ಬಹುಮಾನ ದೊರೆತಿದೆ, 50 ಸಾವಿರಕ್ಕಿಂತ ಹೆಚ್ಚು ವ್ಯಾಪಾರಸ್ಥರಿಗೆ ಬಹುಮಾನ ದೊರೆತಿದೆ, ಎಂಬುದು ಸಂತೋಷದ ಸಂಗತಿ. ಸುಮಾರು ನೂರ ಐವತ್ತು ಕೋಟಿಗಿಂತಲೂ ಅಧಿಕ ಹಣ ಬಹುಮಾನದ ರೂಪದಲ್ಲಿ ಈ ಅಭಿಯಾನವನ್ನು ಮುಂದುವರಿಸುತ್ತಿರುವ ಜನರಿಗೆ ಲಭ್ಯವಾಗಿದೆ. ಈ ಯೋಜನೆಯಲ್ಲಿ ನೂರಕ್ಕೂ ಹೆಚ್ಚು ಗ್ರಾಹಕರು ಒಂದು ಲಕ್ಷ ರೂಪಾಯಿಯ ಹಣ ಬಹುಮಾನ ಪಡೆದವರೂ ಇದ್ದಾರೆ. 4 ಸಾವಿರಕ್ಕೂ ಅಧಿಕ ವ್ಯಾಪಾರಿಗಳಿಗೆ ತಲಾ 50 ಸಾವಿರ ರೂಪಾಯಿಯ ಬಹುಮಾನ ದೊರೆತಿದೆ. ಕೃಷಿಕರಾಗಿರಲಿ, ವ್ಯಾಪಾರಿಗಳಾಗಿರಲಿ, ಚಿಕ್ಕ ಪುಟ್ಟ ಉದ್ದಿಮೆದಾರರಾಗಿರಲಿ, ವೃತ್ತಿಪರರಾಗಿರಲಿ, ಗೃಹಿಣಿಯರಾಗಿರಲಿ, ವಿದ್ಯಾರ್ಥಿಗಳಾಗಿರಲಿ ಎಲ್ಲರೂ ಇದರಲ್ಲಿ ಮುನ್ನುಗ್ಗಿ ಭಾಗವಹಿಸುತ್ತಿದ್ದಾರೆ. ಅವರಿಗೆ ಲಾಭವೂ ಆಗುತ್ತಿದೆ. ಕೇವಲ ಯುವಜನತೆ ಮಾತ್ರ ಭಾಗವಹಿಸುತ್ತಿದ್ದಾರೋ ಇಲ್ಲ ವಯಸ್ಸಾದವರೂ ಪಾಲ್ಗೊಳ್ಳುತ್ತಿದ್ದಾರೋ ಎಂದು ಇದರ ವಿಶ್ಲೇಷಣೆಯನ್ನು ನಾನು ಕೇಳಿದೆ. ಬಹುಮಾನ ಪಡೆದವರಲ್ಲಿ 15 ರ ಹರೆಯದವರಿಂದ 65 – 70 ರ ವಯಸ್ಸಾದ ಹಿರಿಯರೂ ಇದ್ದಾರೆ ಎಂದು ತಿಳಿದು ನನಗೆ ಹರ್ಷವೆನಿಸಿದೆ. ಮೈಸೂರಿನಿಂದ ಶ್ರೀಯುತ ಸಂತೋಷ ಅವರು ನರೇಂದ್ರ ಮೋದಿ ಆ್ಯಪ್‌ನಲ್ಲಿ ತಮಗೆ ಲಕ್ಕಿ ಗ್ರಾಹಕ ಯೋಜನೆಯಲ್ಲಿ ಒಂದು ಸಾವಿರ ರೂಪಾಯಿ ಬಹುಮಾನ ದೊರೆತಿದೆ ಎಂದು ಹರ್ಷದಿಂದ ಬರೆದಿದ್ದಾರೆ. ಆದರೆ ಎಲ್ಲಕ್ಕಿಂತ ದೊಡ್ಡ ವಿಷಯ ಅವರು ಬರೆದಿದ್ದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಎನಿಸಿದೆ. ಅವರು ಬರೆಯುತ್ತಾರೆ – ನನಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ದೊರೆಯಿತು, ಅದೇ ಸಮಯದಲ್ಲಿ ಓರ್ವ ಬಡ ವೃದ್ಧ ಮಹಿಳೆಯ ಮನೆ ಬೆಂಕಿಗೆ ಆಹುತಿಯಾಯಿತು, ವಸ್ತುಗಳೆಲ್ಲ ಉರಿದು ಹೋದವು ಎಂಬುದು ನನಗೆ ತಿಳಿದು ಬಂತು. ಆಗ ನನಗೆ ಬಹುಮಾನ ಸಿಕ್ಕಿದೆಯಲ್ಲ ಬಹುಶಃ ಇದರ ಮೇಲೆ ಆ ಬಡ ಮಹಿಳೆಯ ಹಕ್ಕಿದೆ ಎಂದೆನಿಸಿತು. ಹಾಗಾಗಿ



ಆ ಹಣವನ್ನು ಅವಳಿಗೆ ಕೊಟ್ಟುಬಿಟ್ಟೆ, ಅದರಿಂದ ನನಗೆ ಬಹಳ ಸಂತೋಷವೆನಿಸಿದೆ ಎಂದು. ಸಂತೋಷ ಅವರೇ ನಿಮ್ಮ ಹೆಸರು ಮತ್ತು ನಿಮ್ಮ ಕೆಲಸ ಎರಡೂ ನಮಗೂ ಸಂತೋಷವನ್ನು ನೀಡುತ್ತಿವೆ. ನೀವು ಬಹು ದೊಡ್ಡ ಪ್ರೇರಣೆಯನ್ನು ನೀಡುವ ಕೆಲಸ ಮಾಡಿದ್ದೀರಿ. ನಾನು ದೇಶ ಬಾಂಧವರಲ್ಲಿ, ದೇಶದ ಯುವಕರಲ್ಲಿ ವಿಶೇಷವಾಗಿ ಲಕ್ಕಿ ಗ್ರಾಹಕ ಯೋಜನೆ ಮತ್ತು ಡಿಜಿ ಧನ್ ಯೋಜನೆಯಲ್ಲಿ ಬಹುಮಾನ ಪಡೆದವರಿಗೆ ವಿಶೇಷವಾಗಿ ಆಗ್ರಹಿಸುವುದೇನೆಂದರೆ ನೀವು ಸ್ವತಃ ಇದರಪ್ರಚಾರಕರಾಗಿರಿ. ಈ ಆಂದೋಲನದ ನೇತೃತ್ವವಹಿಸಿರಿ, ಇದನ್ನು ಮುಂದುವರಿಸಿ ಮತ್ತು ಈ ಕೆಲಸ ಒಂದು ರೀತಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಮತ್ತು ಕಪ್ಪು ಹಣದ ವಿರುದ್ಧ ಸಮರವಾಗಿದ್ದು ಇದು ಮಹತ್ವಪೂರ್ಣ ಪಾತ್ರವಹಿಸುತ್ತಿದೆ. ಈ ಕೆಲಸಕ್ಕೆ ಕೈ ಜೋಡಿಸಿದ ಪ್ರತಿಯೊಬ್ಬರೂ ನನ್ನ ದೃಷ್ಟಿಯಲ್ಲಿ ದೇಶದ ಒಬ್ಬ ಹೊಸ ಭ್ರಷ್ಟಾಚಾರ ವಿರೋಧಿ ಕಟ್ಟಾಳು ಇದ್ದ ಹಾಗೆ. ಒಂದು ರೀತಿಯಲ್ಲಿ ನೀವು ಶುಚಿತ್ವದ ಸೈನಿಕರಿದ್ದಂತೆ. ಲಕ್ಕಿ ಗ್ರಾಹಕ ಯೋಜನೆ ನೂರು ದಿನ ಪೂರೈಸುವ ಸಂದರ್ಭದಲ್ಲಿ ಏಪ್ರಿಲ್ 14, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮ ಜಯಂತಿ ಎಂದು ನಿಮಗೆಲ್ಲ ತಿಳಿದಿದೆ. ಬಹಳ ಸ್ಮರಣೀಯ ದಿನವಾಗಿದೆ. ಏಪ್ರಿಲ್ 14 ರಂದು ಒಂದು ಬಹು ದೊಡ್ಡ ಕೋಟ್ಯಾಂತರ ರೂಪಾಯಿಯ ಡ್ರಾ ಆಗಲಿದೆ. ಇನ್ನೂ 40 – 45 ದಿನಗಳು ಬಾಕಿ ಇವೆ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನೆನಪಿನಲ್ಲಿಟ್ಟುಕೊಂಡು ನೀವು ಒಂದು ಕೆಲಸವನ್ನು ಮಾಡಬಹುದೇ? ಈಗಷ್ಟೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 125 ನೇ ಜಯಂತಿ ಮುಗಿದಿದೆ. ಅವರನ್ನು ಸ್ಮರಿಸಿ ನೀವು ಕೂಡಾ 125 ಜನರಿಗೆ ಭೀಮ್ ಆ್ಯಪ್ ಡೌನ್‌ಲೋಡ್ ಮಾಡುವುದನ್ನು ಕಲಿಸಿಕೊಡಿ. ಅದರಿಂದ ಹೇಗೆ ವ್ಯವಹಾರ ನಡೆಯುತ್ತದೆ ಎಂಬುದನ್ನು ಕಲಿಸಿ ಮತ್ತು ಅದರಲ್ಲೂ ನಿಮ್ಮ ಸುತ್ತಮುತ್ತಲ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಇದನ್ನು ಕಲಿಸಿ.

ಈ ಬಾರಿಯ ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಮತ್ತು ಭೀಮ್ ಆಪ್ ಇವುಗಳಿಗೆ ಹೆಚ್ಚಿನ ಮಹತ್ವ ನೀಡಿ ಮತ್ತು ಬಾಬಾ ಸಾಹೇಬ್ ಅವರು ಹಾಕಿಕೊಟ್ಟ ಅಡಿಪಾಯವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಿದೆ ಎಂದು ಹೇಳಬಯಸುತ್ತೇನೆ. ಮನೆ ಮನೆಗೆ ತೆರಳಿ ಎಲ್ಲರನ್ನೂ ಒಗ್ಗೂಡಿಸಿ 125 ಕೋಟಿ ಜನರಿಗೆ ಭೀಮ್ ಆ್ಯಪ್ ತಲುಪುವಂತೆ ಮಾಡಬೇಕಿದೆ. ಕಳೆದ 2–3 ತಿಂಗಳಲ್ಲಿ ಆರಂಭಗೊಂಡ ಈ ಅಭಿಯಾನದ ಪರಿಣಾಮವಾಗಿ ಹಲವು ಟೌನ್‌ಶಿಪ್‌ಗಳು, ಹಲವು ಗ್ರಾಮಗಳು, ಹಲವಾರು ನಗರಗಳಲ್ಲಿ ಸಾಫಲ್ಯ ದೊರೆತಿದೆ.

ನನ್ನ ಪ್ರಿಯ ದೇಶವಾಸಿಗಳೇ ನಮ್ಮ ದೇಶದ ಅರ್ಥವ್ಯವಸ್ಥೆಯಲ್ಲಿ ಕೃಷಿ ಬಹುಮುಖ್ಯ ಪಾತ್ರವಹಿಸುತ್ತದೆ. ಗ್ರಾಮಗಳ ಆರ್ಥಿಕ ಶಕ್ತಿ ದೇಶದ ಆರ್ಥಿಕ ವೇಗಕ್ಕೆ ಹೆಚ್ಚಿನ ಸಾಮರ್ಥ್ಯ ನೀಡುತ್ತದೆ. ಇಂದು ನಾನು ನಿಮ್ಮೊಂದಿಗೆ ಒಂದು ಖುಷಿ ವಿಚಾರ ಹಂಚಿಕೊಳ್ಳಬಯಸುತ್ತೇನೆ. ನಮ್ಮ ದೇಶದ ಕೃಷಿಕ ಸೋದರ ಸೋದರಿಯರು ಕಠಿಣ ಪರಿಶ್ರಮದಿಂದಾಗಿ ಧಾನ್ಯ ಭಂಡಾರವನ್ನು ತುಂಬಿದ್ದಾರೆ. ನಮ್ಮ ದೇಶದಲ್ಲಿ ರೈತಾಪಿ ಜನರ ಪರಿಶ್ರಮದಿಂದಾಗಿ ಈ ವರ್ಷ ಆಹಾರದ ಉತ್ಪಾದನೆ ದಾಖಲೆ ಬರೆದಿದೆ. ನಮ್ಮ ರೈತರು ಹಳೆಯ ದಾಖಲೆಗಳನ್ನು ಮುರಿದಿದ್ದಾರೆ ಎಂಬ ಸಂಕೇತಗಳು ಎಲ್ಲೆಡೆ ಕಂಡು ಬರುತ್ತಿವೆ. ಈ ಬಾರಿ ಗದ್ದೆಗಳಲ್ಲಿ ಪೈರು ಯಾವ ರೀತಿ ನಳನಳಿಸಿದೆ ಎಂದರೆ ಪ್ರತಿದಿನವೂ ಪೊಂಗಲ್ ಮತ್ತು ಬೈಸಾಖಿ ಆಚರಿಸಲಾಗುತ್ತಿದೆಯೇ ಎಂಬ ಭಾವನೆ ಮೂಡಿಸಿದೆ. ಈ ವರ್ಷ ದೇಶದಲ್ಲಿ ಸುಮಾರು 2 ಸಾವಿರದ ಏಳು ನೂರು ಲಕ್ಷ ಟನ್‌ಗಿಂತಲೂ ಹೆಚ್ಚು ಧಾನ್ಯಗಳ ಉತ್ಪಾದನೆ ಆಗಿದೆ. ನಮ್ಮ ರೈತರ ಉತ್ಪಾದನೆಯ ಹಿಂದಿನ ದಾಖಲೆಗಿಂತಲೂ ಶೇಕಡಾ 8 ರಷ್ಟು ಅಧಿಕ ಉತ್ಪಾದನೆಯಾಗಿದೆ. ಅಂದರೆ ಇದು ತನ್ನಲ್ಲೇ ಒಂದು ಅಭೂತಪೂರ್ವವಾದ ಸಾಧನೆಯಾಗಿದೆ. ನಾನು ದೇಶದ ರೈತಾಪಿ ವರ್ಗಕ್ಕೆ ವಿಶೇಷವಾಗಿ ಧನ್ಯವಾದ ಅರ್ಪಿಸಲು ಬಯಸುತ್ತೇನೆ. ನಮ್ಮ ರೈತರು ಸಾಂಪ್ರದಾಯಿಕ ಬೆಳೆಗಳಲ್ಲದೆ ದೇಶದ ಬಡ ಜನತೆಯನ್ನು ಗಮನದಲ್ಲಿರಿಸಿ ಬೇರೆ ಬೇರೆ ಬೇಳೆ ಕಾಳುಗಳನ್ನು ಬೆಳೆಯಲಿ ಎಂಬುದಕ್ಕೂ ಸಹ ರೈತರನ್ನು ಅಭಿನಂದಿಸುತ್ತೇನೆ. ಏಕೆಂದರೆ ಬಡವರಿಗೆ ಬೇಳೆಯಿಂದಲೇ ಅತಿ ಹೆಚ್ಚು ಪ್ರೋಟೀನ್ ಲಭ್ಯವಾಗುತ್ತದೆ. ನಮ್ಮ

ರೈತರು ಬಡವರ ಕೂಗನ್ನು ಕೇಳಿ ಸರಿ ಸುಮಾರು 290 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭಿನ್ನ ಭಿನ್ನವಾದ ಬೇಳೆಕಾಳುಗಳನ್ನು ಬೆಳೆದಿದ್ದಾರೆ. ಇದು ಕೇವಲ ಬೇಳೆಕಾಳುಗಳ ಉತ್ಪಾದನೆಯಲ್ಲ, ಕೃಷಿಕರು ಮಾಡಿದ ನನ್ನ ದೇಶದ ಬಡ ಜನರ ಸೇವೆ. ನನ್ನ ಒಂದು ಪ್ರಾರ್ಥನೆಯನ್ನು, ಒಂದು ವಿನಂತಿಯನ್ನು ತಮ್ಮ ತಲೆ ಮೇಲೆ ಹೊತ್ತು ನನ್ನ ದೇಶದ ಕೃಷಿಕ ಬಂಧುಗಳು ಕಷ್ಟಪಟ್ಟು ದಾಖಲೆಯ ಪ್ರಮಾಣದ ಬೇಳೆಕಾಳುಗಳ ಉತ್ಪಾದನೆ ಮಾಡಿದ್ದಕ್ಕೆ ಅವರಿಗೆ ವಿಶೇಷ ಧನ್ಯವಾದ ಸಲ್ಲಿಸುತ್ತೇನೆ. ನನ್ನ ಪ್ರಿಯ ದೇಶಬಾಂಧವರೆ, ನಮ್ಮ ದೇಶದಲ್ಲಿ ಸರ್ಕಾರದಿಂದ, ಸಮಾಜದ ಮೂಲಕ, ಸಂಸ್ಥೆಗಳಿಂದ, ಸಂಘಟನೆಗಳ ಮೂಲಕ, ಪ್ರತಿಯೊಬ್ಬರಿಂದ ಸ್ವಚ್ಛತೆಯ ಕುರಿತು ಒಂದಲ್ಲಾ ಒಂದು ಕೆಲಸ ನಡೆಯುತ್ತಲೇ ಇರುತ್ತದೆ. ಒಂದು ರೀತಿಯಲ್ಲಿ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿ ಸ್ವಚ್ಛತೆಯ ಬಗ್ಗೆ ಜಾಗರೂಕರಾಗಿ ವರ್ತಿಸುವುದು ಕಂಡು ಬರುತ್ತಿದೆ. ಸರ್ಕಾರ ನಿರಂತರ ಪ್ರಯತ್ನ ನಡೆಸಿದೆ. ಕೆಲ ದಿನಗಳ ಹಿಂದೆ ನೀರು ಮತ್ತು ಶೌಚಕ್ಕೆ ಸಂಬಂಧಿಸಿದ ಭಾರತ ಸರ್ಕಾರದ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯದ ನೇತೃತ್ವದಲ್ಲಿ 23 ರಾಜ್ಯ ಸರ್ಕಾರಗಳ ಉನ್ನತ ಅಧಿಕಾರಿಗಳ ಒಂದು ಕಾರ್ಯಕ್ರಮ ತೆಲಂಗಾಣದಲ್ಲಿ ನಡೆಯಿತು. ಅದು ತೆಲಂಗಾಣ ರಾಜ್ಯದ ವಾರಂಗಲ್‌ನಲ್ಲಿ ಸೆಮಿನಾರ್ ಕೋಣೆಗಳಿಗೆ ಮಾತ್ರ ಸೀಮಿತವಾಗಿರದೇ ಸ್ವಚ್ಛತೆಯ ಕೆಲಸದ ಮಹತ್ವವೇನು ಎಂಬುದನ್ನು ಪ್ರಯೋಗಾತ್ಮಕವಾಗಿ ಪ್ರತ್ಯಕ್ಷವಾಗಿ ಮಾಡಿ ತೋರುವ ಕಾರ್ಯಕ್ರಮವಾಗಿತ್ತು. ಫೆಬ್ರವರಿ 17–18 ರಂದು ಹೈದ್ರಾಬಾದ್‌ನಲ್ಲಿ ಶೌಚ ಗುಂಡಿ ಖಾಲಿ ಮಾಡುವ ಅಭ್ಯಾಸ ಆಯೋಜಿಸಲಾಗಿತ್ತು. 6 ಮನೆಗಳ ಶೌಚ ಗುಂಡಿಗಳನ್ನು ಖಾಲಿ ಮಾಡಿಸಿ ಅದರ ಸ್ವಚ್ಛತೆ ಮಾಡಲಾಯಿತು ಮತ್ತು ಎರಡು ಗುಂಡಿ ಶೌಚಗಳಿಗೆ ಬಳಸಿದ ಗುಂಡಿಗಳನ್ನು ತೆರವುಗೊಳಿಸಿ ಮತ್ತೆ ಬಳಸಬಹುದು ಎಂದು ಅಧಿಕಾರಿಗಳು ಸ್ವತಃ ತೋರಿಸಿಕೊಟ್ಟರು. ಅಲ್ಲದೇ ಈ ಹೊಸ ತಾಂತ್ರಿಕತೆಯುಕ್ತ ಶೌಚಾಲಯಗಳು ಎಷ್ಟು ಅನುಕೂಲಕರ ಎಂದು ತೋರಿಸಿಕೊಟ್ಟರು. ಅಲ್ಲದೇ ಇವುಗಳನ್ನು ಸ್ವಚ್ಛಗೊಳಿಸಲು ಯಾವುದೇ ರೀತಿ ಅನಾನುಕೂಲತೆ ಆಗುವುದಿಲ್ಲ, ಯಾವುದೇ ರೀತಿ ಸಂಕೋಚವಾಗುವುದಿಲ್ಲ ಮತ್ತು ಮಾನಸಿಕತೆ ಕೂಡಾ ಅಡ್ಡಿಯಾಗುವುದಿಲ್ಲ



ಎಂದು ತೋರಿಸಿಕೊಟ್ಟರು. ಯಾವುದನ್ನು ನಾವು–ನೀವು ತ್ಯಾಜ್ಯ ಎಂದು ಪರಿಗಣಿಸುತ್ತೇವೆ ಅದನ್ನು ಗೊಬ್ಬರದ ರೂಪದಲ್ಲಿ ನೋಡಿದಾಗ ಇದು ಒಂದು ರೀತಿಯ ಕಪ್ಪು ಬಂಗಾರವೆಂದೇ ಹೇಳಬಹುದು. ತ್ಯಾಜ್ಯದಿಂದ ಸಂಪತ್ತು ಹೇಗಾಗುತ್ತದೆ ಎಂಬುದನ್ನು ನಾವು ನೋಡಬಹುದು. ಇದು ಸಾಬೀತೂ ಆಗಿದೆ. 6 ಸದಸ್ಯರಿರುವ ಕುಟುಂಬಕ್ಕೆ ಒಂದು ಮಾದರಿ 'ಎರಡು ಗುಂಡಿ ಶೌಚಾಲಯದ' ಮಾದರಿ ಸುಮಾರು 5 ವರ್ಷಗಳಿಗೆ ತುಂಬುತ್ತದೆ. ನಂತರ ಕಸವನ್ನು ತೆಗೆದು ಮತ್ತೊಂದು ಗುಂಡಿಗೆ ತಿರುಗುವಂತೆ ಮಾಡಬಹುದಾಗಿದೆ. 6 ರಿಂದ 11 ತಿಂಗಳೊಳಗೆ ಗುಂಡಿಯಲ್ಲಿರುವ ಕಸ ಸಂಪೂರ್ಣ ಕಳೆತುಹೋಗುತ್ತದೆ. ಈ ಕಳೆತ ಕಸವನ್ನು ಬಳಸುವುದು ಸಂಪೂರ್ಣ ಸುರಕ್ಷಿತವಾಗಿದೆ. ಗೊಬ್ಬರದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ಎನ್‌ಪಿಕೆಯಾಗಿ ಬಳಸಬಹುದು. ರೈತಬಾಂಧವರಿಗೆ 'ಎನ್‌ಪಿಕೆ' ಪರಿಚಯ ಚೆನ್ನಾಗೇ ಇದೆ. ಸಾರಜನಕ, ರಂಜಕ, ಪೊಟ್ಯಾಶಿಯಂ ಪೋಷಕಾಂಶಗಳಾಗಿವೆ. ಇವು ಕೃಷಿ ಕ್ಷೇತ್ರದಲ್ಲಿ ಬಹಳ ಉತ್ತಮವಾದ ಗೊಬ್ಬರವೆಂದು ಪರಿಗಣಿಸಲಾಗುತ್ತವೆ. ಸರ್ಕಾರ ಹೇಗೆ ಈ ಆರಂಭವನ್ನು ಕೈಗೊಂಡಿದೆಯೋ ಹಾಗೇ ಬೇರೆಯವರೂ ಇಂಥ ಉಪಕ್ರಮದ ಪ್ರಯೋಗಗಳನ್ನು ಮಾಡಿರಬಹುದು. ಈಗ ದೂರದರ್ಶನದಲ್ಲಿ ಸ್ವಚ್ಛತಾ ವಿಷಯಗಳ ಒಂದು ವಿಶಿಷ್ಟ ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಅದರಲ್ಲಿ ಇಂಥ ವಿಷಯಗಳು ಎಷ್ಟು ಬೆಳಕಿಗೆ ಬರುತ್ತವೆಯೋ ಅಷ್ಟು ಲಾಭವಾಗುತ್ತದೆ. ಸರ್ಕಾರದ ವಿಭಿನ್ನ ಇಲಾಖೆಗಳು ಸ್ವಚ್ಛತಾ ಪಾಕ್ಷಿಕವನ್ನು ಆಚರಿಸುತ್ತಿವೆ

ಮಾರ್ಚ ತಿಂಗಳ ಮೊದಲ ಪಾಕ್ಷಿಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ, ಅವರೊಂದಿಗೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವಾಲಯ, ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಸ್ವಚ್ಛತಾ ಅಭಿಯಾನಕ್ಕೆ ಕೈ ಜೋಡಿಸಲಿವೆ. ದ್ವಿತೀಯ ಪಾಕ್ಷಿಕದಲ್ಲಿ ಇನ್ನೆರಡು ಸಚಿವಾಲಯಗಳು – ಹಡಗು ಸಚಿವಾಲಯ, ಜಲಸಂಪನ್ಮೂಲ ಸಚಿವಾಲಯ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುತ್ಥಾನ, ಸಚಿವಾಲಯಗಳು ಕೂಡಾ ಸ್ವಚ್ಛತಾ ಅಭಿಯಾನವನ್ನು ಮುಂದುವರಿಸಲಿವೆ.

ನಮ್ಮ ದೇಶದಲ್ಲಿ ಯಾರೇ ನಾಗರಿಕರು ಏನಾದರೂ ಒಳ್ಳೇ ಕೆಲಸಗಳನ್ನು ಮಾಡಿದರೆ ಸಂಪೂರ್ಣ ದೇಶ ಒಂದು ಹೊಸ ಬೆಳಕಿನ ಅನುಭವ ಹೊಂದುತ್ತದೆ, ಅದು ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ರಿಯೋ ಒಲಿಂಪಿಕ್ಸ್‌ನಲ್ಲಿ ನಮ್ಮ ದಿವ್ಯಾಂಗ ಕ್ರೀಡಾಳುಗಳು ನೀಡಿದ ಪ್ರದರ್ಶನವನ್ನು ನಾವೆಲ್ಲರೂ ಸ್ವಾಗತಿಸಿದ್ದೇವೆ. ಇದೇ ತಿಂಗಳು ಆಯೋಜಿಸಿದ್ದ ಅಂಧರ ಟಿ–20 ವಿಶ್ವಕಪ್ ಫೈನಲ್‌ನಲ್ಲಿ ಭಾರತ ಪಾಕಿಸ್ತಾನವನ್ನು ಸೋಲಿಸಿ ಸತತವಾಗಿ 2 ನೇ ಬಾರಿಗೆ ವಿಶ್ವ ಚಾಂಪಿಯನ್ ಆಗಿ ದೇಶದ ಗೌರವವನ್ನು ಹೆಚ್ಚಿಸಿದೆ. ತಂಡದ ಎಲ್ಲ ಕ್ರೀಡಾಳುಗಳನ್ನು ನಾನು ಇನ್ನೊಮ್ಮೆ ಅಭಿನಂದಿಸುತ್ತೇನೆ. ದೇಶದ ದಿವ್ಯಾಂಗರ ಈ ಗೆಲುವಿಗೆ ನನಗೆ ಹೆಮ್ಮೆ ಎನಿಸುತ್ತದೆ. ದಿವ್ಯಾಂಗ ಸೋದರ ಸೋದರಿಯರು ಬಹಳ ಸಾಮರ್ಥ್ಯವುಳ್ಳವರು, ಧೃಡ ನಿಶ್ಚಯ ಹೊಂದಿದವರು, ಸಾಹಸಿಗಳೂ ಮತ್ತು ಸಂಕಲ್ಪವುಳ್ಳವರೂ ಆಗಿರುತ್ತಾರೆ ಎಂಬುದು ನನ್ನ ಅಭಿಮತ. ಪ್ರತಿ ಕ್ಷಣವೂ ನಮಗೆ ಅವರಿಂದ ಏನಾದರೂ ಕಲಿಯಲು ಸಿಗುತ್ತದೆ. ಕ್ರೀಡೆಯ ವಿಚಾರವಾಗಲಿ ಇಲ್ಲ ಅಂತರಿಕ್ಷ ವಿಜ್ಞಾನದ್ದಾಗಲಿ, ನಮ್ಮ ದೇಶದ ಮಹಿಳೆಯರು ಯಾವುದರಲ್ಲೂ ಹಿಂದಿಲ್ಲ. ಹೆಗಲಿಗೆ ಹೆಗಲು ಸೇರಿಸಿ ಮುನ್ನಡೆಯುತ್ತಿದ್ದಾರೆ ಮತ್ತು ದೇಶದ ಹೆಸರನ್ನು ಉಜ್ವಲಗೊಳಿಸುತ್ತಿದ್ದಾರೆ. ಕೆಲ ದಿನಗಳ ಹಿಂದೆ ಏಷ್ಯಾಡ್ ರಗ್‌ಬಿ ಸೆವೆನ್ಸ್ ಟ್ರೋಫಿ ಸ್ಪರ್ಧೆಯಲ್ಲಿ ನಮ್ಮ ಮಹಿಳಾ ಕ್ರೀಡಾಳುಗಳು ಬೆಳ್ಳಿ ಪದಕ ಗೆದ್ದಿದ್ದಾರೆ. ಅವರೆಲ್ಲರಿಗೆ ನನ್ನ ಅನಂತ ಅಭಿನಂದನೆಗಳು.

ಮಾರ್ಚ 8 ರಂದು ವಿಶ್ವದೆಲ್ಲೆಡೆ ವಿಶ್ವ ಮಹಿಳಾ ದಿನ ಆಚರಿಸಲಾಗುತ್ತದೆ. ಭಾರತದಲ್ಲೂ ಹೆಣ್ಣು ಮಕ್ಕಳಿಗೆ ಮಹತ್ವ ನೀಡಲು ಮತ್ತು ಕುಟುಂಬಗಳಲ್ಲಿ ಹಾಗೂ ಸಮಾಜದಲ್ಲಿ ಅವರ ಬಗ್ಗೆ ಜಾಗರೂಕತೆ ಹೆಚ್ಚಬೇಕು ಹಾಗೂ ಸಂವೇದನಾಶೀಲತೆ ಹೆಚ್ಚಬೇಕು. 'ಬೇಟಿ ಬಚಾವೊ ಬೇಟಿ

ಪಢಾವೋ' ಈ ಆಂದೋಲನ ತೀವ್ರವಾಗಿ ಮುನ್ನಡೆಯುತ್ತಿದೆ. ಇಂದು ಇದು ಕೇವಲ ಸರ್ಕಾರಿ ಕಾರ್ಯಕ್ರಮವಾಗಿ ಉಳಿದಿಲ್ಲ. ಇದು ಸಾಮಾಜಿಕ ಸಂವೇದನೆಯ ಮತ್ತು ಸಾರ್ವಜನಿಕ ಶಿಕ್ಷಣದ ಅಭಿಯಾನವಾಗಿದೆ.

ಕಳೆದ 2 ವರ್ಷಗಳಿಂದ ಈ ಕಾರ್ಯಕ್ರಮ ಸಾಮಾನ್ಯ ಜನತೆಯನ್ನು ಒಗ್ಗೂಡಿಸಿದೆ. ದೇಶದ ಮೂಲೆ ಮೂಲೆಯಲ್ಲೂ ಈ ಜ್ವಲಂತ ವಿಷಯದ ಕುರಿತು ಜನರು ಯೋಚಿಸುವಂತೆ ಮಾಡಿದೆ. ವರ್ಷಗಳಿಂದ ನಡೆದು ಬರುತ್ತಿರುವ ಪದ್ಧತಿ ಆಚರಣೆಗಳ ಕುರಿತು ಜನರ ಆಲೋಚನಾ ಲಹರಿಯನ್ನು ಬದಲಿಸಿದೆ.

ಹೆಣ್ಣು ಮಗುವಿನ ಜನನ ಸಂದರ್ಭದಲ್ಲಿ ಉತ್ಸವದಾಚರಣೆ ಕೈಗೊಳ್ಳಲಾಯಿತು ಎಂಬ ಸುದ್ದಿಗಳು ಬಂದಾಗ ಬಹಳ ಸಂತೋಷವೆನಿಸುತ್ತದೆ. ಒಂದು ರೀತಿ ಹೆಣ್ಣು ಮಕ್ಕಳ ಬಗ್ಗೆ ಸಕಾರಾತ್ಮಕ ಆಲೋಚನೆಗಳು ಸಾಮಾಜಿಕ ಸ್ವೀಕೃತಿಗೆ ಕಾರಣವಾಗುತ್ತಿವೆ. ತಮಿಳುನಾಡಿನ ಕಡ್ಲೂರ್ ಜಿಲ್ಲೆಯಲ್ಲಿ ಒಂದು ವಿಶೇಷ ಅಭಿಯಾನದ ಮೂಲಕ ಬಾಲ್ಯ ವಿವಾಹಕ್ಕೆ ನಿರ್ಬಂಧ ಹೇರಲಾಗಿದೆ ಎಂದು ಕೇಳಿಪಟ್ಟಿದ್ದೇನೆ. ಇಲ್ಲಿವರೆಗೆ ಸುಮಾರು 175 ಬಾಲ್ಯವಿವಾಹಗಳನ್ನು ತಡೆಯಲಾಗಿದೆ. ಜಿಲ್ಲಾಡಳಿತ 'ಸುಕನ್ಯಾ ಸಮೃದ್ಧಿ ಯೋಜನೆಯ' ಮೂಲಕ ಸುಮಾರು 55–60 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳ ಬ್ಯಾಂಕ್ ಅಕೌಂಟ್‌ಗಳನ್ನು ತೆರೆದಿದೆ. ಜಮ್ಮು ಕಾಶ್ಮೀರದ ಕಟುವಾ ಜಿಲ್ಲೆಯಲ್ಲಿ ಸಮ್ಮಿಳಿತ ಮಾದರಿ ಮೂಲಕ ಮೂಲಕ ಎಲ್ಲ ವಿಭಾಗಗಳನ್ನೂ 'ಬೇಟಿ ಬಚಾವೊ ಬೇಟಿ ಪಢಾವೋ' ಯೋಜನೆಗೆ ಜೋಡಿಸಿದೆ.

ಗ್ರಾಮ ಸಭೆಗಳ ಸಂಘಟನೆ ಜೊತೆಗೆ ಜಿಲ್ಲಾಡಳಿತದ ಮೂಲಕ ಅನಾಥ ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು, ಅವರ ಶಿಕ್ಷಣವನ್ನು ಖಾತ್ರಿಗೊಳಿಸುವುದು ಮುಂತಾದವುಗಳ ಸಾಕಷ್ಟು ಪ್ರಯತ್ನಗಳು ನಡೆದಿವೆ. ಮಧ್ಯ ಪ್ರದೇಶದಲ್ಲಿ 'ಹರ್ ಘರ್ ದಸ್ತಕ್' ಎಂಬ ಕಾರ್ಯಕ್ರಮದ ಪ್ರಯುಕ್ತ ಗ್ರಾಮ ಗ್ರಾಮದ ಮನೆಮನೆಗಳಲ್ಲೂ ಹೆಣ್ಣು ಮಕ್ಕಳ ಶಿಕ್ಷಣದ ಕುರಿತು ಒಂದು ಅಭಿಯಾನ ಜಾರಿಯಲ್ಲಿದೆ.

ರಾಜಸ್ಥಾನದಲ್ಲಿ 'ಅಪನಾ ಬಚ್ಚಾ, ಅಪನಾ ವಿದ್ಯಾಲಯ' ಅಭಿಯಾನದ ಮೂಲಕ ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿನಿಯರನ್ನು ಮತ್ತೆ ಶಾಲೆಗೆ ಸೇರ್ಪಡೆಗೊಳಿಸುವ, ಪುನಃ ಓದಲು ಪ್ರೇರೆಪಿಸುವ ಕೆಲಸ ಮಾಡಲಾಗುತ್ತಿದೆ. ಒಟ್ಟಾರೆ ಹೇಳುವುದಾದರೆ 'ಬೇಟಿ ಬಚಾವೊ ಬೇಟಿ ಪಢಾವೋ' ಯೋಜನೆ ಹಲವು ರೂಪಗಳನ್ನು ಪಡೆದುಕೊಂಡಿದೆ. ಸಂಪೂರ್ಣ ಆಂದೋಲನ ಜನಾಂದೋಲನವಾಗಿ ಪರಿವರ್ತನೆಗೊಂಡಿದೆ. ಹೊಸ ಕಲ್ಪನೆಗಳು ಅದರೊಂದಿಗೆ ಸೇರಿವೆ. ಸ್ಥಳೀಯ ಅವಶ್ಯಕತೆ ಅನುಸಾರ ಅದನ್ನು ಬದಲಿಸಲಾಗಿದೆ. ಇದನ್ನು ನಾನು ಒಂದು ಶುಭ ಸಂಕೇತವೆಂದು ಭಾವಿಸುತ್ತೇನೆ. ಮಾರ್ಚ 8 ರಂದು ನಾವು ಮಹಿಳಾ ದಿನ ಆಚರಿಸುವಾಗ ನಮ್ಮೆಲ್ಲರ ಭಾವನೆ ಒಂದೇ ಆಗಿರುತ್ತದೆ. "ಮಹಿಳೆ, ಆಕೆ ಒಂದು ಶಕ್ತಿ, ಆಕೆ ಸಶಕ್ತಳು, ಆಕೆ ಭಾರತೀಯ ನಾರಿ ಹೆಚ್ಚಲ್ಲ ಕಡಿಮೆಯೂ ಅಲ್ಲ, ಆಕೆ ಎಲ್ಲದರಲ್ಲಿ ಸಮಾನ ಅಧಿಕಾರ ಪಡೆದಿದ್ದಾಳೆ" ನನ್ನ ಪ್ರಿಯ ದೇಶವಾಸಿಗಳೇ ನಿಮ್ಮೆಲ್ಲರಿಗೂ ಮನ್ ಕಿ ಬಾತ್‌ನಲ್ಲಿ ಕಾಲ ಕಾಲಕ್ಕೆ ಒಂದಲ್ಲ ಒಂದು ಮಾತುಕತೆಗೆ ಅವಕಾಶ ಸಿಗುತ್ತದೆ. ನೀವೂ ಕ್ರೀಯಾಶೀಲತೆಯೊಂದಿಗೆ ಒಗ್ಗೂಡುತ್ತಿರುತ್ತೀರಿ. ನಿಮ್ಮಿಂದ ನನಗೂ ಸಾಕಷ್ಟು ತಿಳಿದುಕೊಳ್ಳುವ ಅವಕಾಶ ಸಿಗುತ್ತದೆ. ವಿಶ್ವದಲ್ಲಿ ಏನಾಗುತ್ತಿದೆ. ಗ್ರಾಮಗಳಲ್ಲಿ, ಬಡಜನರ ಮನದಲ್ಲಿ ಏನು ನಡೆಯುತ್ತಿದೆ ಎಂಬುದು ನನ್ನವರೆಗೂ ತಲುಪುತ್ತದೆ. ನಿಮ್ಮ ಪಾಲ್ಗೊಳ್ಳುವಿಕೆಗೆ ನಾನು ಆಭಾರಿಯಾಗಿದ್ದೇನೆ. ಅನಂತ ಅನಂತ ಧನ್ಯವಾದಗಳು. ❑

(58ನೇ ಪುಟದಿಂದ)

# 2017–18 ನೇ ಸಾಲಿನ ಆಯವ್ಯಯದ ಮುಖ್ಯಾಂಶಗಳು

**ವೈಯಕ್ತಿಕ ಆದಾಯ ತೆರಿಗೆ**

1. 2.50 ಲಕ್ಷದಿಂದ 5 ಲಕ್ಷದವರೆಗೆ ಆದಾಯ ಇರುವ ತೆರಿಗೆದಾರರು ಈ ಮಿತಿಯಲ್ಲಿ ನೀಡುತ್ತಿದ್ದ ತೆರಿಗೆಯನ್ನು 10% ರಿಂದ 5% ಗೆ ಇಳಿಸಲಾಗಿದೆ. ಇದು ಇಂತಹ ತೆರಿಗೆದಾತರ ಭಾರವನ್ನು ಅರ್ಧಕ್ಕೆ ಇಳಿಸುವದಲ್ಲದೆ ಪ್ರತಿಯೊಬ್ಬರಿಗೂ 12,500 ರೂಪಾಯಿಯಷ್ಟು ಕಡಿಮೆಯಾಗಲಿದೆ (ಇದರಿಂದ ರೂ. 15,500 ಕೋಟಿ ಆದಾಯ ಕಡಿಮೆಯಾಗುತ್ತದೆ).
2. ರೂ. 2.5 ರಿಂದ 5.00 ಲಕ್ಷದ ವರೆಗಿನ ನೀಡುವ ರೂ. 5000ದ ರಿಯಾಯತಿಯನ್ನು ರೂ. 2,500 ಕ್ಕೆ ಇಳಿಸಲಾಗಿದೆ. (3.5 ಲಕ್ಷದ ವರೆಗೆ ಮಾತ್ರ).
3. ರೂ. 50.00 ಲಕ್ಷದಿಂದ ಒಂದು ಕೋಟಿಯವರೆಗೆ ಆದಾಯವಿರುವ ವ್ಯಕ್ತಿಗಳಿಗೆ 10% ಸರಚಾರ್ಜ ವಿಧಿಸಲಾಗುವದು (ಇದರಿಂದ 2,700 ಕೋಟಿ ರೂಪಾಯಿ ಆದಾಯದ ನಿರೀಕ್ಷೆ ಇದೆ).

**ಅಪರೋಕ್ಷ ತೆರಿಗೆ**

1. ಎಲ್‌ಎನ್‌ಜಿ ಮೇಲಿನ ಆಯಾತ ತೆರಿಗೆಯನ್ನು 5% ದಿಂದ 2.5%ಗೆ ಇಳಿಸಲಾಗಿದೆ. ಇದರಿಂದ ರಾಸಾಯನಿಕ, ಖನಿಜ ತೈಲ ಮತ್ತು ಉಕ್ಕು ಕಾರ್ಖಾನೆಗಳಿಗೆ ಲಾಭವಾಗಲಿದೆ.
2. ಸಿವಿಡಿ, ಮತ್ತು ಎಸ್‌ಎಡಿಗಳ ಮೇಲಿನ ಆಯಾತ ತೆರಿಗೆ ಮತ್ತು ಅತಿ ಚಿಕ್ಕಗಾತ್ರದ ಪಿಓಎಸ್ ಕಾರ್ಡ್ ರೀಡರ್ಸ್ ಮೈಕ್ರೊ ಎಟಿಎಮ್‌ಗಳ ಫಿಂಗರ್ ಪ್ರಿಂಟ್ ರೀಡರ್ಸ್, ಸ್ಕ್ಯಾನರ್‌ಗಳು ಐಡಿ ಸ್ಕ್ಯಾನರಗಳು ಮೇಲಿನ ತೆರಿಗೆಗೆ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಜಿಎಸ್‌ಟಿ ಕಾರ್ಯ ಪ್ರಗತಿಯಲ್ಲಿದೆ 1 ನೇ ಜುಲೈ 2017 ರಿಂದ ಜಾರಿಯಾಗುವ ನಿರೀಕ್ಷೆ ಇದೆ. ❑

ಸ್ವಾತಂತ್ರ್ಯದ ಸಂದರ್ಭದಲ್ಲಿ ದೇಶದಲ್ಲಿದ್ದ ಜನಸಂಖ್ಯೆಯ ಶೇ. 70ರಷ್ಟು ಪ್ರಮಾಣದ ಬಡತನವನ್ನು ವಿವಿಧ ಕಲ್ಯಾಣ ಕಾರ್ಯಗಳ ಮೂಲಕ 2011–22 ರ ವೇಳೆಗೆ, ಸುಮಾರು ಶೇ. 22ಕ್ಕೆ (ತೆಂಡೂಲ್ಕರ್ ವರದಿ) ಇಳಿಸಲು ಸಾಧ್ಯವಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯ ಪ್ರತಿ ಕಣ್ಣೀರ ಹನಿಯನ್ನು ಒರೆಸುವಲ್ಲಿ, ಮೂಲಭೂತ ಅಗತ್ಯಕ್ಕೆ ಸ್ಪಂದಿಸುವಲ್ಲಿ ಇನ್ನೂ ದೂರವೇ ಉಳಿದಿದ್ದೇವೆಂದು ಹೇಳಬಹುದು.

**ಸಾರ್ವತ್ರಿಕ ಮೂಲಾದಾಯ – ಯುಬಿಐ :** ಈ ಹಿನ್ನೆಲೆಯಲ್ಲಿ ದೇಶದಲ್ಲಿ ಬಡತನ ನಿರ್ಮೂಲಗೊಳಿಸುವ ವಿವಿಧ ಸಾಮಾಜಿಕ ವಿಧಾಯಕ ಕಾರ್ಯಕ್ರಮಗಳಿಗೆ ಪರ್ಯಾಯವಾಗಿ ಸಾರ್ವತ್ರಿಕ ಮೂಲ ಆದಾಯ ಕಲ್ಪಿಸುವ ಪರಿಕಲ್ಪನೆಯನ್ನು 2016–17ರ ಆರ್ಥಿಕ ಸಮೀಕ್ಷೆ ಪ್ರತಿಪಾದಿಸಿದೆ. ದೇಶದ ಪ್ರತಿ ನಾಗರಿಕ ವ್ಯಕ್ತಿ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಮೂಲ ಆದಾಯ ಪಡೆದುಕೊಳ್ಳುವ ಹಕ್ಕು ಹೊಂದಿರಬೇಕೆಂಬುದು ಇದರ ಹಿಂದಿರುವ ಆಶಯವಾಗಿದೆ.

**ಸಾರ್ವತ್ರಿಕ ಮೂಲಾದಾಯ ಪರಿಕಲ್ಪನೆ ಮೂರು ಅಂಶಗಳನ್ನು ಒಳಗೊಂಡಿದೆ – 1. ಸಾರ್ವತ್ರಿಕತೆ :** ಇದು ಎಲ್ಲರಿಗೂ ಅನ್ವಯಿಸುತ್ತದೆ. **2. ಬೇಷರತ್ :** ಫಲಾನುಭವಿಗೆ ವರ್ಗಾವಣೆಯಾಗುವ ಹಣಕ್ಕೆ ಸಂಬಂಧಿಸಿದಂತೆ ಯಾವುದೇ ಪೂರ್ವ ಷರತ್ತು ಇರುವುದಿಲ್ಲ. **3. ಪರಿವರ್ತಕ :** ಬಡ ಜನರ 'ನಿರ್ಧಾರ ಕೈಗೊಳ್ಳುವ' ಸಾಮರ್ಥ್ಯವನ್ನು ಗೌರವಿಸುವ ಭಾವನೆ ಹೊಂದಿರುತ್ತದೆಯೆ ಹೊರತು ಅವರ ಸ್ವಾತಂತ್ರ್ಯ ಮಿತಿಗೊಳಿಸುವುದಲ್ಲ.

**ಪರವಾದ ಅಂಶಗಳು – 1. ಸಾಮಾಜಿಕ ನ್ಯಾಯ :** ಎಲ್ಲ ವ್ಯಕ್ತಿಗಳು ಸಮಾಜದ ಒಂದು ಭಾಗವಾಗದ ಹೊರತೂ ಆ ಸಮಾಜ ಸುಸ್ಥಿರವೆನಿಸದು. **2. ಬಡತನ ನಿವಾರಣೆ :** ಸಾರ್ವತ್ರಿಕ ಮೂಲಾದಾಯ ವ್ಯವಸ್ಥೆ, ಬಡತನವನ್ನು ತ್ವರಿತವಾಗಿ ನಿರ್ಮೂಲಗೊಳಿಸುವ ಕ್ರಮವಾಗಬಲ್ಲದು. ಇಲ್ಲಿ ಹಣ ವಿತರಿಸುವ ವ್ಯವಸ್ಥೆ ಕಾರ್ಯ ದಕ್ಷತೆಯಿಂದ ಕೂಡಿರಬೇಕು. **3. ಉದ್ಯೋಗ :** ಉದ್ಯೋಗ ಅಸ್ಥಿರತೆ ಇರುವ ಸಂದರ್ಭಗಳಲ್ಲಿ ಕನಿಷ್ಠ ಜೀವನ ನಿರ್ವಹಣೆ ಗುಣಮಟ್ಟ ನಿರ್ವಹಿಸುವ ಸಾಮಾಜಿಕ ಜಬಾಬ್ದಾರಿಯನ್ನು ಸಾರ್ವತ್ರಿಕ ಮೂಲಾದಾಯ ಪರಿಕಲ್ಪನೆ ನಿರ್ವಹಿಸುತ್ತದೆ. ಇದು ಹಣಕ್ಕಾಗಿ ಯಾವುದೇ ಕೆಲಸವನ್ನು ಮೊರೆಹೋಗುವ ಶೋಷಣೆಯನ್ನು ತಪ್ಪಿಸುತ್ತದೆ. **4. ಏಜೆನ್ಸಿ:** ಬಡವರು ಸರ್ಕಾರಿ ಕಾರ್ಯಕ್ರಮಗಳ ಉದ್ದೇಶಿತ ಗುಂಪುಗಳಾಗಿರುತ್ತದೆ. ನೀತಿ ಕಾರ್ಯಕ್ರಮಗಳ ಉದ್ದೇಶ ಉತ್ತಮವಾಗಿದ್ದರೂ, ಎಲ್ಲೊ ಒಂದೆಡೆ, ಅವರನ್ನು ಆರ್ಥಿಕ ನಿರ್ಧಾರ ಕೈಗೊಳ್ಳದಂತೆ ಮಾಡಬಹುದಾಗಿದೆ. ಬೇಷರತ್ ನಗದು ವರ್ಗಾವಣೆ ಅವರನ್ನು ಪರಿವರ್ತಕರನ್ನಾಗಿ ಪರಿಗಣಿಸುತ್ತದೆ. **5. ವಾಸ್ತವಿಕ ಪ್ರಯೋಜನ :** ಬಡತನಕ್ಕೀಡಾಗಿರುವ ಪರಿಸ್ಥಿತಿ / ಸಂದರ್ಭ ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತದೆ. ಸರ್ಕಾರ / ಆಡಳಿತಗಳಿಂದ ಅವುಗಳನ್ನು ಮೇಲ್ನೋಟಕ್ಕೆ ಅರಿತುಕೊಳ್ಳಲಾಗದು. ಆದ್ಯತೆಗಳೂ ವಿಭಿನ್ನವಾಗಿರುತ್ತವೆ. ಕುಟುಂಬಕ್ಕೆ ಬದಲಾಗಿ ಓರ್ವ ವ್ಯಕ್ತಿಯನ್ನು ಒಂದು ಘಟಕವಾಗಿ ಅದರಲ್ಲಿಯೂ ವಿಶೇಷವಾಗಿ ಮಹಿಳೆಯನ್ನು ಪರಿಗಣಿಸುವ ಮೂಲಕ ಯುಬಿಐ ಪರಿಕಲ್ಪನೆ ನೆರವಾಗಬಲ್ಲದು. **6. ಆಡಳಿತಾತ್ಮಕ ದಕ್ಷತೆ :** ಜನ್‌ಧನ್, ಆಧಾರ್ ಮತ್ತು ಮೊಬೈಲ್ (ಜೆಎಎಂ) ನಂತಹ ಯೋಜನೆಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವ ಈ ಸಂದರ್ಭದಲ್ಲಿ ಮೂಲಾದಾಯ ಪರಿಕಲ್ಪನೆಯನ್ನು ದಕ್ಷವಾಗಿಸಲು ಇದು ಸಕಾಲವಾಗಿದೆ.

## ನಿಮಗಿದು ತಿಳಿದಿದೆಯೇ?

## ಆರ್ಥಿಕ ಸಮೀಕ್ಷೆ ಅಭಿಪ್ರಾಯ

**ವಿರೋಧ ಅಭಿಪ್ರಾಯಗಳು – 1. ಮೂಲಾದಾಯ ಕ್ರಮ ಕೆಲಸ ಪ್ರಚೋದನೆ ಕಡಿಮೆಗೊಳಿಸುತ್ತದೆ :** ಇದು ಉತ್ಪ್ರೇಕ್ಷಿತ ಹೇಳಿಕೆಯೆಂದು ಭಾವಿಸಲಾಗಿದೆ. ಮೂಲಾದಾಯ ಕನಿಷ್ಠ ಮಟ್ಟದಲ್ಲಿ ಇರುವ ಕಾರಣ ಅದು ಕೆಲಸದ ಸಂಸ್ಕೃತಿ ಮೇಲೆ ದುಷ್ಪರಿಣಾಮ ಬೀರುವುದಿಲ್ಲ. **2. ಮೂಲಾದಾಯ ಪರಿಕಲ್ಪನೆಯನ್ನು ಉದ್ಯೋಗ ವಿಚಾರದಿಂದ ಬೇರ್ಪಡಿಸಬೇಕೆ?:** ಬಲ್ಲಿದರ ಹಾಗೂ ಅವಕಾಶ ಪಡೆದವರ ವಿಚಾರದಲ್ಲಿ ಈ ವಿಷಯ ಈಗಾಗಲೇ ಪ್ರಚಲಿತದಲ್ಲಿದೆ. ಯಾವುದೇ ಸಮಾಜದಲ್ಲಿ ವಂಶಪಾರಂಪರ್ಯ ಮತ್ತು ಕೆಲಸಕ್ಕೆ ಸಂಬಂಧಿಸಿರದ ಆದಾಯ ಸ್ವೀಕರಿಸುವ ಪದ್ಧತಿ ಇದೆ. ಇಲ್ಲಿ ಆದಾಯ – ಉದ್ಯೋಗಕ್ಕೆ ಸಂಬಂಧವಿಲ್ಲ. **3. ಪುನರ್‌ಕೊಡುಗೆ :** ಸಮಾಜ ಒಂದು ವ್ಯಕ್ತಿಗೆ ಮೂಲಾದಾಯ ಒದಗಿಸಿದಲ್ಲಿ ಅದು ಆತನಿಂದ ಏನನ್ನು ನಿರೀಕ್ಷಿಸುತ್ತದೆ? ಉತ್ತರ : ಸಾಮಾನ್ಯವಾಗಿ ಆ ವ್ಯಕ್ತಿ ಸಮಾಜದ ಒಳಿತಿಗಾಗಿ ಶ್ರಮಿಸುತ್ತಾನೆ. ವೇತನವಿಲ್ಲದೆ ಸಮಾಜದ ಒಳಿಗಿಗೆ ಶ್ರಮಿಸುವ ವಿಚಾರಗಳನ್ನು ಇಲ್ಲಲಿ ತರಬಹುದು. ಉದಾಹರಣೆಗೆ ಗೃಹಿಣಿ ಮನೆಯಲ್ಲಿ ಮಾಡುವ ಕೆಲಸ ಬಹುತೇಕ ಆರ್ಥಿಕವಾಗಿ ಗುರುತಿಸಲ್ಪಡುವುದಿಲ್ಲ.

**ಬಡತನ ನಿರ್ಮೂಲನೆ ಕಾರ್ಯಕ್ರಮಗಳು ಎದುರಿಸುತ್ತಿರುವ ತೊಂದರೆಗಳು :** 1. ಸಂಪನ್ಮೂಲ ಬಡವಡೆಯಲ್ಲಿ ಅಸಮಾನತೆ. ಮಾಹಿತಿ ಪ್ರಕಾರ, ಹಿಂದುಳಿದ ಪ್ರದೇಶಗಳಲ್ಲಿ ಬಡವರು ಕಡಿಮೆ ಪಾಲನ್ನು ಪಡೆಯುತ್ತಾರೆ. 2. ಅರ್ಹ ಫಲಾನುಭವಿಗಳು ಪಟ್ಟಿಯಲ್ಲಿ ಇಲ್ಲದಿರುವುದು. 3. ವ್ಯವಸ್ಥೆಯಲ್ಲಿ ಸೋರಿಕೆ

**ಯುಬಿಐನಿಂದ ಪರಿಹಾರ? :** 1. ಪರಿಕಲ್ಪನಾತ್ಮಕವಾಗಿ ಮೊದಲನೆಯದಾಗಿ ಯುಬಿಐ, ಫಲಾನುಭವಿಯ ಬ್ಯಾಂಕ್ ಖಾತೆಗೆ ಹಣವನ್ನು ನೇರವಾಗಿ ವರ್ಗಾಯಿಸುವುದರಿಂದ ಸೋರಿಕೆಯೇ ಇರುವುದಿಲ್ಲ. 2. ಈ ಪರಿಕಲ್ಪನೆ ಸಾರ್ವತ್ರಿಕವಾಗಿರುವ ಕಾರಣ ಅರ್ಹರು ಪಟ್ಟಿಯಿಂದ ಹೊರಗಿರುವ ಸಂದರ್ಭಗಳು ಕಡಿಮೆ 3. ಯುಬಿಐ ಒಂದು ರೀತಿಯ ವಿಮೆಯ ತೆರನಾಗಿರಬೇಕು.

**ಯುಬಿಐ ಸಫಲವಾಗಲು ಎರಡು ಪೂರ್ವ ಅಗತ್ಯಗಳು ಅವಶ್ಯಕ :** 1. ಕಾರ್ಯತತ್ಪರ ಜೆಎಎಂ (ಜನ್‌ಧನ್, ಆಧಾರ್ ಮತ್ತು ಮೊಬೈಲ್) ವ್ಯವಸ್ಥೆ. ಇದರಿಂದ ಹಣ ನೇರವಾಗಿ ಫಲಾನುಭವಿಗಳನ್ನು ತಲುಪುತ್ತದೆ. 2. ಯುಬಿಐಗೆ ಹಣ ಹೊಂದಿಸುವಲ್ಲಿ ಕೇಂದ್ರ ರಾಜ್ಯಪಾಲ ಪಾಲು ಈ ನಿಟ್ಟಿನಲ್ಲಿ ಕೇಂದ್ರ – ರಾಜ್ಯಗಳ ನಡುವಿನ ಮಾತುಕತೆ, ಸಹಕಾರ / ನಿರ್ಧಾರ, ನಿರ್ಣಾಯಕ.

**ಆರ್ಥಿಕ ವೆಚ್ಚ :** ಬಡತನವನ್ನು ಶೇ. 0.5 ರಷ್ಟು ಕಡಿಮೆಗೊಳಿಸಬಲ್ಲ ಪರಿಕಲ್ಪಿತ, ಸಾರ್ವಜನಿಕ ಮೂಲಾದಾಯ ಕ್ರಮಕ್ಕೆ ಒಟ್ಟು ದೇಶೀಯ ಉತ್ಪನ್ನ – ಜಿಡಿಪಿಯ ಶೇ. 4–5 ರಷ್ಟು ಹಣ ವೆಚ್ಚವಾಗಬಹುದು. (ಶೇ. 25ರ ಆದಾಯದ ಮೇಲಿನ ಪರಿಧಿಯಲ್ಲಿ ಇರುವವರನ್ನು ಬಿಟ್ಟು) ಪ್ರಸ್ತುತ ಮಧ್ಯಮ ವರ್ಗದವರ ಆಹಾರ, ಪೆಟ್ರೋಲಿಯಂ ಮತ್ತು ರಸಗೊಬ್ಬರ ಸಹಾಯಧನ ಮತ್ತೊ ಜಿಡಿಪಿಯ ಶೇ. 3 ರಷ್ಟಾಗುತ್ತಿದೆ.

ಸಾರ್ವತ್ರಿಕ ಮೂಲಾದಾಯ ಪರಿಕಲ್ಪನೆ ಸದ್ಯ ಜಾರಿಗೊಳಿಸಲು ಕಾಲ ಪಕ್ವವಾಗಿರದಿದ್ದರೂ, ಈ ನಿಟ್ಟಿನಲ್ಲಿ / ಗಂಭೀರ ಚಿಂತನೆಗೆ ಯೋಗ್ಯವಾಗಿದೆ; ಮಹಾತ್ಮಾ ಗಾಂಧೀಜಿಯವರು ಹೋರಾಡಿದ, ಕಂಡ ಕನಸು ನನಸಾಗಲು ಇದು ನೆರವಾಗಬಹುದು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ❑

# ವಾರ್ತಾ ವಿಶೇಷ

ಭಾರತದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ಐಎಂಎಫ್ ವರದಿ ಮಾಡಿದೆ. ವಿಶ್ವದ ಆರ್ಥಿಕ ಬೆಳವಣಿಗೆಯನ್ನು ಅವಲೋಕಿಸಿದಲ್ಲಿ, ಭಾರತದ ಆರ್ಥಿಕ ಬೆಳವಣಿಗೆ ಚೇತೋಹಾರಿ ಆಗಿದೆ ಎಂದು ಐಎಂಎಫ್ ಏಷ್ಯಪೆಸಿಫಿಕ್‌ನ ಸಹಾಯಕ ನಿರ್ದೇಶಕ ಶ್ರೀ ಪೌಲ್‌ಕ್ಯಷನ್ ಹೇಳಿದ್ದಾರೆ. ಭಾರತದ ಆರ್ಥಿಕ ಬೆಳವಣಿಗೆಗಳು ಬೇಡಿಕೆಗೆ ಅನುಗುಣವಾಗಿ ಏರಿಕೆಯಾಗುತ್ತಿವೆ ಎಂದು ಅವರು ತಿಳಿಸಿದರು. ಕಳೆದ ನವೆಂಬರ್‌ನಲ್ಲಿ ದೊಡ್ಡ ಮೊತ್ತದ ನೋಟು ಅಮಾನ್ಯದ ನಡುವೆಯೂ 2016–17ನೇ ಸಾಲಿನಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಶೇಕಡ 6.6 ರಷ್ಟು ದಾಖಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಇದು ಶೇಕಡ 8 ರ ಆಸುಪಾಸಿನಲ್ಲಿ ಬರಲಿದೆ ಎಂದು ಐಎಂಎಫ್‌ನ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಭಾರತದ ಆರ್ಥಿಕ ನೀತಿ ಹಾಗೂ ಸುಧಾರಣಾ ಕ್ರಮಗಳು ಇನ್ನಷ್ಟು ಪ್ರಗತಿಗೊಳ್ಳುವ ಜೊತೆಗೆ ವಿತ್ತೀಯ ನಿರ್ವಹಣೆ ಪ್ರಮಾಣ ಸಕಾರಾತ್ಮಕವಾಗಲಿದೆ ಎಂದು ಶ್ರೀ ಪೌಲ್‌ಕ್ಯಷನ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

* * *

ಭಾರತ, ಶತ್ರು ಕ್ಷಿಪಣಿಗಳನ್ನು ಆಗಸದಲ್ಲೇ ತಡೆದು ಎದುರಿಸುವ ಸೂಪರ್ ಸಾನಿಕ್ ಇಂಟರ್‌ಸೆಪ್ಟರ್ ಕ್ಷಿಪಣಿಯ ಯಶಸ್ವಿ ಪರೀಕ್ಷಾರ್ಥ ಪ್ರಯೋಗ ನಡೆಸಿದೆ. ರಡಾರ್‌ಗಳಿಂದ ಸಂಕೇತ ಪಡೆದ ನಂತರ ಕ್ಷಿಪಣಿ ಕಾರ್ಯಚರಣೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ಒಡಿಶಾ ಕರಾವಳಿಯ ಡಾ. ಅಬ್ದುಲ್‌ಕಲಾಂ ದ್ವೀಪದಿಂದ ಈ ಪ್ರಯೋಗ ನಡೆಸಲಾಯಿತು. ಅಮೆರಿಕಾ, ರಷ್ಯಾ ಹಾಗೂ ಇಸ್ರೇಲ್ ನಂತರ ಶತ್ರು ಕ್ಷಿಪಣಿಗಳನ್ನು ಆಗಸದಲ್ಲೇ ತಡೆದು ನಾಶಪಡಿಸುವ ವ್ಯವಸ್ಥೆ ಒಳಗೊಂಡ ಕ್ಷಿಪಣಿಗಳನ್ನು ಹೊಂದಿರುವ ವಿಶ್ವದ 4ನೇ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ. ಈ ಯಶಸ್ವಿ ಪ್ರಯೋಗದಿಂದ ಸಶಸ್ತ್ರಗಳ ವ್ಯವಸ್ಥೆಯಲ್ಲಿ ಭಾರತ ಪ್ರಾಮುಖ್ಯತೆಯನ್ನು ಸಾಧಿಸಿದೆ. ಸದ್ಯದಲ್ಲೇ ಸೇನಾಪಡೆಗಳಿಗೆ ಇದನ್ನು ಸೇರ್ಪಡೆ ಮಾಡಲಾಗುವುದು.

* * *

ಭಾರತದ ವಿರುದ್ಧ ಉಗ್ರ ಸಂಘಟನೆಗಳನ್ನು ಹುಟ್ಟುಹಾಕಿದ ಪಾಕಿಸ್ತಾನಕ್ಕೆ ಈಗ ಅವುಗಳೇ ಸಮಸ್ಯೆಯಾಗಿ ಪರಿಣಮಿಸಿವೆ ಎಂದು ವಿಶ್ವಸಂಸ್ಥೆಯ ಭಾರತದ ರಾಯಭಾರಿ ಮತ್ತು ಕಾಯಂ ಪ್ರತಿನಿಧಿ ಶ್ರೀ ಅಜಿತ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ. ಜಿನಿವಾದಲ್ಲಿ ಮಾನವ ಹಕ್ಕು ಸಮಿತಿಯ 34ನೇ ಅಧಿವೇಶನವನ್ನುದ್ದೇಶಿಸಿ ಅವರು ಮಾತನಾಡಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಪಾಕಿಸ್ತಾನವು ಹಿಂಸಾಚಾರವನ್ನು ಪ್ರಚೋದಿಸುತ್ತಿದೆ; ಗಡಿಯೊಳಗೆ ನುಸುಳುವವರನ್ನು ಹಾಗೂ ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರೇರೇಪಿಸುತ್ತಿದೆ ಎಂದು ಟೀಕಿಸಿದರು. ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದ್ದು, ಅಲ್ಲಿನ ಪರಿಸ್ಥಿತಿ ಭಾರತದ ಆಂತರಿಕ ವಿಚಾರ ಎಂದು ಅವರು ಸ್ಪಷ್ಟಪಡಿಸಿದರು. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi – 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
*Log on to*
**http://publicationsdivision.nic.in/**,
*in collaboration with* **bharatkosh.gov.in**